ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ || ಬೆಂಗಳೂರು, ಗುರುವಾರ, ಆಗಸ್ಟ್ ೧೩, ೨೦೦೯ (ಶ್ರಾವಣ ೨೨, ಶಕವರ್ಷ ೧೯೩೧) || ಸಂಚಿಕೆ ೩೩

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
632	3.8.2009	No. SWD 13 SBR 2007, Dt. 9.6.2009 - Central Relief Committee and Committee (Recruitment) (Amendment) Rules, 2009.
633	3.8.2009	No. SAMVYASHAE 16 SHASANA 2009, Dt. 3.8.2009 – The Karnataka F Responsibility (Amendment) Act, 2009.
634	3.8.2009	ಸಂ. ರಾಚುಆ 22 ಇಯುಬಿ 2009, ದಿ. 1.8.2009 – ತಿದ್ದುಪಡಿ ಅಧಿಸೂಚನೆ.
635	3.8.2009	No. FD 02 CPT 2009, Dt. 3.8.2009 – Under Sub-section (2) of Section 7 o Karnataka Tax on Professions, Tradings, callings and Employment Act, 1976
636	3.8.2009	No. DPAR 20 SDE 2009, Dt. 30.7.2009 – Under Sub-rule (1) of rule (10) of the Rules, 1957
637	3.8.2009	No. FD 17 PES 2009, Dt. 3.8.2009 - Karnataka Excise (Sale of Indian and Fo Liquors) (Amendment) Rules, 2009.
638	4.8.2009	No. UDD 78 EMC 2004, Dt. 4.8.2009 - Karnataka Municipalities (Absorption o Employees appointed under the Scheme of Swarna Jayanthi Shahari Rozgar Yo in Urban Local Bodies) (Amendment) Rules, 2008.
639	4.8.2009	No. DPAR 125 CHUSIA 2009, Dt. 3.8.2009 – Directions to the Bye-Election.
640	4.8.2009	No. DPAR 3 CHUVISA 2009, Dt. 3.8.2009 – List of Contesting Candidates – B Election to the Karnataka Legislative Assembly – 2009.
641	5.8.2009	ಸಂ. ಚುನಾವಣೆ:ಸಿಆರ್:172/2008–09, ದಿ. 5.8.2009 – ಚಿತ್ರದುರ್ಗ ಜಿಲ್ಲೆಯ ಕೃ.ಉ.ಮಾ.ಸ ಆಯ್ಕೆಯಾಗಿರುವವರ ಅಧಿಸೂಚನೆ.
642	5.8.2009	ಸಂ. ಸಿಆಸುಇ 128 ಸೇನೆನಿ 2006, ದಿ. 1.8.2009 – ಸರ್ಕಾರಿ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಸಮತಳ (Horizontal) ಮೀಸಲಾತಿಗಳನ್ನು ಕಾರ್ಯಗತಗೊಳಿಸುವಾಗ ಅಂಗವಿಕಲರಿಗೆ ಪರಿಗಣಿಸಬ ರೋಸ್ಟರ್ ಬಿಂದುಗಳ ಬಗ್ಗೆ ಸ್ಪಷ್ಟೀಕರಣ.
643	5.8.2009	No. DPAR 21 SRR 2008, Dt. 3.8.2009 – 3 Percent reservation (Horizonta recruitment for Group 'A' and 'B' Posts for persons with disabilities.
644	6.8.2009	No. SWD 07 WHJ 2009, Dt. 26.6.2009 – Constitution of Karnataka State Committee.
645	6.8.2009	No. SWD 07 WHJ 2009, Dt. 27.7.2009 – Corrigendum.
646	6.8.2009	No. MWD 319 WES 2009, Dt. 3.8.2009 - Issue of Marriage Certificate by Karna State Board of Wakfs- authorization-reg.
647	6.8.2009	ಸಂ. ಸಇ 182 ಎಂಆರ್ಇ 2009, ದಿ. 6.8.2009 – ಕರ್ನಾಟಕ ರಾಜ್ಯ ಕೃಷಿ ಮಾರಾಟ ಮ ಪ್ರತಿನಿಧಿಸುವ ಸದಸ್ಯರ ಹೆಸರನ್ನು ಪ್ರಕಟಿಸುವ ಬಗ್ಗೆ.
648	7.8.2009	No. LAW 06 HRS 2007, Dt. 6.8.2009 – Sri Javid Pasha deputation as Secr Karnataka State Human Rights Commission.
649	7.8.2009	No. DPAR 42 SRR 2009, Dt. 5.8.2009 – Draft Rules – Karnataka Recruitme Gazetted Probationers (Appointment by Competitive Examinations) (5th Amend Rules, 2009.

ವಾರದ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು

http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)..................................	7-00	325-00
8.	ಭಾಗ - 6ಎ (ಮೈಸೂರು)..................................	50-00	1111-00
9.	ಭಾಗ - 6ಬಿ (ಧಾರವಾಡ)..................................	25-00	1637-00
10.	ಭಾಗ - 6ಸಿ (ಗುಲ್ಬರ್ಗ)..................................	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :- 1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು " 0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು " ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

A / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಆಗಸ್ಟ್ ೧೩, ೨೦೦೯ (ಶ್ರಾವಣ ೨೨, ಶಕ ವರ್ಷ ೧೯೩೧)	ಸಂಚಿಕೆ ೩೩

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಜಿ.ಎಚ್.ನಂಜುಂಡಸ್ವಾಮಿ, ಎ.ಎಸ್.ಐ., ಸದಾಶಿವನಗರ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಪೊಲೀಸ್ ಕಮೀಷನರ್, ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ:ಇವಿ/2/ಆರ್/–6/ಡಿಸಿಪಿ/ಸಂ.ಪೊ.2006 ದಿ:07.05.2007.

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್, ಸಂಚಾರ, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ:45/ಅಪೀಲು/ 2007 ದಿನಾಂಕ:09–02–2008.

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:22–04–2008.

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)13/2008–09 ದಿ:20–02–2009.

ಪ್ರಸ್ತಾವನೆ:–

ಶ್ರೀ ಜಿ.ಎಚ್.ನಂಜುಂಡಸ್ವಾಮಿ, ಎ.ಎಸ್.ಐ., ಸದಾಶಿವನಗರ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ನಗರ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯಲೋಪವೆಸಗಿ ದುರ್ನಡತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆ ಯನ್ನು ಜಾರಿಗೊಳಿಸಲಾಗಿತ್ತು.

ದೋಷಾರೋಪಣೆ:–

"ಶ್ರೀ ಜಿ.ಎಚ್.ನಂಜುಂಡಸ್ವಾಮಿ, ಆದ ನೀವು ಹಲಸೂರುಗೇಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ದಿ:26–10–2006 ರಂದು ರಾತ್ರಿ ಸುಮಾರು 9–20 ಗಂಟೆಯ ಸಮಯದಲ್ಲಿ ಸದಾಶಿವನಗರ 9ನೇ ಮುಖ್ಯ ರಸ್ತೆ, 5ನೇ ಅಡ್ಡರಸ್ತೆ ಜಂಕ್ಷನ್ ಬಳಿ ಇನೋವ ಕಾರ್ ನಂ.ಕೆಎ–03 ಎಂಎ–6369ರ ಚಾಲಕ ವಾಹನವನ್ನು ಅತೀ ಜೋರಾಗಿ ಚಾಲನೆ ಮಾಡಿಕೊಂಡು ಬಂದು ಕೆಎ–04 ಇಎನ್–1007 ಮತ್ತು ಕೆಎ–4 ಇಎನ್–2729ರ ಸವಾರರಿಗೆ ಡಿಕ್ಕಿ ಮಾಡಿದ್ದು, ಕೆಎ–04 ಇಎನ್–1007ರ ಸವಾರ ಶ್ರೀ ವಾಸುದೇವ್, ರವರು ಮೃತಪಟ್ಟಿದ್ದು, ಕೆಎ–4 ಇಎನ್–2729ರ ಸವಾರ ಮತ್ತು ಹಿಂಬದಿ ಸವಾರರು ತೀವ್ರ ರಕ್ತಗಾಯಗೊಂಡಿರುತ್ತಾರೆ. ಈ ಸಂಬಂಧ ನಿಯಂತ್ರಣ ಕೋಣೆಯಿಂದ ಬಂದ ಸಂದೇಶದ ಮೇರೆಗೆ ಅಪಘಾತ ಸಂಭವಿಸಿದ ಸ್ಥಳಕ್ಕೆ ಹೋಗಿ ನೋಡುವಂತೆ ಸೂಚನೆ ಬಂದಿದ್ದು,

ಅದರಂತೆ ನೀವು ಅಪಘಾತ ಸ್ಥಳಕ್ಕೆ ಹೋಗಿ ಅಪಘಾತದ ಬಗ್ಗೆ ಪರಿಶೀಲಿಸಿ ಮೃತ ಮತ್ತು ಗಾಯಾಳುಗಳನ್ನು ಅಪಘಾತ ಸ್ಥಳದಿಂದ ಸಾರ್ವಜನಿಕರ ಸಹಾಯದೊಂದಿಗೆ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಸಾಗಿಸಿದ್ದು, ನಂತರ ಆರೋಪಿ ಇನೋವಾ ವಾಹನದ ಚಾಲಕ ಶ್ರೀ ಬಿ.ಜೆ.ಸಂಗೀತ, ರವರನ್ನು ನೋಡಿ ಅವರೊಂದಿಗೆ ಮಾತನಾಡಿದ್ದು, ಸದರಿ ಆರೋಪಿಯನ್ನು ದಸ್ತಗಿರಿ ಮಾಡುವ ಯಾವುದೇ ಪ್ರಯತ್ನವನ್ನು ಮಾಡದೇ ನಂತರ ಅಪಘಾತದ ಸ್ಥಳಕ್ಕೆ ಬಂದು ಆರೋಪಿ ತಲೆ ತಪ್ಪಿಸಿಕೊಳ್ಳಲು ಅನುವು ಮಾಡಿಕೊಟ್ಟಿರುತ್ತೀರಿ. ಹಾಗೂ ಪ್ರಕರಣದ ತನಿಖಾಧಿಕಾರಿಗಳಿಗೆ ಸದರಿ ಆರೋಪಿ ಕಾರ್ ಚಾಲಕನ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡದೇ ಹಾಗೂ ವಿಚಾರವನ್ನು ಸರಿಯಾಗಿ ತಿಳಿಸದೆ ವಿಷಯವನ್ನು ಮರೆಮಾಚಿ ಶಿಸ್ತಿನ ಇಲಖೆಯ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾದ ನೀವು ಶಿಸ್ತಿನ ಇಲಾಖೆಗೆ ಸಲ್ಲದ ರೀತಿಯಲ್ಲಿ ವರ್ತಿಸಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಶಿಸ್ತಿನ ಇಲಾಖೆಯಲ್ಲಿ ಅಶಿಸ್ತನ್ನು ಪ್ರದರ್ಶಿಸಿ, ಕರ್ತವ್ಯ ಲೋಪವೆಸಗಿ ದುರ್ನಡತೆ ಮತ್ತು ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹ ಉಪಪೊಲೀಸ್ ಅಯುಕ್ತರು, ಸಂಚಾರ ಪೂರ್ವವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದ ದಿನಾಂಕ: 07–05–2007ರ ಆದೇಶದಲ್ಲಿ ಅರ್ಜಿದಾರರ "ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂ ವೇತನ ಬಡ್ತಿ ಗಳಿಗೆ ದಕ್ಕೆಯಾಗದಂತೆ ಆರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ದಿ:31–10–06 18–12–06ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹ ಅಡಿಷನಲ್ ಕಮೀಷನರ್, ಸಂಚಾರ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದ ದಿನಾಂಕ:09.02.2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರು ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರ ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವ ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 63 ಪೊಸಿಅ 2009 ಬೆಂಗಳೂರು, ದಿನಾಂಕ: 18ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ.ಎಚ್.ನಂಜುಂಡಸ್ವಾಮಿ, ಎ.ಎಸ ಸದಾಶಿವನಗರ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1314

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆ

ವಿಷಯ: ಶ್ರೀ ಟಿ.ಎಸ್.ತಿರುಮಲಯ್ಯ, ಪೊಲೀಸ್ ಸಬ್–ಇನ್ಸ್‌ಪೆಕ್ಟರ್, ಮಾಜಿ ಪ್ರಧಾನ ಮಂತ್ರಿಗಳ ಕುಟುಂಬ ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇ

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು, ಇವರ ಆದೇಶ ಸಂಖ್ಯೆ 90/2007–08 ಓ.ಬಿ:90/2008 ದಿ:13–02–2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಆದೇಶ ಸಂಖ್ಯೆ:ಅಪೀಲು 3/2008–09 ಓ.ಬಿ.ಸಂ:32/2008–09 ದಿನಾಂಕ:27–05–08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:01–12–2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸ ಅಪೀಲು(2)99/2008–09 ದಿ:06–03–2009

ಪ್ರಸ್ತಾವನೆ:-

ಶ್ರೀ ಟಿ.ಎಸ್. ತಿರುಮಲಯ್ಯ, ಪೊಲೀಸ್ ಸಬ್-ಇನ್ಸ್‌ಪೆಕ್ಟರ್, ಮಾಜಿ ಪ್ರಧಾನ ಮಂತ್ರಿಗಳ ಕುಟುಂಬ ಭದ್ರತೆ, ಬೆಂಗಳೂರು, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಕರ್ತವ್ಯದಲ್ಲಿ ನಿರ್ಲಕ್ಷತನ ಕರ್ತವ್ಯಲೋಪ ಮತ್ತು ದುರ್ನಡತೆ ಪ್ರದರ್ಶಿಸಿರುವ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:-

> "ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಬ್ಯಾರವಳ್ಳಿ ಗ್ರಾಮದ ಸ.ನಂ.308/2ರ ಆಸ್ತಿಯಲ್ಲಿನ ಸಿಲ್ವರ್ ಮರದ ಕಟಾವಿನ ವಿಚಾರವಾಗಿ ಶ್ರೀ ಶಶಿಧರ ಹಾಗೂ ಶ್ರೀ ರಮೇಶ್, ರವರಿಂದ ಅಕ್ರಮ ಸಂಭಾವನೆಯನ್ನು ಪಡೆದು, ನಿಯಮಬಾಹಿರವಾಗಿ ಸಿಲ್ವರ್ ಮರಗಳನ್ನು ತುಂಬಿಕೊಂಡು ಹೋಗಲು ಸಹಕಾರ ನೀಡಿ ನಿಮ್ಮ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಕರ್ತವ್ಯಲೋಪ ಮತ್ತು ದುರ್ನಡತೆಯನ್ನು ತೋರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 13-02-08ರ ಆದೇಶದಲ್ಲಿ "ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ 6 ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:27-05-08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸಾಕ್ಷ್ಯಾಧಾರಗಳ ಆಧಾರದ ಮೇಲೆ ಶಿಸ್ತುಪ್ರಾಧಿಕಾರವು ದಂಡನೆಯನ್ನು ವಿಧಿಸಿದ್ದು, ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 381 ಪೊಸಿಅ 2008 ಬೆಂಗಳೂರು, ದಿನಾಂಕ: 18ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಟಿ.ಎಸ್.ತಿರುಮಲಯ್ಯ, ಪೊಲೀಸ್ ಸಬ್-ಇನ್ಸ್‌ಪೆಕ್ಟರ್, ಮಾಜಿ ಪ್ರಧಾನ ಮಂತ್ರಿಗಳ ಕುಟುಂಬ ಭದ್ರತೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1315 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಉಮೇಶ್, ಸಿ.ಪಿ.ಸಿ.-66, ಡಿ.ಎ.ಆರ್., ಉಡುಪಿ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ, ಇವರ ಆದೇಶ ಸಂಖ್ಯೆ:ಸಿಬ್ಬಂದಿ(3)03/ಇವಿ/ಉಜಿ:2005 ದಿ:03-01-07
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಪಶ್ಚಿಮ ವಲಯ, ಮಂಗಳೂರು, ಇವರ ಆದೇಶ ಸಂಖ್ಯೆ:ಸಿಬ್ಬಂದಿ 2/ಮೇಲ್ಮನವಿ/05-2007 ದಿನಾಂಕ:16-06-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:22-09-2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು(2)71/2008-09 ದಿನಾಂಕ:11-03-2007

ಪ್ರಸ್ತಾವನೆ:–

ಶ್ರೀ ಉಮೇಶ್, ಸಿ.ಪಿ.ಸಿ.–66, ಡಿ.ಎ.ಆರ್., ಉಡುಪಿ ಜಿಲ್ಲೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ ಇವರು ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಹಿನ್ನೆಲೆಯಲ್ಲಿ ಇತರೇ 3 ಸಿಬ್ಬಂದಿಗ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ಮತ್ತು 8 ರಡಿ ಜಂ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:–

> "ಉಡುಪಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿರುವ ಖೈದಿ ಸಿರಾಜ್ ಹಸನ್‌ನ ಕಾವಲು ಕರ್ತವ್ಯಕ್ಕೆ ಶ್ರೀ.ಉಮೇಶ, ಎ.ಪಿ.ಸಿ.–66, ಡಿ.ಎ.ಆರ್. ಉಡುಪಿ ಆದ ನಿಮ್ಮನ್ನು ನೇಮಿಸಲಾಗಿದ್ದು, ಸದ್ರಿ ಖೈದಿಗೆ ಹೊರಗಿನಿಂದ ಆಹಾರ, ಬಿಸ್ಲರಿ ಕಂಪನಿಗೆ ಸೇರಿದ ಮಿನರಲ್ ವಾಟರ್, ಸಿಗರೇಟು, ಮೊಬೈಲ್ ಪೋನ್ ಬಳಕೆ, ಇತ್ಯಾದಿ ಸವಲತ್ತುಗಳನ್ನು ನೀಡಿದ್ದಲ್ಲದೇ, ವೀಕ್ಷಕರಿಗೆ ಯಾವುದೇ ಅನುಮತಿ ಇಲ್ಲದೇ ಖೈದಿಯನ್ನು ನೋಡಲು ಅನುವು ಮಾಡಿಕೊಟ್ಟಿದ್ದು, ದಿ:02–04–05 ರಂದು ಸಮಯ ಸುಮಾರು 15–30 ಗಂಟೆಗೆ ಖೈದಿ ಸಿರಾಜ್ ಹಸನ್, ನಿಮ್ಮ ಸುಪರ್ದಿಯಿಂದ ತಪ್ಪಿಸಿಕೊಂಡು ಹೋಗಲು ಕಾರಣರಾಗಿ ಖೈದಿ ಭದ್ರಿಕೆ ಕಾವಲು ಕರ್ತವ್ಯದಲ್ಲಿ ತೀವ್ರ ರೀತಿಯ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿ ಕರ್ತವ್ಯಲೋಪ ವೆಸಗಿರುವ ಆರೋಪಣೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪವನ್ನು ಎರಡ ಭಾಗವಾಗಿ ಪರಿಶೀಲಿಸಿ (2)ನೇ ಭಾಗವಾದ ವಿಚಾರಣಾಧೀನ ಖೈದಿಯು ತಪ್ಪಿಸಿಕೊಂಡು ಹೋಗಲು ಕಾರಣರಾಗಿರು ಆರೋಪವು ಸಾಬೀತಾಗಿದೆ ಎಂದು ಅಭಿಪ್ರಾಯ ಪಟ್ಟಿರುವ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದ ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ, ಇವರು ಮೇಲೆ ಕ್ರಮ ಸಂಖ್ಯೆ:(1)ರ ಓದಲಾದ ದಿನಾಂಕ:03–01–2007ರ ಆದೇಶದಲ್ಲಿ ``ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರ ವೇತನ ಬಡ್ತಿಗೆ ದಕ್ಕೆಯಾಗುವಂತೆ 3 ವರ್ಷಗಳ ಕಾಲ ತಡೆಹಿಡಿದು ದಿ:04–04–2005 ರಿಂದ 23–07–05ರ ವರೆಗಿ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸುವ ದಂಡನೆಯನ್ನು ವಿಧಿಸಿದ್ದಾರೆ.``

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಪಶ್ಚಿಮ ವಲಯ, ಮಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾ ದಿನಾಂಕ: 16–06–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿ ಪರಿಷ್ಕರಣ ಮೇಲ್ಮನವಿಯನ್ನು ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರ ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 310 ಪೊಸಿಅ 2008 ಬೆಂಗಳೂರು, ದಿನಾಂಕ: 18ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ.ಉಮೇಶ್, ಎ.ಪಿ.ಸಿ.–66, ಡಿ.ಎ.ಆರ್. ಉಡು ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1316

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳ

ವಿಷಯ: ಶ್ರೀ ಸಿ.ಸಿ.ಪಾಟೀಲ್, ಪಿ.ಐ., ತಿಪಟೂರು ನಗರ ಪೊಲೀಸ್ ಠಾಣೆ, ತುಮಕೂರು, ಇವರು ಸರ್ಕಾ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು, ಇವರ ಆದೇ ಸಂಖ್ಯೆ:ಪನ್ನಿ/28/2007–08 ಓ.ಬಿ:583/07 ದಿ:13–12–2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವ ಆದೇಶ ಸಂಖ್ಯೆ:ಅಪೀಲು 70/2007–08 ಓ.ಬಿ.ಸಂ:28/2007 ದಿನಾಂಕ:23–05–08

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:22-07-2008

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)49/2008-09 ದಿ:18-02-2009

ಪ್ರಸ್ತಾವನೆ:-

ಶ್ರೀ ಸಿ.ಸಿ.ಪಾಟೀಲ್, ಪಿ.ಐ., ತಿಪಟೂರು ನಗರ ಪೊಲೀಸ್ ಠಾಣೆ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

"ಮುಲ್ಕಿ ಇರುವ ಅರ್ಜಿಗಳ ಬಗ್ಗೆ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸಲ್ಲಿಸಲು ಡಿವೈ.ಎಸ್.ಪಿ., ತಿಪಟೂರು ಉಪ ವಿಭಾಗ, ರವರು ಮೌಖಿಕವಾಗಿ, ಮಾಸಿಕ ಸಭೆಯಲ್ಲಿ ಮತ್ತು ಜ್ಞಾಪನ ಪತ್ರಗಳ ಮೂಲಕ ತಿಳಿಸಿದ್ದರೂ ಸಹ ನೀವು ಮುಲ್ಕಿ ಇರುವ ಅರ್ಜಿಗಳ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ವಿಫಲರಾಗಿ ನಿಮ್ಮ ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿ ತನ ತೋರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಕೋರಿದ್ದು, ನಿಗದಿತ ಅವಧಿಯಲ್ಲಿ ಸಮಜಾಯಿಷಿಯನ್ನು ನೀಡದೆ ಇದ್ದುದರಿಂದ ಸಾಕ್ಷ್ಯಾಧಾರಗಳ ಮೇಲೆ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:13-12-2007ರ ಆದೇಶದಲ್ಲಿ ``ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗೆ ದಕ್ಕೆಯಾಗದಂತೆ ಆರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:23.05.2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 217 ಪೊಸಿಅ 2008 ಬೆಂಗಳೂರು, ದಿನಾಂಕ: 18ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ.ಸಿ.ಸಿ.ಪಾಟೀಲ್, ಪಿ.ಐ., ತಿಪಟೂರು ನಗರ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1317 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎ.ಡಿ.ಬಸಣ್ಣವರ, ಪೊಲೀಸ್ ಇನ್ಸ್‌ಪೆಕ್ಟರ್, ಬ್ರಹ್ಮಪುರ ಪೊಲೀಸ್ ಠಾಣೆ, ಗುಲ್ಬರ್ಗಾ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(5) 53/2005-06 ದಿ:12-07-2006

2) ಅರ್ಜಿದಾರರ ಮೇಲ್ಮನವಿ ಅರ್ಜಿ ದಿನಾಂಕ:19-05-2007

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)84/2005-06 ದಿ:04-06-2007

ಪ್ರಸ್ತಾವನೆ:–

ಶ್ರೀ ಎ.ಡಿ.ಬಸಣ್ಣವರ, ಪೊಲೀಸ್ ಇನ್ಸ್‌ಪೆಕ್ಟರ್, ಬ್ರಹ್ಮಪುರ ಪೊಲೀಸ್ ಠಾಣೆ, ಗುಲ್ಬರ್ಗಾ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕಮರಿಪೇಟೆ ಪೊಲೀಸ್ ಠಾಣೆ, ಹುಬ್ಬಳ್ಳಿ–ಧಾರವಾಡ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಬೇಜವಾಬ್ದಾರಿತನ, ಅಶಿಸ್ತು ಮತ್ತು ನಿರ್ಲಕ್ಷತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:–

> "ನೀವು ಹಿಂದೆ ಪಿ.ಐ.ಆಗಿ ಕಮರಿಪೇಟೆ ಪೊಲೀಸ್ ಠಾಣೆ, ಹುಬ್ಬಳ್ಳಿ–ಧಾರವಾಡ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನೀವು ದಿ:22–08–05 ರಂದು ನ್ಯಾಯಾಲಯದ ಕರ್ತವ್ಯದ ಮೇಲೆ ಗುಲ್ಬರ್ಗಾ ಜಿಲ್ಲೆಗೆ ಹೋಗಿದ್ದು, ನಂತರ ಬಂದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ, ಈ ಕಛೇರಿಯ ಆದೇಶ ಸಂಖ್ಯೆ:ಸಿಬಿ(2)114/ 2005–06, ದಿ:21.01.2006ರಲ್ಲಿ ನಿಮ್ಮನ್ನು ಖಾನಾಪುರ ವೃತ್ತ, ಬೆಳಗಾವಿ ಜಿಲ್ಲೆಗೆ ವರ್ಗಾವಣೆ ಮಾಡಿದ್ದು, ನೀವು ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ ರವರಿಂದ ಕರ್ತವ್ಯದಿಂದ ಬಿಡುಗಡೆ ಹೊಂದದೆ, ನೇರವಾಗಿ ವರ್ಗಾವಣೆಯಾದ ಸ್ಥಳಕ್ಕೆ ವರದಿ ಮಾಡಿಕೊಂಡು ಕರ್ತವ್ಯದಲ್ಲಿ ದುರ್ನಡತೆ, ಬೇಜವಾಬ್ದಾರಿತನ, ಅಶಿಸ್ತು ಮತ್ತು ನಿರ್ಲಕ್ಷತೆ ಎಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:12–07–2006ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷಕಾಲ ಮುಂದೂಡುವ ದಂಡನೆಯನ್ನು ವಿಧಿಸಿರುತ್ತಾರೆ"

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 155 ಪೊಸಿಅ 2007 ಬೆಂಗಳೂರು, ದಿನಾಂಕ: 7ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ.ಎ.ಡಿ.ಬಸಣ್ಣವರ, ಪೊಲೀಸ್ ಇನ್ಸ್‌ಪೆಕ್ಟರ್, ಬ್ರಹ್ಮಪುರ ಪೊಲೀಸ್ ಠಾಣೆ, ಗುಲ್ಬರ್ಗಾ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1361

ಟಿ.ಎನ್.ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಪಿ.ಸೀನಪ್ಪ, ಮಾಜಿ ಎ.ಪಿ.ಸಿ.–1584, ಸಿ.ಎ.ಆರ್.(ದಕ್ಷಿಣ) ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ನಗರ ಸಶಸ್ತ್ರ ಮೀಸಲು ಪಡೆ, ದಕ್ಷಿಣ ಬೆಂಗಳೂರು, ಇವರ ಆದೇಶ ಸಂಖ್ಯೆ:ಡಿಇ:7:ಆರ್–6/2005–06 ದಿನಾಂಕ:23–02–2005
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಜಂಟಿ ಪೊಲೀಸ್ ಆಯುಕ್ತರು, ಸಿ.ಎ.ಆರ್. ಬೆಂಗಳೂರು, ಇವರ ಆದೇಶ ಸಂಖ್ಯೆ:07/ಅಪೀಲು/2006 ದಿ:18–07–2005
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:31–08–2007
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)78/2007–08 ದಿ:04–11–2007
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 116 ಸಿಎನ್‌ಎಸ್ 08 ದಿನಾಂಕ:18.03.2009

ಸ್ತಾವನೆ:–

ಶ್ರೀ ಪಿ.ಸೀನಪ್ಪ, ಮಾಜಿ ಎ.ಪಿ.ಸಿ.–1584, ಸಿ.ಎ.ಆರ್.(ದಕ್ಷಿಣ) ಬೆಂಗಳೂರು, (ಇನ್ನು ಮುಂದೆ ಅರ್ಜಿದಾರರೆಂದು ರಿಯಲ್ಪಡುವ) ದಿ:05–12–2004 ರಿಂದ 05–07–2005ರ ವರೆಗೆ ಅನಧಿಕೃತವಾಗಿ ಗೈರುಹಾಜರಾದ ಹಿನ್ನೆಲೆಯಲ್ಲಿ ಇವರ ರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ೋಷರೋಪಣೆ:–

"ಆರಕ್ಷಕ ಪೇದೆ 1584, ಸೀನಪ್ಪ ಎಚ್ ಪಂಗಡ, ಸಿ.ಎ.ಆರ್, ದಕ್ಷಿಣ, ಆಡುಗೋಡಿ, ಬೆಂಗಳೂರು, ಆದ ನೀವು 05–12–2004 ರಿಂದ ಯಾವುದೇ ಪೂರ್ವಾನುಮತಿಯನ್ನು ಪಡೆಯದೆ ಹಾಗೂ ಯಾವುದೇ ರಜೆ ಮಂಜೂರಾತಿಯನ್ನು ಡೆಯದೆ ಮತ್ತು ಯಾವುದೇ ವಿಧದಲ್ಲಿಯೂ ನಿಮ್ಮ ಗೈರುಹಾಜರಿಯ ಕಾರಣವನ್ನು ಮುಂಗಡವಾಗಿ ಕಛೇರಿಗೆ ತಿಳಿಸದೆ ಲಾಖಾ ನಿಯಮ ಉಲ್ಲಂಘಿಸಿ, ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ, ಗೈರುಹಾಜರಿಯಲ್ಲಿಯೇ ುಂದುವರಿದಿರುತ್ತೀರಿ. ಇದು ಶಿಸ್ತಿನ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನಿಮ್ಮ ಅಶಿಸ್ತು ದುರ್ನಡತೆ ಹಾಗೂ ಜವಾಬ್ದಾರಿಯನ್ನು ತೋರಿಸುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ುದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪ ಪೊಲೀಸ್ ಆಯುಕ್ತರು, ನಗರ ಸಶಸ್ತ್ರ ಮೀಸಲು ಪಡೆ, ದಕ್ಷಿಣ ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ದಲಾದ ದಿನಾಂಕ: 23–02–2005ರ ಆದೇಶದಲ್ಲಿ "ಇವರನ್ನು ಸೇವೆಯಿಂದ ವಜಾಗೊಳಿಸಿ ದಿ:05–12–2004 ರಿಂದ –07–2005ರ ವರೆಗಿನ ಅನಧಿಕೃತವಾಗಿ ಗೈರುಹಾಜರಾದ ಅವಧಿ ಯನ್ನು ವೇತನರಹಿತ ರಜೆ ಎಂದು ಪರಿಗಣಿಸಿ ದೇಶಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಟಿ ಪೊಲೀಸ್ ಆಯುಕ್ತರು, ಸಿ.ಎ.ಆರ್. ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ನಾಂಕ:18.07.2005ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ರ್ಜಿದಾರರು ಸೇವೆಗೆ ಅನಧಿಕೃತವಾಗಿ ಗೈರು ಹಾಜರಾಗಿರುವುದು ಸಾಬೀತಾಗಿದ್ದು, ಅನಾರೋಗ್ಯದ ಕಾರಣ ನೀಡಿರುವುದನ್ನು ರ್ಕಾರವು ಮಾನವೀಯ ದೃಷ್ಟಿಯಿಂದ ಪರಿಗಣಿಸಿ ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಲು ರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 49 ಪೊಸಿಅ 2008 ಬೆಂಗಳೂರು, ದಿನಾಂಕ: 29ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪಿ.ಸೀನಪ್ಪ, ಮಾಜಿ ಎ.ಪಿ.ಸಿ.–1584, ಸಿ.ಎ.ಆರ್.(ದಕ್ಷಿಣ) ಗಳೂರು, ಇವರಿಗೆ ಶಿಸ್ತುಪ್ರಾಧಿಕಾರ ವಿದಿಸಿದ ದಂಡನಾದೇಶವನ್ನು ಮಾರ್ಪಡಿಸಿ, ಇವರನ್ನು ಸೇವೆಯಿಂದ ವಜಾಗೊಳಿಸಿ ರಡಿಸಿದ ಶಿಸ್ತುಪ್ರಾಧಿಕಾರಿಯ ದಿ:23–12–05ರ ಆದೇಶದ ದಿನಾಂಕದಿಂದಲೇ ಜಾರಿಗೆ ಬರುವಂತೆ ಕಡ್ಡಾಯ ನಿವೃತ್ತಿಗೊಳಿಸಿ ದೇಶಿಸಿದೆ. ಇವರು ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾದ ಅವಧಿಯಾದ ದಿ:05–12–2004 ರಿಂದ 05–07–2005ರ ಗಿನ ಅವಧಿ ಯನ್ನು ಅಸಾಧಾರಣ ರಜೆಯೆಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. 1362

ಟಿ.ಎನ್.ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ರಮೇಶ, ಮಾಜಿ ಸಿಪಿಸಿ–315, ಚಾಮರಾಜನಗರ ಗ್ರಾಮೀಣ ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ, ಇವರ ಆದೇಶ ಸಂಖ್ಯೆ:ಡಿಇ 01/2006–07 ಓ.ಬಿ:92/2007 ದಿನಾಂಕ:15–06–2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಅಪೀಲು 40/2007–08 ದಿ:20–01–2008

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:02-04-08

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂ: ಅಪೀಲು(2)23/2008-09 ದಿ:25-07-2008

5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 164 ಸಿಎನ್‌ಎಸ್ ದಿನಾಂಕ:01.04.2009

ಪ್ರಸ್ತಾವನೆ:-

ಶ್ರೀ ರಮೇಶ, ಮಾಜಿ ಸಿಪಿಸಿ-315, ಚಾಮರಾಜನಗರ ಜಿಲ್ಲೆ, ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ (ಇನ್ನು ಮುಂ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯ ನಿರ್ವಹಿಸುತ್ತಿದ್ದಾಗ ದುರ್ನಡತೆಯ ಕಾರಣದ ಮೇಲೆ ಇವರ ವಿರುದ್ಧ ಕರ್ನಾ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

"ಕುಮಾರಿ ಎಂ.ಸವಿತ ಬಿನ್ ಎಂ.ಮಂಚಯ್ಯ, 28ವರ್ಷ, ಪರಿಶಿಷ್ಟ ಜನಾಂಗ, ಅಂಚೆ ಕಛೇರಿ ಪಕ್ಕ, ಮುಸ್ಲೀಂ ಬೀದಿ, ಯಳಂದೂರು ಪಟ್ಟಣ ಇವರು ದಿ:14-02-2006 ರಂದು ಯಳಂದೂರು ಪೊಲೀಸ್ ಠಾಣೆಗೆ ಹಾಜರಾಗಿ ನಿಮ್ಮ ವಿರುದ್ಧ ಫಿರ್ಯಾದನ್ನು ನೀಡಿ ದಿ:14-02-2006ರ ಹಿಂದಿನ ದಿನಗಳಲ್ಲಿ ರಮೇಶ್, ಸಿಪಿಸಿ-315 ಆದ ನೀವು ಫಿರ್ಯಾದು ದಾರರನ್ನು ಮದುವೆ ಮಾಡಿಕೊಳ್ಳುತ್ತೇನೆಂದು ನಂಬಿಸಿ ಫಿರ್ಯಾದುದಾರರ ಜೊತೆಯಲ್ಲಿ ಬಲವಂತವಾಗಿ ಸಂಭೋಗ ನಡೆಸಿದ್ದು, ಈಗ ಫಿರ್ಯಾದು ದಾರರನ್ನು ಮದುವೆಯಗುವುದಿಲ್ಲ, ಈ ವಿಚಾರ ಯಾರಿಗಾದರೂ ತಿಳಿಸಿದರೆ ಫಿರ್ಯಾದುದಾರ್ರರನ್ನು ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹೂಡಿರುತ್ತೀರೆಂದು, ಆರೋಪಿಸಿದ ಮೇರೆಗೆ ನಿಮ್ಮ ವಿರುದ್ಧ ಯಳಂದೂರು ಪೊಲೀಸ್ ಠಾಣೆ ಮೊ.ಸಂ:10:2006 ಕಲಂ 376, 493, 506 ರೀತ್ಯಾ ಪ್ರಕರಣದ ದಾಖಲಾಗಿರುತ್ತದೆ.

ಶ್ರೀ ರಮೇಶ, ಸಿಪಿಸಿ-315 ಚಾಮರಾಜನಗರ ಗ್ರಾಮಂತರ ಠಾಣೆ ಆದ ನಿಮ್ಮ ಸೇವಾ ಪುಸ್ತಕವನ್ನು ಪರಿಶೀಲಿಸಲಾಗಿ ನಿಮಗೆ ಈಗಾಗಲೆ ಮದುವೆಯಾಗಿದ್ದು ನಿಮ್ಮ ಪತ್ನಿಯ ಹೆಸರು ಶ್ರೀಮತಿ. ರಮ್ಯ ಆಗಿರುತ್ತದೆ. ನೀವು ಮದುವೆಯಾಗಿದ್ದರೂ ಬೇರೊಬ್ಬ ಮಹಿಳೆಯನ್ನು ಮದುವೆಯಾಗುತ್ತೇನೆಂದು ನಂಬಿಸಿ ಆಕೆಯೊಂದಿಗೆ ಬಲತ್ಕಾರದಿಂದ ಸಂಭೋಗ ನಡೆಸಿ, ಆಕೆಯನ್ನು ವಂಚಿಸಿ ಕೊಲೆ ಬೆದರಿಕೆಯೊಡ್ಡಿ ಶಿಸ್ತಿನ ಇಲಾಖೆಗೆ ಅಗೌರವ ತರುವ ರೀತಿಯಲ್ಲಿ ಅಸಭ್ಯವಾಗಿ ದುರ್ನಡತೆ ಪ್ರದರ್ಶಿಸಿ ಕ್ರಿಮಿನಲ್ ಮೊಕದ್ದಮೆಯಲ್ಲಿ ಆರೋಪಿಯಾಗಿ ಭಾಗವಹಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾ ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲ ದಿನಾಂಕ:15.06.2007ರ ಆದೇಶದಲ್ಲಿ ಅರ್ಜಿದಾರರರನ್ನು ಸೇವೆಯಿಂದ ವಜಾಗೊಳಿಸಿ, ಅಮಾನತ್ತಿನ ಅವಧಿಯನ್ನು ಜೀ ಭತ್ಯೆಗೆ ಮಿತಗೊಳಿಸುವ ದಂಡನೆಯನ್ನು ವಿಧಿಸಿರುತ್ತಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲ ದಿನಾಂಕ:20-01-2008 ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾ ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿದ್ದರೂ ದಂಡನೆಯು ಅರ್ಜಿದಾರರ ಕುಟುಂಬದ ಹಿತದೃಷ್ಟಿಯಿ ಪರಿಶೀಲಿಸಿದಾಗ ಸ್ವಲ್ಪ ಮಟ್ಟಿಗೆ ಹೆಚ್ಚಿನದಾಗಿ ಕಂಡು ಬಂದಿರುವುದರಿಂದ ಈ ಕುರಿತು ಕರ್ನಾಟಕ ಲೋಕಸೇವಾ ಆಯೋ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 309 ಪೊಸಿಅ 2008 ಬೆಂಗಳೂರು, ದಿನಾಂಕ: 29ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ.ರಮೇಶ, ಮಾಜಿ ಸಿಪಿಸಿ-315, ಚಾಮರಾಜನಗರ ಜಿಲ್ಲೆ, ಗ್ರಾಮಾಂತರ ಪೊಲೀಸ್ ಠಾಣೆ, ಇವರಿಗೆ ಶಿಸ್ತುಪ್ರಾಧಿಕಾರವು ವಿಧಿಸಿದ ದಂಡನಾದೇಶವನ್ನು ಮಾರ್ಪಡಿಸಿ, ಇವರನ್ನು ಸೇವೆಯಿಂದ ವಜಾಗೊಳಿಸಿ, ಶಿಸ್ತುಪ್ರಾಧಿಕಾರ ಹೊರಡಿಸಿದ ದಿ:15-06-2007ರ ಆದೇಶದ ದಿನಾಂಕದಿಂದಲೇ ಜಾರಿಗೆ ಬರುವಂತೆ ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಿದೆ. ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1363

ಟಿ.ಎಸ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಂ.ಎ.ನಟರಾಜ್, ಪಿ.ಐ., ಸಾಗರ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ಇವರ ಆದೇಶ ಸಂಖ್ಯೆ:ಸಿಆರ್/76/2001 ದಿನಾಂಕ:26-09-2001

2) ಅರ್ಜಿದಾರರ ಮೇಲ್ಮನವಿ ಅರ್ಜಿ ದಿನಾಂಕ:11-03-2008

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಸಿಜಿ(8) 02/2008-09 ದಿ:23-03-2009

ಪ್ರಸ್ತಾವನೆ:-

ಶ್ರೀ ಎಂ.ಎ.ನಟರಾಜ್, ಪಿ.ಐ., ಸಾಗರ ಪೊಲೀಸ್ ಠಾಣೆ, ಇವರು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಅಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

1. ಶ್ರೀ ಎಂ.ಎ.ನಟರಾಜ್, ನೀವು ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದೀರಿ. ಠಾಣಾ ಬರಹಗಾರರಾದ ಸಿ.ಎಚ್.ಸಿ.-60, ಟಿ.ಎಂ.ರಾಜಣ್ಣ, ರವರು ಠಾಣಾ ಸಿಬ್ಬಂದಿಗಳ ಪ್ರತಿ ತಿಂಗಳ ಆರ್.ಡಿ. ಹಣದ ಬಾಬ್ತು ಆಯಾಯಾ ತಿಂಗಳೇ ಅಂಚೆ ಕಛೇರಿಗೆ ಪಾವತಿಸದೆ ದುರುಪಯೋಗಪಡಿಸಿಕೊಳ್ಳುತ್ತಿದ್ದಾಗ್ಯೂ ನೀವು ಗಮನಹರಿಸದೆ ಆಲಕ್ಷಮಾಡಿ ಠಾಣಾ ಬರಹಗಾರರ ಅಕ್ರಮ ಚಟುವಟಿಕೆಗೆ ಪರೋಕ್ಷವಾಗಿ ಕಾರಣರಾಗಿದ್ದೀರಿ.
2. ಠಾಣಾ ಬರಹಗಾರರು ಠಾಣಾ ಸಿಬ್ಬಂದಿಗಳ ವಾರದ ರಜಾಭತ್ಯೆ ಹಣವನ್ನು ಹಾಗೂ ಪ್ರಯಾಣಭತ್ಯೆ ಹಣವನ್ನು ಸಿಬ್ಬಂದಿಗಳಿಗೆ ಸಂಪೂರ್ಣವಾಗಿ ವಿತರಿಸದೇ ವಿತರಣೆಯ ಸಮಯದಲ್ಲಿ ಈ ಹಣದಲ್ಲಿ ಭಾಗಾಂಶ ವನ್ನು ಪಡೆದು ಸಿಬ್ಬಂದಿಗಳಿಗೆ ಮೋಸ ಮಾಡುತ್ತಿದ್ದಾಗ್ಯೂ ನೀವು ಗಮನಹರಿಸದೆ ಠಾಣಾ ಬರಹಗಾರರ ದಿನಂಪ್ರತಿ ಅಕ್ರಮ ಚಟುವಟಿಕೆಯ ಕಡೆ ಲಕ್ಷವಿರದೆ ಅತೀವ ನಿರ್ಲಕ್ಷತೆ ಬೇಜವಾಬ್ದಾರಿ ಯನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:26-09-2001ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗೆ ದಕ್ಕೆಯಾಗದಂತೆ ಮೂರು ತಿಂಗಳ ಕಾಲ ಮುಂದೂಡುವ ದಂಡನೆ ವಿಧಿಸಿರುತ್ತಾರೆ."

ಈ ಆದೇಶದ ವಿರುದ್ದ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸದೆ ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.

ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳನ್ನಾಗಿ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿರ್ಲಕ್ಷತೆ, ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ.

ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 96 ಪೊಸಿಅ 2009 ಬೆಂಗಳೂರು, ದಿನಾಂಕ: 29ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎ. ನಟರಾಜ್, ಪಿ.ಐ., ಸಾಗರ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1424

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

FOREST, ECOLOGY AND ENVIRONMENT SECRETARIAT

Sub: Diversion of 8.79 ha. of forest land for construction of 33 KV DC line from Muthinakoppa Substation to N.R.Pura Substation and N.R.Pura Substation to Koppa Substation in N.R.Pura Taluk, Chickmagtalur District in favour of Executive Engineer(Elect.,) MESCOM Ltd., Chickmagalur.

Read:

1. Letter No.A5(4)GFL.CR.27/03-04, dated 24-03-2006 of Principal Chief Conservator of Forests, Bangalore.
2. State Government letter No.FEE 56 FGL 2006, dated :20.07.2006.
3. Letter No. F©A/11.2/279/KAR/TL/130, dated 25-05-2007 of Government of India, Ministry of Environment and Forests, Regional Office, (South Zone), Bangalore.
4. Letter No.A5(4)GFL.CR.27/03-04,dated 04-09-2008 of Principal Chief Conservator of Forests, Bangalore.
5. State Government letter No.FEE 56 FGL 2006, dated :12.11.2008.
6. Letter No. F©A/11.2/279/KAR/TL/3974, dated:13.03.2009 of Government of India, Ministry of Environment and Forests, Regional office(South Zone), Bangalore.

Preamble:

The Principal Chief Conservator of Forests, Bangalore vide his letter read at (1) above had submitted a proposal for diversion of 8.79 ha. of forest land in Koppa Forest Division for construction of 33 KV DC line from Muthinakoppa Substation to N.R.Pura Substation and N.R.Pura Substation to Koppa Substation in N.R.Pura Taluk, Chickmagalur District in favour of Executive Engineer (Elect) MESCOM Ltd., Chickmagalur subject to certain conditions. The details of the forest land required with Sy.Nos. details is as under:

Name of the Forest	Name of the Village	Sy.No.	Area in ha.
Aramballi SF	Muthinakoppa	74	0.08
	Madabur	57	4.21
	Kadahinabylu	20	0.60
Maliandur SF	Gibbige	109	1.74
		37	0.31
	Kadahinabylu	112	0.21
	Balekoppa MF	37	0.52
District Forest 1983-84 Plantation	Nagalapura	179	0.37
District Forest	Binthravalli	188	0.75
	Total		**8.79**

Accordingly, the proposal was recommended to Government of India, vide State Government letter dated: 20.07.2006 read at 2 above.

The Government of India, Ministry of Environment and Forests, Regional Office, South Zone, Bangalore vide their letter dated 25-05-2007 read at 3 above conveyed its approval (Stage-I) for diversion of 8.79 ha. of forest land subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated 04-09-2008 furnished the compliance report read at 4 above and the same has been sent to Government of India vide State Government letter dated: 12.11.2008 read at 5 above.

Government of India Ministry of Environment and Forests, Regional Office, South Zone, Bangalore vide their letter dated: 13.03.2009 read at 6 above has conveyed its approval (Stage-II) under Section 2 of Forest (Conservation) Act,1980 for diversion of 8.79 ha. of forest land in Koppa Forest Division for construction of 33 KV DC line from Muthinakoppa Substation to N.R.Pura Substation and N.R.Pura Substation to Koppa Substation in N.R.Pura Taluk, Chickmagalur District in favour of Executive Engineer (Elect) MESCOM Ltd., Chickmagalur subject to certain conditions.

The proposal has been examined in detail and hence the order.

Government Oreder No. FEE 56 FGL 2006, Bangalore, Dated: 18th May 2009

In the circumstances explained in the preamble above, Government is pleased to accord approval under section (2) of Forest (Conservation) Act 1980 for diversion of 8.79 ha. of forest land in Koppa Forest Division(Sy.Nos. mentioned in the preamble) for construction of 33 KV DC line from Muthinakoppa Substation to N.R.Pura Substation and N.R.Pura Substation to Koppa Substation in N.R.Pura Taluk, Chickmagalur District in favour of Executive Engineer (Elect) MESCOM Ltd., Chickmagalur subject to the following conditions:

1. The legal status of forest land shall remain unchanged.
2. Compensatory afforestation shall be raised over of equivalent identified non-forest land in Sy.No.7 of Hosur village, Koppa Taluk, at the cost of user agency. The State Government shall obtain prior permission of Central Government for change of location and schedule of Compensatory Afforestation, if any.
3. Non forest land for compensatory afforestation shall be notified by the State Government as RF/PF under Indian Forest Act, 1927 or the State Forest Act within a period of 6 months and Nodal Officer(FCA) shall report the compliance within 6 months.
4. The funds received from the user agency towards Compensatory Afforestation and Net Present Value under this project shall be transferred to Ad-hoc CAMPA in account number CA-1582 of Corporation Bank, Block-II, CGO Complex, Phase-I, Lodhi Road, New Delhi-110 003.
5. The additional amount of the NPV if any due as per the orders of the Hon`ble Supreme Court dated 28.03.2008 and 09.05.2008 in IA Nos.826 in 566 with related IA`s in Writ Petition(Civil) No.202/1995 shall be realised from the user agency and transferred to Ad-hoc CAMPA in account number CA-1578 of Corporation Bank, Block-II, CGO Complex, Phase-I, Lodhi Road, New Delhi-110 003 under intimation to Government of India.
6. The total forest area utilised for the project shall not exceed 8.79 ha. The forest area shall be utilised only for the purpose for which it is diverted. In case the land is not taken over by the user agency or the same is not used for the stipulated purpose within a period of two years, then the area will be resumed by the Forest Department under section 82 of Karnataka Forest Act 1963. The Conservator of Forests, Chickmagalore Circle, Chickmagalore is authorised to take necessary action in this regard. No residential buildings shall be permitted in the proposed area.
7. Only minimum number of trees shall be cut based on actual requirement for laying the KV line.
8. The lessee shall pay lease rent as fixed by the Government from time to time.
9. The lease is for a period of 30 years.

10. The Karnataka Forest Act, 1963 and Rules, 1969 will be applicable for any violation.
11. The user agency has to pay the Net Present Value (NPV) of forest land diverted under this proposal as per the orders of the Hon`ble Supreme Court dated 30.10.2002 and 01.08.2003 in IA 566 in Writ Petition No.202/1995 and as per guidelines issued by the Ministry vide letter No.5-1/1998-FC(pt-II), dated: 18.9.2003 and 22.9.2003 and State Government Order dated: 17.1.2004.
12. Trees shall be felled only when it becomes necessary and under strict supervision of State Forest Department.
13. The usr agency shall pay the cost of extraction of trees if available as estimated by the Department.
14. The user agency shall ensure that there should be no damage to the available Wildlife.
15. The user agency shall abide by all the conditions imposed upon by Government of India, Government of Karnataka and Principal Chief Conservator of Forests.
16. Any other conditions to be imposed by the Government of India/Government of Karnataka /Principal Chief Conservator of Forests will be abided by the lessee.

By Order and in the name of the Governor of Karnataka,

H.M. MALLIKARJUANA SWAMY

P.R. 1403

Under Secretary to Government,

Forest, Ecology and Environment Department.

Sub: Diversion of 0.112 ha. of forest land in Ft.Sy.No.87A of Venkatapur village and Ft. Sy.No.61 of Bilalkhand village for construction of the Water Treatment Plant for supply of water to Jali Gram Panhcyat, Bhatkal Taluk under Jal Nirmal Project.

Read: 1. Letter No.A5(2)GFL.CR.3/07-08 dated: 29/05/2007 and 05/11/2007 of the Principal Chief Conservator of Forests, Bangalore.
2. State Government letter No.FEE 70 FLL 2007, dated: 27.11.2007.
3. Letter No.4-KRB-382/2007-BAN/1410, dated: 10-12-2007 of Government of India, Ministry of Environment and Forests, Regional Office, South Zone, Bangalore.
4. Letter No.A5(2)GFL.CR.3/07-08 dated: 27/02/2009 of the Principal Chief Conservator of Forests, Bangalore.
5. State Government letter No.FEE 70 FLL 2007, dated: 24.04.2009.
6. Letter No.4-KRB-382/2007-BAN/4348, dated: 12-05-2009 of Government of India, Ministry of Environment and Forests, Regional Office, South Zone, Bangalore.

Preamble:

The Principal Chief Conservator of Forests, Bangalore vide his letter dated: 29/05/2007 and 05/11/2007 read at (1) above has submitted the proposal and revised proposal to obtain the approval of Government of India under Section 2 of the Forest (Conservation) Act, 1980 for diversion of 0.112 ha. of forest land in Ft.Sy.No.87A of Venkatapur village and Ft. Sy.No.61 of Bilalkhand village for construction of the Water Treatment Plant for supply of water to Jali Gram Panchyat, Bhatkal Taluk under Jal Nirmal Project in favour of Project Manager, ZP, PSU, Jal Nirmal Project, U.K.District, Karwar subject to certain conditions.

Accordingly, the proposal was recommended to Government of India vide State Government letter dated: 27.11.2007 read at (2) above.

The Goverrment of India, Ministry of Environment and Forests, Regional office, Bangalore vide their letter dated: 10-12-2007 read at (3) above has given its in principle (Stage-I) approval subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated: 27.02.2009 read at (4) above furnished the compliance report and the same has been sent to Government of India vide State Government letter dated: 24-04-2009 read at 5 above.

Government of India, Ministry of Environment and Forests, Regional Office, South Zone, Bangalore vide their letter dated: 12.05.2009 read at (5) above conveyed its approval (Stage-II) under Section 2 of the Forest(Conservation)Act, 1980 for diversion of 0.112 ha. of forest land in Ft.Sy.No.87A of Venkatapur village and Ft. Sy.No.61 of Bilalkhand village for construction of the Water Treatment Plant for supply of water to Jali Gram Panchayat, Bhatkal Taluk under Jal Nirmal Project in favour of Project Manager, ZP, PSU, Jal Nirmal Project, U.K.District, Karwar subject to certain conditions.

The proposal has been examined in detail and hence the order.

Government Oreder No. FEE 70 FLL 2007, Bangalore, Dated: 29th May 2009

In the circumstances explained in the preamble above, Government are pleased to accord sanction under section (2) of Forest (Conservation) Act 1980 for diversion of 0.112 ha. of forest land in Ft.Sy.No.87A of Venkatapur village and Ft. Sy.No.61 of Bilalkhand village for construction of the Water Treatment Plant for supply of water to Jali Gram Panchayat, Bhatkal Taluk under Jal Nirmal Project in favour of Project Manager, ZP, PSU, Jal Nirmal Project, U.K.District, Karwar subject to the following conditions:

1. The legal status of forest land shall remain unchanged.
2. The funds received from the user agency towards NPV under this project shall be transferred to Ad-hoc CAMPA in account number CA 1582 of Corporation Bank, Block-II, CGO Complex, Phase-I, Lodhi Road, New Delhi-110 003.
3. The additional amount of the Net Present Value(NPV) of the diverted forest land if any, due as per the orders of the Hon`ble Supreme Court dated: 28.03.2008 and 09.05.2008 in IA Nos. 826 in 566 with related IA`s in Writ Petition(Civil) No.202/1995 shall be realised from the user agency and transferred to Ad-hoc CAMPA in account number CA-1582 of Corporation Bank, Block-II, CGO Complex, Phase-I, Lodhi Road, New Delhi-110 003 under intimation to Government of India.
4. The total forest area utilized for the project shall not exceed 0.112 ha. The forest area shall be used only for the purpose for which it is diverted. In case the land is not taken over by the user agency or the same is not used for the stipulated purpose within a period of two years then the area will be taken back by the Forest Department by the Conservator of Forests under section 82 of Karnataka Forest Act, 1963.
5. The user agency has to pay the lease rent as fixed by the Government at the time of sanction and any subsequent orders in this regard.
6. The lease is granted for 20 years.
7. The Karnataka Forest Act, 1963 and Rules, 1969 will be applicable for any violation.
8. The user agency has to pay the Net Present Value as per the Government Notification dated: 17.1.2004, @ Rs. 5.80 to Rs. 9.20 lakhs per ha. depending upon the quantity and density of the land.
9. Any other conditions to be imposed by the Government of India/Government of Karnataka /Principal Chief Conservator of Forests will be abided by the lessee.

By Order and in the name of the Governor of Karnataka,

H.M. MALLIKARJUNASWAMY

Under Secretary to Government,

Forest, Ecology and Environment Department.

P.R. 1404

ಜಲಸಂಪನ್ಮೂಲ ಸಚಿವಾಲಯ

ವಿಷಯ: ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾ ಸ್ವಾಧೀನಪಡಿಸಿಕೊಳ್ಳಲಾದ ಬ್ಯಾಲಿಹಾಳ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 03/03/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ ಭೂಸ್ವಾಪ್ರ/2008-09/1734.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಕೊಪ್ಪ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬ್ಯಾಲಿಹಾಳ ಗ್ರಾಮ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ.ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 31/10/1996.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿ ದಿನಾಂಕ: 09/06/1999.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳದ ಸಿವಿಲ್ (ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪ ಸಂಖ್ಯೆ:ಲಾ 3190 ಎಲ್ಎಸ್‌ಪಿ 2005, ದಿನಾಂಕ 27/02/2006ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್ಎಸಿ ಸಂಖ್ಯೆ	ಬ್ಯಾಲಿಹಾಳ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	79/02	7/1ಎ	8-35	2001037
2	78/02	11/2ಎ	3-28	834527
3	80/02	11/2ಇ	0-25	141383
	ಒಟ್ಟು			2976947

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 47 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 26ನೇ ಜೂನ್ 2009

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾ ಬ್ಯಾಲಿಹಾಳ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧ ಮೊತ್ತ ರೂ.29,76,947-00ಗಳನ್ನು (ಇಪ್ಪತ್ತೊಂಭತ್ತು ಲಕ್ಷದ ಎಪ್ಪತ್ತಾರು ಸಾವಿರದ ಒಂಭೈನೂರ ನಾಲ್ವತ್ತೇಳು ರೂಪಾಯಿಗಳ ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳ ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16/05/2008ರ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1413

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮದಲಗಟ್ಟಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 03/03/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ ಭೂಸ್ವಾಪ್ರ/2008-09/1732.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮದಲಗಟ್ಟಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 03/10/1996.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 09/06/1999.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳದ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯ ಪತ್ರ ಸಂಖ್ಯೆ: ಲಾ 2384 ಎಲ್ಎಸ್‌ಪಿ 2005, ದಿನಾಂಕ 23/02/2006ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್ಎಸಿ ಸಂಖ್ಯೆ	ಮದಲಗಟ್ಟಿ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	21/01	8	11-04	2370984
2	20/01	7/2ಬಿ	5-00	1068286
3	15/01	5/2	6-13	1351249
4	14/01	5/1ಎ	6-34	1463365
	ಒಟ್ಟು			6253884

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 49 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 26ನೇ ಜೂನ್ 2009

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮದಲಗಟ್ಟಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.62,53,884-00ಗಳನ್ನು (ಅರವತ್ತೆರಡು ಲಕ್ಷದ ಐವತ್ತಮೂರು ಸಾವಿರದ ಎಂಟು ನೂರ ಎಂಭತನಾಲ್ಕು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1414

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ವಿಷಯ: ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿ ಕೊಳ್ಳಲಾದ ಬೆಂಚಮಟ್ಟಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 03/03/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ ಭೂಸ್ವಾಪ್ರ/2008–09/1735.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಂಚಮಟ್ಟಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ.ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 03/10/1996.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ: 18/07/1999.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳದ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ:ಲಾ 2521 ಎಲ್‌ಎಸ್‌ಪಿ 2005, ದಿನಾಂಕ: 31/01/2006ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್‌ಎಸಿ ಸಂಖ್ಯೆ	ಬೆಂಚಮಟ್ಟಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	411/2000	12/3ಎ	3–29	1033887
2	406/2000	11/4	1–32	499855
3	408/2000	11/7	0–13	90661
4	409/2000	12/1 12/2 14/1–4 15/1/2	0–12 6–38 0–02 2–00	2580499
5	413/2000	13/5	0–20	139210
6	414/2000	13/6 13/7	1–16 1–00	666306
7	418/2000	13/1	0–24	166952
8	422/2000	15/2ಎ	1–31	492919
			ಒಟ್ಟು	**5670289**

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 52 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 26ನೇ ಜೂನ್ 2009

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಂಚಮಟ್ಟಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.56,70,289–00ಗಳನ್ನು (ಐವತ್ತಾರು ಲಕ್ಷದ ಎಪ್ಪತ್ತು ಸಾವಿರದ ಇನ್ನೂರ ಎಂಭತ್ತೊಂಭತ್ತು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16/05/2008ರಲ್ಲಿ ಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. 1415 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ವಿಷಯ: ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 06/05/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/ 2008–09/2773.

ಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಕೊಪ್ಪಳ , ಕುಷ್ಟಗಿ ತಾಲ್ಲೂಕು ಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಉದ್ಯಾಳ ಮತ್ತು ಯತ್ನಟ್ಟಿ ುಗಳ ಜಮೀನುಗಳಿಗೆ ಕೊಪ್ಪಳದ ಸಿವಿಲ್ ನ್ಯಾಯಾಲಯವು (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 14/02/02
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 29/07/05.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳದ ಸಿವಿಲ್ (ಹಿರಿಯ ಶ್ರೇಣಿ) ಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ:ಆರ್‌ಡಿ 312 ಎಲ್‌ಸಿಜಿ 2008 ಹಾಗೂ ಆರ್‌ಡಿ 316 ಎಲ್‌ಸಿಜಿ 2008, ಾಂಕ 16/02/09ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್‌ಎಸಿ ಸಂಖ್ಯೆ	ಸ.ನಂ.	ಗ್ರಾಮ	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	01/07	81	ಉದ್ಯಾಳ	0–32	267066
2	03/07	80/ಬಿ	ಉದ್ಯಾಳ	0–10	83677
3	04/07	101/ಸಿ	ಯತ್ನಟ್ಟಿ	0–08	67195
4	05/07	101/ಡಿ	ಯತ್ನಟ್ಟಿ	0–16	134093
5	08/07	80/ಡಿ	ಉದ್ಯಾಳ	0–30	250391
6	09/07	80/ಎ	ಉದ್ಯಾಳ	0–10	83667
7	10/07	80	ಉದ್ಯಾಳ	0–10	83667
8	13/07	64/ಎ	ಉದ್ಯಾಳ	0–20	167542
9	14/07	101/ಬಿ	ಯತ್ನಟ್ಟಿ	0–16	134093
10	35/08	72/ಅ, 72/ಆ	ಯತ್ನಟ್ಟಿ	1–34	619095
	ಒಟ್ಟು				**1890486**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 67 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ 26ನೇ ಜೂನ್ 2009.

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮೇಲ್ಕಂ ಗ್ರಾಮಗಳ ಸ.ನಂ.ಗಳ ಜಮೀನುಗಳಿಗೆ ಕೊಪ್ಪಳದ ಸಿವಿಲ್ ನ್ಯಾಯಾಲಯವು (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣಗಳ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊ ರೂ.18,90,486–00ಗಳನ್ನು (ಹದಿನೆಂಟು ಲಕ್ಷದ ತೊಂಭತ್ತು ಸಾವಿರದ ನಾನೂರ ಎಂಭತ್ತಾರು ರೂ.ಗಳು ಮಾ ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ.

ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗ ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದ ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1416

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವ

ವಿಷಯ: ಗುಲ್ಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು ಕರದಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 04/02/0 ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/ 2008–09/709.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದ ಗುಲ್ಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು ಕರದಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸ ರೂ.2,55,205–00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 24/04/97
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿ ದಿನಾಂಕ 20/05/98

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಶೋರಾಪೂರ ಸಿವಿಲ್ (ಹಿರಿಯ ಶ್ರೇ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣವನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ:ಆರ 624 ಎಲ್‌ಸಿಜಿ 2009, ದಿನಾಂಕ 21/05/09ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್‌ಎಸಿ ಸಂಖ್ಯೆ	ಕರದಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	159/04	179/ಎ	2–21	2,55,205–00

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 27 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ 23ನೇ ಜೂನ್ 2009.

ಗುಲ್ಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು ಕರದಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಕರದಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ನ ಜಮೀನಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.2,55,205-00ಗಳನ್ನು (ಎರಡು ಲಕ್ಷದ ಐವತ್ತೈದು ಸಾವಿರದ ಇನ್ನೂರ ಐದು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1417 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ: ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 03/03/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ ಭೂಸ್ವಾಪ್ರ/2008-09/1733.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸದರಿ ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಮ ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 17/10/1996
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಮ ಘೋಷಿಸಿದ ದಿನಾಂಕ 16/04/1999

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳದ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಮ ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ:ಲಾ 2945 ಎಲ್‌ಎಸ್‌ಪಿ 2005, ದಿನಾಂಕ 23/02/06ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಮ ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್‌ಎಸಿ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ-ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	443/00	25/ಬಿ	1-05	271442
2	439/00	26	1-16	337673
3	440/00	27/1	0-20	120919
4	445/00	18	1-00	241338
			4-25	1114375
		ಒಟ್ಟು		2085747

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಸೀಇ 50 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 26ನೇ ಜೂನ್ 2009.

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ನಿಡಶೇಷಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಚಾರ ಪರಿಹಾರ ಧನ ಮೊತ್ತ ರೂ.20,85,747-00ಗಳನ್ನು (ಇಪ್ಪತ್ತು ಲಕ್ಷದ ಎಂಭತ್ತೈದು ಸಾವಿರದ ಏಳು ನೂರ ನಲವತ್ತೇಳು ರೂಪಾಯಿಗಳು ಮಾತ್ರ) ಪಾವತಿಸಲು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1418 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ).

ವಿಷಯ: ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಕೂಡ್ಲಿ ಅಲ್ಲಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ: 05/12/2008ರ ಪತ್ರ ಸಂಖ್ಯೆ: ಮುಇಂ/ಸನೀ/(ಉ)ವ/ ಬಿಜಾ/ಭೂಸ್ವಾಪ್ರ/2008-09/4445.

ಪ್ರಸ್ತಾವನೆ:-

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು ಕೂಡ್ಲಿ ಅಲ್ಲಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಧನ ಪಾವತಿಸಲು ರೂ. 4,96,015/-ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿರುತ್ತದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 04/05/1995.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ: 25/06/1997.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸೇಡಂ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಭೂಮಾಲೀಕರು ಸಿವಿಲ್ ನ್ಯಾಯಾಲಯವು ಹೆಚ್ಚಿಸಿದ್ದ ಪರಿಹಾರ ಧನಕ್ಕಿಂತ ಇನ್ನೂ ಹೆಚ್ಚಿನ ಪರಿಹಾರ ಧನಕ್ಕಾಗಿ ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಉಚ್ಚ ನ್ಯಾಯಾಲಯವು ಸಿವಿಲ್ ನ್ಯಾಯಾಲಯವು ಹೆಚ್ಚಿಸಿದ ಪರಿಹಾರ ಧನಕ್ಕಿಂತ ಇನ್ನು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುತ್ತದೆ.

ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ: 1) ಲಾ 2374 ಎಲ್.ಎಸ್.ಪಿ 2007 ದಿನಾಂಕ: 02/06/2008 2) ಲಾ 1009 ಎಲ್.ಎಸ್.ಪಿ 2007 ದಿನಾಂಕ: 17/10/2008 ಹಾಗೂ 3) ಲಾ 1016 ಎಲ್.ಎಸ್.ಪಿ 2007 ದಿನಾಂಕ: 13/10/2008ರಲ್ಲಿ ಅಭಿಪ್ರಾಯ ನೀಡಿದೆ.

ಉಚ್ಚ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್‌ಎಸಿ ಪ್ರಕರಣ ಸಂಖ್ಯೆ	ಎಂ.ಎಫ್.ಎ ಸಂಖ್ಯೆ	ಕೂಡ್ಲಿ ಅಲ್ಲಾಪುರ ಗ್ರಾಮದ ಸ. ನಂ	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
01	1/02	6583/05	43	2–08	222709
02	279/02	1791/05	65/1	1–14	133295
03	279/02	6584/05	65/2	1–14	140011
ಒಟ್ಟು					**496015**

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 1 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 27ನೇ ಜೂನ್ 2009

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಕೂಡ್ಲಿ ಅಲ್ಲಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಕೂಡ್ಲಿ ಅಲ್ಲಾಪುರ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ನ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕ ಹಾಕಿದ ಪರಿಹಾರ ಧನ ಮೊತ್ತ ರೂ 4,96,015/–ಗಳನ್ನು (ನಾಲ್ಕು ಲಕ್ಷದ ತೊಂಭತ್ತಾರು ಸಾವಿರದ ಹದಿನೈದು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳ ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2008 ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1419

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಎಸ್.ಆರ್. ಪಾಟೀಲ್, ಪಿ.ಐ., ಬಾಗಲಕೋಟೆ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರ ಆದೇಶ ಸಂಖ್ಯೆ:ಸ್ಥಾಪನ 2ಎ/ಪಿಆರ್/06/ 2007 [ಅ.ಪು.ಸಂ:537/07] ದಿನಾಂಕ: 15–05–07

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು 165/ಉವ/2007 ದಿನಾಂಕ: 04–01–08

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:06-08-09

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ ಸಿಬಿ(8)79/2008-09 ದಿ:19-03-2009

ಪ್ರಸ್ತಾವನೆ:-

ಶ್ರೀ ಎಸ್.ಆರ್. ಪಾಟೀಲ್, ಪಿ.ಐ., ಇವರು ಕ್ಯಾಂಪ್ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಘೋರ ನಿಷ್ಕಾಳಜಿತನ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷರೋಪಣೆ:-

"ಆಪಾದಿತ ಪೊಲೀಸ್ ಅಧಿಕಾರಿಯಾದ ನೀವು ದಿ:04-10-2006 ರಂದು ಕರ್ನಾಟಕ ರಾಜ್ಯ ಬೆಳಗಾವಿಯ ಕರ್ನಾಟಕ ರಕ್ಷಣಾ ವೇದಿಕೆಯವರು ಹಾಗೂ ಬೆಳಗಾವಿ ಕನ್ನಡ ಸಂಘಟನೆಗಳು ಗಡಿ ವಿವಾದದ ಕುರಿತು ಕೇಂದ್ರ ಸರ್ಕಾರದ ನೀತಿ ವಿರುದ್ಧ ಕರ್ನಾಟಕ ಬಂದ್ ಆಚರಣೆಯ ಸಮಯದಲ್ಲಿ ಕನ್ನಡಪರ ಸಂಘಟನೆ ಜನರು ಬಂದು ಮರಾಠಿ ಭಾಷಿಕರ ಅಂಗಡಿಗಳನ್ನು ಬಂದ್ ಮಾಡಿಸುವಾಗ ಮರಾಠಿ ಜನರಿಗೂ ಹಾಗೂ ಕನ್ನಡಪರ ಜನ ರೊಂದಿಗೆ ವಾದ ವಿವಾದ ಆಗಿ ಕಾನೂನು ಮತ್ತು ಸುವ್ಯವಸ್ಥೆ ಭಂಗ ತರುವಂತಹ ಸಂದರ್ಭದಲ್ಲಿ ಎಪಿಎಂಸಿ ಠಾಣೆ, ಪಿ.ಎಸ್.ಐ. ಶ್ರೀ.ಜಾವೀದ್ ಎಸ್ ಮುಶಾಪುರಿ ರವರು ಮೊಬೈಲ್ ಮುಖಾಂತರ ಸಂಪರ್ಕಿಸಿ ನಿಮಗೆ ಬರಲು ತಿಳಿಸಿದಾಗ ನೀವು ಕೂಡಲೇ ಘಟನಾ ಸ್ಥಳಕ್ಕೆ ಬಂದು ಮುಂಜಾಗ್ರತಾ ಕ್ರಮ ಕೈಗೊಂಡು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗಿದ್ದಲ್ಲದೆ, ಎ.ಪಿ.ಎಂ.ಸಿ. ಗುನ್ನ ನಂ:111/06 ನೇದ್ದರಲ್ಲಿ ದಸ್ತಗೀರಾದ ಆರೋಪಿತರಾದ 1) ವಿನಾಯಕ ಹೊನಗೆಕರ 2) ಉದಯ ಸಿದ್ದನ್ನವರ ಇವರನ್ನು ಠಾಣೆಯಿಂದ ಕಳುಹಿಸಿಕೊಟ್ಟು ನಿಮ್ಮ ಕರ್ತವ್ಯದಲ್ಲಿ ಘೋರ ನಿಷ್ಕಾಳಜಿತನ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 15-05-07 ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಎರಡು ವರ್ಷಕಾಲ ಮುಂದೂಡಲಾದ ದಂಡನೆ ವಿಧಿಸಿರುತ್ತಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರವಲಯ, ಬೆಳಗಾವಿ, ಇವರು ಶಿಸ್ತು ಪ್ರಾಧಿಕಾರದ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಅಭಿಪ್ರಾಯಪಟ್ಟು ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಆರು ತಿಂಗಳ ಕಾಲ ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:04-01-08 ಆದೇಶದಲ್ಲಿ ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 312 ಪೊಸಿಅ 2008 ಬೆಂಗಳೂರು, ದಿನಾಂಕ: 29ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಆರ್. ಪಾಟೀಲ್, ಪಿ.ಐ., ಬಾಗಲಕೋಟೆ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1434

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಡಿ. ಕೃಷ್ಣಪ್ಪ, ಸಿ.ಎಚ್.ಸಿ.–133, ನರಸಾಪುರ, ಪೊಲೀಸ್ ಠಾಣೆ, ಕೋಲಾರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ ಇವರ ಆದೇಶ ಸಂಖ್ಯೆ:ಡಿಇ 08/2006–07 ಓ.ಬಿ:148/07 ದಿನಾಂಕ:27–10–2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು 146/2008–09 ಓ.ಬಿ:38/2008–09 ದಿನಾಂಕ:06–06–08

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:31–01–09

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು (2)106/2008–09 ದಿ:03–04–2009

ಪ್ರಸ್ತಾವನೆ:–

ಶ್ರೀ ಡಿ. ಕೃಷ್ಣಪ್ಪ, ಇವರು ಈ ಹಿಂದೆ ನರಸಾಪುರ ಹೊರ ಪೊಲೀಸ್ ಠಾಣೆಯಲ್ಲಿ ಸಿ.ಎಚ್.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅತೀವ ದುರ್ನಡತೆ ಹಾಗೂ ಗಂಭೀರ ಸ್ವರೂಪದ ಅಶಿಸ್ತನ್ನು ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

1. "ಶ್ರೀ.ಕೃಷ್ಣಪ್ಪ, ಸಿ.ಎಚ್.ಸಿ.–133, (ಹಾಲಿ ಅಮಾನತ್ತು) ಆದ ನೀವು ಈ ಹಿಂದೆ ನರಸಾಪುರ ಹೊರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ನರಸಾಪುರ ಗ್ರಾಮದ ಶ್ರೀ.ಅಣ್ಣಗಿರಿಯಪ್ಪ ಬಿನ್ ಲೇಟ್ ಮುನಿಯಪ್ಪ ಎಂಬುವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದು, ನೀವು ವಾಸವಿದ್ದ ಎದುರು ಮನೆ ಶ್ರೀ.ಪಿಳ್ಳಪ್ಪ ಬಿನ್ ಲೇಟ್ ಮುನಿಯಪ್ಪ ಎಂಬುವರ ಮನೆಯಲ್ಲಿ ನರಸಾಪುರ ಗ್ರಾಮದ ಬಿ.ಆರ್.ಎಂ.ವಿ.ಪ್ರೌಢಶಾಲೆಯಲ್ಲಿ ವೃತ್ತಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ.ಪಿ.ರಾಜಣ್ಣ ಬಿನ್ ಲೇಟ್ ಪಿಳ್ಳಪ್ಪ ಎಂಬುವರು ತನ್ನ ಪತ್ನಿಯಾದ ಶ್ರೀಮತಿ.ಸುನಂದಮ್ಮ ಎಂಬಾಕೆಯೊಂದಿಗೆ ವಾಸವಾಗಿದ್ದರು. ನೀವು ವೃತ್ತಿ ಶಿಕ್ಷಕ ರಾಜಣ್ಣ ರವರ ಪತ್ನಿ ಶ್ರೀಮತಿ.ಸುನಂದಮ್ಮ, ರವರ ಜೊತೆ ಅನೈತಿಕ ಸಂಬಂಧ ಬೆಳೆಸಿಕೊಂಡು ದಿ:07–01–07 ರಂದು ರಾತ್ರಿ ಸುಮಾರು 01.30 ಗಂಟೆ ಸಮಯದಲ್ಲಿ ರಾಜಣ್ಣ ರವರು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಅವರ ಮನೆಗೆ ಹೋಗಿ ರಾಜಣ್ಣನ ಪತ್ನಿ, ಶ್ರೀಮತಿ. ಸುನಂದಮ್ಮ ರವರ ಜೊತೆಯಲ್ಲಿ ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದು, ಆ ಸಮಯದಲ್ಲಿ ರಾಜಣ್ಣ ರವರು ಕಿಟಕಿಯಲ್ಲಿ ನೋಡಿ ಮನೆ ಮುಂಬಾಗಿಲಿನ ಚಿಲಕವನ್ನು ಹಾಕಿದ್ದು, ಆಗ ಶ್ರೀಮತಿ.ಸುನಂದಮ್ಮ, ರವರು ರಾಜಣ್ಣ ರವರನ್ನು ಉದ್ದೇಶಿಸಿ ನಿಮ್ಮನ್ನು (ಕೃಷ್ಣಪ್ಪನನ್ನು) ಹೊರಗೆ ಬಿಡದಿದ್ದರೆ ತಾನು ಸೀಮೆಎಣ್ಣೆ ಹಾಕಿಕೊಂಡು ಪ್ರಾಣ ಬಿಡುತ್ತೇನೆಂದು ಬೆದರಿಕೆ ಹಾಕಿರುತ್ತಾರೆ. ನಂತರ ರಾಜಣ್ಣ, ರವರು ಊರಿನವರನ್ನು ಮತ್ತು ಪೊಲೀಸರನ್ನು ಸ್ಥಳಕ್ಕೆ ಕರೆಯಿಸಿದ್ದು, ಆಗ ನೀವು ಸ್ಥಳದಿಂದ ಹೊರಟು ಹೋಗಿ, ಅತೀವ ದುರ್ನಡತೆ ಹಾಗೂ ಗಂಭೀರ ಸ್ವರೂಪದ ಅಶಿಸ್ತನ್ನು ಪ್ರದರ್ಶಿಸಿರುವ ಬಗ್ಗೆ."

2. "ಶ್ರೀ.ಡಿ.ಕೃಷ್ಣಪ್ಪ, ಸಿ.ಎಚ್.ಸಿ.–133, (ಹಾಲಿ ಅಮಾನತ್ತು) ಆದ ನೀವು ಈ ಹಿಂದೆ ನರಸಾಪುರ ಹೊರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೇಲ್ಕಂಡ ಘಟನೆಗೆ ಸಂಬಂಧಪಟ್ಟಂತೆ ಶ್ರೀ.ರಾಜಣ್ಣ ಬಿನ್ ಲೇಟ್ ಪಿಳ್ಳಪ್ಪ ರವರು ನ್ಯಾಯ ದೊರಕಿಸಿಕೊಡುವಂತೆ ಕೋರಿ ದಿ:08–01–07 ರಂದು ನಿಮ್ಮ ವಿರುದ್ಧ ವೇಮಗಲ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಈ ಬಗ್ಗೆ ವೇಮಗಲ್ ಪೊಲೀಸ್ ಠಾಣೆಯಲ್ಲಿ ಮೊ.ಸಂ:04/2007 ಕಲಂ 497 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ನೀವು ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾಗಿದ್ದು, ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕರ ಆಸ್ತಿಯ ರಕ್ಷಣೆ ಹಾಗೂ ಮಾನ ಪ್ರಾಣವನ್ನು ಕಾಪಾಡಬೇಕಾದವರೆ ತನ್ಮೂಲಕ ನೀವು ಕಾನೂನು ಬಾಹಿರ ಚಟುವಟಿಕೆ ಗಳಲ್ಲಿ ತೊಡಗಿ ಅನುಚಿತ ರೀತಿಯಲ್ಲಿ ವರ್ತಿಸಿ ಅತೀವ ದುರ್ನಡತೆ ಹಾಗೂ ಗಂಭೀರ ಸ್ವರೂಪದ ಅಶಿಸ್ತನ್ನು ಪ್ರದರ್ಶಿಸಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 27-10-0 ಆದೇಶದಲ್ಲಿ "ಅರ್ಜಿದಾರರ ಸೇವೆಯಿಂದ ವಜಾಗೊಳಿಸಲಾಗಿದೆ, ಹಾಗೂ ದಿ:09-01-07 ರಿಂದ 02-07-2007ರ ವರೆ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸುವ ದಂಡನೆ ವಿಧಿಸಿರುತ್ತಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲ ದಿನಾಂಕ:06-06-08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿದ್ದು, ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 10 ಪೊಸಿಅ 2009 ಬೆಂಗಳೂರು, ದಿನಾಂಕ: 29ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಡಿ. ಕೃಷ್ಣಪ್ಪ, ಮಾಜಿ ಸಿ.ಎಚ್.ಸಿ.-133, ಇ ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1435 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗ

ವಿಷಯ: ಶ್ರೀ ಝೇವಿಯರ್, ಎ.ಎಸ್.ಐ., ತೆಕ್ಕಲಕೋಟ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಳ್ಳಾರಿ, ಇವರ ಆ ಸಂಖ್ಯೆ:17/ಇವಿ/2007 ಜಿ.ಆ. ಸಂ:872/07-08 ದಿ:31-03-2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣ ಇವರ ಆದೇಶ ಸಂಖ್ಯೆ:ಅಪೀಲು/ಸಿಬ್ಬಂದಿ-2/2008-09 ಓ.ಬಿ:85/2008-09 ದಿನಾಂಕ:29-07-
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:24-10-08
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಸಂಖ್ಯೆ:ಅಪೀಲು(2)100/2008-09 ದಿ:04-04-2009

ಪ್ರಸ್ತಾವನೆ:-

ಶ್ರೀ ಝೇವಿಯರ್, ಎ.ಎಸ್.ಐ., ಇವರು ಬಳ್ಳಾರಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ಓ.ಓ.ಡಿ. ಆಧಾರದ ಮೆ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀ ದುರ್ನಡತೆ ಅಪ್ರಮಾಣಿಕತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 19 ನಿಯಮ 6 ರಡಿ ಇಲಾಖಾ ವಿಚಾಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

1. ನೀವು ಶಿಸ್ತಿನ ಇಲಾಖೆಯಲ್ಲಿ ಕೆಲಸ ಮಾಡುತ್ತಾ, ಸಾರ್ವಜನಿಕ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುವಾಗ ಸಾರ್ವಜನಿಕರೊಂದಿಗೆ ಸೌಮ್ಯವಾಗಿ ವರ್ತಿಸದೇ ಶ್ರೀ.ಎಂ.ಸುದರ್ಶನಂ ಇವರೊಂದಿಗೆ ಕಟುವಾಗಿ ವರ್ತಿಸಿ ಅಂದರೆ ಅವರ ವಾಹನ ಕಳ್ಳತನದ್ದು, ಅವರು ಕಳ್ಳರು ಎನ್ನುವ ರೀತಿಯಲ್ಲಿ ಅವರಿಗೆ ಅಪಮಾನ ಮಾಡುವ ಮೂಲಕ ನಿಮ್ಮ ಕರ್ತವ್ಯದಲ್ಲಿ ಅತೀ ದುರ್ನಡತೆ ತೋರಿಸಿರುತ್ತೀರೆಂದು ಆಪಾದಿಸಲಾಗಿದೆ.

2. ನೀವು ಪೊಲೀಸ್ ಅಧಿಕಾರಿಯಾಗಿ ಪ್ರಮಾಣಿಕವಾಗಿ ಕರ್ತವ್ಯ ನಿರ್ವಹಿಸದೇ ವಾಹನ ಚಾಲಕರಾದ ಶ್ರೀ ಎಂ.ಸುದರ್ಶನಂ ಇವರಿಗೆ ಹಣ ನೀಡಿ ಸರಿ ಮಾಡಿಕೊಳ್ಳುವಂತೆ ಬೇರೊಬ್ಬರಿಂದ ಹೇಳಿಸುವ ಮೂಲಕ ಕರ್ತವ್ಯದಲ್ಲಿ ಅಪ್ರಮಾಣಿಕತನ ತೋರಿರುತ್ತೀರೆಂದು ಅಪಾದನೆ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ (1) ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಳ್ಳಾರಿ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:31–03–08ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಆರು ತಿಂಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ತಡೆಹಿಡಿದು, ದಿ:18–05–07 ರಿಂದ 27–07–2007 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಶಿಸ್ತುಪ್ರಾಧಿಕಾರದ ಆದೇಶವನ್ನು ಭಾಗಶ: ಪರಿಷ್ಕರಿಸಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷಕಾಲ ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮುಂದೂಡಿ ಅಮಾನತ್ತಿನ ಅವಧಿಯನ್ನು ಅರ್ಹರಜೆಯೆಂದು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:29.07.08ರ ಆದೇಶದಲ್ಲಿ ಪರಿಗಣಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 382 ಪೊಸಿಅ 2008 ಬೆಂಗಳೂರು, ದಿನಾಂಕ: 3ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಝೇವಿಯರ್, ಎ.ಎಸ್.ಐ., ತೆಕ್ಕಲಕೋಟ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1436

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶೀ ಎಸ್.ವೈ. ಐಹೊಳೆ, ಮಾಜಿ ಎ.ಪಿ.ಸಿ., ಡಿ.ಎ.ಆರ್., ಗದಗ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗದಗ, ಇವರ ಆದೇಶ ಸಂಖ್ಯೆ:ಡಿಇ/ಪಿಆರ್–6/16/2004 ಅ.ಪು.ಸಂ:33/ 2005 ದಿ:31–03–2005

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು/14/ಉವ/2008–09 ದಿನಾಂಕ:17–09–08

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:26–11–08

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)101/08–09 ದಿ:18–04–2009

ಪ್ರಸ್ತಾವನೆ:–

ಶೀ ಎಸ್.ವೈ. ಐಹೊಳೆ, ಇವರು ಜಿಲ್ಲಾ ಸಶಸ್ತ್ರ ಪಡೆ, ಗದಗನಲ್ಲಿ ಸಶಸ್ತ್ರ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:–

1. ನೀವು ಗದಗ ಜಿಲ್ಲಾ ಖಜಾನೆಯ ಗಾರ್ಡ್ ಕರ್ತವ್ಯ ದಲ್ಲಿದ್ದಾಗ ದಿ:06–11–2003 ರಿಂದ ಕರ್ತವ್ಯಕ್ಕೆ ಗೈರು ಹಾಜರ ಉಳಿದಿರುತ್ತೀರಿ. ನಿಮ್ಮ ಗೈರು ಹಾಜರಾತಿ ಅವಧಿಯಲ್ಲಿ ನೀವು ಮೇಲಾಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಹಾಗೂ ರಜೆ ಮಂಜೂರಾತಿಗಾಗಿ ಅರ್ಜಿಯನ್ನು

ಸಲ್ಲಿಸಿರುವುದಿಲ್ಲ ಅಲ್ಲದೇ ನೀವು ಕರ್ತವ್ಯಕ್ಕೆ ಗೈರುಹಾಜರ ಉಳಿದು 21 ದಿವಸಗಳ ಕಾಲ ಅನಧಿಕೃತ ಗೈರುಹಾಜರ ಉಳಿದಿದ್ದರಿಂದ ನಿಮಗೆ ಪೊಲೀಸ್ ಮ್ಯಾನುಯಲ್ ಆದೇಶ ಸಂಖ್ಯೆ:535ನೇದ್ದರ ಮೇರೆಗೆ ಈ ಕಛೇರಿಯಿಂದ ದಿ:03-12-2003 ರಂದು ಕರ್ತವ್ಯ ಪಲಾಯನ ಪತ್ರವನ್ನು ಜಾರಿ ಕುರಿತು ಕಳುಹಿಸಿದ್ದು, ಅದನ್ನು ಸ್ವೀಕರಿಸಿ ನೀವು ದಿ:08-12-2003ರ ವರೆಗೆ ಕರ್ತವ್ಯಕ್ಕೆ ಗೈರುಹಾಜರ ಉಳಿದು ನಿಮ್ಮ ಕರ್ತವ್ಯದಲ್ಲಿ ನಿರ್ಲಕ್ಷತನ ಹಾಗೂ ಕರ್ತವ್ಯಚ್ಯುತಿಗೈದಿದ್ದೀರಿ.

2. ನಿಮ್ಮ ಈ ಹಿಂದಿನ ಸೇವೆಯನ್ನು ಪರಿಶೀಲಿಸಿದ್ದರಲ್ಲಿ ನೀವು ದಿ:15-04-2002 ರಿಂದ 21-04-2002 ರವರೆಗೆ 7 ದಿವಸಗಳು, ದಿ:26-05-2002 ರಿಂದ 12-06-2002ರ ವರೆಗೆ 18 ದಿವಸಗಳು, ದಿ:27-08-2002 ರಿಂದ 06-10-2002ರ ವರೆಗೆ 41 ದಿವಸಗಳು, ದಿ:04-12-02 ರಿಂದ 28-01-2003 ರವರೆಗೆ 57 ದಿವಸಗಳು ದಿ: 11-06-2003 ರಿಂದ 13-06-03ರ ವರೆಗೆ 3 ದಿವಸಗಳ ಕಾಲ ಗೈರುಹಾಜರ ಉಳಿದಿದ್ದು, ಸದರಿ ಅವಧಿಗಳನ್ನು ವೇತನರಹಿತ ರಜೆ ಅಂತಾ ಪರಿಗಣಿಸಿ, ನಿಮಗೆ ಕರ್ತವ್ಯದಲ್ಲಿ ಸುಧಾರಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದರೂ ಸಹ ನಿಮ್ಮ ಪ್ರವೃತ್ತಿಯಲ್ಲಿ ಸುಧಾರಿಸಿಕೊಳ್ಳದೇ ಪುನ: ಅನಧಿಕೃತವಾಗಿ ಗೈರುಹಾಜರ ಉಳಿದು ನಿಮ್ಮ ಕರ್ತವ್ಯದಲ್ಲಿ ಘೋರ ಕರ್ತವ್ಯಚ್ಯುತಿ ಹಾಗೂ ನಿರ್ಲಕ್ಷತನ ತೋರಿದ್ದೀರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗದಗ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:31-03-05ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಿ, ದಿ:06-11-03 ರಿಂದ 08-12-02003ರ ವರೆಗೆ ಅನಧಿಕೃತವಾಗಿ ಗೈರುಹಾಜರಾದ ಅವಧಿಯನ್ನು ವೇತನರಹಿತ ರಜೆ ಎಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:17-09-08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರ ವಿರುದ್ಧದ ಆರೋಪವು ಸಾಬೀತಾಗಿದ್ದು, ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪುರಸ್ಕರಿಸುವ ಸಮರ್ಥನೀಯ ಅಂಶಗಳು ಯಾವುದು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 383 ಪೊಸಿಅ 2008 ಬೆಂಗಳೂರು, ದಿನಾಂಕ: 17ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ವೈ. ಐಹೊಳೆ, ಮಾಜಿ ಎ.ಪಿ.ಸಿ., ಡಿ.ಎ.ಆರ್., ಗದಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1437

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಗಣಪತಿರಾವ್, ಸಿ.ಎಚ್.ಸಿ.-559, ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(4)ಶಿಕ್ಷೆ41/08 ಓ.ಬಿ:199/08 ದಿ:27-07-2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ:21/ಅಪೀಲು/ಸಿಬ್ಬಂದಿ/2/2008-09 ಓ.ಬಿ:191/08-09 ದಿ:13-11-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:16-01-2009
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)113/2008-09 ದಿ:21-04-2009

ಪ್ರಸ್ತಾವನೆ:-

ಶ್ರೀ ಗಣಪತಿರಾವ್, ಸಿ.ಎಚ್.ಸಿ.-559, ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

"ಭದ್ರಾವತಿ ಗ್ರಾಮಾಂತರ ಠಾಣೆಯಲ್ಲಿ ದಾಖಲಾದ ಗು.ನಂ: 170/07 ಕಲಂ:279, 338 ಐ.ಪಿ.ಸಿ. ಪ್ರಕರಣದಲ್ಲಿ ನೊಂದವರಿಗೆ ಪರಿಹಾರ ಪಡೆಯಲು ಫಾರಂ ನಂ:110ನ್ನು ತಕ್ಷಣ ನೀಡದೆ ಅವರಿಗೆ ಸತಾಯಿಸಿ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 27-07-08ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಆರು ತಿಂಗಳ ಕಾಲ ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ:13-11-08ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 23 ಪೊಸಿಅ 2009 ಬೆಂಗಳೂರು, ದಿನಾಂಕ: 17ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಗಣಪತಿರಾವ್, ಸಿ.ಎಚ್.ಸಿ.-559, ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1438

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಟಿ.ಮಂಜುನಾಥ, ಪಿ.ಐ., ಬಳ್ಳಾರಿ ಸಂಚಾರ ಪೊಲೀಸ್ ಠಾಣೆ, ಬಳ್ಳಾರಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ: ಪಿಆರ್:242:2007/ಡಿಓಬಿ ಸಂ:443/08 ದಿ:28-04-08
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ:ಅಪೀಲು/36/ಈವ/2008 ಅ.ಪು.ಸಂ:465/ಈವ/2008 ದಿ:29-08-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:10-12-08
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)109/2008-09 ದಿನಾಂಕ:20-04-2009

ಪ್ರಸ್ತಾವನೆ:-

ಶ್ರೀ ಟಿ.ಮಂಜುನಾಥ, ಪಿ.ಐ., ಬಳ್ಳಾರಿ ಸಂಚಾರ ಪೊಲೀಸ್ ಠಾಣೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಗುಲ್ಬರ್ಗಾದ ಸದರ ಬಜಾರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ., ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ವಿಮುಖತೆ ಹಾಗೂ ನಿರ್ಲಕ್ಷತನದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:–

"ಸದರಿ ಬಜಾರ ಪೊಲೀಸ್ ಠಾಣೆ ಗುನ್ನೆ ಸಂ:186/2006 ಕಲಂ 324, 504, 307, ಸಹಿತ 34 ಐಪಿಸಿ ನೇದ್ದರಲ್ಲಿ ಸರಿಯಾಗಿ ತನಿಖೆ ಕೈಕೊಳ್ಳದೆ ಕಾರ್ಯ ವಿಮುಖತೆ ಹಾಗೂ ನಿರ್ಲಕ್ಷತನ ತೋರಿಸಿದರ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 28–04–08ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಎರಡು ತಿಂಗಳ ಕಾಲ ಮುಂದೂಡುವ ಶಿಕ್ಷೆ ವಿಧಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:29–08–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 09 ಪೊಸಿಅ 2009 ಬೆಂಗಳೂರು, ದಿನಾಂಕ: 19ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಟಿ.ಮಂಜುನಾಥ, ಪಿ.ಐ., ಬಳ್ಳಾರಿ ಸಂಚಾರ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1439

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು

ವಿಷಯ: ಶ್ರೀ ಡಿ.ಬಿ. ನೀಲಯ್ಯ, ಮಾಜಿ ಹೆಚ್.ಸಿ., ಮಾಜಿ ಪ್ರಧಾನ ಮಂತ್ರಿಗಳ ಕುಟುಂಬದ ಭದ್ರತಾ ವಿಭಾಗ ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಕಮೀಷನರ್ ಅತಿ ಗಣ್ಯ ವ್ಯಕ್ತಿಗಳ ಭದ್ರತೆ ಮತ್ತು ಮಾಜಿ ಪ್ರಧಾನ ಮಂತ್ರಿಗಳ ಭದ್ರತಾ ವಿಭಾಗ, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ:33/ಡಿಇ–1 ಆರ್–6/2004 ದಿ:17–12–2005
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಕಮೀಷನರ್, ಸಿ.ಎ.ಆರ್., ಬೆಂಗಳೂರು, ಇವರ ಆದೇಶ ಸಂಖ್ಯೆ:01/ಅಪೀಲು/06 ದಿ:16–01–2007
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:19–04–2007
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲ (2)24/2007–08 ದಿ:08–08–2008
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 156 ಸಿಎನ್‌ಎಸ್ 0 ದಿನಾಂಕ:18.05.2009

ಪ್ರಸ್ತಾವನೆ:–

ಶ್ರೀ ಡಿ.ಬಿ.ನೀಲಯ್ಯ, ಎ.ಹೆಚ್.ಸಿ.–665, ಮಾಜಿ ಪ್ರಧಾನ ಮಂತ್ರಿಗಳ ಕುಟುಂಬದ ಭದ್ರತಾ ವಿಭಾಗ, ಬೆಂಗಳೂರು ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾದ ಕಾರಣದ ಮೇ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ಆರೋಪಣೆ:–

"ಶ್ರೀ ಡಿ.ಬಿ.ನೀಲಯ್ಯ, ಎ.ಹೆಚ್.ಸಿ.–665, ಮಾಜಿ ಪ್ರಧಾನ ಮಂತ್ರಿಗಳ ಕುಟುಂಬದ ಭದ್ರತಾ ವಿಭಾಗ, ಬೆಂಗಳೂರು ನಗರ, ಆದ ನೀವು ದಿನಾಂಕ:23.07.2004 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಕರ್ತವ್ಯಕ್ಕೆ ವರಧಿ ಮಾಡಿಕೊಂಡಿರುವುದಿಲ್ಲ. ನಿಮ್ಮ ಗೈರುಹಾಜರಾತಿಯ ಅವಧಿಯು 21 ದಿನಗಳಿಗೆ ಮೀರಿದ್ದು, ಈ ಬಗ್ಗೆ ನಿಮಗೆ ಡೆಸರ್‌ಟರ್ ನೋಟಿಸನ್ನು ದಿ:05–11–2004 ರಂದು ಜಾರಿ ಮಾಡಿದ್ದರೂ ಸಹ ನೀವು ಕರ್ತವ್ಯಕ್ಕೆ ಹಾಜರಾಗದೆ ಕರ್ನಾಟಕ ರಾಜ್ಯ ಪೊಲೀಸ್ ಮ್ಯಾನುಯಲ್ ಭಾಗ–1, ಆದೇಶ ಸಂಖ್ಯೆ:525ನ್ನು ಮೀರಿರುತ್ತೀರಿ. ನಿಮ್ಮ ಗೈರು ಹಾಜರಿಯ ಬಗ್ಗೆ ನಿಮ್ಮ ಮೇಲಾಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಹಾಗೂ ಎಂ.ಹೆಚ್.ಎಸ್. ಪುಸ್ತಕವನ್ನು ಪಡೆದಿರುವುದಿಲ್ಲ. ಈ ರೀತಿ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ್ಯತೆ ಮತ್ತು ಕರ್ತವ್ಯ ಲೋಪವನ್ನು ಉಂಟು ಮಾಡಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಕಮೀಷನರ್ ಅತಿ ಗಣ್ಯ ವ್ಯಕ್ತಿಗಳ ಭದ್ರತೆ ಮತ್ತು ಮಾಜಿ ಪ್ರಧಾನ ಮಂತ್ರಿಗಳ ಭದ್ರತಾ ವಿಭಾಗ, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 17–12–2005ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ, ಗೈರುಹಾಜರಾದ ದಿನಾಂಕ:23–07–2004 ರಿಂದ 04–01–2005ರ ಅವಧಿಯನ್ನು ಸಂಬಳರಹಿತ ರಜೆ ಎಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಕಮೀಷನರ್, ಸಿ.ಎ.ಆರ್., ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ: 16–01–2007ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿದ್ದು, ಅರ್ಜಿದಾರರು ಸರ್ಕಾರದಲ್ಲಿ ಸಲ್ಲಿಸಿದ ಸೇವೆಯನ್ನು ಗಮನದಲ್ಲಿರಿಸಿ ಮಾನವೀಯ ದೃಷ್ಟಿಯಿಂದ ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 317 ಪೊಸಿಅ 2008 ಬೆಂಗಳೂರು, ದಿನಾಂಕ: 22ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಡಿ.ಬಿ. ನೀಲಯ್ಯ, ಮಾಜಿ ಎ.ಹೆಚ್.ಸಿ. ಇವರಿಗೆ ಶಿಸ್ತುಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಸದರಿ ದಿ:17–12–05 ರಿಂದಲೇ ಜಾರಿಗೆ ಬರುವಂತೆ ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಿದೆ. ಅರ್ಜಿದಾರರು ಅನಧಿಕೃತವಾಗಿ ಗೈರುಹಾಜರಾದ ದಿನಾಂಕ: 23–07–2004 ರಿಂದ 04–01–2005ರ ವರೆಗಿನ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಆರ್. 1440

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಕೆ.ಸಿ.ರಮೇಶ್, ಅನುಯಾಯಿ–36, 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬ್ಬಂದಿ–4/ಡಿಇ:82/2001–02 ಓ.ಬಿ:16/2001 ದಿನಾಂಕ:21–07–2001

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: 15/ಡಿಇ/2001–02 ಓ.ಬಿ:413/2001–02 ದಿ:09–10–2001

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:08–08–2007

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)70/2007–08 ದಿ:20–12–2007
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 107 ಸಿಎನ್‌ಎಸ್ 08 ದಿನಾಂಕ:17.03.2009

ಪ್ರಸ್ತಾವನೆ:–

ಶ್ರೀ ಕೆ.ಸಿ.ರಮೇಶ್, ಅನುಯಾಯಿ–36, 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಅಪರಾಧ ಮೊಕದ್ದಮೆಯಲ್ಲಿ ಭಾಗಿಯಾಗಿ ಕರ್ತವ್ಯದಲ್ಲಿ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:–

> "ಅನುಯಾಯಿ ಸಂಖ್ಯೆ:36 ಕೆ.ಸಿ.ರಮೇಶ, ಬ–ದಳ, 3ನೇ ಪಡೆ ಕೆ.ಎಸ್.ಆರ್.ಪಿ., ಬೆಂಗಳೂರು. ಆದ ನಿಮ್ಮ ವಿರುದ್ಧ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ:300:2000 ಅಂಡರ್ ಸೆಕ್ಷನ್ 498(ಎ) ಐ.ಪಿ.ಸಿ. ರನ್ವಯ ಕೇಸು ದಾಖಲಾಗಿದ್ದು, ದಿ:16–09–2000 ರಂದು ನಿಮ್ಮನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುವುದು ಶಿಸ್ತಿನ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನಿಮ್ಮ ಅತೀವ ಅಶಿಸ್ತು ಹಾಗೂ ದುರ್ನಡತೆ ಎಂಬ ಆರೋಪವಾಗಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲವೆಂದು ಸಲ್ಲಿಸಿದ ವರದಿಯನ್ನು ಶಿಸ್ತುಪ್ರಾಧಿಕಾರವು ಒಪ್ಪದೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ:21–07–2001ರ ಆದೇಶದಲ್ಲಿ ಅರ್ಜಿದಾರರನ್ನು "ಸೇವೆಯಿಂದ ವಜಾಗೊಳಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸುವ ದಂಡನೆ ವಿಧಿಸಿರುತ್ತಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು, ಇವರ ಮೇಲ್ಮನವಿಯನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಿ, ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಸೇವೆಗೆ ಪುನರ್ ನೇಮಕಮಾಡಿ, ಇವರ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಮುಂದೂಡಿ, ನಂತರ ಹೊಸದಾಗಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಮತ್ತು ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ, ಸೇವೆಯಿಂದ ವಜಗೊಂಡು ಪುನರ್‌ನೇಮಕ ಹೊಂದುವವರೆಗಿನ ಅವಧಿಯನ್ನು ವೇತನರಹಿತ ರಜೆಯೆಂದು ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ:09–10–2001ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ದಂಡನಾ ಪ್ರಮಾಣವು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಸರ್ಕಾರವು ಮನಗಂಡು ಈ ಕುರಿತು ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 11 ಪೊಸಿಅ 2008 ಬೆಂಗಳೂರು, ದಿನಾಂಕ: 20ನೇ ಮೇ 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25(2)(ಬಿ) ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ.ಸಿ.ರಮೇಶ್, ಅನುಯಾಯಿ–36, 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಇವರಿಗೆ ಮೇಲ್ಮನವಿ ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಭಾಗಶ: ಮಾರ್ಪಡಿಸಿ, ಇವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಸೇವೆಯಿಂದ ವಜಾಗೊಂಡು ನಂತರ ಸೇವೆಗೆ ಪುನರ್ ನೇಮಕಗೊಂಡ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies-non) ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1452

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಸೇತುಮಾಧವನ್ ನಾಯರ್, ಪಿ.ಎಸ್.ಐ., ನಗರ ವಿಶೇಷ ಶಾಖೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 30/ಡಿಇ1/ಆರ್6/2004 ದಿ:24-09-2007
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು(6)73/2007-08 ಓ.ಬಿ:19/2008-09 ದಿನಾಂಕ:17.05.2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:19-01-09
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು (2)111/2008-09 ದಿ:18-03-2009.

ಪ್ರಸ್ತಾವನೆ:-

ಶ್ರೀ ಸೇತುಮಾಧವನ್ ನಾಯರ್, ಪಿ.ಎಸ್.ಐ., ಇವರು ಸಿದ್ದಾಪುರ ಪೊಲೀಸ್ ಠಾಣೆ, ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ ಮತ್ತು ಕರ್ತವ್ಯಲೋಪತೆಯ ಕಾರಣದ ಮೇಲೆ ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

"ಶ್ರೀ ಸೇತುಮಾಧವನ್ ನಾಯರ್, ಪಿ.ಎಸ್.ಐ., ಸಿದ್ದಾಪುರ ಪೊಲೀಸ್ ಠಾಣೆ, (ಹಾಲಿ ನಗರ ವಿಶೇಷ ಶಾಖೆ) ಬೆಂಗಳೂರು ನಗರ, ಆದ ನೀವು ಜನವರಿ 2004ನೇ ಸಾಲಿನಲ್ಲಿ ಸಿದ್ದಾಪುರ ಪೊಲೀಸ್ ಠಾಣೆಯ ಪಿ.ಎಸ್.ಐ., ಆಗಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ದಿ:23-01-2004 ರಂದು 23.30 ಗಂಟೆಯಲ್ಲಿ ಸಿದ್ದಾಪುರ ಠಾಣೆಯ ಎ.ಎಸ್.ಐ. ಕೃಷ್ಣೇಗೌಡ, ರವರು ನೀಡಿದ ದೂರನ್ನು ಪಡೆದುಕೊಂಡು ಮೊ.ಸಂ.14/2004 ಕಲಂ.143-147-148-353-427 ಜೊತೆಗೆ 149 ಐ.ಪಿ.ಸಿ. ಪ್ರಕಾರ ಪ್ರಕರಣದ ದಾಖಲು ಮಾಡಿಕೊಂಡಿದ್ದು ಈ ಪ್ರಕರಣದ ತನಿಖೆಯಲ್ಲಿ ಈ ಕೆಳಕಂಡ ಲೋಪಗಳನ್ನು ಎಸಗಿರುತ್ತೀರಿ.

ಅ) ಮೊ.ಸಂ.14/2004ರ ಕಾನೂನು ತಕ್ಸೀರುಗಳು ಗಂಭೀರ ಸ್ವರೂಪದ ಪ್ರಕರಣಕ್ಕೆ ಸಂಬಂಧಪಟ್ಟದ್ದು ಪೊಲೀಸ್ ಮ್ಯಾನುಯಲ್ ಭಾಗ-2 ಆದೇಶ ಸಂಖ್ಯೆ:1215(1)(ಎಲ್) ಪ್ರಕಾರ ತುರ್ತು ವರಧಿಯನ್ನು (ಎಕ್ಸ್‌ಪ್ರೆಸ್ ರಿಪೋರ್ಟ್) ಮೇಲಾಧಿಕಾರಿಗಳಿಗೆ ಸಲ್ಲಿಸಬೇಕಾಗಿದ್ದು, ಆದರೆ ನೀವು ತುರ್ತು ವರಧಿಯನ್ನು ಸಲ್ಲಿಸದೆ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ ಮತ್ತು ಕರ್ತವ್ಯಲೋಪ ಎಸಗಿರುತ್ತೀರಿ.

ಆ) ನೀವು ಮೊ.ಸಂ.14/2004 ರಲ್ಲಿನ ಆರೋಪಿಗಳಾದ ಮುಜಾಯಿದ್ ಹಾಗೂ ಜಾವಿದ್ ಎಂಬುವವರನ್ನು ದಿನಾಂಕ: 17-02-2004 ರಂದು ದಸ್ತಗಿರಿ ಮಾಡಿದ್ದು, ದಸ್ತಗಿರಿ ಸಮಯದಲ್ಲಿ ನಿಮ್ಮ ವಶದಲ್ಲಿದ್ದು ನೀವು ಸದರಿಯವರನ್ನು ಕೂಲಂಕುಶವಾಗಿ ವಿಚಾರಣೆ ಮಾಡಿ ಆರೋಪಕ್ಕೆ ಸಂಬಂಧಿಸಿದ ಉಳಿದ ಆರೋಪಿಗಳನ್ನು ಪತ್ತೆ ಮಾಡಬಹುದಾಗಿದ್ದರೂ ಉದ್ದೇಶಪೂರ್ವಕವಾಗಿ ಆರೋಪಿಗಳ ವಿಚಾರಣೆ ನಡೆಸದೆ, ಮಾಹಿತಿ ಸಂಗ್ರಹಿಸದೆ ಉಳಿದ ಆರೋಪಿಗಳು ತಲೆಮರೆಸಿ ಕೊಳ್ಳಲು ಅವಕಾಶ ಮಾಡಿಕೊಟ್ಟು ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಕರ್ತವ್ಯಲೋಪ ಮತ್ತು ಅಸಮರ್ಪಕ ತನಿಖೆಯನ್ನು ನಡೆಸಿರುತ್ತೀರಿ.

ಇ) ಮೊ.ಸಂ.14/2004ಕ್ಕೆ ಸಂಬಂಧಿಸಿದಂತೆ ಪಿರ್ಯಾದಿಯಾದ ಶ್ರೀ.ಕೃಷ್ಣೇಗೌಡ, ಎ.ಎಸ್.ಐ., ಶ್ರೀ ಕೃಷ್ಣೇಗೌಡ, ಎಚ್.ಸಿ.-1193, ಶ್ರೀ ಸುಂದರ್‌ರಾಜ್, ಎಚ್.ಸಿ.-818, ಶ್ರೀ ಸಿದ್ದರಾಜು ಪಿ.ಸಿ.-8497 ರವರುಗಳಿಗೆ ರಕ್ತಗಾಯಗಳಾಗಿದ್ದರೂ ಸಹ ಸದರಿಯವರನ್ನು ಇಲಾಜು ಬಗ್ಗೆ ವೈದ್ಯಕೀಯ ಪರೀಕ್ಷೆಗೆ ಕಳುಹಿಸದೆ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಕರ್ತವ್ಯಲೋಪ ಮತ್ತು ಅಸಮರ್ಪಕ ತನಿಖೆಯನ್ನು ನಡೆಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಇವರ ವಿರುದ್ಧದ ಮೂರು ಆರೋಪಗಳಲ್ಲಿ ಒಂದು ಆರೋಪ ಸಾಬೀತಾಗಿರುವುದಾಗಿ ನೀಡಿದ ವರದಿಯ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ

ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:24-09-07ರ ಆದೇಶದಲ್ಲಿ ಅರ್ಜಿದಾರರ ವೇತನವನ್ನು ಪಿ.ಎಸ್.ಐ., ಹುದ್ದೆಯ ವೇತನದ ಕನಿಷ್ಠ ಮಟ್ಟಕ್ಕೆ ಒಂದು ವರ್ಷ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಇಳಿಸಿ, ದಿ:14-04-04 ರಿಂದ 27-09-2004ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ವರ್ಷದ ಅವಧಿಗೆ ಮುಂದೂಡಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:17-05-08ರ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 25 ಪೊಸಿಅ 2009 ಬೆಂಗಳೂರು, ದಿನಾಂಕ: 20ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸೇತುಮಾಧವನ್ ನಾಯರ್, ಪಿ.ಎಸ್.ಐ., ನಗರ ವಿಶೇಷ ಶಾಖೆ, ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1453 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಪಾವಗಡ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ:74/01ಕ್ಕೆ ಸಂಬಂಧಿಸಿದಂತೆ ಶ್ರೀ ಎಂ.ಕೆ.ಥಾಮಸ್, ಪಿ.ಐ ಹಾಗೂ ಇತರರ ವಿರುದ್ಧದ ಜಂಟಿ ಇಲಾಖಾ ವಿಚಾರಣೆಯಲ್ಲಿ, ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಒಇ 221 ಪೊಸಿಪ 2006 ದಿನಾಂಕ 29-05-2006.

2) ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಪತ್ರ ಸಂಖ್ಯೆ:ಸಿಬಿ(5)32:05-06 ದಿನಾಂಕ 14-02-2008.

3) ಕಾರಣ ಕೇಳುವ ನೋಟೀಸು ಸಂಖ್ಯೆ:221 ಪೊಸಿಪ 2006 ದಿನಾಂಕ 07-07-2008.

4) ಶ್ರೀ ಕೆ.ಟಿ.ಮ್ಯಾಥ್ಯೂಸ್ ಥಾಮಸ್, ಪಿ.ಐ. ರವರ ಸಮಜಾಯಿಷಿ ದಿನಾಂಕ 29-08-2008.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಹೆಚ್.ಎಸ್.ಆಂಜನೇಯ, ಡಿ.ಎಸ್.ಪಿ, ಚಿತ್ರದುರ್ಗ ಉಪ ವಿಭಾಗ, ಶ್ರೀ ಎಂ.ಕೆ.ಥಾಮಸ್, ಪಿ.ಐ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಮಂಗಳೂರು ಶ್ರೀ ಎಸ್.ಕೇಶವರಾಜು, ಸಿ.ಪಿಸಿ-415 ಮತ್ತು ಶ್ರೀ ಯಶೋಧರ, ಸಿಪಿಸಿ-873, ಪಾವಗಡ ಪೊಲೀಸ್ ಠಾಣೆ, ಈ ನಾಲ್ಕು ಅಧಿಕಾರಿಗಳು ಪಾವಗಡ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:74/01 ಕಲಂ 4.5 ರಲ್ಲಿ ಸ್ಫೋಟಕ ವಸ್ತುಗಳ ಜಪ್ತಿ ಸಮಯದಲ್ಲಿ ಬಾಂಬ್ ನಿಯಂತ್ರಣ ದಳದ ಪಿ.ಎಸ್.ಐ ರವರನ್ನು ಕೂಡಲೇ ಜಪ್ತಿ ಸ್ಥಳಕ್ಕೆ ಕರೆಸಿ ಪರಿಶೀಲನೆ ಮಾಡಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯದೇ ಕರ್ತವ್ಯದಲ್ಲಿ ಬೇಜವಾಬ್ದಾರಿತನ ಮತ್ತು ಕರ್ತವ್ಯದಲ್ಲಿ ಲೋಪವೆಸಗಿರುವ ಆರೋಪಗಳ ಹಿನ್ನೆಲೆಯಲ್ಲಿ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ, ಜಂಟಿ ಇಲಾಖಾ ವಿಚಾರಣೆಯನ್ನು ಕೆ.ಎಸ್.ಪಿ (ಡಿಪಿ) ನಿಯಮ, 1965ರ ನಿಯಮ 6, ಉಪ ನಿಯಮ 2 ಮತ್ತು 8ರ ಅಡಿಯಲ್ಲಿ ಆದೇಶಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾಧಿಕಾರಿಗಳು, ಆರೋಪಗಳ ಬಗ್ಗೆ ಪರಿಶೀಲಿಸಿ, ಸಾಕ್ಷಿಗಳು ಹಾಗೂ ಅಧಿಕಾರಿಗಳ ಹೇಳಿಕೆಗಳನ್ನು ಪಡೆದು, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ 1,3 ಮತ್ತು 4ನೇ ಆರೋಪಿತ ಅಧಿಕಾರಿಗಳ ವಿರುದ್ಧ ಮಾಡಲಾಗಿರುವ ಆರೋಪಗಳು ಸಾಬೀತಾಗಿಲ್ಲವೆಂದು ವರದಿ ಮಾಡಿರುತ್ತಾರೆ. ಮುಂದುವರೆದು, 2ನೇ ಆರೋಪಿಯಾದ ಶ್ರೀ ಎಂ.ಕೆ.ಥಾಮಸ್, ಪಿ.ಐ ಇವರನ್ನು ಸುಮಾರು 6 ಬಾರಿ ವಿಚಾರಣೆಗೆ ಸಾಕ್ಷ್ಯ ನುಡಿಯಲು ಕೋರಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುವಲ್ಲಿ ವಿಫಲರಾಗಿರುವುದು ಸಾಬೀತಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ತಿಳಿಸಿರುತ್ತಾರೆ. ಮುಂದುವರಿದು, ಇವರು ತಮ್ಮ ಸಾಕ್ಷ್ಯ ನುಡಿಯಲು

್ಯಾಯಾಲಯಕ್ಕೆ ಹಾಜರಾಗದೆ, ಸರ್ಕಾರಿ ಅಭಿಯೋಜಕರಿಗೆ ಸಹಕರಿಸದೇ ಇದ್ದ ಕಾರಣ ಸದರಿ ನ್ಯಾಯಾಲಯದ ಪ್ರಕರಣ ಖುಲಾಸೆಯಾಗಲು ಕಾರಣರಾಗಿರುತ್ತಾರೆಂದು ಸಹ ವಿಚಾರಣಾಧಿಕಾರಿಗಳು ತಿಳಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ನೋಟೀಸ್‌ನಲ್ಲಿ ಆರೋಪಿತ ಅಧಿಕಾರಿಗಳ ವಿರುದ್ಧ ವಿಚಾರಣಾಧಿಕಾರಿಗಳು ಶಿಫಾರಸ್ಸು ವರದಿಯನ್ನು ಜಾರಿ ಮಾಡಿ ಅವರಿಂದ ಸಮಜಾಯಿಷಿ ಪಡೆಯಲು ಎರಡನೇ ನೋಟೀಸ್ ಜಾರಿ ಮಾಡಲಾಗಿತ್ತು. ಮೇಲೆ (4)ರಲ್ಲಿ ಓದಲಾದ ಸಮಜಾಯಿಷಿಯಲ್ಲಿ ಆರೋಪಿತ ಅಧಿಕಾರಿಯು ತಮಗೆ ಒಂದು ಬಾರಿಯ ಸಮನ್ಸ್ ಮತ್ತು ವಾರೆಂಟ್‌ಗಳನ್ನು ನೀಡಿರುವ ಬಗ್ಗೆ ಜಾರಿ ಮಾಡಿರುವ ಬಗ್ಗೆ ವಿವರಣೆ ಪಡೆದು ವಿಚಾರಣಾಧಿಕಾರಿಗಳ ನಿರ್ಧಾರ ತೆಗೆದುಕೊಳ್ಳಬೇಕಾಗಿರುತ್ತದೆ. ಹೀಗಾಗಿ ಈ ಪ್ರಕರಣದಲ್ಲಿ ಏಕಪಕ್ಷೀಯವಾಗಿ ನಿರ್ಣಯ ತೆಗೆದುಕೊಳ್ಳಲಾಗಿದೆಯಾದ್ದರಿಂದ ತಮ್ಮ ವಿರುದ್ಧದ ದೋಷಾರೋಪಣೆಯಿಂದ ಮುಕ್ತಗೊಳಿಸಲು ಕೋರಿರುತ್ತಾರೆ.

ಪ್ರಸ್ತಾವನೆ ಪರಿಶೀಲಿಸಿದೆ. ಅಧಿಕಾರಿಗಳು ನ್ಯಾಯಾಲಯಕ್ಕೆ ಹಾಜರಾಗದೆ ಪ್ರಕರಣ ಖುಲಾಸೆಯಾಗಲು ಕಾರಣರಾಗಿರುತ್ತಾರೆಂದು ವಿಚಾರಣಾಧಿಕಾರಿಗಳ ವಿಚಾರಣಾ ವರದಿಯಿಂದ ಕಂಡು ಬಂದಿದ್ದು ಪ್ರಕರಣದಲ್ಲಿನ ಆರೋಪಿಯು ಶಿಕ್ಷೆಯಿಂದ ತಪ್ಪಿಸಿ ಕೊಂಡಿರುವುದು ಗಂಭೀರವಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಒಇ 221 ಪೊಸಿಪ 2006, ಬೆಂಗಳೂರು, ದಿನಾಂಕ: 29ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಶ್ರೀ ಎಂ.ಕೆ.ಥಾಮಸ್, ಪಿ.ಐ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರ ಮುಂದಿನ ಎರಡು ವಾರ್ಷಿಕ ಮುಂಬಡ್ತಿ ವೇತನಗಳನ್ನು ಸಂಚಿತ ಪರಿಣಾಮ ರಹಿತವಾಗಿ (without cumulative effect) ತಡೆಹಿಡಿಯುವ ದಂಡನೆಯನ್ನು ವಿಧಿಸಿದೆ. ಪ್ರಕರಣದಲ್ಲಿನ ಇತರೆ ಆರೋಪಿಗಳಾದ ಶ್ರೀ ಹೆಚ್.ಆಂಜನೇಯ, ಡಿವೈ.ಎಸ್.ಪಿ, ಚಿತ್ರದುರ್ಗ ಉಪ ವಿಭಾಗ, ಶ್ರೀ ಎಸ್.ಕೇಶವರಾಜು, ಸಿ.ಪಿಸಿ–415 ಮತ್ತು ಶ್ರೀ ಯಶೋಧರ, ಸಿಪಿಸಿ–873, ಪಾವಗಡ ಪೊಲೀಸ್ ಠಾಣೆ, ರವರುಗಳನ್ನು ಆರೋಪಗಳಿಂದ ದೋಷಮುಕ್ತರನ್ನಾಗಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. 1397 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಜಿ.ಎಂ. ಶಿರೂರು, ನಿವೃತ್ತ ಡಿವೈ.ಎಸ್.ಪಿ. (ಸಶಸ್ತ್ರ) ಇವರ ಅಂಅನತ್ತಿನ 6 ತಿಂಗಳ ನಂತರದ ಅವಧಿಗೆ ಜೀವನಾಂಶ ಭತ್ಯೆಯನ್ನು ಶೇಕಡ 75ಕ್ಕೆ ಏರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ ಒಇ 221 ಪೊಸಿಪ 2003 ದಿನಾಂಕ 27.08.2003.
2. ಸರ್ಕಾರದ ಆದೇಶ ಸಂಖ್ಯೆ ಒಇ 221 ಪೊಸಿಪ 2003 ದಿನಾಂಕ 30.10.2004 ಮತ್ತು 30.10.2004.
3. ಸರ್ಕಾರದ ಆದೇಶ ಸಂಖ್ಯೆ ಒಇ 221 ಪೊಸಿಪ 2003 ದಿನಾಂಕ 8.8.2007.
4. ಶ್ರೀ ಜಿ.ಎಂ. ಶಿರೂರ್, ನಿವೃತ್ತ ಡಿವೈ.ಎಸ್.ಪಿ ಇವರು ದಾಖಲಿಸಿದ ಅರ್ಜಿ ಸಂಖ್ಯೆ 3558/2008ರಲ್ಲಿ ಕೆ.ಎ.ಟಿ.ನೀಡಿದ ತೀರ್ಪು ದಿನಾಂಕ:22.09.2008.
5. ಡಿ.ಜಿ. ಮತ್ತು ಐಜಿಪಿರವರ ಸರ್ಕಾರದೊಂದಿಗೆ ವ್ಯವಹರಿಸಿದ ಕೊನೆಯ ಪತ್ರ ಸಂಖ್ಯೆ ಸಿಬಿಒ(5)/9/2003–04 ದಿನಾಂಕ 21.4.2009.

ಸ್ತಾವನೆ:

ಮೇಲೆ ಓದಲಾದ (10ರಲ್ಲಿ ಕೆಳಕಂಡ ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಡಿಪಿ ನಿಯಮ 6 ಮತ್ತು 8ರ ಮೇರೆಗೆ ನಡೆಸಲು ಮತ್ತು ಸೇವೆಯಿಂದ ಅಮಾನತ್ತುಗೊಳಿಸಲು ಸರ್ಕಾರ ಆದೇಶವನ್ನು ಹೊರಡಿಸಲಾಗಿರುತ್ತದೆ:–

1) ಶ್ರೀ ಬಿ.ಎನ್. ಶೆಟ್ಟಣ್ಣನವರ್, ಅಂದಿನ ಪ್ರಾಂಶುಪಾಲರು, ಪೊಲೀಸ್ ತರಬೇತಿ ಶಾಲೆ, ಖಾನಾಪುರ.
2) ಶ್ರೀ ಜಿ.ಎಂ. ಶಿರೂರ್, ಡಿವೈಎಸ್‌ಪಿ, ಅಂದಿನ ಉಪ ಪ್ರಾಂಶುಪಾಲರು
3) ಶ್ರೀ ಹುಡೇದ್‌ಗೌಡರ್, ಮೀಸಲು ಪಿ.ಐ.
4) ಶ್ರೀ ಕೆ.ಐ. ದಳವಾಯಿ, ಎ.ಆರ್.ಎಸ್.ಐ.
5) ಶ್ರೀ ಬಿ.ಎಲ್. ಹಾದಿಮನಿ, ಎಹೆಚ್‌ಸಿ
6) ಶ್ರೀ ಬಿ.ಕೆ. ಠಾಕೂರ್, ಎ.ಹೆಚ್.ಸಿ.
7) ಶ್ರೀ ಹೆಚ್.ಆರ್. ಚೆನ್ನಣ್ಣನವರ್, ಎ.ಹೆಚ್.ಸಿ.
8) ಶ್ರೀ ಶ್ರೀಕಾಂತ್ ವಿ. ಬಾದಿ, ಎ.ಹೆಚ್.ಸಿ.
9) ಶ್ರೀ ಆರ್.ಕೆ. ನಾವಿ, ಎ.ಹೆಚ್.ಸಿ.

ಮೇಲೆ ಓದಲಾದ (2)ರ ದಿನಾಂಕ 30.10.2004ರಲ್ಲಿ ಮೇಲಿನ ಅಧಿಕಾರಿಗಳಲ್ಲಿ ಕ್ರಮ ಸಂಖ್ಯೆ 3 ರಿಂದ 9ರವರೆಗಿನ ಒಟ್ಟು 7 ಅಧಿಕಾರಿಗಳನ್ನು ಜಂಟಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಸೇವೆಗೆ

ಪುನರ್ ಸ್ಥಾಪಿಸಲಾಯಿತು ಮತ್ತು ದಿನಾಂಕ 2.3.2005ರ ಸರ್ಕಾರದ ಆದೇಶದಲ್ಲಿ ಶ್ರೀ ಜಿ.ಎಂ.ಶಿರೂರ್, ಡಿವೈಎಸ್.ಪಿ ರವರನ್ನು ಜಂಟಿ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಿಂದ ತೆರವುಗೊಳಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಲಾಯಿತು.

ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಿ, ವಿಚಾರಣಾಧಿಕಾರಿಗಳು ದಿನಾಂಕ 30.6.2005ರಂದು ಅಂತಿಮ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಮೇಲಿನ ಕ್ರಮ ಸಂಖ್ಯೆ 1 ರಿಂದ 5 ರವರೆಗಿನ ಅಧಿಕಾರಿಗಳ ವಿರುದ್ಧ ಆರೋಪಗಳು ಸಾಬೀತಾಗಿರುತ್ತದೆ ಎಂದೂ ಮತ್ತು ಕ್ರಮ ಸಂಖ್ಯೆ 6 ರಿಂದ 9 ರವರೆಗಿನ ಅಧಿಕಾರಿಗಳ ವಿರುದ್ಧ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಗಳು ತಮ್ಮ ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ. ಆದುದರಿಂದ, ಮೇಲೆ ಓದಲಾದ (3)ರ ಸರ್ಕಾರದ ಆದೇಶ ದಿನಾಂಕ 8.8.2007ರಲ್ಲಿ ಕೆಳಕಂಡ ಅಧಿಕಾರಿಗಳ ವಿರುದ್ಧದ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ವಿಚಾರಣಾ ವರದಿಯನ್ನು ಒಪ್ಪಿ, ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲಾಯಿತು:–

(1) ಶ್ರೀ ಹುಡೇದ್‌ಗೌಡರ್, ಆರ್.ಪಿ.ಐ.

(2) ಶ್ರೀ ಕೆ.ವಿ. ದಳವಾಯಿ, ಎ.ಆರ್.ಎಸ್.ಐ.

(3) ಶ್ರೀ ಜಿ.ಎಲ್. ಹಾದಿಮನಿ

ಶ್ರೀ ಬಿ.ಎನ್. ಶೆಟ್ಟಣ್ಣನವರ್ ಮತ್ತು ಶ್ರೀ ಜಿ.ಎನ್. ಶಿರೂರ್, ಇವರುಗಳು ಸೇವೆಯಿಂದ ನಿವೃತ್ತರಾದುದರಿಂದ ಇವರಿಗೆ ಶೇಕಡ 50ರಷ್ಟನ್ನು ಇವರ ಪಿಂಚಣಿಯಿಂದ ಐದು ವರ್ಷಗಳ ಅವಧಿಯವರೆಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲಾಗಿದೆ.

ಮೇಲೆ ಓದಲಾದ (4)ರ ದಿನಾಂಕ 22.9.2008ರ ತೀರ್ಪಿನಲ್ಲಿ ಮಾನ್ಯ ಕೆ.ಎ.ಟಿಯು ಶ್ರೀ ಶಿರೂರ್‌ರವರನ್ನು ದಿನಾಂಕ 27.8.2003ರಂದು ಅಮಾನತ್ತಿನಲ್ಲಿರಿಸಿ, ದಿನಾಂಕ 2.3.2005ರಂದು ಇವರ ಅಮಾನತ್ತನ್ನು ತೆರವುಗೊಳಿಸಿದ್ದು, ಸದರಿ ಅಮಾನತ್ತಿನ ಆರು ತಿಂಗಳ ಅವಧಿಯ ನಂತರ ಜೀವನಾಂಶ ಭತ್ಯವನ್ನು 75ಕ್ಕೆ ಏರಿಸಬೇಕೆಂಬ ಶ್ರೀಯುತರ ಕೋರಿಕೆಯನ್ನು ಪರಿಗಣಿಸಿ, ಸೂಕ್ತ ಆದೇಶಗಳನ್ನು ಹೊರಡಿಸುವಂತೆ ತಿಳಿಸಿದೆ.

ಮಾನ್ಯ ಕೆ.ಎ.ಟಿ.ಯು ತನ್ನ ಆದೇಶ ದಿನಾಂಕ 22.9.2008ರಲ್ಲಿ ಸೂಚಿಸಿದಂತೆ, ಇವರ ಜೀವನಾಂಶ ಭತ್ಯೆಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಒಇ 142 ಪೊಸಿಪ 2009, ಬೆಂಗಳೂರು, ದಿನಾಂಕ: 19ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜಿ.ಎಂ.ಶಿರೂರ್, ನಿವೃತ್ತ ಡಿವೈ.ಎಸ್.ಪಿ. (ಸಶಸ್ತ್ರ) ಇವರು ಮಾನ್ಯ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ 3558/2008ರಲ್ಲಿ ದಿನಾಂಕ 22.9.2008ರ ತೀರ್ಪಿನಲ್ಲಿ ಸೂಚಿಸಿರುವಂತೆ ಶ್ರೀ ಶಿರೂರ್‌ರವರನ್ನು ಅಮಾನತ್ತುಗೊಳಿಸಿದ ದಿನಾಂಕ 27.8.2003 ರಿಂದ ಆರು ತಿಂಗಳುಗಳ ಅವಧಿಯ ನಂತರದ ಅವಧಿಗೆ ಜೀವನಾಂಶ ಭತ್ಯೆಯನ್ನು ಇವರ ಅಮಾನತ್ತನ್ನು ತೆರವುಗೊಳಿಸಿದ ದಿನಾಂಕ 2.3.2005ರವರೆಗೆ ಶೇಕಡ 50 ರಿಂದ ಕೆ.ಸಿ.ಎಸ್.ಆರ್. ನಿಯಮ–98ರನ್ವಯ ಶೇಕಡ 75ಕ್ಕೆ ಏರಿಸಿ, ಆದೇಶಿಸಿದೆ. ಮುಂದುವರೆದು, ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1441 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಸಿ.ಡಿ.ನಾಗರಾಜ್, ಪ್ರೊ.ಪಿಎಸ್ಐ, ರವರ ಖಾಯಂಪೂರ್ವ ಅವಧಿ ವಿಸ್ತರಿಸುವ ಕುರಿತು.

ಓದಲಾಗಿದೆ: ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ:117/ಸಿಬ್ಬಂದಿ–1/2008–09 ದಿನಾಂಕ 28–04–2009.

ಪ್ರಸ್ತಾವನೆ:

ಶ್ರೀ ಸಿ.ಡಿ.ನಾಗರಾಜ್, ಪಿ.ಎಸ್.ಐ. ರವರು ದಿನಾಂಕ 30–12–2001 ರಂದು ಪಿ.ಎಸ್.ಐ. ಆಗಿ ನೇಮಕಗೊಂಡಿರುತ್ತಾರೆ. ಸದರಿಯವರು ಹುದ್ದೆಗೆ ನಿಗದಿಪಡಿಸಿದ ಅಕೌಂಟ್ಸ್ ಹೈಯರ್ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಲ್ಲವಾದ್ದರಿಂದ ಇವರ ಖಾಯಂ ಪೂರ್ವ ಅವಧಿಯನ್ನು ಕೆ.ಸಿ.ಎಸ್. (ಪ್ರೊಬೇಷನರಿ) ನಿಯಮಗಳು, 1977ರ ನಿಯಮ 4(1)(ii) ರನ್ವಯ 30–06–2004 ರಿಂದ 29–09–2005 ರವರೆಗೆ ಐಜಿಪಿ, ಪಶ್ಚಿಮ ವಲಯ ರವರು ವಿಸ್ತರಿಸಿರುತ್ತಾರೆ.

ಸದರಿ ಪಿ.ಎಸ್.ಐ. ರವರು ದಿನಾಂಕ 09–06–2007 ರಂದು ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದರಿಂದ ಹಾಗೂ ಇವರ ವಿರುದ್ಧ ಚಾಲ್ತಿ ಶಿಕ್ಷೆ / ಇಲಾಖಾ ವಿಚಾರಣೆ ಹಾಗೂ ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇರುವುದಿಲ್ಲವಾದ್ದರಿಂದ ಖಾಯಂ ಪೂರ್ವ ಅವಧಿಯನ್ನು ದಿನಾಂಕ 30–09–2005 ರಿಂದ 08–06–2007 ರವರೆಗೆ ವಿಸ್ತರಿಸುವಂತೆ ಡಿಜಿ ಮತ್ತು ಐಜಿಪಿ ರವರು ಮೇಲೆ ಓದಲಾದ ಪತ್ರದಲ್ಲಿ ಕೋರಲಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 147 ಪೊಸಇ 2009, ಬೆಂಗಳೂರು, ದಿನಾಂಕ: 19ನೇ ಜೂನ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) ನಿಯಮಾವಳಿಗಳು, 1977ರ ನಿಯಮ 4(1)(i) ರನ್ವಯ ಶ್ರೀ ಸಿ.ಡಿ.ನಾಗರಾಜ್, ಪಿ.ಎಸ್.ಐ. ಇವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ 30-09-2005 ರಿಂದ 08-06-2007 ರವರೆಗೆ ವಿಸ್ತರಿಸಿ ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗಧಿಪಡಿಸುವುದು. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1442 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಬಿ.ಎನ್.ಶೆಟ್ಟಣ್ಣನವರ್, ಹಿಂದಿನ ಪ್ರಾಂಶುಪಾಲರು ಹಾಗೂ ಅಡಿಷನಲ್ ಎಸ್.ಪಿ., ಪೊಲೀಸ್ ತರಬೇತಿ ಶಾಲೆ, ಖಾನಾಪುರ ಮತ್ತಿತರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಒಇ 221 ಪೊಸಿಪ 2003 ದಿನಾಂಕ 27-08-2003,

2) ಸರ್ಕಾರದ ಆದೇಶ ಸಂಖ್ಯೆ:ಒಇ 221 ಪೊಸಿಪ 2003 ದಿನಾಂಕ 30-10-2004 & 30-10-2004.

3) ಸರ್ಕಾರದ ಆದೇಶ ಸಂಖ್ಯೆ:ಒಇ 221 ಪೊಸಿಪ 2003 ದಿನಾಂಕ 08-08-2007.

4) ಡಿಜಿ ಮತ್ತು ಐಜಿಪಿ ರವರು ಸರ್ಕಾರದೊಂದಿಗೆ ವ್ಯವಹರಿಸಿದ ಕೊನೆಯ ಪತ್ರ ಸಂಖ್ಯೆ:ಸಿಬಿ(5)/9/2003-04 ದಿನಾಂಕ 21-04-2009.

ಪ್ರಸ್ತಾವನೆ:

ಮೇಲೆ (1) ರಲ್ಲಿ ಕೆಳಕಂಡ ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಕೆ.ಎಸ್.ಪಿ ಡಿಪಿ ನಿಯಮ 6 ಮತ್ತು 8ರ ಮೇರೆಗೆ ನಡೆಸಲು ಮತ್ತು ಸೇವೆಯಿಂದ ಅಮಾನತ್ತುಗೊಳಿಸಲು ಸರ್ಕಾರ ಆದೇಶವನ್ನು ಹೊರಡಿಸಲಾಗಿರುತ್ತದೆ:-

1) ಶ್ರೀ.ಜಿ.ಎನ್.ಶೆಟ್ಟಣ್ಣನವರ್, ಅಂದಿನ ಪ್ರಾಂಶುಪಾಲರು, ಪೊಲೀಸ್ ತರಬೇತಿ ಶಾಲೆ, ಖಾನಾಪುರ.
2) ಶ್ರೀ.ಜಿ.ಎನ್.ಶಿರೂರ್, ಡಿವೈ.ಎಸ್.ಪಿ. ಅಂದಿನ ಉಪ ಪ್ರಾಂಶುಪಾಲರು.
3) ಶ್ರೀ.ಹುಡೇದ್ ಗೌಡರ್, ಮೀಸಲು ಪಿ.ಐ.
4) ಶ್ರೀ.ಕೆ.ವಿ.ದಳವಾಯಿ, ಎ.ಆರ್.ಎಸ್.ಐ.
5) ಶ್ರೀ.ಜಿ.ಎಲ್.ಹಾದಿಮನಿ, ಎ.ಹೆಚ್.ಸಿ.
6) ಶ್ರೀ.ಬಿ.ಕೆ.ಠಾಕೂರ್, ಎ.ಹೆಚ್.ಸಿ.
7) ಶ್ರೀ.ಹೆಚ್.ಆರ್.ಚಿನ್ನಣ್ಣನವರ್, ಎ.ಹೆಚ್.ಸಿ.
8) ಶ್ರೀ.ಶ್ರೀಕಾಂತ ವಿ.ಬಾಧಿ, ಎ.ಹೆಚ್.ಸಿ.
9) ಶ್ರೀ.ಆರ್.ಕೆ.ನಾವಿ, ಎ.ಹೆಚ್.ಸಿ.

2) ಮೇಲೆ ಓದಲಾದ (2)ರ ಆದೇಶ ದಿನಾಂಕ 30-10-2004ರಲ್ಲಿ ಮೇಲಿನ ಅಧಿಕಾರಿಗಳಲ್ಲಿ ಕ್ರಮ ಸಂಖ್ಯೆ:3 ರಿಂದ 9ರ ವರೆಗಿನ ಒಟ್ಟು 7 ಅಧಿಕಾರಿಗಳನ್ನು ಜಂಟಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಲಾಯಿತು ಮತ್ತು ದಿನಾಂಕ 02-03-2005ರ ಸರ್ಕಾರದ ಆದೇಶದಲ್ಲಿ ಶ್ರೀ ಜಿ.ಎಂ.ಶಿರೂರ್, ಡಿವೈ.ಎಸ್.ಪಿ ರವರನ್ನು ಜಂಟಿ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಿಂದ ತೆರವುಗೊಳಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಲಾಯಿತು.

3) ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಿ, ವಿಚಾರಣಾಧಿಕಾರಿಗಳು ದಿನಾಂಕ 30-06-2005ರಂದು ಅಂತಿಮ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಮೇಲಿನ ಕ್ರಮ ಸಂಖ್ಯೆ:1 ರಿಂದ 5 ರ ವರೆಗಿನ ಅಧಿಕಾರಿಗಳ ವಿರುದ್ಧ ಆರೋಪಗಳು ಸಾಬೀತಾಗಿರುತ್ತದೆ ಎಂದೂ ಮತ್ತು ಕ್ರಮ ಸಂಖ್ಯೆ:6 ರಿಂದ 9ರ ವರೆಗಿನ ಅಧಿಕಾರಿಗಳ ವಿರುದ್ಧ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಗಳು ತಮ್ಮ ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ. ಆದುದರಿಂದ, ಮೇಲೆ ಓದಲಾದ (3)ರ ಸರ್ಕಾರದ ಆದೇಶ ದಿನಾಂಕ 08-08-2007ರಲ್ಲಿ ಕೆಳಕಂಡ ಅಧಿಕಾರಿಗಳ ವಿರುದ್ಧದ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ವಿಚಾರಣಾ ವರದಿಯನ್ನು ಒಪ್ಪಿ, ಸೇವೆಯಿಂದ ಕಡ್ಡಾಯ ನಿವೃತ್ತಿಗಳಿಸುವ ದಂಡನೆಯನ್ನು ವಿಧಿಸಲಾಯಿತು:-

(1) ಶ್ರೀ ಹುಡೇದ್ ಗೌಡರ್, ಆರ್.ಪಿ.ಐ.
(2) ಶ್ರೀ ಕೆ.ವಿ.ದಳವಾಯಿ, ಎ.ಆರ್.ಎಸ್.ಐ.
(3) ಶ್ರೀ ಜಿ.ಎಲ್.ಹಾದಿಮನಿ.

4) ಶ್ರೀ ಬಿ.ಎನ್.ಶೆಟ್ಟಣ್ಣನವರ್ ಮತ್ತು ಶ್ರೀ ಜಿ.ಎನ್.ಶಿರೂರ್, ಇವರುಗಳು ಸೇವೆಯಿಂದ ನಿವೃತ್ತರಾದುದರಿಂದ ಇವರ ಶೇಕಡ 50ರಷ್ಟನ್ನು ಇವರ ಪಿಂಚಣಿಯಿಂದ ಐದು ವರ್ಷಗಳ ಅವಧಿಯವರೆಗೆ ಕಡಿತಗೊಳಿಸುವ ದಂಡನೆಯ ವಿಧಿಸಲಾಗಿದೆ.

5) ಮುಂದುವರಿದು, ಈ ಕೆಳಕಂಡ ಸಿಬ್ಬಂದಿಗಳ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವುದಿಲ್ಲವೆಂದು ವರದಿ ಮಾಡಿದ ಹಿನ್ನೆಲೆಯಲ್ಲಿ ಇವರುಗಳನ್ನು ದೋಷಮುಕ್ತಗೊಳಿಸಲಾಗಿರುತ್ತದೆ:-

(1) ಶ್ರೀ ಹೆಚ್.ಆರ್.ಚೆನ್ನಣ್ಣನವರ್, ಎ.ಹೆಚ್.ಸಿ.
(2) ಶ್ರೀ ಶ್ರೀಕಾಂತ ವಿ.ಬಾಧಿ, ಎ.ಹೆಚ್.ಸಿ.
(3) ಶ್ರಿ ಆರ್.ಕೆ.ನಾವಿ, ಎ.ಹೆಚ್.ಸಿ.
(4) ಶ್ರೀ ಜಿ.ಕೆ.ಠಾಕೂರ್, ಎ.ಹೆಚ್.ಸಿ.

6) ಮೇಲೆ ಓದಲಾದ(4)ರ ತಮ್ಮ ಪತ್ರದಲ್ಲಿ ಡಿಜಿ ಮತ್ತು ಐಜಿಪಿ ರವರು ಹಿಂದಿನ ಖಂಡಿಕೆಯಲ್ಲಿ ನಮೂದಿಸಿರ ಅಧಿಕಾರಿಗಳ ವಿರುದ್ಧದ ಆರೋಪಗಳು ಸಾಬೀತಾಗಿಲ್ಲದೆ ಇರುವುದರಿಂದ, ಇವರುಗಳನ್ನು ಅಮಾನತ್ತುಗೊಳಿಸಿ ದಿನಾಂಕ:27.08.2003 ರಿಂದ ಇವರುಗಳನ್ನು ಸೇವೆಗೆ ಪುನರ್ ನೇಮಿಸಿದ ದಿನಾಂಕ 30-10-2004ರ ವರೆಗಿನ ಅವಧಿಯ ಕರ್ತವ್ಯದ ಮೇಲಿದ್ದಂತೆ ಎಂದು ಪರಿಗಣಿಸಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

7) ಡಿಜಿ ಮತ್ತು ಐಜಿಪಿ ರವರ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 142 ಪೊಸಿಪ 2009, ಬೆಂಗಳೂರು, ದಿನಾಂಕ: 19ನೇ ಜೂನ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಪೊಲೀಸ್ ಸಿಬ್ಬಂದಿಗಳ ವಿರುದ್ಧ ಆರೋಪಗಳು ಜಂಟಿ ಇಲಾಖಾ ವಿಚಾರಣೆಯಲ್ಲಿ ಸಾಭೀತಾಗಿರುವುದಿಲ್ಲವಾದುದರಿಂದ, ಇವರುಗಳನ್ನು ದೋಷಮುಕ್ತಗೊ ಆದೇಶಿಸಲಾಗಿದೆ ಮತ್ತು ಇವರುಗಳ ಅಮಾನತ್ತಿನ ಅವಧಿ ದಿನಾಂಕ 27-08-2003 ರಿಂದ 30-10-2004 ರ ವರೆ ಅವಧಿಯನ್ನು "ಕರ್ತವ್ಯದ ಅವಧಿ" ಎಂದು ಸಹ ಪರಿಗಣಿಸಿ ಆದೇಶಿಸಲಾಗಿದೆ.

1. ಶ್ರೀ.ಹೆಚ್.ಆರ್.ಚೆನ್ನಣ್ಣನವರ್, ಎ.ಹೆಚ್.ಸಿ.
2. ಶ್ರೀ.ಶ್ರೀಕಾಂತ ವಿ.ಬಾಧಿ, ಎ.ಹೆಚ್.ಸಿ.
3. ಶ್ರೀ.ಆರ್.ಕೆ.ನಾವಿ, ಎ.ಹೆಚ್.ಸಿ.
4. ಶ್ರೀ.ಜಿ.ಕೆ.ಠಾಕೂರ್, ಎ.ಹೆಚ್.ಸಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1444 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಜಲಸಂಪನ್ಮೂಲ ಇಲಾಖೆಯಲ್ಲಿನ ಕೃಷ್ಣಾ ಭಾಗ್ಯ ಜಲ ನಿಗ ವಿಶೇಷ ಕೋಶವನ್ನು ಅದರ ಹುದ್ದೆಗಳೊಂದಿಗೆ ಮುಂದುವರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 14 ಸಸಿವಿ 1994, ದಿನಾಂಕ: 07-07-1994.
2. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 34 ಸಸಿವಿ 1999, ದಿನಾಂಕ: 22-10-1999.
3. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 09 ಸಸಿವಿ 2007, ದಿನಾಂಕ: 02-03-2007.
4. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 377 ಸಅಸೇ 2008, ದಿನಾಂಕ: 15-05-2008 ಮ ತಿದ್ದೋಲೆ ದಿನಾಂಕ: 04-06-2008.
5. ಜಲಸಂಪನ್ಮೂಲ ಇಲಾಖೆಯ ಕಡತ ಸಂಖ್ಯೆ: ಜಸಂಇ 41 ಕೆಬಿಎನ್ 08.

ಪ್ರಸ್ತಾವನೆ:-

ಮೇಲೆ ಓದಲಾದ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಪ್ರಾರಂ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರ್ಕಾರ ಸಚಿವಾಲಯದ ನೀರಾವರಿ ಇಲಾಖೆಯಲ್ಲಿ ಈ ಕೆಳಕಂಡ ಹುದ್ದೆಗಳ ಒಳಗೊಂಡಂತೆ ಕೃಷ್ಣಾ ಭಾಗ್ಯ ಜಲ ನಿಗಮದ ವಿಶೇಷ ಕೋಶವನ್ನು ಒಂದು ವರ್ಷದ ಅವಧಿಗೆ ಸೃಜಿಸಲಾಗಿತ್ತು ಹಾ ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ, ನೀರಾವರಿ ಇಲಾಖೆ (ಕೃಷ್ಣಾ ಭಾಗ್ಯ ಜಲ ನಿಗಮ ವಿಶೇಷ ಕೊ ಇವರ ಆಪ್ತ ಶಾಖೆಗೆ ಪೂರಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಲಾಗಿದೆ. ಈ ತಾತ್ಕಾಲಿಕ ಹುದ್ದೆಗಳನ್ನು ಕಾಲಕಾ ಮುಂದುವರಿಸಲಾಗಿದ್ದು, ಮೇಲೆ ಓದಲಾದ (4)ರ ಸರ್ಕಾರದ ಆದೇಶ ಮತ್ತು ತಿದ್ದೋಲೆಯಲ್ಲಿ ವಿಶೇಷ ಕೋಶದೊಂ

ಸದರಿ ಹುದ್ದೆಗಳನ್ನು ದಿನಾಂಕ: 01–04–2008 ರಿಂದ 31–03–2009 ರವರೆಗೆ ಮುಂದುವರಿಸಲಾಗಿದ್ದು, ವಿಶೇಷ ಕೋಶ ಹಾಗೂ ಪೂರಕ ಹುದ್ದೆಗಳ ಮುಂದುವರಿಕೆಯು ದಿನಾಂಕ: 31–03–2009 ಕ್ಕೆ ಅಂತ್ಯಗೊಳ್ಳುವುದರಿಂದ, ಈ ಹುದ್ದೆಗಳನ್ನು ಮುಂದುವರಿಸುವಂತೆ ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಕಡತದಲ್ಲಿ ಜಲಸಂಪನ್ಮೂಲ ಇಲಾಖೆಯು ಕೋರಿದೆ.

ಕ್ರಸಂ	ಹುದ್ದೆಯ ಪದನಾಮ	ಹುದೆಗಳ ಸಂಖ್ಯೆ
1.	ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ಅಧೀನ ಕಾರ್ಯದರ್ಶಿ ಕೇಡರ್)	1 ಹುದ್ದೆ
3.	ಶಾಖಾಧಿಕಾರಿ	1 ಹುದ್ದೆ
4.	ಹಿರಿಯ ಸಹಾಯಕ	2 ಹುದ್ದೆ
5.	ಸಹಾಯಕ	1 ಹುದ್ದೆ
6.	ಶೀಘ್ರಲಿಪಿಗಾರರು	1 ಹುದ್ದೆ
7.	ಬೆರಳಚ್ಚುಗಾರರು	1 ಹುದ್ದೆ
8..	ದಲಾಯತ್	1 ಹುದ್ದೆ

ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ ಆಪ್ತ ಶಾಖೆ ಸಿಬ್ಬಂದಿ:–

ಕ್ರಸಂ	ಹುದ್ದೆಯ ಪದನಾಮ	ಹುದೆಗಳ ಸಂಖ್ಯೆ
1.	ಶೀಘ್ರಲಿಪಿಗಾರರು	1 ಹುದ್ದೆ
2.	ಕಿರಿಯ ಸಹಾಯಕರು	1 ಹುದ್ದೆ
3.	ಗ್ರೂಪ್–ಡಿ	1 ಹುದ್ದೆ

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 233 ಸಅಸೇ 2009, ಬೆಂಗಳೂರು, ದಿನಾಂಕ: 15ನೇ ಮೇ 2009

ಕರ್ನಾಟಕ ಸರ್ಕಾರದ ಸಚಿವಾಲಯದ ಜಲಸಂಪನ್ಮೂಲ ಇಲಾಖೆಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ವಿಶೇಷ ಕೋಶವನ್ನು ಹಾಗೂ ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳೊಂದಿಗೆ ದಿನಾಂಕ: 01–04–2009 ರಿಂದ ದಿನಾಂಕ: 31–03–2010 ರವರೆಗೆ ಮುಂದುವರಿಸಿ ಆದೇಶಿಸಿದೆ.

ಕ್ರಸಂ	ಹುದ್ದೆಯ ಪದನಾಮ	ಹುದೆಗಳ ಸಂಖ್ಯೆ
1.	ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿ	1 ಹುದ್ದೆ
2.	ವಿಶೇಷ ಕರ್ತವ್ಯಾಧಿಕಾರಿ (ಅಧೀನ ಕಾರ್ಯದರ್ಶಿ ಕೇಡರ್)	1 ಹುದ್ದೆ
3.	ಶಾಖಾಧಿಕಾರಿ	1 ಹುದ್ದೆ
4.	ಹಿರಿಯ ಸಹಾಯಕ	2 ಹುದ್ದೆ
5.	ಸಹಾಯಕ	1 ಹುದ್ದೆ
6.	ಶೀಘ್ರಲಿಪಿಗಾರರು	1 ಹುದ್ದೆ
7.	ಬೆರಳಚ್ಚುಗಾರರು	1 ಹುದ್ದೆ
8..	ದಲಾಯತ್	1 ಹುದ್ದೆ

ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ ಆಪ್ತ ಶಾಖೆ ಸಿಬ್ಬಂದಿ:–

ಕ್ರಸಂ	ಹುದ್ದೆಯ ಪದನಾಮ	ಹುದೆಗಳ ಸಂಖ್ಯೆ
1.	ಶೀಘ್ರಲಿಪಿಗಾರರು	1 ಹುದ್ದೆ
2.	ಕಿರಿಯ ಸಹಾಯಕರು	1 ಹುದ್ದೆ
3.	ಗ್ರೂಪ್–ಡಿ	1 ಹುದ್ದೆ

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 1 ಟಿಎಫ್‌ಪಿ 96, ದಿನಾಂಕ: 10–07–1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3).

ಪಿ.ಆರ್. 1382

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 06 ಇಮುವಿ 2009, ಬೆಂಗಳೂರು, ದಿನಾಂಕ: 5ನೇ ಜೂನ್ 2009

ವಿಷಯ: ಶ್ರೀ ಎಸ್. ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್ ಅವರ ವಿರುದ್ಧ ಲೋಕಾಯುಕ್ತ ತನಿಖೆಯನ್ನು ಕಾಯ್ದಿಟ್ಟು ಅವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಶ್ರೀ ಎಸ್. ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೊರೂರು, ಹಾಸನ ಜಿಲ್ಲೆ, ಅವರ ಅವರ ಸೇವಾವಧಿಯಲ್ಲಿ ಬಲ್ಲ ಆದಾಯದ ಮೂಲಗಳಿಗಿಂತ ಅಪಾರ ಪ್ರಮಾಣದಲ್ಲಿ ಸ್ಥಿರಾಸಿ-ಚರಾಸ್ತಿಗಳನ್ನು ಹೊಂದಿರುವುದ ಕರ್ನಾಟಕ ಲೋಕಾಯುಕ್ತದ ಪೋಲಿಸರು, ಅವರ ಮನೆಯನ್ನು ಶೋಧಿಸಿದಾಗ ಕಂಡು ಬಂದಿರುವುದರಿಂದಲೂ,

ಶ್ರೀ ಎಸ್. ಸಿ. ಜಯಚಂದ್ರ ಅವರ ಮನೆ ಶೋಧನೆಯ ಸಮಯದಲ್ಲಿ ಅಪಾರ ಪ್ರಮಾಣದ ಸ್ಥಿರ ಮತ್ ಚರಾಸ್ತಿಗಳು, ನಿವೇಶನ, ಚಿನ್ನ, ಬೆಳ್ಳಿ, ನಗದು, ಬ್ಯಾಂಕ್ ಶಿಲ್ಕು, ವಾಹನಗಳು, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ವಸ್ತುಗಳ ಬೆಲೆಬಾಳುವ ಪೀಠೋಪಕರಣಗಳು, ಗೃಹೋಪಯೋಗಿ ವಸ್ತುಗಳು ಮತ್ತು ದಾಖಲೆಗಳು ಪತ್ತೆಯಾಗಿರುವುದರಿಂದಲೂ,

ಮೇಲ್ಕಂಡ ಅಕ್ರಮಗಳಿಗಾಗಿ ಶ್ರೀ ಎಸ್. ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್, ಅವರ ವಿರುದ್ಧ ಲೋಕಾಯು ತನಿಖೆಯನ್ನು ಕಾಯ್ದಿಟ್ಟು ಅವರನ್ನು ಸೇವೆಯಿಂದ ಅಮಾನತ್ತುಗೊಳಿಸುವುದು ಅವಶ್ಯವೆಂದು ಕಂಡುಬಂದಿರುವುದರಿಂದಲೂ,

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಾಮವಳಿ 1957 ನಿಯಮ 10(1)(ಆಆ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಎಸ್. ಸಿ. ಜಯಚಂದ್ರ, ಮುಖ ಇಂಜಿನಿಯರ್, ಹೇಮಾವತಿ ಯೋಜನೆ ಗೊರೂರು, ಹಾಸನ ಜಿಲ್ಲೆ ಅವರನ್ನು ಅವರ ವಿರುದ್ಧ ಮೇಲೆ ಹೇಳಿ ಆರೋಪಗಳಿಗಾಗಿ ಲೋಕಾಯುಕ್ತ ತನಿಖೆಯನ್ನು ಕಾಯ್ದಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿ ಆದೇಶದವರೆಗೆ ಈ ಮೂಲಕ ಸೇವೆಯಿಂದ ಅಮಾನತ್ತಿನಲ್ಲಿಡುತ್ತದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಸ್. ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್, ಅವರು ಕರ್ನಾಟಕ ನಾಗರೀ ಸೇವಾ ನಿಯಮಗಳ 98 ನೇ ನಿಯಮದ ಅನ್ವಯ ಜೀವನಾಧಾರ ಭತ್ಯೆಯನ್ನು ಪಡೆಯುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಸ್. ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್, ಅವರು ಸಕ್ಷಮ ಪ್ರಾಧಿಕಾ ಅನುಮೋದನೆ ಪಡೆಯದೆ ತಾವು ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಶ್ರೀ ಎಸ್. ಸಿ. ಜಯಚಂದ್ರ, ಮುಖ್ಯ ಇಂಜಿನಿಯರ್, ಅವರ ಸ್ಥಾನದಲ್ಲಿ ತಾತ್ಕಾಲಿಕವಾಗಿ ಬದಲಿ ವ್ಯವಸ್ಥೆಯನ ಮಾಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಅವರು ಕ್ರಮ ಕೈಗೊಳ್ಳುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನ

ಎಂ.ಎಸ್. ಶಿವರಾಮ್

ಪಿ.ಆರ್. 1476

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3).

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆಯ ಸರ್ಕಾರದ ಕಾರ್ಯದರ್ಶಿ(ಪರಿಸರ ಮತ್ತು ಜೀವಿಶಾಸ್ತ್ರ) ಹುದ್ದೆಯನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ:
1 ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 464 ಎಸ್ ಎ ಎಸ್ 1998, ದಿನಾಂಕ: 14-07-1999.
2 ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 227 ಸಸಿವಿ 2007, ದಿನಾಂಕ: 28-04-2007.
3 ಅನಧಿಕೃತ ಟಿಪ್ಪಣಿ ಸಂಖ್ಯೆ: ಅಪಜೀ 37 ಇಪಿಸಿ 2003, ದಿನಾಂಕ: 25-04-2009.

ಪ್ರಸ್ತಾವನೆ:-

ಕರ್ನಾಟಕ ಸರ್ಕಾರದ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಿ ಕಾಲಕಾಲಕ್ಕೆ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂ (2) ರಲ್ಲಿ ಓದಲಾದ ದಿನಾಂಕ: 28-04-2007 ರ ಆದೇಶದಲ್ಲಿ ಈ ಹುದ್ದೆಯನ್ನು ದಿನಾಂಕ:01.04.2007 ರಿಂ 31-03-2008 ರವರೆಗೆ ಮುಂದುವರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸರ್ಕಾರದ ಕಾರ್ಯದರ್ಶಿ (ಪರಿಸರ ಮ ಜೀವಿಶಾಸ್ತ್ರ) ಹುದ್ದೆಯನ್ನು ದಿನಾಂಕ: 01-04-2007 ರಿಂದ 31-03-2010 ರವರೆಗೆ ಮುಂದುವರಿಸುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 276 ಸಅಸೇ 2009, ಬೆಂಗಳೂರು, ದಿನಾಂಕ: 05ನೇ ಜೂನ್ 2009

ಕರ್ನಾಟಕ ಸರ್ಕಾರದ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಹುದ್ದೆಯನ್ನು ದಿನಾಂಕ: 01-04-2008 ರಿಂದ 31-03-2010 ರವರೆಗೆ ತಾತ್ಕಾಲಿಕವಾ ಮುಂದುವರಿಸಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 1 ಟಿಎಫ್‌ಪಿ 96, ದಿನಾಂಕ: 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1477

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3).

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಶಾಖೆಯಲ್ಲಿನ ಉಪಕಾರ್ಯದರ್ಶಿ (ಕಾನೂನು) ಮತ್ತು ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳನ್ನು ರದ್ಧುಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 148 ಸಅಸೇ 08 ದಿನಾಂಕ 3-12-2008.

2) ಅನಧಿಕೃತ ಟಿಪ್ಪಣಿ ಸಂಖ್ಯೆಃ ಲೋಇ 5 ಸಿಆರ್‌ಎಂ 08 ದಿನಾಂಕ 7-2-2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ 3-12-2008ರ ಸರ್ಕಾರಿ ಆದೇಶದಲ್ಲಿ ಸಚಿವಾಲಯದ ಲೋಕೋಪಯೋಗಿ ಇಲಾಖೆಯಲ್ಲಿನ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಶಾಖೆಯಲ್ಲಿದ್ದ ಉಪ ಕಾರ್ಯದರ್ಶಿ (ಕಾನೂನು) ಹಾಗೂ ಕಾರ್ಯಪಾಲಕ ಇಂಜಿನಿಯರ್‌ಗಳ ಪೂರಕ ಸಿಬ್ಬಂದಿ ಹುದ್ದೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ಧುಪಡಿಸಲಾಗಿತ್ತು. ಲೋಕೋಪಯೋಗಿ ಇಲಾಖೆಯು ಮೇಲೆ (2) ರಲ್ಲಿ ಓದಲಾದ ದಿನಾಂಕ 7-2-2009ರ ಅನಧಿಕೃತ ಟಿಪ್ಪಣಿಯಲ್ಲಿ ಉಪ ಕಾರ್ಯದರ್ಶಿ (ಕಾನೂನು) ಈ ಹುದ್ದೆಯನ್ನೂ ಸಹ ರದ್ಧುಪಡಿಸುವಂತೆ ಹಾಗೂ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಶ್ರೀ ಬಸವರಾಜ ಎಂ. ದೊಡ್ಡಮನಿ ಅವರು ಕಾರ್ಯ ನಿರ್ವಹಿಸುತ್ತಿದ್ದು, ಅವರಿಗೆ ವೇತನ ಪಡೆಯಲು ಅನುಕೂಲವಾಗುವಂತೆ ಸದರಿ ಹುದ್ದೆಯನ್ನು ದಿನಾಂಕ 31-3-2009ರವರೆಗೆ ಮುಂದುವರೆಸಿ ನಂತರ ಅದನ್ನು ರದ್ಧುಪಡಿಸುವಂತೆ ಕೋರಿದೆ. ಇದನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 148 ಸಅಸೇ 2008, ಬೆಂಗಳೂರು, ದಿನಾಂಕ 6ನೇ ಜೂನ್ 2009.

ಕರ್ನಾಟಕ ಸರ್ಕಾರ ಸಚಿವಾಲಯದ ಲೋಕೋಪಯೋಗಿ ಇಲಾಖೆಯ ಬಿ.ಎಂ.ಐ.ಸಿ.ಪಿ. ಶಾಖೆಯಲ್ಲಿದ್ದ ಉಪಕಾರ್ಯದರ್ಶಿ (ಕಾನೂನು) ಈ ಹುದ್ದೆಯನ್ನು ದಿನಾಂಕ 3-12-2008ರಿಂದಲೇ ಜಾರಿಗೆ ಬರುವಂತೆ ರದ್ಧುಪಡಿಸಲಾಗಿದೆ. ಕಾರ್ಯಪಾಲಕ ಇಂಜಿನಿಯರ್ ಹುದ್ದೆಯನ್ನು ದಿನಾಂಕ 31-3-2009ರ ವರೆಗೆ ಮುಂದುವರೆಸಿ ಆನಂತರ ಸದರಿ ಹುದ್ದೆಯನ್ನು ರದ್ಧುಪಡಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆಃ ಆಇ 202 ವೆಚ್ಚ-12/2009, ದಿನಾಂಕ 12-5-2009ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1478

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ವಿಷಯ: ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು(ಸ್ವ-ಉದ್ಯೋಗ ಕಾರ್ಯಕ್ರಮ ಶಾಖೆ) ಹಾಗೂ ಪದನಿಮಿತ್ತ ಉಪ/ಜಂಟಿ ಕಾರ್ಯದರ್ಶಿ ಹುದ್ದೆಯನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ: 1 ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 46 ಸಸಿವಿ 2006, ದಿನಾಂಕ: 15-06-2006.

2 ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 744 ಸಅಸೇ 2008, ದಿನಾಂಕ: 11-09-2008.

3 ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಗ್ರಾಅಪ:13 ಎಸ್‌ಜೆಸಿ 07, ದಿನಾಂಕ: 14-05-2009.

ಪ್ರಸ್ತಾವನೆ:-

ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಸ್ವ-ಉದ್ಯೋಗ ಕಾರ್ಯಕ್ರಮ) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಿ ಕಾಲಕಾಲಕ್ಕೆ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 11-09-2008 ರ ಆದೇಶದಲ್ಲಿ ಈ ಹುದ್ದೆಯನ್ನು ದಿನಾಂಕ: 25-06-2009 ರಿಂದ 24-06-2009 ರವರೆಗೆ ಮುಂದುವರಿಸಲಾಗಿದೆ.

ಮೇಲೆ ಕ್ರಮಸಂಖ್ಯೆ(3) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಸ್ವ-ಉದ್ಯೋಗ ಕಾರ್ಯಕ್ರಮ) ಹಾಗೂ ಸರ್ಕಾರದ ಉಪ/ಜಂಟಿ ಕಾರ್ಯದರ್ಶಿ ಹುದ್ದೆಯನ್ನು ದಿನಾಂಕ: 25-06-2009 ರಿಂದ ಒಂದು ವರ್ಷದ ಅವಧಿ ಮುಂದುವರಿಸುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 302 ಸಅಸೇ 2009, ಬೆಂಗಳೂರು, ದಿನಾಂಕ: 9ನೇ ಜೂನ್ 2009

ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಸ್ವ-ಉದ್ಯೋಗ ಕಾರ್ಯಕ್ರಮ) ಹಾಗೂ ಪದನಿಮಿತ್ತ ಸರ್ಕಾರದ ಉಪ/ಜಂಟಿ ಕಾರ್ಯದರ್ಶಿ ಹುದ್ದೆಯನ್ನು ದಿನಾಂಕ: 25-06-2009 ರಿಂದ 24-06-2010 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ: 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1479

ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3).

ವಿಷಯ: ಯೋಜನಾ ಇಲಾಖೆಯ ಅಪರ/ಜಂಟಿ ಕಾರ್ಯದರ್ಶಿಗಳ ಹುದ್ದೆಯನ್ನು ಪೂರಕ ಸಿಬ್ಬಂದಿ ಹುದ್ದೆಗಳೊಂದಿಗೆ ಮುಂದುವರಿಸುವ ಬಗ್ಗೆ.

ಓದಲಾಗಿದೆ:
1 ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 29 ಸಅಸೇ 2008, ದಿನಾಂಕ: 27-02-2008.
2 ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 220 ಅಸೇವ 2008, ದಿನಾಂಕ: 18-11-2008.
3 ಯೋಜನಾ ಇಲಾಖೆಯ ಕಡತ ಸಂಖ್ಯೆ: ಪಿಡಿಎಸ್ 8 ಎಸ್‌ಪಿಬಿ/ಹೆಚ್‌ಪಿಸಿ 2009.

ಪ್ರಸ್ತಾವನೆ:-

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 27-02-2008 ರ ಸರ್ಕಾರಿ ಆದೇಶದಲ್ಲಿ ಯೋಜನಾ ಇಲಾಖೆಯ ಸರ್ಕಾರದ ಅಪರ ಕಾರ್ಯದರ್ಶಿ ಹುದ್ದೆಯನ್ನು ಪೂರಕ ಹುದ್ದೆಗಳೊಂದಿಗೆ ಸೃಜಿಸಿ ದಿನಾಂಕ:30-03-2009 ರವರೆಗೆ ಮುಂದುವರಿಸಲಾಗಿದೆ. ಮೇಲೆ ಕ್ರಮಸಂಖ್ಯೆ (2) ರ ಅಧಿಸೂಚನೆ ದಿನಾಂಕ:18-11-2008 ರಲ್ಲಿ ಯೋಜನಾ ಇಲಾಖೆಯ ಅಪರ ಕಾರ್ಯದರ್ಶಿ ಹುದ್ದೆಗೆ ಜಂಟಿ ಕಾರ್ಯದರ್ಶಿಯವರನ್ನು ನೇಮಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಕಡತದಲ್ಲಿ ಯೋಜನಾ ಇಲಾಖೆಯು ದಿನಾಂಕ: 27-02-2008 ರ ಆದೇಶದಲ್ಲಿ ಸೃಜಿಸಲಾದ ಹುದೆಗಳನ್ನು ದಿನಾಂಕ: 30-03-2009 ರಿಂದ 1 ವರ್ಷಕ್ಕೆ ಮುಂದುವರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 290 ಸಅಸೇ 2009, ಬೆಂಗಳೂರು, ದಿನಾಂಕ: 10ನೇ ಜೂನ್ 2009.

ಯೋಜನಾ ಇಲಾಖೆಯಲ್ಲಿಯ ಜಂಟಿ ಕಾರ್ಯದರ್ಶಿ/ಅಪರ ಕಾರ್ಯದರ್ಶಿಗಳ ಹುದ್ದೆಯನ್ನು ದಿನಾಂಕ: 31-03-2009 ರಿಂದ ಜಾರಿಗೆ ಬರುವಂತೆ ಹಾಗೂ ಒಂದು ವರ್ಷದ ಅವಧಿಗೆ ಕೆಳಕಂಡ ಪೂರಕ ಸಿಬ್ಬಂದಿ ಹುದ್ದೆಗಳೊಡನೆ ಮುಂದುವರಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1.	ಶೀಘ್ರಲಿಪಿಗಾರ	1 ಹುದ್ದೆ
2.	ಕಿರಿಯ ಸಹಾಯಕ	1 ಹುದ್ದೆ
3.	ದಲಾಯತ್/ಜಮೇದಾರ್	1 ಹುದ್ದೆ ಹೊರ ಗುತ್ತಿಗೆಯಿಂದ

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ: 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1480

ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 12 ಸೇಇವಿ 2009, ಬೆಂಗಳೂರು, ದಿನಾಂಕ: 11ನೇ ಜೂನ್ 2009

ವಿಷಯ: ಶ್ರೀ ಕೆ.ಸುಬ್ಬಯ್ಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ಅವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಶ್ರೀ ಕೆ. ಸುಬ್ಬಯ್ಯ ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ...ರು ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ವರ್ಗೀಕರಣ ಕುರಿತಂತೆ ಸಂಬಂಧಪಟ್ಟ ಸಂಸ್ಥೆಗೆ ಸರ್ಕಾರದ ತೀರ್ಮಾನದಂತೆ ...ಬರಹ ನೀಡದೆ ತಪ್ಪಾದ ಹಿಂಬರಹ ನೀಡುವ ಮೂಲಕ ಅನಾವಶ್ಯಕ ಗೊಂದಲ ಉಂಟುಮಾಡಿರುವುದು ಸರ್ಕಾರದ ...ನಕ್ಕೆ ಬಂದಿರುವುದರಿಂದಲೂ,

ಈ ಹಿಂಬರಹ (ಸಂಖ್ಯೆ: ಸಕಇ 210 ಬಿಸಿಎ 2008 ದಿನಾಂಕ 06.05.2009) ನೀಡುವಾಗ ಹಿರಿಯ ಅಧಿಕಾರಿಗಳ ...ಮೋದನೆ ಪಡೆದಿರುವುದಿಲ್ಲ ಎಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿರುವುದರಿಂದಲೂ,

ಶ್ರೀ ಕೆ.ಸುಬ್ಬಯ್ಯ ಅಧೀನ ಕಾರ್ಯದರ್ಶಿ, ಅವರ ಮೇಲ್ಕಂಡ ವರ್ತನೆಯು ತೀವ್ರ ದುರ್ನಡತೆ ಆಗಿದ್ದು ಇದಕ್ಕಾಗಿ ...ರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಪ್ರಸ್ತಾಪಿಸಿದ್ದು, ಶಿಸ್ತಿನ ಕ್ರಮ ತೆಗೆದುಕೊಳ್ಳುವುದನ್ನು ಕಾಯ್ದಿಟ್ಟು ಅವರನ್ನು ...ಯಿಂದ ಅಮಾನತಿನಲ್ಲಿಡುವುದು ಅವಶ್ಯವೆಂದು ಕಂಡು ಬಂದಿರುವುದರಿಂದಲೂ,

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ...ಮ 10(1)(ಡಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಕೆ.ಸುಬ್ಬಯ್ಯ ಅಧೀನ ಕಾರ್ಯದರ್ಶಿ, ...ಟಕ ಸರ್ಕಾರದ ಸಚಿವಾಲಯ ಅವರನ್ನು ಅವರ ವಿರುದ್ಧ ಮೇಲೆ ಹೇಳಿದ ಆರೋಪಗಳಿಗಾಗಿ ಶಿಸ್ತಿನ ಕ್ರಮ ...ಳ್ಳುವುದನ್ನು ಕಾಯ್ದಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಮೂಲಕ ಸೇವೆಯಿಂದ ...ಾನತ್ತಿನಲ್ಲಿಡುತ್ತದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಕೆ.ಸುಬ್ಬಯ್ಯ, ಅಧೀನ ಕಾರ್ಯದರ್ಶಿ, ಅವರು ಕರ್ನಾಟಕ ನಾಗರೀಕ ಸೇವಾ ...ಮಗಳ 98ನೇ ನಿಯಮದ ಅನ್ವಯ ಜೀವನಾಧಾರ ಭತ್ಯೆಯನ್ನು ಪಡೆಯುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಕೆ.ಸುಬ್ಬಯ್ಯ, ಅಧೀನ ಕಾರ್ಯದರ್ಶಿ, ಅವರು ಸಕ್ಷಮ ಪ್ರಾಧಿಕಾರ ಅನುಮೋದನೆ ...ಯದೆ ತಾವು ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಶ್ರೀ ಕೆ.ಸುಬ್ಬಯ್ಯ, ಅಧೀನ ಕಾರ್ಯದರ್ಶಿ, ಅವರ ಸ್ಥಾನದಲ್ಲಿ ತಾತ್ಕಾಲಿಕವಾಗಿ ಬದಲಿ ವ್ಯವಸ್ಥೆಯನ್ನು ಮಾಡಲು ...ರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಅವರು ಕ್ರಮ ಕೈಗೊಳ್ಳುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

...ರ್. 1481

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3).

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ ಜಂಟಿ ಕಾರ್ಯದರ್ಶಿ ಹುದ್ದೆಗೆ ಪೂರಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

...ದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 874 ಸಅಸೇ 2008, ದಿನಾಂಕ: 07–03–2009.
2. ಅಧಿಸೂಚನೆ ಸಂಖ್ಯೆ: ಸಿಆಸುಇ 874 ಸಅಸೇ 2008, ದಿನಾಂಕ: 07–03–2009.
3. ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ ಸರ್ಕಾರದ ಜಂಟಿ ಕಾರ್ಯದರ್ಶಿ ಇವರ ಟಿಪ್ಪಣಿ ಸಂಖ್ಯೆ:ಐಡಿಡಿ/1/ಜಕಾ/2009, ದಿನಾಂಕ: 16–03–2009.

...ವನೆ:–

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 07–03–2009 ರ ಆದೇಶದಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ ...ಖೆಯಲ್ಲಿ ವೇತನ ಶ್ರೇಣಿ ರಹಿತ ಜಂಟಿ ಕಾರ್ಯದರ್ಶಿ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಮೇಲೆ ಕ್ರಮಸಂಖ್ಯೆ ...ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಜಂಟಿ ಕಾರ್ಯದರ್ಶಿ ಹುದ್ದೆಗೆ ಶ್ರೀ ಎನ್. ರಮೇಶ್, ಇವರನ್ನು ನೇಮಿಸಲಾಗಿದೆ. ...ೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಜಂಟಿ ಕಾರ್ಯದರ್ಶಿ ಹುದ್ದೆಗೆ ಲಭ್ಯವಿರುವ ಪೂರಕ ಸಿಬ್ಬಂದಿ ...ಗಳನ್ನು ಸೃಜಿಸುವಂತೆ ಕೋರಲಾಗಿದೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 196 ಸಅಸೇ 2009, ಬೆಂಗಳೂರು, ದಿನಾಂಕ: 19ನೇ ಜೂನ್ 2009.

ಕರ್ನಾಟಕ ಸರ್ಕಾರ ಸಚಿವಾಲಯದ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಸೃಜಿಸಲಾಗಿರುವ ಸರ್ಕಾರದ ... ಕಾರ್ಯದರ್ಶಿಯವರ ಆಪ್ತ ಶಾಖೆಗೆ ಈ ಕೆಳಕಂಡ ಹುದ್ದೆಗಳನ್ನು ತಾತ್ಕಲಿಕವಾಗಿ (ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ

874 ಸಅಸೇ 2008, ದಿನಾಂಕ: 07-03-2009 ರಲ್ಲಿ ಸೃಜಿಸಲಾಗಿರುವ ಜಂಟಿ ಕಾರ್ಯದರ್ಶಿ ಹುದ್ದೆ ಅಸ್ತಿತ್ವದಲ್ಲಿರುವವರೆ
ಸೃಜಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1.	ಶೀಘ್ರಲಿಪಿಗಾರ/ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
2.	ಕಿರಿಯ ಸಹಾಯಕ	1 ಹುದ್ದೆ
3.	ದಲಾಯತ್	1 ಹುದ್ದೆ

ಈ ಮೇಲ್ಕಂಡ ಹುದ್ದೆಗಳನ್ನು ಸ್ಥಳಾಂತರಿಸುವ ಮೂಲಕ (By Re-deployment) ಭರ್ತಿ ಮಾಡಲು ಸೂಚಿಸಲಾಗಿ

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 496 ವೆಚ್ಚ-12/2009, ದಿನಾಂಕ:01-06-2009 ರ
ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನ

ಎಂ.ಎಸ್. ಶಿವರಾಮ್

ಪಿ.ಆರ್. 1485 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3

ವಿಷಯ: ಶ್ರೀ ಹೆಚ್.ಕೆ. ಹೊರ್ತಿಕರ್, ನಿವೃತ್ತ ಮುಖ್ಯ ಇಂಜಿನಿಯರ್, ಅವರ ವಿರುದ್ಧ ಇಲಾಖಾ ವಿಚಾರಣೆ ಬ
ಅಂತಿಮ ಆದೇಶ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 76 ಎಸ್‌ಇಎನ್ 2005, ದಿನಾಂಕ: 12.09.2006.

2) ಶ್ರೀ ಸೋಸಲೆ ಇಂಧುದರ್, ನಿವೃತ್ತ ನ್ಯಾಯಾಧೀಶರ ಪತ್ರ ದಿನಾಂಕ: 12.05.2009.

ಪ್ರಸ್ತಾವನೆ:

ಶ್ರೀ ಹೆಚ್.ಕೆ. ಹೊರ್ತಿಕರ್, ನಿವೃತ್ತ ಮುಖ್ಯ ಇಂಜಿನಿಯರ್ ಅವರು ಮುಖ್ಯ ಇಂಜಿನಿಯರ್ ರಾಷ್ಟ್ರೀಯ ಹೆದ
ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಹೆಗರಿ ಸೇತುವೆ ಸುಂಕ ಸಂಗ್ರಹಣ ಕಾಮಗಾರಿ ಗುತ್ತಿಗೆಯ ಗುತ್ತಿಗೆದಾರ
ಕಡಿಮೆ ದಂಡ ವಿಧಿಸಿ ಕರ್ತವ್ಯ ಲೋಪ ಎಸಗುವ ಮೂಲಕ ಸರ್ಕಾರಕ್ಕೆ ಅಪಾರ ಆರ್ಥಿಕ ನಷ್ಟ ಉಂಟುಮಾಡಿರುವ
ಹಾಗೂ ಕರಾರಿನಂತೆ ಕ್ರಮ ಜರುಗಿಸದೇ ಕರಾರಿನಲ್ಲಿ ಷರತ್ತನ್ನು ಉದ್ದೇಶ ಪೂರ್ವಕವಾಗಿ ಉಲ್ಲಂಘಿಸಿದ ಆರೋಪಕ
ಶ್ರೀ ಹೆಚ್.ಕೆ. ಹೊರ್ತಿಕರ್ ನಿವೃತ್ತ ಮುಖ್ಯ ಇಂಜಿನಿಯರ್ ಇವರು ವಿರುದ್ಧ ಕೆ.ಸಿ.ಎಸ್.ಆರ್ ನಿಯಮ 214ರ ರನ್ವಯ ಮೆ
(1)ರಲ್ಲಿ ಓದಲಾದ ದಿನಾಂಕ:12.09.2006 ಸರ್ಕಾರಿ ಆದೇಶದಲ್ಲಿ ಇಲಾಖಾ ವಿಚಾರಣೆಯನ್ನು ಆದೇಶಿಸಿ ನಿ
ನ್ಯಾಯಾಧೀಶರಾದ ಶ್ರೀ ಎಸ್. ಇಂದೋಧರ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿ
ಮೇಲೆ (2)ರಲ್ಲಿ ಓದಲಾದ ದಿನಾಂಕ: 12.05.2009ರ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಈ ವಿಚಾರಣಾ ವರದಿಯ
ಪರಿಶೀಲಿಸಲಾಗಿ, ಈ ಪ್ರಕರಣದ ಸಾಕ್ಷಿದಾರರಾದ ಶ್ರೀ ಮುನಿಕೃಷ್ಣಪ್ಪ, ಕಾರ್ಯಪಾಲಕ ಇಂಜಿನಿಯರ್ ಅವರು ತ
ಲೋಪವನ್ನು ಮುಚ್ಚಿಟ್ಟುಕೊಳ್ಳಲು ಸಲ್ಲಿಸಿದ ಪ್ರಸ್ತಾವನೆಯಿಂದಾಗಿ ಇವರ ವಿರುದ್ಧ ಇಲಾಖಾ ವಿಚಾರಣೆ ಹೂಡಲ್ಪಟ್ಟ
ಶ್ರೀ ಹೆಚ್.ಕೆ. ಹೊರ್ತಿಕರ್ ಇವರಿಂದ ಯಾವುದೇ ಉಲ್ಲಂಘನೆ ಆಗಿಲ್ಲದಿರುವುದು ಮತ್ತು ಅವರು ಅರೆ ನ್ಯಾಯಾಂಗ ಅಧಿಕ
(Quasi Judicial Power) ಚಲಾಯಿಸಿ ಕರ್ತವ್ಯ ನಿರ್ವಹಿಸಿರುವುದು ವ್ಯಕ್ತವಾಗಿದೆ. ಆಪಾದಿತರ ಮೇಲೆ ಹೊರಿಸಲಾಗಿರ
ಆಪಾದನೆಗಳು ರುಜುವಾತಾಗಿರುವುದಿಲ್ಲ ಎಂಬ ವಿಚಾರಣಾಧಿಕಾರಿಗಳ ಅಭಿಪ್ರಾಯವನ್ನು ಒಪ್ಪಿಕೊಂಡು ಸರ್ಕಾರವು
ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 76 ಎಸ್‌ಇಎನ್ 2005, ಬೆಂಗಳೂರು, ದಿನಾಂಕ: 20ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಅಂಶಗಳಿಂದಾಗಿ ಸರ್ಕಾಶವು ಶ್ರೀ ಹೆಚ್.ಕೆ. ಹೊರ್ತಿಕರ್, ನಿವೃತ್ತ ಮು
ಇಂಜಿನಿಯರ್, ಅವರನ್ನು ಈ ಪ್ರಕರಣದಲ್ಲಿ ಅವರ ವಿರುದ್ಧ ಮಾಡಲಾದ ಆರೋಪಗಳಿಂದ ಮುಕ್ತರನ್ನಾಗಿಸುತ್ತದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಶ್ರೀ ಹೆಚ್.ಕೆ. ಹೊರ್ತಿಕರ್ ಇವರು ಯಾವ ಸೌಲಭ್ಯಗಳ
ಪಡೆಯುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿ

ಎಂ.ಎಸ್. ಶಿವರಾಮ್

ಪಿ.ಆರ್. 1486 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–

ಶಿಕ್ಷಣ ಸಚಿವಾಲಯ

ವಿಷಯ: ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಗಳೂರು, ಇದನ್ನು ತಾತ್ಕಾಲಿಕವಾಗಿ ಬೆಂಗಳೂರಿಗೆ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ: 1) ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು, ಇವರ ದಿನಾಂಕ:04/06–11–2008ರ ಪತ್ರ ಸಂಖ್ಯೆ: ಡಿ.ಪಿ.ಎಸ್/ಪಿ.ಎಲ್.ಜಿ–16/2008–09/ಪಿ(ಪಿ)139.

2) ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು, ಇವರ ದಿನಾಂಕ:02/11–12–2008ರ ಪತ್ರ ಸಂಖ್ಯೆ: ಡಿ.ಪಿ.ಎಸ್/ಸಿಬ್ಬಂದಿ–ಎ/31/ಪಿ(ಪಿ)1772008–09.

ಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ:04/06.11.2008ರ ಪತ್ರದನ್ವಯ ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ುತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು, ಇವರು ಮಂಗಳೂರಿನ ಜಿಲ್ಲಾ ಮುದ್ರಣಾಲಯವನ್ನು 2001ರಲ್ಲಿ, ಯೋಜನೆಯಲ್ಲಿ ಭ್ಯವಿರುವ ಹಣದಿಂದ ಪ್ರಾರಂಭಿಸಲಾಗಿರುತ್ತದೆ. ಈ ಮುದ್ರಣಾಲಯದಲ್ಲಿ ಮುದ್ರಿಸಬೇಕಾದ ನಿರ್ದಿಷ್ಟ ಹಾಗೂ ನಿಗದಿತ ಲಸಗಳು ಇಲ್ಲದಿದ್ದರಿಂದ, ಕೇಂದ್ರ ಮುದ್ರಣಾಲಯದಿಂದಲೇ ಕೆಲಸಗಳನ್ನು ವಹಿಸಿಕೊಡಲಾಗುತ್ತಿತ್ತು. ಇಲ್ಲಿಗೆ ಒಟ್ಟು 51 ವಿವಿಧ ುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 15 ಹುದ್ದೆಗಳಲ್ಲಿ ಖಾಯಂ ನೌಕರರು ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಭಾಗದಲ್ಲಿ ುದ್ರಣಕ್ಕೆ ಅಂತಹ ಹೆಚ್ಚುವರಿ ಕೆಲಸಗಳಿರುವುದಿಲ್ಲ. ಹುದ್ದೆಗಳನ್ನು ಭರ್ತಿ ಮಾಡದೆ ಇರುವುದರಿಂದ ಇಲ್ಲಿ ಸೂಕ್ತ ನಿಯಂತ್ರಣ ್ಯವಸ್ಥೆಗಳೂ ಸಾಧ್ಯವಿರುವುದಿಲ್ಲ. ಹೀಗಾಗಿ ಇದೊಂದು ಲಾಭದಾಯಕ ಅಥವಾ ಸರ್ಕಾರದ ನಿರ್ದಿಷ್ಟ ಯೋಜನೆಯ ನುಷ್ಠಾನಕ್ಕಾಗಲೀ ತೆರೆಯಲಾದ ಮುದ್ರಣಾಲಯವಾಗಿರುವುದಿಲ್ಲ.

2. ಈ ಮುದ್ರಣಾಲಯಕ್ಕೆ ಎರಡು ಕಟ್ಟಡಗಳಿದ್ದು, ಈ ಎರಡು ಕಟ್ಟಡಗಳೂ ಪೂರ್ಣವಾಗಿ ಶಿಥಿಲಗೊಂಡಿದ್ದು, ುವುಗಳನ್ನು ತಕ್ಷಣ ರಿಪೇರಿ ಮಾಡಿಸುವ ಅವಶ್ಯಕತೆಯಿರುತ್ತದೆ. ಮುಖ್ಯ ಕಟ್ಟಡದಲ್ಲಿರುವ ಕಾಗದ ಉಗ್ರಾಣ ಮಳೆಗೆ ನೆನೆದು, ಂದು ಭಾಗವು ಕುಸಿದು ಬಿದ್ದಿರುತ್ತದೆ. ಇನ್ನೊಂದು ಕಟ್ಟಡಕ್ಕೆ ತೀವ್ರ ರೀತಿಯ ರಿಪೇರಿಗಳು ಆಗಬೇಕಿದ್ದು, ಅಲ್ಲಿಯವರೆಗೂ ದರ ಬಳಕೆ ಆಗುವುದಿಲ್ಲ. ಈ ಕಟ್ಟಡದ ಗೋಡೆಗಳು ಬೇರೆಯವರ ಶೆಡ್‌ಗಳಿಗೆ ಹೊಂದಿಕೊಂಡಿರುತ್ತವೆ. ಇದರಿಂದ ರಿಪೇರಿ ಲಸಗಳು ಕಷ್ಟದಾಯಕವಾಗಿರುತ್ತದೆ.

3. ಇಲ್ಲಿ ಪ್ರತಿ ತಿಂಗಳು ಪಾವತಿಸಲಾಗುತ್ತಿರುವ ವೇತನದ ಮೊತ್ತ ಸುಮಾರು 1.66 ಲಕ್ಷ ರೂಪಾಯಿಗಳು. ಇಲ್ಲಿ ುತ್ತಿರುವ ಉತ್ಪಾದನೆ ಸುಮಾರು 2 ಲಕ್ಷ ಮುದ್ರಣಗಳು ಹಾಗೂ ಸುಮಾರು 2000 ಪುಸ್ತಕಗಳು. ಈಗಿರುವ ಸಿಬ್ಬಂದಿ ಾಗೂ ಯಂತ್ರದ ಸ್ಥಿತಿಗತಿಯನ್ನು ಆಧರಿಸಿದಲ್ಲಿ ಇಲ್ಲಿ ಇದಕ್ಕಿಂತಲೂ ಹೆಚ್ಚಿನ ಉತ್ಪಾದನೆಯನ್ನು ಪಡೆಯುವ ಸಾಧ್ಯತೆ ುರುವುದಿಲ್ಲ. ಇಲ್ಲಿ ಹೆಚ್ಚುವರಿ ಉತ್ಪಾದನೆ ಪಡೆಯಬೇಕಾದರೆ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ್ಲಿನ ಈಗಿನ ಉತ್ಪಾದನೆಯ ಮಾರುಕಟ್ಟೆ ಮೌಲ್ಯ ಸುಮಾರು 15,000 ರೂಪಾಯಿಗಳು ಮಾತ್ರ ಹೀಗಾಗಿ ಇಲ್ಲಿನ ುದ್ರಣಾಲಯ ಆರ್ಥಿಕವಾಗಿ ಲಾಭದಾಯಕವಾಗಿಲ್ಲದೆ ಇರುವುದು ಹಾಗೂ ಅಲ್ಲಿನ ಸಿಬ್ಬಂದಿಯ ವೆಚ್ಚವನ್ನಾದರೂ ಂದೂಗಿಸುವಷ್ಟರ ಮಟ್ಟಿಗೆ ಉತ್ಪಾದನೆ ಆಗುತ್ತಿಲ್ಲವೆಂಬ ಅಂಶವೂ ಸಹ ಸ್ಪಷ್ಟವಾಗಿರುತ್ತದೆ.

4. ಈ ಮುದ್ರಣಾಲಯ ವ್ಯವಸ್ಥಿತವಾಗಿ ನಡೆಯಬೇಕಾದರೆ, ಇಲ್ಲಿನ ಕಟ್ಟಡ ಕೂಡಲೇ ರಿಪೇರಿಯಾಗಬೇಕು. ್ಲದಿದ್ದಲ್ಲಿ ಇಲ್ಲಿ ಕೆಲಸ ನಿರ್ವಹಿಸುವ ಕೆಲಸಗಾರರಿಗೆ ಅಪಾಯ ಹಾಗೂ ಅಲ್ಲಿನ ಸರ್ಕಾರಿ ವಸ್ತುಗಳಿಗೆ ಸೂಕ್ತ ಭದ್ರತೆ ುರುವುದಿಲ್ಲ ಹಾಗೂ ಸೂಕ್ತ ಸಿಬ್ಬಂದಿ ನೇಮಕಾತಿ ಆಗಬೇಕಾಗಿರುತ್ತದೆ. ಆದುದರಿಂದ, ಈ ಮುದ್ರಣಾಲಯವನ್ನು ಈ ಂತದಲ್ಲಿ ಮುಂದುವರೆಸುವುದು ಸರ್ಕಾರಕ್ಕೆ ಹೊರೆಯಾಗಿರುತ್ತದೆ. ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರಿ ಜಿಲ್ಲಾ ುದ್ರಣಾಲಯ, ಮಂಗಳೂರು, ಇದನ್ನು ಬೆಂಗಳೂರಿಗೆ ವರ್ಗಾಯಿಸುವುದು ಸೂಕ್ತವಾಗಿದ್ದು, ಸದರಿ ಕಟ್ಟಡಗಳನ್ನು ೇರಿಗೊಳಿಸಿ ಸಾಕಷ್ಟು ಸಿಬ್ಬಂದಿಯನ್ನು ನೇಮಕಾತಿ ಮಾಡಿದ ನಂತರ ಇದರ ಪುನರಾರಂಭಕ್ಕೆ ಪರಿಶೀಲಿಸಬಹುದಾಗಿದ್ದು, ಂತೆಯೇ ಸೂಕ್ತ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

5. ಮೇಲೆ (2)ರಲ್ಲಿ ಓದಲಾದ ದಿನಾಂಕ: 02/11.12.2008ರ ಪತ್ರದನ್ವಯ ನಿರ್ದೇಶಕರು, ಮುದ್ರಣ, ಲೇಖನ ಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಮುಂದುವರೆಸುತ್ತಾ ಸಹಾಯಕ ನಿರ್ದೇಶಕರು, ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ, ಇವರು ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ ಇಲ್ಲಿ ಒಂದು ್ರಕಾರ್ಮಿಕರ ಹುದ್ದೆ ಖಾಲಿ ಇದ್ದು, ಒಬ್ಬರು ಅಗ್ರಕಾರ್ಮಿಕರ ಅವಶ್ಯಕತೆಯಿರುವುದರಿಂದ ಸರ್ಕಾರಿ ಜಿಲ್ಲಾ ಮುದ್ರಣಾಲಯ, ಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹರೀಶ್, ಅಗ್ರಕಾರ್ಮಿಕರು ಇವರನ್ನು ಖಾಲಿ ಇರುವ ಹುದ್ದೆಗೆ ವರ್ಗಾವಣೆ ಾಡುವಂತೆ ಹಾಗೂ ಸದರಿ ಮುದ್ರಣಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹರಿಕಟ್ಟಿ, ಪ್ರಥಮ ದರ್ಜೆ ಸಹಾಯಕರು,

ಇವರನ್ನು ಹುದ್ದೆ ಸಮೇತ ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ, ಇಲ್ಲಿಗೆ ಸ್ಥಳಾಂತರಿಸುವಂತೆ ಕೋರಿರುತ್ತಾರೆ. ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ ಈ ಮುದ್ರಣಾಲಯವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿನ ಸಿಬ್ಬಂದಿ ಕೊರತೆಯನ್ನು ನೀಗಿಸಲು ಸಹಾಯಕ ನಿರ್ದೇಶಕರು, ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ ಇವರ ಕೋರಿಕೆಯನ್ನು ಪರಿಗಣಿಸಿ, ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಗಳೂರು, ಇಲ್ಲಿದ್ದ 51 ಮಂಜೂರಾದ ಹುದ್ದೆಗಳಲ್ಲಿ 50 ಹುದ್ದೆಗಳನ್ನು ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸಿ, ಮತ್ತು ಒಂದು ಹುದ್ದೆಯನ್ನು ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ, ಇಲ್ಲಿಗೆ ಸ್ಥಳಾಂತರಿಸಿ, ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವ 15 ಜನ ಸಿಬ್ಬಂದಿಯನ್ನು ಇಬ್ಬರು ನೌಕರರನ್ನು ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗಕ್ಕೆ, 13 ಜನರನ್ನು ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು, ಇಲ್ಲಿಗೆ ವರ್ಗಾಯಿಸಿ, ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಗಳೂರು ಇದನ್ನು ತಾತ್ಕಾಲಿಕವಾಗಿ ಮುಚ್ಚಲು ಸರ್ಕಾರದ ಸೂಕ್ತ ಆದೇಶ ಹೊರಡಿಸುವಂತೆ ಸಹ ಕೋರಿರುತ್ತಾರೆ. ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 621 ಎಲ್‌ಬಿಪಿ 2008, ದಿನಾಂಕ: 8ನೇ ಜೂನ್ 2009

6. ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಗಳೂರು, ಈ ಮುದ್ರಣಾಲಯವನ್ನು ಇನ್ನೂ ಮುಂದುವರೆಸುವುದು ಸೂಕ್ತವಲ್ಲವೆಂದು ಸರ್ಕಾರವು ತೀರ್ಮಾನಿಸಿ, ಈ ಆದೇಶಕ್ಕೆ ಲಗತ್ತಿಸಲಾಗಿರುವ ಅನುಬಂಧದಂತೆ ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಗಳೂರು ಇದನ್ನು ಹುದ್ದೆಗಳ ಸಮೇತ ಸರ್ಕಾರಿ ಕೇಂದ್ರ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು, ಇಲ್ಲಿಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆದೇಶಿಸಲಾಗಿದೆ.

(ಅ) ಸ್ಥಳಾಂತರಕ್ಕೆ ಸಂಬಂಧಿಸಿದ ವೆಚ್ಚವನ್ನು ಇಲಾಖೆಗೆ 2009-10ನೇ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿಯೇ ಭರಿಸತಕ್ಕದ್ದು, ಯಾವುದೇ ಕಾರಣಕ್ಕೂ ಸರ್ಕಾರದಿಂದ ಹೆಚ್ಚುವರಿ ಅನುದಾನ ಕೋರುವಂತಿಲ್ಲ.

(ಆ) ಸ್ಥಳಾಂತರದ ಸಮಯದಲ್ಲಿ ಸರ್ಕಾರಿ ಆಸ್ತಿ ಹಾಗೂ ದಾಖಲೆಗಳಿಗೆ ಯಾವುದೇ ಹಾನಿಯಾಗದಂತೆ ಸೂಕ್ತ ಕ್ರಮ ಕೈಗೊಳ್ಳುವುದು.

(ಇ) ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

7. ಮುಂದುವರೆದಂತೆ ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಗಳೂರು, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹರೀಶ್, ಅಗ್ರಕಾರ್ಮಿಕರು ಇವರನ್ನು ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ, ಇಲ್ಲಿ ಖಾಲಿ ಇರುವ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ ಹಾಗೂ ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಗಳೂರು, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹರಿಕಟ್ಟಿ, ಪ್ರಥಮ ದರ್ಜೆ ಸಹಾಯಕರು, ಇವರನ್ನು ಹುದ್ದೆ ಸಮೇತ ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ, ಇಲ್ಲಿಗೆ ಸ್ಥಳಾಂತರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎನ್. ಸೋಮಶೇಖರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ

ಅನುಬಂಧ

(ಸರ್ಕಾರದ ಆದೇಶ ಸಂಖ್ಯೆ: ಇಡಿ 621 ಎಲ್‌ಬಿಪಿ 2008, ದಿನಾಂಕ: 08-06-2009)

ಕ್ರ. ಸಂ.	ಹುದ್ದೆಯ ವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಹಾಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ಹೆಸರು ಶ್ರೀ / ಶ್ರೀಮತಿ	ಸ್ಥಳಾಂತರಿಸಲಾಗುತ್ತಿರುವ ಕಛೇರಿ
1)	ಸಹಾಯಕ ನಿರ್ದೇಶಕರು (ತಾಂತ್ರಿಕ)	1	ಹೆಚ್.ಆರ್. ಪ್ರಕಾಶ್‌ನಾಯ್ಕ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
2)	ಅಧೀಕ್ಷಕರು (ಲಿಪಿಕ)	1	ವಿ. ಶ್ರೀನಿವಾಸ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
3)	ಪ್ರಥಮ ದರ್ಜೆ ಸಹಾಯಕರು (ಲಿಪಿಕ)	1	ಹರಿಕಟ್ಟಿ	ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ

ಕ್ರ. ಸಂ.	ಹುದ್ದೆಯ ವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಹಾಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ಹೆಸರು ಶ್ರೀ / ಶ್ರೀಮತಿ	ಸ್ಥಳಾಂತರಿಸಲಾಗುತ್ತಿರುವ ಕಛೇರಿ
4)	ದ್ವಿತೀಯ ದರ್ಜೆ ಸಹಾಯಕರು (ಲಿಪಿಕ)	2	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
5)	ಪ್ಯಾಕರ್ (ಲಿಪಿಕ)	2	1) ಹೆಚ್.ಟಿ. ಗೋವಿಂದಯ್ಯ 2) ಜಿ.ಆರ್. ಜಯವರ್ಧನ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
6)	ಮೇಲ್ವಿಚಾರಕರು	1	ಎನ್. ದಾಮೋದರ ಬಾಬು	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
7)	ಅಗ್ರಕಾರ್ಮಿಕರು	1	ಎಸ್. ಹರೀಶ್	ಸರ್ಕಾರಿ ಜಿಲ್ಲಾ ಮುದ್ರಣಾಲಯ, ಶಿವಮೊಗ್ಗ
8)	ಪ್ರಥಮ ದರ್ಜೆ ಸಹಾಯಕರು (ಕೈಗಾರಿಕೆ)	1	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
9)	ಹಿರಿಯ ಕರಡು ಪರೀಕ್ಷಕರು	2	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
10)	ದ್ವಿತೀಯ ದರ್ಜೆ ಸಹಾಯಕರು (ಕೈಗಾರಿಕೆ)	3	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
11)	ಹಿರಿಯ ಆಫ್‌ಸೆಟ್ ಮುದ್ರಕರು	2	1) ಆರ್.ಕೆ. ದಶರಥ ಬಾಬು 2) -----	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
12)	ಆಫ್‌ಸೆಟ್ ಮುದ್ರಕರು	2	1) ಡಿ.ಹೆಚ್. ಪ್ರಭುಲಿಂಗ ಮಧುರೆ 2) ---	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
13)	ಸಹಾಯಕ ಆಫ್‌ಸೆಟ್ ಮುದ್ರಕರು	10	1) ಆರ್.ಮಂಜುನಾಥ 9 ಹುದ್ದೆಗಳು ಖಾಲಿ ಇದೆ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
14)	ಹಿರಿಯ ಅಕ್ಷರ ಸಂಯೋಜಕರು	2	1) ಕೆ.ಆರ್. ಶಿವಾನಂದ 2) ---	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
15)	ಹಿರಿಯ ಬೈಂಡರ್	1	ಯು. ಸುಬ್ರಾಯ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
16)	ಹಿರಿಯ ಯಂತ್ರಚಾಲಕ	1	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
17)	ಸಹಾಯಕ ಡಿಟಿಪಿ ಆಪರೇಟರ್	2	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
18)	ಸಹಾಯಕ ಬೈಂಡರ್	9	1) ಆರ್.ವೆಂಕಟೇಶ್ 8 ಹುದ್ದೆಗಳು ಖಾಲಿ ಇದೆ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
19)	ಪ್ಯಾಕರ್ (ಕೈಗಾರಿಕೆ)	2	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
20)	ಯಂತ್ರಚಾಲಕ	2	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
21)	ಸ್ವೀಪರ್	1	ಇಲ್ಲ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
22)	ಕಂಪೋಸಿಟರ್	2	1) ಟಿ. ಸುರೇಶ್ 2) ಎಂ. ಕರಿಯಪ್ಪ	ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

ಎಂ.ಎನ್. ಸೋಮಶೇಖರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ

.ರ್. 1487

ತಿದ್ದುಪಡಿ ಆದೇಶ

ಸಂಖ್ಯೆ: ಇಡಿ 193 ಯೋಯೋಕ 2008, ಬೆಂಗಳೂರು, ದಿನಾಂಕ: 18ನೇ ಜೂನ್ 2009

ವಿಷಯ: ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ಕಾಲೇಜು ಶಿಕ್ಷಣ ಇಲಾಖೆಯಡಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಹೊರಡಿಸಿದ ಆದೇಶಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ ಇಡಿ 144 ಯೋಯೋಕ 2007, ದಿನಾಂಕ: 27.04.2007 [ಇಡಿ 66 ಸ್ವೀಮರ (ಯುನಿಕ್) 2007, ದಿನಾಂಕ: 27.04.2007].

ಸರ್ಕಾರದ ಆದೇಶದ ಸಂಖ್ಯೆ: ಇಡಿ 144 ಯೋಯೋಕ 2007, ದಿನಾಂಕ: 27.04.2007ರ ಪುಟ: 09ರ ಕ್ರಮ ಸಂಖ್ಯೆ: 50ಕ್ಕೆ 2009–10ರ ಸಾಲಿನಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

ಜಿಲ್ಲೆ	ಕ್ರಮ ಸಂಖ್ಯೆ	ಗ್ರಾಮದ ಹೆಸರು	ತಾಲ್ಲೂಕಿನ ಹೆಸರು
ಹಾವೇರಿ	50	ಬ್ಯಾಡಗಿ	ಬ್ಯಾಡಗಿ

ಎಂಬುದಕ್ಕೆ ಬದಲಾಗಿ

ಜಿಲ್ಲೆ	ಗ್ರಾಮದ ಹೆಸರು	ತಾಲ್ಲೂಕಿನ ಹೆಸರು
ಹಾವೇರಿ	ಚಿಕ್ಕಬಾಸೂರು	ಬ್ಯಾಡಗಿ

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1490

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ವಿಷಯ: ಎ.ಇಡಿ ಮತ್ತು ಎ.ಟಿಸಿ ಪರೀಕ್ಷೆಗಳನ್ನು ಕನ್ನಡ ವಿಶ್ವವಿದ್ಯಾನಿಲಯ, ಹಂಪಿರವರ ಮೂಲಕ ನಡೆಸುವ ಬಗ್ಗೆ ಸರ್ಕಾರದ ಆದೇಶ.

ಓದಲಾಗಿದೆ: ಚೇತನ ಲಲಿತಕಲಾ ಮಹಾವಿದ್ಯಾಲಯ, ಗಿರಿನಗರ, ಬೆಂಗಳೂರು ಇಲ್ಲಿನ ಎಲ್ಲಾ ವಿದ್ಯಾರ್ಥಿಗಳು ದಿನಾಂಕ:30.05.2009ರ ಮನವಿ.

ಪ್ರಸ್ತಾವನೆ:

ಚೇತನ ಲಲಿತಕಲಾ ಮಹಾವಿದ್ಯಾಲಯ, ಗಿರಿನಗರ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಓದಲಾದ ದಿನಾಂಕ:30.05.2009ರ ಮನವಿ ಪತ್ರದಲ್ಲಿ 2008–09ನೇ ಸಾಲಿಗೆ ಒಟ್ಟು 60 ವಿದ್ಯಾರ್ಥಿಗಳು (ಇ.ಎಡಿ 50 + ಎ.ಟಿಸಿ 10) ಪ್ರವೇಶ ಪಡೆದಿದ್ದು, ದಿನಾಂಕ:22.12.2008 ರಂದು ಹೊರಡಿಸಿದ ನಿಯಮದಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯಿಂದ ಪರೀಕ್ಷೆಗಳಿಗೆ ಅವಕಾಶ ನೀಡಿರುವುದಾಗಿ ತಿಳಿದು ಬಂದಿದ್ದು, ಇಡೀ ಕರ್ನಾಟಕದಲ್ಲಿ ಎ.ಇಡಿ ಮತ್ತು ಎ.ಟಿಸಿ ಪರೀಕ್ಷೆಗಳು ಕನ್ನಡ ವಿಶ್ವವಿದ್ಯಾಲಯದ ಮೂಲಕವೇ ನಡೆಸುತ್ತಿದ್ದು, ಸದರಿ ವಿದ್ಯಾಲಯ ಮಾತ್ರ ಅದರ ವ್ಯಾಪ್ತಿಯಿಂದ ಹೊರಗುಳಿದಿರುವುದರಿಂದ 2009–10ನೇ ಶೈಕ್ಷಣಿಕ ಸಾಲಿನಿಂದ ಕನ್ನಡ ವಿಶ್ವವಿದ್ಯಾಲಯದ ಮೂಲಕವೇ ಎ.ಇಡಿ ಮತ್ತು ಎ.ಟಿಸಿ ಪರೀಕ್ಷೆಗಳನ್ನು ನಡೆಸುವಂತೆ ಸರ್ಕಾರದಲ್ಲಿ ಮನವಿ ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ 123 ಯೋಯೋಕ 2009, ಬೆಂಗಳೂರು, ದಿನಾಂಕ: 18ನೇ ಜೂನ್ 2009

ಬೆಂಗಳೂರಿನ ಗಿರಿನಗರದಲ್ಲಿರುವ ಚೇತನ ಕಲಾ ಮಹಾವಿದ್ಯಾಲಯವು 2009–10ನೇ ಶೈಕ್ಷಣಿಕ ಸಾಲಿನಿಂದ ಎ.ಇಡಿ ಮತ್ತು ಎ.ಟಿಸಿ ಪರೀಕ್ಷೆಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೂಲಕ ನಡೆಸಲು ಸರ್ಕಾರದ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1491

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ವಿಷಯ: ಹಾಸನದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾನಗರದ ಕಟ್ಟಡ ಬಾಡಿಗೆ ನೀಡುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ: ಪಪೂಶಿಇ/ಕಟ್ಟಡ/ಬಾಡಿಗೆ–01/07–08/ದಿನಾಂಕ:26.05.2009.

ಪ್ರಸ್ತಾವನೆ:

1. ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರುರವರು ಹಾಸನ ಜಿಲ್ಲೆ, ಹಾಸನದಲ್ಲಿ 2007–08ನೇ ಸಾಲಿಗೆ ಹೊಸದಾಗಿ ಮಂಜೂರಾಗಿ ಪ್ರಾರಂಭವಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು, ವಿದ್ಯಾನಗರ, ಬಾಲಕಿಯರ ಸ.ಪ.ಪೂ.ಕಾಲೇಜು, [ವಿಭಜಿತ] ಹಾಸನ ಇದಕ್ಕೆ ಸ್ವಂತ ಕಟ್ಟಡ ಇಲ್ಲದೇ

ಇರುವುದರಿಂದ ಖಾಸಗಿ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ಪಡೆದಿದ್ದು, ಅದಕ್ಕೆ ಬಾಡಿಗೆ ನೀಡಲು ಸರ್ಕಾರವು ತನ್ನ ಆದೇಶ ಸಂಖ್ಯೆ ಇಡಿ 261 ಯೋಸಕ 2008, ದಿನಾಂಕ:06.03.2009ರಂದು ಆದೇಶ ನೀಡಲಾಗಿತ್ತು. ಆದರೆ ಬಿಡುಗಡೆ ಮಾಡಲಾದ ಲೆಕ್ಕ ಶೀರ್ಷಿಕೆಯಲ್ಲಿ ಅನುದಾನ ಲಭ್ಯವಿಲ್ಲದ ಕಾರಣ ಬಾಡಿಗೆ ಹಣವನ್ನು ಬಿಡುಗಡೆ ಮಾಡಲಾಗಲಿಲ್ಲವೆಂದು ತಿಳಿಸಿ ಈಗ 2009–10ನೇ ಸಾಲಿನ ಅನುದಾನದಲ್ಲಿ ಪಾವತಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಅಲ್ಲದೇ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಸನ ಈ ಕಾಲೇಜಿಗೆ ದಿನಾಂಕ: 23.07.07 ರಿಂದ 31.03.2009ರವರೆಗೆ ಉಳಿಕೆ ಬಾಡಿಗೆ ಬಾಕಿ ಒಟ್ಟು 6.09ಲಕ್ಷರೂಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ: 261: ಯೋಸಕ 2008 ಬೆಂಗಳೂರು, ದಿನಾಂಕ: 17ನೇ ಜೂನ್ 2009

[ನಿಡಿ: 80 : ಸ್ವೀಮರ(ಯುನಿಕ್) 2009, ದಿನಾಂಕ: 17–06–2009]

3. 2007–08ನೇ ಸಾಲಿಗೆ ಹಾಸನ ಜಿಲ್ಲೆ ಹಾಸನದ ವಿದ್ಯಾನಗರದಲ್ಲಿ ಹೊಸದಾಗಿ ಪ್ರಾರಂಬಿಸಲಾದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ತರಗತಿಗಳನ್ನು ನಡೆಸಲು ಬಾಡಿಗೆ ಪಡೆದಿರುವ ಖಾಸಗಿ ಕಟ್ಟಡವಾದ ಮಂಗಳಾ ದೇವಿ ಭವನ, ಸಾಲಗಾಮೆ ರಸ್ತೆ, ಹಾಸನದ ಕಟ್ಟಡ ಬಾಡಿಗೆ ಬಾಕಿಯನ್ನು ದಿನಾಂಕ:23.07.07 ರಿಂದ 31.03.2009 ರ ತನಕ ಮಾಹೆಯಾನ 30000.,00 ರೂಗಳಂತೆ [ಮೂವತ್ತು ಸಾವಿರ ರೂಪಾಯಿಗಳು ಮಾತ್ರ] ಒಟ್ಟು 6,09,000ರೂಗಳನ್ನು [ಆರು ಲಕ್ಷ ಒಂಭತ್ತು ಸಾವಿರ ರೂಪಾಯಿಗಳು ಮಾತ್ರ] ಭರಿಸಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸರ್ಕಾರವು ಅನುಮತಿ ನೀಡಿದೆ.

4. ಸದರಿ ಮೊತ್ತವನ್ನು 2009–10ನೇ ಸಾಲಿಗೆ ಲೆಕ್ಕಶೀರ್ಷಿಕೆ 2202–02–109–0–13–071[ಯೋಜನೇತರದಡಿ] ಒದಗಿಸಲಾಗಿರುವ ಅನುದಾನದ ಮಿತಿಯೊಳಗೇ ಭರಿಸತಕ್ಕದ್ದು.

5. ಸದರಿ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಶಿ.ಇ: 1195: ಐ.ಎಫ್(ಬಿಎ) 2009/ದಿನಾಂಕ:01.06.2009 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ೆ. 1493

ವಿಷಯ: ಲೋಕಶಿಕ್ಷಣ ನಿರ್ದೇಶನಾಲಯ ಮತ್ತು ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಇ–ಆಡಳಿತ ವಿಭಾಗ ಮತ್ತು ಕಚೇರಿಯ ಉಪಯೋಗಕ್ಕಾಗಿ ಗಣಕ ಮತ್ತಿತರ ಯಂತ್ರಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1) ನಿರ್ದೇಶಕರು, ಲೋಕಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂ: ಸಿ 11:ಕೆಎಸ್ಎಲ್ ಎಂಎಸಿಆರ್: 45:2008–09/ದಿನಾಂಕ:25.4.2009.

2) ಕಾರ್ಯದರ್ಶಿಗಳು (ಇ–ಆಡಳಿತ), ಡಿಪಿಎಆರ್ (ಎಆರ್) ರವರ ಸುತ್ತೋಲೆ ಸಂಖ್ಯೆ:ಡಿಪಿಎಆರ್ 39 ಇಜಿವಿ 2004, ದಿನಾಂಕ:13.6.2005.

ಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ, ಬೆಂಗಳೂರುರವರು, ಲೋಕ ಶಿಕ್ಷಣ ್ದೇಶನಾಲಯ ಮತ್ತು ರಾಜ್ಯ ಸಾಕ್ಷರತಾ ಮಿಷನ್, ಪ್ರಾಧಿಕಾರದ ಇ–ಆಡಳಿತ ವಿಭಾಗ ಮತ್ತು ಕಚೇರಿಯ ಉಪಯೋಗಕ್ಕಾಗಿ ಗಣಕ ಯಂತ್ರಗಳು, 2 ಲ್ಯಾಪ್ ಟಾಪ್‌ಗಳು, 3 ಲೇಸರ್ ಪ್ರಿಂಟರ್ಸ್‌ಗಳು ಹಾಗೂ ಒಂದು ಝುರಾಕ್ಸ್ ಯಂತ್ರಗಳು ವಾಗಿ ಬೇಕಾಗಿರುವುದರಿಂದ ಇವುಗಳನ್ನು ಡಿ.ಜಿ.ಎಸ್ ಮತ್ತು ಡಿ ದರಗಳನ್ನು ಹೊಂದಿರುವ ಸಂಸ್ಥೆಗಳಿಂದ ಒಟ್ಟಾರೆ 057/– ಲಕ್ಷ ರೂ.ಗಳಲ್ಲಿ ಖರೀದಿಸಲು ಸರ್ಕಾರದ ಅನುಮತಿಯನ್ನು ಕೋರಿರುತ್ತಾರೆ. ಇದಕ್ಕೆ ತಗಲುವ ವೆಚ್ಚವನ್ನು ರಾಜ್ಯ ತಾ ಮಿಷನ್ ಪ್ರಾಧಿಕಾರದಲ್ಲಿರುವ ಶೇ.2 ರ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸುವುದಾಗಿ ತಿಳಿಸಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಸುತ್ತೋಲೆಯಲ್ಲಿ ಇ–ಆಡಳಿತಕ್ಕೆ ಬೇಕಾಗುವ ಗಣಕ ಯಂತ್ರ ಮುಂತಾದ ತ್ರಗಳನ್ನು ಖರೀದಿಸುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ: 91 ಯೋಯೋಕ 2009, ಬೆಂಗಳೂರು, ದಿನಾಂಕ: 30ನೇ ಜೂನ್ 2009

[ಇಡಿ: 84 ಸ್ವೀಮರ(ಯುನಿಕ್) 2009, ದಿನಾಂಕ: 30.06.2009]

2009–10ನೇ ಸಾಲಿಗೆ ಲೋಕ ಶಿಕ್ಷಣ ನಿರ್ದೇಶನಾಲಯ ಮತ್ತು ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಇ–ಆಡಳಿತ ವಿಭಾಗ ಮತ್ತು ಕಚೇರಿಯ ಉಪಯೋಗಕ್ಕಾಗಿ 03 ಗಣಕ ಯಂತ್ರಗಳು, 02 ಲ್ಯಾಪ್‌ಟಾಪ್‌ಗಳು, 03 ಲೇಸರ್ ಪ್ರಿಂಟರ್ಸ್‌ಗಳು ಹಾಗೂ ಒಂದು ಝುರಾಕ್ಸ್ ಯಂತ್ರವನ್ನು 4.20557 ಲಕ್ಷ ರೂಪಾಯಿಗಳ (ನಾಲ್ಕು ಲಕ್ಷ ಇಪ್ಪತ್ತು ಸಾವಿರದ ಐದುನೂರಾ ಐವತ್ತೇಳು ರೂಪಾಯಿಗಳು ಮಾತ್ರ) ಮಿತಿಯೊಳಗೆ ಡಿ.ಜಿ.ಎಸ್ ಮತ್ತು ಡಿ ದರಗಳನ್ನು ಹೊಂದಿರುವ ಸಂಸ್ಥೆಗಳಿಂದ ಅಥವಾ ಕರ್ನಾಟಕ ಪಾರದರ್ಶಕ ಕಾಯ್ದೆಯಡಿಯ ನಿಯಮಗಳನ್ನು ಪಾಲಿಸಿ ಖರೀದಿಸಲು ಈ ಕೆಳಕಂಡ ಷರತ್ತನ್ನು ವಿಧಿಸಿ ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರುರವರಿಗೆ ಅನುಮತಿ ನೀಡಿದೆ.

ಷರತ್ತುಗಳು:–

ಅ. ಸದರಿ ಪ್ರಸ್ತಾವನೆಯು ಇಲಾಖೆಯ ಅಂಗೀಕೃತ ಇ–ಆಡಳಿತ ಕಾರ್ಯಯೋಜನೆಯಲ್ಲಿ ಅನುಮೋದಿತವಾಗಿರಬೇಕು.

ಆ. ಕಾನ್‌ಫಿಗರೇಷನ್ ಬಗ್ಗೆ ಇ–ಆಡಳಿತ ಇಲಾಖೆಯು ಅಂಗೀಕರಿಸುವ ಕಾನ್‌ಫಿಗರೇಷನ್‌ನ್ನು ಪಡೆದು ಕ್ರಮ ವಹಿಸಬೇಕು.

ಮೇಲ್ಕಂಡ ಮೊತ್ತವನ್ನು ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದಲ್ಲಿರುವ ಶೇ.2 ರ ಆಡಳಿತಾತ್ಮಕ ವೆಚ್ಚದಲ್ಲಿ ನಿಯಮಾನುಸಾರ ಬಳಸಲು ಸೂಚಿಸಿದೆ.

ಸದರಿ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಶಿ.ಇ:1152ಐಎಫ್(ಬಿಎ) 2009/ದಿನಾಂಕ:27.5.2009 ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ಪಿ.ಆರ್. 1494

ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ವಿಷಯ: 2009–10ನೇ ಸಾಲಿಗೆ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ಬಗ್ಗೆ.

ಓದಲಾಗಿದೆ: 1) ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ 07 ಬಿ.ಪಿ.ಇ 2009, ದಿನಾಂಕ: 30.04.2009.

2) ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಅ.ಟಿ.ಸಂಖ್ಯೆ ಶಿಇ 1102 ಐಎಫ್ (ಬಿ & ಎ 2009, ದಿನಾಂಕ:30.05.2009.

3) ನಿರ್ದೇಶಕರು, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆರವರ ಪತ್ರ ಸಂಖ ಒಬ4/ವೈ.ವೆ.ಮ.ಪಾ/2009–10/ದಿನಾಂಕ: 20.05.2009.

4) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ ಆಯವ್ಯಯ 1 ವೈ ವ ಪಾ ವೆಚ್ಚ ಆ ಬಿಡುಗಡೆ 10/ 2009–10, ದಿನಾಂಕ: 24.06.2009.

5) ನಿರ್ದೇಶಕರು, ಲೋಕ ಶಿಕ್ಷಣ ಇಲಾಖೆ ರವರ ಪತ್ರ ಸಂಖ್ಯೆ ಎ4:ಡಿಎಂಇ:ವೈ.ವೆ.ಮ.ಪಾ–10 09–10/ದಿನಾಂಕ:02.06.2009.

ಪ್ರಸ್ತಾವನೆ:

(1) ಮೇಲೆ (1) ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿ 2009–10ನೇ ಸಾಲಿಗೆ ರಾಜ್ಯ ವಲಯದಡಿ ಲೆಕ್ಕಶೀರ್ಷಿಕೆ:–2202–80–800–0–38–021ರಲ್ಲಿ ಯೋಜನೆಯಡಿ 9.00ಲಕ್ಷ ರೂಪಾಯಿಗಳು ಹಾಗೂ ಯೋಜನೇತರದಡಿ 26.00 ಲಕ್ಷರೂಗಳನ್ನು ಒದಗಿಸಿರುತ್ತಾರೆ.

(2) ಮೇಲೆ (1) ರಲ್ಲಿ ಓದಲಾದ ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಪತ್ರದಲ್ಲಿ 2009–10ನೇ ಸಾಲಿಗೆ ರಾಜ್ಯ ವಲಯದಡಿ ಲೆಕ್ಕಶೀರ್ಷಿಕೆ:–2202–80–800–0–38–021ರಲ್ಲಿ ಯೋಜನೆಯಡಿ 9.00 ಲ ರೂಪಾಯಿಗಳು ಹಾಗೂ ಯೋಜನೇತರದಡಿ 26.00 ಲಕ್ಷ ರೂ.ಗಳನ್ನು ಆರ್ಥಿಕ ಇಲಾಖೆಯು ಒದಗಿಸಿದ್ದು ಅದನ್ನು ಎಲ್ಲ ಇಲಾಖಾ ಮುಖ್ಯಸ್ಥರುಗಳಿಂದ ಬೇಡಿಕೆ ಪಡೆದು ನಿಗದಿಪಡಿಸಿರುವ ಅನುದಾನವನ್ನು ಮರುಹಂಚಿ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

(3) ಮೇಲೆ (3) ರ ಪತ್ರದಲ್ಲಿ ನಿರ್ದೇಶಕರು, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾ ಬೆಂಗಳೂರುರವರು ಅವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ

ವೆಚ್ಚದ ಹಣವನ್ನು ಮರುಪಾವತಿಗಾಗಿ, 2009-10ನೇ ಸಾಲಿಗೆ ರಾಜ್ಯ ವಲಯದಡಿ ಲೆಕ್ಕಶೀರ್ಷಿಕೆ:-2202-80-800-0-38-021ರಲ್ಲಿ ಯೋಜನೆಯಡಿ 9.00 ಲಕ್ಷರೂಪಾಯಿಗಳು ಹಾಗೂ ಯೋಜನೇತರದಡಿ 26.00 ಲಕ್ಷರೂಗಳನ್ನು ಒದಗಿಸಿದ್ದು, ಅದರಲ್ಲಿ 6.00 ಲಕ್ಷರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಎಲ್ಲಾ ಹುದ್ದೆಗಳು ಯೋಜನೇತರದಡಿ ಇರುತ್ತದೆ ಎಂದು ತಿಳಿಸಿರುತ್ತಾರೆ.

(4) ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು, ಅವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು/ ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ವೆಚ್ಚದ ಹಣವನ್ನು ಮರುಪಾವತಿಗಾಗಿ, 2009-10ನೇ ಸಾಲಿಗೆ ರಾಜ್ಯ ವಲಯದಡಿ ಲೆಕ್ಕಶೀರ್ಷಿಕೆ:-2202-80-800-0-38-021ರಲ್ಲಿ ಯೋಜನೆಯಡಿ 9.00 ಲಕ್ಷರೂಪಾಯಿಗಳು ಹಾಗೂ ಯೋಜನೇತರದಡಿ 26.00 ಲಕ್ಷರೂಗಳನ್ನು ಒದಗಿಸಿದ್ದು, ಅದರಲ್ಲಿ 34.00 ಲಕ್ಷರೂಪಾಯಿಗಳನ್ನು ಈ ಕೆಳಕಂಡ ಇಲಾಖೆಗಳಿಗೆ ಹಂಚಿಕೆ ಮಾಡಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಎಲ್ಲಾ ಹುದ್ದೆಗಳು ಯೋಜನೇತರದಲ್ಲಿದೆ ಎಂದು ವರದಿ ಮಾಡಿರುತ್ತಾರೆ.

ಕ್ರ. ಸಂ.	ಇಲಾಖೆಯ ಹೆಸರು	ಕೋರಿರುವ ಅನುದಾನ [ಲಕ್ಷ ರೂಗಳಲ್ಲಿ]
1	ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು	20.00
2	ನಿರ್ದೇಶಕರು, ಸಂಶೋಧನೆ ಮತ್ತು ತರಬೇತಿ ಇಲಾಖೆ	6.00
3	ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳ ನಿರ್ದೇಶನಾಲಯ	2.00
4	ಶಾಲೆಗಳ ಮುಖ್ಯ ವೈದ್ಯಕೀಯ ಪರಿವೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು	1.00
5	ಪ್ರಾಂಶುಪಾಲರು, ಸರ್ಕಾರಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ	5.00
	ಒಟ್ಟು	**34.00**

(5) ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಲೋಕ ಶಿಕ್ಷಣ ಇಲಾಖೆ ಬೆಂಗಳೂರು ರವರು, ಅವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ವೆಚ್ಚದ ಹಣವನ್ನು ಮರುಪಾವತಿಗಾಗಿ, 2009-10ನೇ ಸಾಲಿಗೆ ರಾಜ್ಯ ವಲಯದಡಿ ಲೆಕ್ಕಶೀರ್ಷಿಕೆ:-2202-80-800-0-38-021ರಲ್ಲಿ ಯೋಜನೆಯಡಿ 9.00 ಲಕ್ಷರೂಪಾಯಿಗಳು ಹಾಗೂ ಯೋಜನೇತರದಡಿ 26.00 ಲಕ್ಷರೂಗಳನ್ನು ಒದಗಿಸಿದ್ದು, ಅದರಲ್ಲಿ 1.50 ಲಕ್ಷರೂಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

(6) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ: 117 : ಯೋಸಕ 2009, ಬೆಂಗಳೂರು, ದಿನಾಂಕ: 30ನೇ ಜೂನ್ 2009

[ಇಡಿ: 85 : ಸ್ವೀಮರ(ಯುನಿಕ್) 2009, ದಿನಾಂಕ: 30-06-2009]

(7) 2009-10ನೇ ಸಾಲಿಗೆ ರಾಜ್ಯ ವಲಯದಡಿ ಲೆಕ್ಕಶೀರ್ಷಿಕೆ:-2202-80-800-0-38-021ರ ಯೋಜನೇತರ ದಡಿ ಒದಗಿಸಲಾದ 26.00 ಲಕ್ಷರೂಗಳಲ್ಲಿ 5.00 ಲಕ್ಷರೂಪಾಯಿಗಳನ್ನು [ಐದು ಲಕ್ಷ ರೂಪಾಯಿಗಳು ಮಾತ್ರ] ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆಯಲ್ಲಿ ಯೋಜನೇತರದಡಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು/ ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ವೆಚ್ಚದ ಹಣ ಮರುಪಾವತಿ ಭರಿಸಲು ನಿರ್ದೇಶಕರು, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

(8) ರಾಜ್ಯ ವಲಯದಡಿ ಲೆಕ್ಕಶೀರ್ಷಿಕೆ:-2202-80-800-0-38-021ರ ಯೋಜನೇತರದಡಿ ಒದಗಿಸಲಾದ 26.00 ಲಕ್ಷರೂಗಳಲ್ಲಿ 1.50 ಲಕ್ಷರೂಪಾಯಿಗಳನ್ನು [ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ] ಲೋಕ ಶಿಕ್ಷಣ ಇಲಾಖೆಯಲ್ಲಿ ಯೋಜನೇತರದಡಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು/ ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ವೆಚ್ಚದ ಹಣ ಮರುಪಾವತಿ ಭರಿಸಲು ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

(9) ರಾಜ್ಯ ವಲಯದಡಿ ಲೆಕ್ಕೀರ್ಷಿಕೆ:2202-80-800-0-38-021ರ ಯೋಜನೇತರದಡಿ ಒದಗಿಸಲಾದ 26.00 ಲಕ್ಷರೂಗಳಲ್ಲಿ, 10.00 ಲಕ್ಷರೂಗಳು [ಹತ್ತು ಲಕ್ಷರೂಪಾಯಿಗಳು ಮಾತ್ರ] ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಾರ್ಯಾಲಯ ಬೆಂಗಳೂರು ಇದರಡಿ ಕೆಳಕಂಡ ಕಾರ್ಯಲಯಗಳಲ್ಲಿ ಯೋಜನೇತರದಡಿ ಸೇವೆ

ಸಲ್ಲಿಸುತ್ತಿರುವ ಅಧಿಕಾರಿಗಳು/ ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ವೆಚ್ಚದ ಹಣ ಮರುಪಾವತಿ ಭರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಸರ್ಕಾರವು ಅನುಮತಿ ನೀಡಿದೆ.

ಕ್ರ ಸಂ.	ಇಲಾಖೆಯ ಹೆಸರು	ಕೋರಿರುವ ಅನುದಾನ [ಲಕ್ಷ ರೂಗಳಲ್ಲಿ]
1	ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು	8.00
2	ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳ ನಿರ್ದೇಶನಾಲಯ	1.00
3	ಶಾಲೆಗಳ ಮುಖ್ಯ ವೈದ್ಯಕೀಯ ಪರಿವೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು	0.50
4	ಪ್ರಾಂಶುಪಾಲರು, ಸರ್ಕಾರಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ	0.50
	ಒಟ್ಟು	**10.00**

(10)ಸದರಿ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಶಿ.ಇ: 1102: ಐ.ಎಫ್(ಬಿಎ) 2009/ದಿನಾಂಕ: 30.05.2009 ರಲ್ಲಿನ ಸಹಮತಿಯನ್ವಯ ಹಾಗೂ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ:07:ಬಿಪಿಇ:2009, ದಿನಾಂಕ: 30.04.2009ರಲ್ಲಿಯ ಮಾರ್ಗಸೂಚಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ಪಿ.ಆರ್. 1495

ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಜಲಸಂಪನ್ಮೂಲ ಸಚಿವಾಲಯ

ವಿಷಯ: ಬಿಜಾಪುರ ಜಿಲ್ಲೆ, ಬ.ಬಾಗೇವಾಡಿ ತಾಲ್ಲೂಕು ಅಗಸಬಾಳ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಂಕನಾಳ ಗ್ರಾಮದ ಜಮೀನುಗಳಿಗೆ ಬಿಜಾಪುರ ಉಪ ವಿಭಾಗಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಐತೀರ್ಪಿನಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 20/04/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಭೂಸ್ವಾಪ್ರ/2008-09/ 2650.

ಪ್ರಸ್ತಾವನೆ:

ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ದಿನಾಂಕ 20/04/2009ರ ಪತ್ರದಲ್ಲಿ ಬಿಜಾಪುರ ಜಿಲ್ಲೆ, ಬ.ಬಾಗೇವಾಡಿ ತಾಲ್ಲೂಕು ಅಗಸಬಾಳ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಂಕನಾಳ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಪ್ರಕಾರ ಉಪ ವಿಭಾಗಾಧಿಕಾರಿಗಳು, ಬಿಜಾಪುರ ಇವರು ಹೊರಡಿಸಿರುವ ಐತೀರ್ಪಿನಂತೆ ಹೆಚ್ಚಿನ ಪರಿಹಾರ ಧನ ಪಾವತಿಸಲು ರೂ.18,49,681-00ಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಈ ಕೆರೆಯ ಮೂಲ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 29/02/68
- ಉಪ ವಿಭಾಗಾಧಿಕಾರಿಗಳ ಐತೀರ್ಪಿನ ದಿನಾಂಕ 31/03/70

ಭೂಸ್ವಾಧೀನಕ್ಕೊಳಪಟ್ಟ ಅಗಸಬಾಳ ಗ್ರಾಮದ ಸ.ನಂ. 59ರ 10 ಗುಂಟೆ ಜಮೀನಿನ ಭೂಮಾಲೀಕರು ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಎಲ್ಎಸಿ ಸಂಖ್ಯೆ:119/03ನ್ನು ಬ.ಬಾಗೇವಾಡಿಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿ ದಿನಾಂಕ 06/08/05ರ ತೀರ್ಪಿನಲ್ಲಿ ಹೆಚ್ಚಿನ ಪರಿಹಾರ ಧನಕ್ಕೆ ಆದೇಶ ಪಡೆದುಕೊಂಡಿದ್ದಾರೆ. ಈ ತೀರ್ಪನ್ನು ಉಲ್ಲೇಖಿಸಿ ಇದೇ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸೇರಿದ್ದ ಸಂಕನಾಳ ಗ್ರಾಮದ ಸ.ನಂ.ಗಳ ಒಟ್ಟು 45-38 ಎಕರೆ ಜಮೀನಿನ ಭೂಮಾಲೀಕರು ಸಲ್ಲಿಸಿದ ಅರ್ಜಿಯ ಮೇರೆಗೆ ಬಿಜಾಪುರದ ಉಪ ವಿಭಾಗಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಹೆಚ್ಚಿನ ಐತೀರ್ಪು ಹೊರಡಿಸಿರುತ್ತಾರೆ. ಐತೀರ್ಪಿನಂತೆ ಪಾವತಿಸಬೇಕಾದ ಪರಿಹಾರ ಧನದ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ ಸಂ	ಸಂಕನಾಳ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಭೂ.ಸ್ವಾ ಕಾಯ್ದೆ ಕಲಂ 28(ಎ)ರಡಿ ಐತೀರ್ಪಿನ ಸಂಖ್ಯೆ	ಪರಿಹಾರ ಮೊತ್ತ ರೂ.ಗಳಲ್ಲಿ
1	111	2–00	ಎಲ್‌ಎಸಿ/ಎಸ್‌ಆರ್ 611 28(ಎ) ಸಿಆರ್ ದಿ:09/01/09	81622
2	123	5–02	-do-	206998
3	127	6–36		282822
4	124	14–30		604414
5	126	6–10		243253
6	76	11–00		430572
	ಒಟ್ಟು			**1849681**

ವಿಷಯವನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 69 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 7ನೇ ಜುಲೈ 2009.

ಬಿಜಾಪುರ ಜಿಲ್ಲೆ, ಬ.ಬಾಗೇವಾಡಿ ತಾಲ್ಲೂಕು ಅಗಸಬಾಳ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಂಕನಾಳ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ) ಪ್ರಕಾರ ಉಪ ವಿಭಾಗಾಧಿಕಾರಿಗಳು, ಬಿಜಾಪುರ ಇವರು ಹೊರಡಿಸಿರುವ ಐತೀರ್ಪಿನಂತೆ ಪರಿಹಾರ ಧನದ ಮೊತ್ತ ರೂ.18,49,681–00 ಗಳನ್ನು (ಹದಿನೆಂಟು ಲಕ್ಷದ ನಲವತ್ತೊಂಭತ್ತು ಸಾವಿರದ ಆರುನೂರ ಎಂಭತ್ತೊಂದು ರೂ.ಗಳು ಮಾತ್ರ) ಪ್ರಸ್ತಾವನೆಯಲ್ಲಿ ತಿಳಿಸಿರುವ ಸ.ನಂ.ಗಳಿಗೆ ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ಕ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಆರ್. 1539 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು ಗೌಡಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿ ಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 24/02/09ರ ಪತ್ರ ಸಂಖ್ಯೆ:ಮುಸನೀ(ದ)/ಲೆಶಾ/ಲೆಸ–1/3/ ಭೂಸ್ವಾಧೀನ/08–09/458.

ಪ್ರಸ್ತಾವನೆ:

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು ಗೌಡಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಅಲ್ಕೆರೆ ಅಗ್ರಹಾರ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ.4,87,500–00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 20/03/1986
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 18/01/1989

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ನಂಜನಗೂಡಿನ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್‌ಎಸಿ ಪ್ರಕರಣ ಸಂ.	ಅಲ್ಕೆರೆ ಗ್ರಾಮದ ಸ.ಸಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	181/91	198	4–02	135027
2	171/91	192	5–20	189632
3	190/91	59/6ಎ	1–30	56733
4	183/91	202	4–24	106108
				487500

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 48 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 7ನೇ ಜುಲೈ 2009.

ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕು ಗೌಡಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಅಲ್ಕೆರೆ ಅಗ್ರಹಾರ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.4,87,500–00ಗಳನ್ನು (ನಾಲ್ಕು ಲಕ್ಷದ ಎಂಭತ್ತೇಳು ಸಾವಿರದ ಐನೂರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1540

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕಿನ ಚಿಕ್ಕಬೆಣಕಲ್‌ರಾಯ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಚಿಕ್ಕಬೆಣಕಲ್ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

6.	DSP, Bellary Rural Sub-Division	Senior writer of DSP	DSP, Bellary Rural
7.	Bellary Rural	Senior HC Writer of CPI	CPI, Bellary Rural
8.	Kurugodu	Senior HC Writer of CPI	CPI, Kurugodu
9.	Tekkalakota	Senior HC Writer of CPI	CPI, Tekkalakota
10.	Siruguppa	Senior HC Writer of CPI	CPI, Siruguppa
11.	Bellary Rural	Asst. Sub-Inspector of PS	Sub-Inspector of PS
12.	P.D.Halli	Asst. Sub-Inspector of PS	Sub-Inspector of PS
13.	Moka	Asst. Sub-Inspector of PS	Sub-Inspector of PS
14.	Kurugodu	Asst. Sub-Inspector of PS	Sub-Inspector of PS
15.	Kuduthini	Asst. Sub-Inspector of PS	Sub-Inspector of PS
16.	Tekkalakote	Asst. Sub-Inspector of PS	Sub-Inspector of PS
17	Siregere	Asst. Sub-Inspector of PS	Sub-Inspector of PS
18.	Siruguppa	Asst. Sub-Inspector of PS	Sub-Inspector of PS
19.	Hatcholli	Asst. Sub-Inspector of PS	Sub-Inspector of PS
	Hospet Sub - Division		
20.	DSP, Hospet Sub-Division	Senior writer of DSP	DSP, Hospet

Sl. No.	Unit	Public Information Officer	Appellate Authority
21.	T.D.Dam Circle	Senior writer of CPI	Circle Police Inspector
22.	Hospet Town PS	Sub-Inspector of PS	Police Inspector of PI
23.	Hospet Extn PS	Asst. Sub-Inspector of PS	Sub-Inspector of PS
24.	T.B.Dam PS	Asst. Sub-Inspector of PS	Sub-Inspector of PS
25.	Hospet Traffic PS	Sub-Inspector of PS	Police Inspector of PI
26.	Chitwadgi PS	Sub-Inspector of PS	Police Inspector of PI
27.	Hospet Rural PS	Sub-Inspector of PS	Police Inspector of PI
	Hampi Sub - Division		
28.	DSP, Hampi Sub-Division	Senior writer of DSP	DSP, Hampi
29.	Kampli Circle	Senior writer of CPI	Circle Police Inspector
30.	Hampi Tourism	Sub-Inspector of PS	Police Inspector of PI
31.	Hampi Traffic	Asst. Sub-Inspector of PS	Sub-Inspector of PS
32.	Kamalapur	Asst. Sub-Inspector of PS	Sub-Inspector of PS
33.	Kampli	Asst. Sub-Inspector of PS	Sub-Inspector of PS
	Kudligi Sub - Division		
34.	DSP, Kudligi Sub-Division	Senior writer of DSP	DSP, Kudligi
35.	Kudligi	Senior writer of CPI	Circle Police Inspector
36.	Kottur	Senior writer of CPI	Circle Police Inspector
37.	Sandur	Senior writer of CPI	Circle Police Inspector
38.	Kudligi	Asst. Sub-Inspector of PS	Sub-Inspector of PS
39.	Gudekota	Asst. Sub-Inspector of PS	Sub-Inspector of PS
40.	Kottur	Asst. Sub-Inspector of PS	Sub-Inspector of PS
41.	Hosahalli	Asst. Sub-Inspector of PS	Sub-Inspector of PS
42.	Sandur	Asst. Sub-Inspector of PS	Sub-Inspector of PS
43.	Toranagal	Asst. Sub-Inspector of PS	Sub-Inspector of PS
44.	M.M.Halli	Asst. Sub-Inspector of PS	Sub-Inspector of PS
45.	Gadiganur	Asst. Sub-Inspector of PS	Sub-Inspector of PS
	Hadagali Sub - Division		
46.	DSP, Hadagali Sub-Division	Senior writer of DSP	DSP, Hadagali
47.	Hadagali	Senior writer of CPI	Circle Police Inspector
48.	H.B.Halli	Senior writer of CPI	Circle Police Inspector
49.	Hadagali	Asst. Sub-Inspector of PS	Sub-Inspector of PS
50.	Hirehadagli	Asst. Sub-Inspector of PS	Sub-Inspector of PS
51.	Ittagi	Asst. Sub-Inspector of PS	Sub-Inspector of PS
52.	H.B.halli	Asst. Sub-Inspector of PS	Sub-Inspector of PS
53.	T.B.halli	Asst. Sub-Inspector of PS	Sub-Inspector of PS

(xvi) Such other information as may be prescribed:

The other information of the Police Department is as under:

Sanctioned Strength of Executive Staff

Sl. No.	Name of the Post	Civil	Women	Armed	Wireless	FPB	Total
1.	S.P.	01	--	--	--	--	01
2.	Addl. SP	01	--	--	--	--	01
3.	DySPs	07	--	01	--	--	08
4.	CPIs / PIs	23	--	--	01	01	25
5.	RPIs	--	--	02	--	--	02
6.	PSIs	62	--	--	04	--	66
7.	RSIs	--	--	07	--	--	07
8.	ASIs	87	03	--	08	--	98
9.	ARSIs	--	--	11	--	--	11
10.	CHCs	374	22	--	14	01	415
11.	AHCs	--	--	90	--	--	90
12.	CPCs	1123	97	--	11	--	1231
13.	APCs	--	--	333	--	--	333
	Total	**1,678**	**122**	**444**	**38**	**02**	**2,288**

STATEMENT SHOWING THE SANCTIONED STRENGTH OF MINISTERIAL STAFF

1. Asst. Administrative Officer - 01
2. Section Superintendent. - 03
3. First Division Assistant - 13
4. Second Division Assistant - 15
5. Stenographers - 02
6. Typists - 08
7. Dalayath - 04

Total- 46

STATEMENT SHOWING THE NUMBER OF SUB DIVISIONS/ CIRCLES/ POLICE STATIONS AND OUT-POSTS IN BELLARY DISTRICT

Sl. No.	Name of the Unit	No.of Divisions	No. of Sub Divisions	No. of Circles	No. of Police Stations	No. of Out Posts
1.	Bellary	01	06	11	36	06

PR-572 Superintendent of Police, Bellary.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಕೊಡಗು ಜಿಲ್ಲೆ, ಮಡಿಕೇರಿ ಇವರ ನ್ಯಾಯಾಲಯದಲ್ಲಿ

ಪ್ರಕರಣ ಸಂಖ್ಯೆ: ಇಎಕ್ಸ್‌ಇ:3:ಡಿಟಿಸಿಆರ್‌ಎಂ:175/2001-02

ಫಿರ್ಯಾದುದಾರರು:

ಆರಕ್ಷಕ ಉಪ ನಿರೀಕ್ಷಕರು, ಶ್ರೀಮಂಗಲ ಆರಕ್ಷಕ ಠಾಣೆ, ಮಡಿಕೇರಿ.

ವಿರುದ್ಧ

ಆಪಾದಿತರು:

1) ಮುಕ್ಕಾಟೀರ ಎಂ. ಬಿದ್ದಪ್ಪ ಬಿನ್ ಲೇಟ್ ಮಾದಪ್ಪ ಜೀಪು ಮಾಲೀಕ ಹಾಗೂ ಚಾಲಕ, ಹರಿಹರ ಗ್ರಾಮ, ವಿರಾಜಪೇಟೆ ತಾಲ್ಲೂಕು.

2) ಕುಪ್ಪಣಮಾದ ಪ್ರಕಾಶ್ ಬಿನ್ ಸೋಮಯ್ಯ, ಪರಕಟಗೇರಿ ಗ್ರಾಮ, ವಿರಾಜಪೇಟೆ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ಸಹಾಯಕ ಆರಕ್ಷಕ ಉಪ ನಿರೀಕ್ಷಕರು ಇವರು ಶ್ರೀಮಂಗಲ ಆರಕ್ಷಕ ಠಾಣೆ, ಶ್ರೀಮಂಗಲ ಇವರು ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂದಿ ಹಾಗೂ ಪಂಚಾಯತ್‌ದಾರರುಗಳೊಂದಿಗೆ ದಿನಾಂಕ:03.04.2001 ರಂದು 3.00 ಗಂಟೆ ಸಮಯಕ್ಕೆ ಮಡಿಕೇರಿ ತಾಲ್ಲೂಕು ಟೀ.ಶೆಟ್ಟಿಗೇರಿ ಗ್ರಾಮದ ಬಿರುನಾಣಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅಂದರೆ ಕೆ.ಕೆ.ಆರ್. ಸೇತುವೆ ಬಳಿ ರಸ್ತೆ ಗಾವಲು ನಡೆಸುತ್ತಿದ್ದಾಗ ಟಿ.ಶೆಟ್ಟಿಗೇರಿ ಕಡೆಯಿಂದ ಬಂದ ಜೀಪು ಸಂಖ್ಯೆ: ಕೆಎ-12-ಎಂ-8837 ನ್ನು ತಡೆದು ನಿಲ್ಲಿಸಿ ತಪಾಸಣೆ ಮಾಡಿದಾಗ ಜೀಪಿನ ಹಿಂಬದಿಯ ಒಳಬದಿಯಲ್ಲಿ ಒಂದು ಪ್ಲಾಸ್ಟಿಕ್ ಕ್ಯಾನ್ ಇದ್ದು, ಸದರಿ ಕ್ಯಾನಿನ ಮುಚ್ಚಳವನ್ನು ತೆಗೆದು ಪರಿಶೀಲಿಸಲಾಗಿ ಕ್ಯಾನಿನ ಒಳಗಡೆ ಸುಮಾರು 25 ಲೀಟರ್‌ನಷ್ಟು ಶೇಂದಿ ಇರುವುದು ಕಂಡುಬಂದು ಸದರಿ ಕ್ಯಾನಿನಲ್ಲಿ ಶೇಂದಿಯನ್ನು ಸಾಗಾಣಿಕೆ ಮಾಡಲು ಅಧಿಕೃತ ದಾಖಲೆ ಪತ್ರಗಳನ್ನು ಕೇಳಲಾಗಿ ಜೀಪಿನ ಚಾಲನೆ ಮಾಡುತ್ತಿದ್ದುದಲ್ಲದೇ ಇನ್ನೊಬ್ಬ ವ್ಯಕ್ತಿಯೂ ಸಹ ಜೀಪಿನಲ್ಲಿ ಇದ್ದು ಅವರನ್ನು ವಿಚಾರಿಸಲಾಗಿ ಜೀಪನ್ನು ಚಾಲನೆ ಮಾಡುತ್ತಿದ್ದವನ ಹೆಸರು ಮುಕ್ಕಟೀರ ಬಿದ್ದಪ್ಪ, ತಂದೆ ಲೇಟ್ ಮಾದಪ್ಪ, ಹರಿಹರ ಗ್ರಾಮ ಎಂದು ತಿಳಿಸಿದ್ದು, ಇತನು ವಾಹನದ ಮಾಲೀಕನು ಎಂದು ತಿಳಿಸಿರುತ್ತಾನೆ. ಇನ್ನೊಬ್ಬ ವ್ಯಕ್ತಿಯನ್ನು ವಿಚಾರಿಸಲಾಗಿ ಈತನ ಹೆಸರು ಕುಪ್ಪಣ ಮಾದ ಪ್ರಕಾಶ್ ತಂದೆ ಸೋಮಯ್ಯ ಪರಕಟಗೇರಿ ಗ್ರಾಮ ಎಂದು ತಿಳಿಸಿರುತ್ತಾನೆ. ಇವರು ದಾಖಲೆ ಪತ್ರಗಳನ್ನು ಹಾಜರುಪಡಿಸಲು ವಿಫಲರಾಗಿರುವ ಕಾರಣ ಸದರಿ 25 ಲೀ ನಷ್ಟು ಶೇಂದಿಯನ್ನು ಹಾಗೂ ವಾಹನವನ್ನು ವಶಪಡಿಸಿಕೊಂಡು ಆರೋಪಿಯಿಬ್ಬರನ್ನು ದಸ್ತಗಿರಿ ಮಾಡಿ ತಕ್ಷೀರು ಸಂಖ್ಯೆ:43/2001ರಂತೆ ಪ್ರಕರಣ ನೊಂದಾಯಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಪ್ರಾಧಿಕಾರಕ್ಕೆ ಸಲ್ಲಿಸಿ ಪ್ರಾಧಿಕಾರದ ಅನುಮತಿ ಪಡೆದುಕೊಂಡು ಮುಂದಿನ ತನಿಖೆಗಾಗಿ ಪ್ರಕರಣವನ್ನು ಸ್ವತ್ತುಗಳೊಂದಿಗೆ ಅಬಕಾರಿ ಉಪ ನಿರೀಕ್ಷಕರು, ಪೊನ್ನಂಪೇಟೆ ಉಪವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ದಿನಾಂಕ:23.04.2001ರಂದು ವಾಹನ ಸಂಖ್ಯೆ: ಕೆಎ-12-ಎಂ-8837ರ ಮಾಲೀಕರಾದ ಶ್ರೀ ಮುಕ್ಕಾಟೀರ ಎಂ.ಬಿದ್ದಪ್ಪ ಇವರ ಪರ ವಕೀಲರಾದ ಶ್ರೀ ಕೆ.ಜಿ. ಬೋಪಯ್ಯ ಇವರು ಈ ಪ್ರಾಧಿಕಾರಕ್ಕೆ ಅರ್ಜಿಯೊಂದನ್ನು ಸಲ್ಲಿಸಿ ಅಕ್ರಮ ಶೇಂದಿ ಸಾಗಾಣಿಕೆಯಾದ ವಾಹನವನ್ನು ಮಧ್ಯಂತರ ಬಿಡುಗಡೆ ಮಾಡಬೇಕೆಂದು ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿ ಈ ಪ್ರಾಧಿಕಾರದ ಆದೇಶ ಸಂಖ್ಯೆ: ಇಎಕ್ಸ್‌ಇ:3:ಡಿಟಿಸಿಆರ್‌ಎಂ:175/2001-02, ದಿನಾಂಕ:29.09.2001ರಂದು ಸದರಿ ವಾಹನದ ಮೌಲ್ಯ ಮತ್ತು ಭದ್ರತೆಗಾಗಿ ಮುಚ್ಚಳಿಕೆ ಪತ್ರದೊಂದಿಗೆ ಕಾರ್ಪೋರೇಷನ್ ಬ್ಯಾಂಕ್, ನಾಲ್ಕೇರಿ ಶಾಖೆಯಿಂದ ಒಂದು ಲಕ್ಷ ರೂಪಾಯಿಗೆ (ರೂ.1,00,000/-) ಸಮನಾದ ಬ್ಯಾಂಕ್ ಗ್ಯಾರಂಟಿಯನ್ನು ಹಾಗೂ ಅವರ ಪರವಾಗಿ ಶ್ರೀ ಎಂ.ಪಿ. ನಂಜಪ್ಪ ಬಿನ್ ಪೌತಿ ಪೊನ್ನಪ್ಪ, ಹರಿಹರ ಗ್ರಾಮ ರವರು ಅವರ ಹೆಸರಿನಲ್ಲಿ ಹೊಂದಿರುವ 4 ಎಕರೆ ಕಾಫಿ ತೋಟ ಸರ್ವೆ ನಂ.129/2ರ ದಾಖಲಾತಿಗಳನ್ನು ಸಹಾ ಈ ಪ್ರಾಧಿಕಾರಕ್ಕೆ ಒಪ್ಪಿಸಿರುವುದರಿಂದ ಮಹೇಂದ್ರ ಮತ್ತು ಮಹೇಂದ್ರ, ಜೀಮು ಸಂಖ್ಯೆ: ಕೆಎ-12-ಎಂ-8837 ನ್ನು ಷರತ್ತುಗಳಿಗೊಳಪಟ್ಟು ಮಧ್ಯಂತರ ಬಿಡುಗಡೆ ಮಾಡಲಾಯಿತು.

ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಅಕ್ರಮ ಶೇಂದಿಯ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿ ದಿನಾಂಕ:20.06.2001ರ ವರದಿಯಲ್ಲಿ ಸದರಿ ಶೇಂದಿಯಲ್ಲಿ 2.12% ವಿ/ವಿ ಮದ್ಯಸಾರದ ಪ್ರಮಾಣ ಇರುವುದಾಗಿ ರಾಸಾಯನಿಕ ವಿಶ್ಲೇಷಕ ತಜ್ಞರು, ಮಂಗಳೂರುರವರು ದೃಢೀಕರಿಸಿರುತ್ತಾರೆ.

ದಿನಾಂಕ: 16.12.2004ರಂದು ಬೆಳಿಗ್ಗೆ 11.00 ಗಂಟೆಗೆ ಈ ಪ್ರಾಧಿಕಾರದ ಮುಂದೆ ಶ್ರೀ ಮುಕ್ಕಾಟೀರ ಎಂ. ಬಿದ್ದಪ್ಪ ಇವರು ಅವರ ಪರ ವಕೀಲರೊಂದಿಗೆ ತಪ್ಪದೇ ವಿಚಾರಣೆಗೆ ಹಾಜರಾಗಲು ತಿಳಿಸಲಾಗಿದ್ದು. ಇದಕ್ಕೆ ತಪ್ಪಿದಲ್ಲಿ ಮೊಕದ್ದಮೆಯನ್ನು ಏಕಪಕ್ಷೀಯವಾಗಿ ನಿರ್ಣಯಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದಾಗಿ ಸಮನ್ಸ್ ನೀಡಿದೆ. ಅಬಕಾರಿ ಮುಖ್ಯ ರಕ್ಷಕರು, ಪೊನ್ನಂಪೇಟೆ ಉಪವಲಯರವರು ಸದರಿ ಸಮನ್ಸ್ ಖುದ್ದಾಗಿ ಜಾರಿ ಮಾಡಲು ಹೋಗಿದ್ದಾಗ ಅವರ ಮನೆಗೆ ಬೀಗ ಹಾಕಿರುವುದರಿಂದ ಮುಂದಿನ ಸಮಯದಲ್ಲಿ ನೀಡಲು ವಿನಂತಿಸಿರುತ್ತಾರೆ. ದಿನಾಂಕ:22.12.2005ರಂದು ನಿಗದಿಪಡಿಸಲಾಗಿದ್ದ ಸದರಿ ಮೊಕದ್ದಮೆ ಸಂಖ್ಯೆ: ಇಎಕ್ಸ್‌ಇ:3:ಡಿಟಿಸಿಆರ್ ನಂ.175:2001-02ಕ್ಕೆ ಸಂಬಂಧಿಸಿ ವಶಪಡಿಸಿಕೊಳ್ಳಲಾಗಿರುವ ಸ್ವತ್ತುಗಳ/ ವಾಹನದ ಮುಟ್ಟುಗೋಲು ನಡವಳಿ ಕುರಿತ ವಿಚಾರಣೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಿ ದಿನಾಂಕ:07.01.2006ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದ್ದು ಸದರಿ ವಿಚಾರಣೆಗೆ ಹಾಜರಾಗಬೇಕೆಂದು ಅಧಿಕೃತವಾಗಿ ತಿಳಿಯಪಡಿಸಲಾಗಿರುತ್ತದೆ. ಅಬಕಾರಿ ಉಪ ನಿರೀಕ್ಷಕರು (ಜಾರಿ & ತನಿಖೆ) ವಿರಾಜಪೇಟೆ ಇವರು ತನಿಖೆಯನ್ನು ಮುಕ್ತಾಯಗೊಳಿಸಿ ಸಲ್ಲಿಸಿದ ಪ್ರಸ್ತಾವನೆ ಹಾಗೂ ಪ್ರಕರಣದ ಶೇಂದಿಯು ಮಾನವ ಸೇವನೆಗೆ ಯೋಗ್ಯವಲ್ಲದ್ದರಿಂದ ಹಾಗೂ ಹಾಗೆಯೇ ಇಟ್ಟುಕೊಂಡಲ್ಲಿ ಕೆಟ್ಟ ವಾಸನೆಯಿಂದ ಕಛೇರಿಯ ವಾತಾವರಣ ಕೆಡುವ ಸಂಭವವಿರುವುದನ್ನು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಯೋಗ್ಯವೆಂದು ರಾಸಾಯನಿಕ ವಿಶ್ಲೇಷಣಾ ವರದಿಯ ಆಧಾರದ ಮೇಲೆ ಸದರಿ ವಶಪಡಿಸಿಕೊಂಡ ಮಾನವ ಸೇವನೆಗೆ ಅನರ್ಹವಾದ 25 ಲೀಟರ್ ಶೇಂದಿಯನ್ನು ಆದೇಶ ಸಂಖ್ಯೆ: ಇಎಕ್ಸ್‌ಇ:3 ಡಿಟಿಸಿಆರ್‌ಎಂ:175:01-02, ದಿನಾಂಕ:22.12.2005ರ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಮತ್ತು ನಾಶಪಡಿಸಲು ಆದೇಶಿಸಲಾಗಿದೆ.

ದಿನಾಂಕ:19.01.2006ರಂದು ಮಧ್ಯಾಹ್ನ 3.00 ಗಂಟೆಗೆ ಈ ಪ್ರಕರಣದ ವಿಚಾರಣೆ ನಡೆಸಲಾಗಿದ್ದು, ಮೊಕದ್ದಮೆ ದಾಖಲು ಮಾಡಿದ ಆರಕ್ಷಕ ಸಹಾಯಕ ನಿರೀಕ್ಷಕರು, ಮೂರ್ನಾಡು ಔಟ್‌ಪೋಸ್ಟ್ ಠಾಣೆ ಇವರು ಶ್ರವಣಬೆಳಗೋಳದಲ್ಲಿ ಪೊಲೀಸ್ ಬಂದೋಬಸ್ತ್ ಕರ್ತವ್ಯಕ್ಕೆ ತೆರಳಿರುವುದರಿಂದ ಹಾಜರಾಗಿರುವುದಿಲ್ಲ ಮತ್ತು ಪ್ರಕರಣದ ಸಾಕ್ಷಿದಾರರು ವಿಳಾಸದಲ್ಲಿ ಇಲ್ಲದ ಕಾರಣ ಜಾರಿಮಾಡಲು ಸಮಯಾವಕಾಶಕ್ಕಾಗಿ ಕೋರಲಾಗಿರುತ್ತದೆ. ದಿನಾಂಕ:16.03.2006ರಂದು ಮಧ್ಯಾಹ್ನ 3.00 ಗಂಟೆಗೆ ಸದರಿ ಪ್ರಕರಣದ ವಿಚಾರಣೆ ನಿಗದಿಪಡಿಸಲಾಗಿರುತ್ತದೆ. ಈ ದಿನ ಮೊಕದ್ದಮೆ ದಾಖಲಿಸಿರುವ ಆರಕ್ಷಕ ಎ.ಎಸ್.ಐ. ರವರು ದಿನಾಂಕ:03.04.2001 ಜೀಪು ಸಂಖ್ಯೆ: ಕೆಎ-12-ಎಂ-8837ಗಲ್ಲಿ ಅಕ್ರಮ ಶೇಂದಿ ಸಾಗಾಣಿಕೆ ಮಾಡುತ್ತಿದ್ದುದ್ದರ ಬಗ್ಗೆ ಮತ್ತು ಆ ಕಾರಣ ಮೊಕದ್ದಮೆ ಸಂಖ್ಯೆ: 43/2001 ರಂತೆ ಪ್ರಕರಣ ದಾಖಲಿಸಿರುವ ಕುರಿತು ಹೇಳಿಕೆ ಪತ್ರ ನೀಡಿರುತ್ತಾರೆ. ದಿನಾಂಕ:20.04.2006ರಂದು ಮಧ್ಯಾಹ್ನ 3.00 ಗಂಟೆಗೆ ವಿಚಾರಣೆ ನಿಗದಿಪಡಿಸಿದ್ದು, ಪ್ರಕರಣದ ಸಾಕ್ಷಿದಾರರಾದ ಶ್ರೀ ಚೆಕ್ಕೇರ ಉತ್ತಯ್ಯ ಇವರು ವಿಳಾಸದಲ್ಲಿ ವಾಸವಿಲ್ಲವೆಂಗು ಊಗೂ ಊರಿನಲ್ಲಿಲ್ಲವೆಂಬ ಬಗ್ಗೆ ವಿರಾಜಪೇಟೆ (ಜಾರಿ & ತನಿಖೆ) ಅಬಕಾರಿ ಉಪ ನಿರೀಕ್ಷಕರು, ಸಂಖ್ಯೆ:2 ವಿರಾಜಪೇಟೆರವರು ದಿನಾಂಕ:18.04.2006ರಂದು ಪಡೆದ ಹೇಳಿಕೆ ಪತ್ರವನ್ನು ಸಲ್ಲಿಸಿರುತ್ತಾರೆ. ದಿನಾಂಕ:01.02.2007ರಂದು ಬೆಳಿಗ್ಗೆ 11.00 ಗಂಟೆಗೆ ಜೀಪು ಸಂಖ್ಯೆ: ಕೆಎ-12-ಎಂ-8837ಕ್ಕೆ ಸಂಬಂಧಿಸಿದ ವಿಚಾರಣೆಯನ್ನು ನಿಗದಿಪಡಿಸಲಾಗಿರುತ್ತದೆ ಹಾಗೂ ವಾಹನದ ಮಾಲೀಕರ ಪರವಾಗಿ ಹಾಜರಾಗಿರುವ ವಕೀಲರು ಕೋರಿದಂತೆ ತಕರಾರು ಅರ್ಜಿಯನ್ನು ದಾಖಲು ಮಾಡಲು ಸಮಯಾವಕಾಶ ನೀಡಲಾಗಿದೆ. ದಿನಾಂಕ:08.02.2007ರಂದಿನ ಲಿಖಿತ ಹೇಳಿಕೆ ಪತ್ರದಲ್ಲಿ ಶ್ರೀ ಎಂ. ಬಿದ್ದಪ್ಪ ಇವರು ತಮ್ಮ ಸಮಜಾಯಿಷಿಯಲ್ಲಿ ದಿನಾಂಕ:03.04.2001 ರಂದು ಜೀಪು ಸಂಖ್ಯೆ: ಕೆಎ-12-ಎಂ-8837ರಲ್ಲಿ ಜೀಪಿನ ಹಿಂಭಾಗದಲ್ಲಿ ಸುಮಾರು 25 ಲೀಟರಿನಷ್ಟು ಶೇಂದಿಯನ್ನು ಇಟ್ಟುಕೊಂಡು ಚಾಲನೆ ಮಾಡುತ್ತಿದ್ದರೆಂಬುದು ಸತ್ಯಕ್ಕೆ ದೂರವಾದ ವಿಚಾರವಾಗಿರುತ್ತದೆಂದು ಹೇಳಿದ್ದು, ಜೀಪನ್ನು ಮಾಲೀಕರಾಗಿ ಚಾಲನೆ ಮಾಡುತ್ತಿರುವಾಗ ಹಾಗೂ ತಮ್ಮ ಪರಿಚಯದ ಜನರನ್ನು ಅವರವರ ಊರಿಗೆ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಮೊಕದ್ದಮೆಗೆ ಆಸ್ಪದವಾದ ಶೇಂದಿ ಜೀಪಿನಲ್ಲಿತ್ತು ಎಂಬುದು ಅವರಿಗೆ ತಿಳುವಳಿಕೆಗೆ ಬಂದಿರುವುದಿಲ್ಲ ಮತ್ತು ಅವರ ಗಮನಕ್ಕೆ ಯಾವುದೇ ವಿಷಯ ಬಂದಿರುವುದಿಲ್ಲವೆಂಬ ನಿಲುವನ್ನು ಅವರು ಹಾಗೂ ಅವರ ಪರ ವಕೀಲರು ಸಲ್ಲಿಸಿರುತ್ತಾರೆ.

ಆ ನಂತರ ದಿನಾಂಕ:05.05.2007, 18.05.2007, 29.05.2007, 14.08.2008, 21.10.2008, 22.11.2008 ರಂದು ಪ್ರಕರಣದ ವಿಚಾರಣೆಯನ್ನು ನಡೆಸಲು ನಿಗದಿಪಡಿಸಿ ಪಿರ್ಯಾದುದಾರರಿಗೆ, ಮೊಕದ್ದಮೆಯ ತನಿಖಾಧಿಕಾರಿಗಳಿಗೆ ಹಾಗೂ ಇತರ ಸಾಕ್ಷಿದಾರರಿಗೆ ನೋಟೀಸನ್ನು ನೀಡಿದ್ದು, ಅಭಿಯೋಗದ ಪರವಾಗಿ ಪಿಡಬ್ಲ್ಯೂ-1 ಮತ್ತು ಪಿಡಬ್ಲ್ಯೂ-2ರ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು ನಿಶಾನೆ ಪಿ-1 ರಿಂದ ಪಿ-6 ರವರೆಗೆ ದಾಖಲೆಗಳನ್ನು ಗುರುತಿಸಲಾಯಿತು. ರಕ್ಷಣಾ ಸಾಕ್ಷಿದಾರರಾಗಿ ವಾಹನದ ಮಾಲೀಕರಾಗಿ ಶ್ರೀ ಎಂ.ಎಂ. ಬಿದ್ದಪ್ಪ ರವರ ಸಾಕ್ಷ್ಯವನ್ನು ದಿನಾಂಕ:08.02.2007 ಡಿಡಬ್ಲ್ಯೂ-1 ಎಂದು ದಾಖಲಿಸಿಕೊಳ್ಳಲಾಯಿತು. ಯಾವುದೇ ದಾಖಲೆಗಳನ್ನು ರಕ್ಷಣಾ ಸಾಕ್ಷಿಯ ಪರವಾಗಿ ಗುರುತಿಸಿರುವುದಿಲ್ಲ. ಪ್ರಕರಣದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರವರ ಮತ್ತು ಅರ್ಜಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

ಪ್ರಕರಣದಲ್ಲಿ ಲಭ್ಯವಿರುವ ದಾಖಲಾತಿಗಳು ಹಾಗೂ ಸಾಕ್ಷಿ ವಿಚಾರಣೆಗಳ ಪುರಾವೆಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ಸಂಪೂರ್ಣ ಕೇಸಿನ ವಿದ್ಯಾಮಾನವನ್ನು ಗಮನಿಸಿ ಅಂತಿಮ ಆದೇಶವನ್ನು ನೀಡುವ ಮೊದಲು ಈ ಕೆಳಕಂಡ ವಿವಾದಾಂಶಗಳಿಗೆ ಉತ್ತರವನ್ನು ಪಡೆಯುವುದು ಅವಶ್ಯವಿರುತ್ತದೆ.

1) ದಿನಾಂಕ:03.04.2001 ರಂದು ಜೀಪು ಸಂಖ್ಯೆ: ಕೆಎ-12-ಎಂ-8837 ನ್ನು ಅಕ್ರಮ ಶೇಂದಿ ಸಾಗಾಟಕ್ಕೆ ಬಳಸಿರುವುದು ಸಾಬಿತಾಗಿದೆಯೇ? ಮತ್ತು ಸದರಿ ಜೀಪಿನಲ್ಲಿ ಸಾಗಾಟ ಮಾಡಿದ ವಸ್ತು ಅಬಕಾರಿ ವಸ್ತು ಆಗಿದೆಯೇ?

2) ವಾಹನದ ಮಾಲೀಕರು ತಮ್ಮ ವಾಹನವನ್ನು ಅಬಕಾರಿ ವಸ್ತುಗಳ ಅಕ್ರಮ ಸಾಗಾಣಿಕೆಯ ಚಟುವಟಿಕೆಯಂತಹ ಘಟನೆಗಳಲ್ಲಿ ಉಪಯೋಗಿಸಬಾರದೆಂಬ ಬಗ್ಗೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆಯೇ?

3) ಮೊಕದ್ದಮೆಯ ಕೃತ್ಯವು ವಾಹನದ ಮಾಲೀಕರ ಗಮನಕ್ಕೆ ಬಾರದೇ ನಡೆದ ಘಟನೆಯೇ?

4) ಜಪ್ತಾದ ಜೀಪು ಮತ್ತು ಜೀಪಿನಲ್ಲಿದ್ದ ಶೇಂದಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೇ?

(1) ಒಂದನೇ ವಿವಾದಾಂಶಕ್ಕೆ ಉತ್ತರ 'ಹೌದು' ಎಂದಾಗುತ್ತದೆ.

ಕಾರಣಗಳು: ಅಭಿಯೋಗದ ಪರ ಸಾಕ್ಷಿ ನೀಡಿದ ಪಿಡಬ್ಲ್ಯೂ-1 ಶ್ರೀ ಟಿ.ಕೆ. ಮರಿಯಪ್ಪ, ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಶ್ರೀಮಂಗಲ ಪೊಲೀಸ್ ಠಾಣೆ, ಶ್ರೀಮಂಗಲ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ:03.04.2001 ರಂದು ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಯವರಾದ ಹೆಚ್.ಸಿ.69 ಹಾಗೂ ಪಿ.ಸಿ.416 ಹಾಗೂ ಪಂಚಾಯತುದಾರರೊಂದಿಗೆ ಟಿ.ಶೆಟ್ಟಿಗೇರಿಯಿಂದ ಬರುನಾಣಿಗೆ ಹೋಗುವ ರಸ್ತೆಯಲ್ಲಿ ಅಂದರೆ ಕೆ.ಕೆ.ಆರ್. ಸೇತುವೆ ಬಳಿ ಕರ್ತವ್ಯ ನಿರತರಾಗಿದ್ದಾಗ ಟಿ.ಶೆಟ್ಟಿಗೇರಿ ಕಡೆಯಿಂದ ಜೀಪು ಸಂಖ್ಯೆ: ಕೆಎ-12-ಎಂ-8837 ನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ಜೀಪಿನ ಹಿಂಬದಿಯಲ್ಲಿ ಒಂದು ಪ್ಲಾಸ್ಟಿಕ್ ಕ್ಯಾನ್ ಇದ್ದು ಅದರ ಮುಚ್ಚಳವನ್ನು ಒಂದು ಪ್ಲಾಸ್ಟಿಕ್ ಕ್ಯಾನ್ ಇದ್ದು ಅದರ ಮುಚ್ಚಳವನ್ನು ತೆಗೆದು ಪರಿಶೀಲಿಸಲಾಗಿ ಕ್ಯಾನಿನ ಒಳಗಡೆ ಸುಮಾರು 25 ಲೀ. ನಷ್ಟು ಶೇಂದಿ ಇದ್ದು ಜೀಪನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿಯನ್ನು ವಿಚಾರಿಸಲಾಗಿ ತಾನು ಹರಿಹರ ಗ್ರಾಮದ ಮುಕ್ಕಾಟೀರ ಬಿದ್ದಪ್ಪ, ಚಾಲಕ ಮತ್ತು ಮಾಲೀಕ ಎಂಬುದಾಗಿ ತಿಳಿಸಿದ್ದು, ಇನ್ನೊಬ್ಬ

ವ್ಯಕ್ತಿಯನ್ನು ವಿಚಾರಿಸಲಾಗಿ ಕುಪ್ಪಣಮಾದ ಪ್ರಕಾಶ್, ಪರಕಟಗೇರಿ ಗ್ರಾಮ ಎಂಬುದಾಗಿ ತಿಳಿಸಿದ್ದು, ಹೀಗೆ ಸಿಕ್ಕಿದ ಅವರಿಗೆ ಸೇರಿದ ಶೇಂದಿ ಮಾರಾಟ ಮಾಡಲು ಸರ್ಕಾರದ ಪರವಾನಿಗೆ ಇದೆಯೇ ಎಂದು ಕೇಳಲಾಗಿ ಇಲ್ಲವೆಂದು ತಿಳಿಸಿದ್ದರಿಂದ ನಂತರ ಅವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಜೀಪು ಸಂಖ್ಯೆ: ಕೆಎ-12-ಎಂ-8837 ಹಾಗೂ 25 ಲೀ. ನಷ್ಟು ಶೇಂದಿ ತುಂಬಿದ ತುಂಬಿದ ಪ್ಲಾಸ್ಟಿಕ್ ಕ್ಯಾನನ್ನು ಅಮಾನತ್ತುಪಡಿಸಿಕೊಂಡು ಅದರಿಂದ 180 ಮಿಲೀ ಶೇಂದಿಯನ್ನು ಮಾದರಿಯಾಗಿ ತೆಗೆದು ಬಾಟಲಿಯನ್ನು ಸೀಲು ಮಾಡಲಾಯಿತು. ಈ ಬಗ್ಗೆ ಪಂಚರ ಸಹಿಪಡೆದು ಮಾದರಿ ಗುರುತು ಚೀಟಿಯನ್ನು ತಯಾರಿಸಿ, ಸೀಸೆಗೆ ಅಂಟಿಸಲಾಯಿತು. ನಂತರ ಠಾಣೆಗೆ ಬಂದು ಮೊಕದ್ದಮೆ ಸಂಖ್ಯೆ:43/2001ನ್ನು ದಾಖಲಿಸಿಕೊಂಡಿದ್ದು, ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿದ್ದು, ಆ ಬಳಿಕ ಪ್ರಕರಣಕ್ಕೆ ಸಂಬಂಧಿಸಿ ವಶಪಡಿಸಿಕೊಳ್ಳಲಾದ ಶೇಂದಿ ಮತ್ತು ಕ್ಯಾನ್ ಹಾಗೂ ಸಾಗಾಣಿಕೆಗೆ ಉಪಯೋಗಿಸಿಕೊಳ್ಳಲಾದ ವಾಹನದ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಯಿತೆಂದು ಹಾಗೂ ಮುಂದಿನ ತನಿಖೆ ಬಗ್ಗೆ ಕಡತವನ್ನು ಠಾಣೆಯ ಪೊಲೀಸ್ ಉಪ ನಿರೀಕ್ಷಕರಿಗೆ ಹಸ್ತಾಂತರಿಸಿಕೊಟ್ಟಿರುವುದಾಗಿ ಅನಂತರ ಪೊಲೀಸ್ ಉಪ ನಿರೀಕ್ಷಕರು, ಶ್ರೀಮಂಗಲ ಪೊಲೀಸ್ ಠಾಣೆ, ಶ್ರೀಮಂಗಲ ಇವರಿಂದ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿ ಹಾಗೂ ಸೊತ್ತುಗಳನ್ನು ಮತ್ತು ಜೀಪು ಸಂಖ್ಯೆ: ಕೆಎ-12-ಎಂ-8837ನ್ನು ಅಬಕಾರಿ ಉಪ ನಿರೀಕ್ಷಕರು, ಪೊನ್ನಂಪೇಟೆ ಉಪವಲಯ, ಪೊನ್ನಂಪೇಟೆ ಇವರಿಗೆ ಹಸ್ತಾಂತರಿಸಲಾಗಿರುತ್ತದೆ ಎಂಬ ಬಗ್ಗೆ ಸಾಕ್ಷಿ ನೀಡಿರುತ್ತಾರೆ.

ಸ್ಥಳದ ಅಪರಾಧ ವಿವರ ನಮೂನೆಯನ್ನು ನಿಶಾನೆ ಪಿ-1 ಎಂದೂ, ಪ್ರಥಮ ವರ್ತಮಾನ ವರದಿಯಲ್ಲಿ ಸಹಿ ಮಾಡಿರುವುದು ನಿಶಾನೆ ಪಿ-1ಎ ಎಂಬುದಾಗಿ ಗುರುತಿಸಲಾಗಿದೆ. ಅವರು ತಯಾರಿಸಿ ನ್ಯಾಯಾಲಯಕ್ಕೆ ಒಪ್ಪಿಸಿರುವ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ನಿಶಾನೆ ಪಿ-2 ಹಾಗೂ ಸಹಿಯನ್ನು ನಿಶಾನೆ ಪಿ-2ಎ ಎಂದೂ, ನ್ಯಾಯಾಲಯಕ್ಕೆ ಒಪ್ಪಿಸಿದ್ದ ಸ್ವತ್ತಿನ ಪಟ್ಟಿಯನ್ನು ನಿಶಾನೆ ಪಿ-3 ಹಾಗೂ ಅವರ ಸಹಿ ನಿಶಾನೆ ಪಿ-3ಎ ಎಂಬುದಾಗಿ ಗುರುತಿಸಲಾಗಿದೆ. ವಶಪಡಿಸಿಕೊಂಡ ಸ್ವತ್ತುಗಳ ವರದಿ ಪ್ರತಿಯನ್ನು ಅಧಿಕೃತ ಪ್ರಾಧಿಕಾರಿಗಳ ನ್ಯಾಯಾಲಯಕ್ಕೆ ಒಪ್ಪಿಸಿರುವ ಪ್ರತಿಯನ್ನು ನಿಶಾನೆ ಪಿ-4 ಹಾಗೂ ಸಹಿಯನ್ನು ನಿಶಾನೆ ಪಿ-4ಎ ಎಂಬುದಾಗಿ ಹಾಗೂ ಪ್ರಕರಣದ ತನಿಖೆ ಬಗ್ಗೆ ಅಬಕಾರಿ ಪ್ರಾಧಿಕಾರದ ವ್ಯಾಪ್ತಿಯ ಅಧಿಕಾರಿಗಳಿಗೆ ಹಸ್ತಾಂತರಿಸಿಕೊಡಲು ಅನುಮತಿ ಕೋರಿ ಬರೆಯಲಾಗಿದ್ದ ಪತ್ರದ ಪ್ರತಿಯನ್ನು ನಿಶಾನೆ ಪಿ-5 ಮತ್ತು ಸಹಿ ಪಿ-5ಎ ಎಂದೂ ಗುರುತಿಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದ್ದ ಒಂದನೇ ಆರೋಪಿ ಶ್ರೀ ಎಂ.ಎಂ. ಬಿದ್ದಪ್ಪ ಇವರನ್ನು ಗುರುತಿಸಿರುವುದಾಗಿ ಅಭಿಯೋಗದ ಪರ ಸಾಕ್ಷಿ ನೀಡಿರುತ್ತಾರೆ.

ಅಪರಾಧ ಸ್ಥಳಕ್ಕೂ ಶ್ರೀಮಂಗಲ ಆರಕ್ಷಕ ಠಾಣೆಗೂ 8 ರಿಂದ 10 ಕಿ.ಮೀ.ದೂರವಿದ್ದು, ಸದರಿ ಸ್ಥಳಕ್ಕೆ ಹೋಗುವ ಮುನ್ನ ಪಂಚರನ್ನು ಕರೆದೊಯ್ದು ಆ ಸ್ಥಳದ ದೂರದಲ್ಲಿ ಎರಡು ಮೂರು ಸಣ್ಣ ಅಂಗಡಿ, ಹೋಟೆಲುಗಳಿರುತ್ತದೆಂದು ತಿಳಿಸಿದ್ದು, ಪ್ರಕರಣದ ಪೂರ್ವದಲ್ಲಿ ವಾಹನ ಶೋಧನಾ ಬಗ್ಗ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದಿರುವುದಿಲ್ಲ. ಶೋಧಿಸುವ ಬಗ್ಗೆ ಸರ್ಚ್‌ಮೆಮೋ ತಯಾರಿಸುವ ಅವಶ್ಯಕತೆ ಇರುವುದಿಲ್ಲವೆಂದು ಮತ್ತು ಶೇಂದಿ ಕ್ಯಾನಿನ ಇರುವಿಕೆಯ ಬಗ್ಗೆ ಚಾಲಕನಿಗೆ ಮಾಹಿತಿ ಇರಲಿಲ್ಲ ಎಂಬುದು ಸರಿಯಲ್ಲ ಹಾಗೂ ಲೆಕ್ಕಾಚಾರಕ್ಕಾಗಿ ಸುಳ್ಳು ಕೇಸು ದಾಖಲಿಸಿದ್ದೀರಿ ಎಂಬುದು ಸರಿಯಲ್ಲವೆಂದೂ ಸದರಿ ಪ್ರಕರಣಕ್ಕೆ ಸಂಬಂಧಿಸಿ ಸ್ಥಳಮಹಜರನ್ನು ಸ್ಥಳದಲ್ಲಿಯೇ ಬರೆಯದೇ ಕಛೇರಿಯಲ್ಲಿ ಬರೆದಿದ್ದೀರಿ ಎಂಬುದೂ ಸರಿಯಲ್ಲ ಹಾಗೂ ಪ್ರಕರಣಕ್ಕೆ ಸಂಬಂಧಿಸಿ ಸ್ಥಳ ಮಹಜರ್ ಮತ್ತು ಸಾಕ್ಷಿಗಳ ಹೇಳಿಕೆಯನ್ನು ನಾನೇ ತಯಾರಿಸಿರುತ್ತೇನೆ ಎಂದೂ ತಿಳಿಸಿರುತ್ತಾರೆ.

ಅಭಿಯೋಗದ ಪರ ಸಾಕ್ಷಿದಾರರೆಂದು ಪರಿಗಣಿಸಲಾಗಿರುವ ಶ್ರೀ ಬಾಲ ಇವರು ದಿನಾಂಕ:29.05.2007ರಂದು ವಿಚಾರಣೆ ಸಂದರ್ಭದಲ್ಲಿ ಪ್ರಕರಣದ ಬಗ್ಗೆಯಾಗಲೀ ಯಾವ ವಿಚಾರಕ್ಕಾಗಿ ಮಹಜರ್ ಬರೆದರೆಂದೂ ಅಥವಾ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವರೆಂದು ನನಗೆ ತಿಳಿದಿರುವುದಿಲ್ಲ ಮತ್ತು ಮಹಜರಿನ ಅಂಶಗಳನ್ನು ಓದಿ ಹೇಳಿರುವುದಿಲ್ಲವೆಂದು ಹೇಳಿಕೆ ನೀಡಿದ್ದು, ನನಗೆ ಆರೋಪಿಗಳು ಯಾರೆಂದು ಗೊತ್ತಿಲ್ಲ ಮಹಜರನ್ನು ನಿಶಾನೆ ಪಿ-1 ಹಾಗೂ ಅದರಲ್ಲಿರುವ ಸಹಿಯನ್ನು ಪಿ-1ಎ ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಹಿ ಅವರದೇ ಆಗಿದ್ದು, ಮಹಜರಿಗೆ ನಾನೇ ಸಹಿ ಮಾಡಿರುವುದಾಗಿಯೂ ತಿಳಿಸಿರುತ್ತಾರೆ.

ಈ ಸಂದರ್ಭದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದ್ದರಿಂದ ಅಭಿಯೋಜನ ಪಕ್ಷಕ್ಕೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದ್ದು, ದಿನಾಂಕ:03.04.2001ರಂದು ಸಮಯ 4 ರಿಂದ 5 ಗಂಟೆಯವರೆಗೂ ಬಿರುನಾಣಿ ಕಡೆಗೆ ಹೋಗುವ ಟಾರುರಸ್ತೆಯ ಪಕ್ಕದಲ್ಲಿ ಪೊಲೀಸರು ಮಹಜರು ನಡೆಸಿ ಆ ಸಂದರ್ಭದಲ್ಲಿ ಜೀಪು ಸಂಖ್ಯೆ: ಕೆಎ-12-ಎಂ-8837ರ ವಾಹನವನ್ನು ಹಾಗೂ 25 ಲೀ. ಶೇಂದಿಯನ್ನು ತುಂಬಿರುವ 35 ಲೀ. ಗಾತ್ರದ ನೀಲಿ ಬಣ್ಣದ ಪ್ಲಾಸ್ಟಿಕ್‌ಕ್ಯಾನ್ ಅಮಾನತ್ತುಪಡಿಸಿಕೊಂಡಿರುತ್ತಾರೆನ್ನುವುದು ಸರಿಯಲ್ಲ. ಆ ದಿನ ಯಾವುದೇ ಮಹಜರು ನಡೆದಿಲ್ಲ ಹಾಗೂ ಆರೋಪ ನನ್ನ ಸ್ನೇಹಿತನಾಗಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲವೆಂದು ತಿಳಿಸಿರುತ್ತಾರೆ.

ಇನ್ನೊಬ್ಬರು ಸಾಕ್ಷಿದಾರರಾದ ಶ್ರೀ ಚೆಕ್ಕೇರ ಉತ್ತಯ್ಯ, ಬಿನ್ ಮುದ್ದಪ್ಪ, ಹುದಿಕೇರಿ ವಾಸ, ಪೊನ್ನಂಪೇಟೆ ಇವರು ನೀಡಿದ್ದ ವಿಳಾಸದಲ್ಲಿಲ್ಲದಿದ್ದು, ಈ ದಿನಾಂಕದವರೆಗೂ ಪ್ರಾಧಿಕಾರದ ನೋಟಿಸ್ ಜಾರಿಗೊಳಿಸಲಾಗಿರುವುದಿಲ್ಲದರ ಬಗ್ಗೆ ಹಾಗೂ ಸದರಿಯವರು ಊರನ್ನು ಬಿಟ್ಟು ಹೋಗಿರುವ ಕುರಿತು ಮತ್ತು ಅವರ ಈಗಿನ ವಿಳಾಸವು ಗ್ರಾಮದ ಅಕ್ಕಪಕ್ಕದ ಮನೆಯವರಿಗೂ

ಗೊತ್ತಿಲ್ಲವೆಂದು ತಿಳಿಸಿದ ಬಗ್ಗೆ ದಿನಾಂಕ:18.04.2006ರಂದು ಹೇಳಿಕೆ ಪತ್ರಕ್ಕೆ ಹುಡಿಕೇರಿ ಗ್ರಾಮದ ಶ್ರೀ ಪ್ರಕಾಶ್ ಸಿ.ಸಿ., ಬಿನ್ ಬೋಪಯ್ಯ ಹಾಗೂ ಶ್ರೀ ಎಂ.ಎನ್. ಮಹೇಶ್ ಬಿನ್ ನರೇಶಗೌಡ, ಹುಡಿಕೇರಿ ಗ್ರಾಮ ಇವರ ಸಹಿಯೊಡನೆ ಶ್ರೀ ಜಲಸ್ ಪಿಂಟೋ, ಅಬಕಾರಿ ರಕ್ಷಕರು (ಜಾರಿ ಮತ್ತು ತನಿಖೆ) ವಿರಾಜಪೇಟೆ ಇವರ ಸಹಿಯೊಡನೆ ಶ್ರೀ ಎಂ.ಸಿ. ಪ್ರದೀಪ್, ಅಬಕಾರಿ ಉಪ ತನಿಖಾಧಿಕಾರಿ, (ಜಾರಿ ಮತ್ತು ತನಿಖೆ), ವಿರಾಜಪೇಟೆ ಇವರು ವರದಿ ಪತ್ರದಲ್ಲಿ ಸದರಿ ನೋಟೀಸ್ ಪಡೆಯಬೇಕಾದ ವ್ಯಕ್ತಿಯು ಊರಿನಲ್ಲಿ ಇಲ್ಲವೆಂದು ವರದಿ ಪತ್ರದಲ್ಲಿ ತಿಳಿಸಿರುತ್ತಾರೆ.

ದಿನಾಂಕ:26/27.11.2008ರಂದು ಈ ಪ್ರಾಧಿಕಾರದ ಮುಂದೆ ಸಲ್ಲಿಸಿರುವ ಲಿಖಿತ ವಾದಪತ್ರದಲ್ಲಿ ವಾಹನದ ಮಾಲೀಕರ ಪರ ವಕೀಲರು ಅಪರಾಧ ಪತ್ತೆ ಸಮಯ ಮತ್ತು ವಾಹನದ ಶೋಧನಾ ಸಂದರ್ಭದಲ್ಲಿ ಅಬಕಾರಿ ಕಾಯ್ದೆ ಕಲಂ 53, 54ರನ್ವಯ ಮುಂಚಿತವಾಗಿ ಸರ್ಚ್‌ವಾರೆಂಟ್ ಪಡೆದಿರುವುದಿಲ್ಲ, ಸರ್ಚ್‌ವಾರೆಂಟ್ ಪಡೆಯದೇ ಇರುವುದಕ್ಕೆ ಕಾರಣಗಳಾವುದನ್ನು ದಾಖಲೆಗಳಲ್ಲಿ ಕಾಣಿಸಿರುವುದಿಲ್ಲ ಹಾಗೂ ವಾಹನದ ಮಾಲೀಕರು ಅಬಕಾರಿ ಅಪರಾಧದಲ್ಲಿ ಭಾಗಿಯಾದ ಬಗ್ಗೆ ಯಾವುದೇ ಸಾಕ್ಷ್ಯಾಧಾರ ಅವರ ವಿರುದ್ಧ ತನಿಖಾಧಿಕಾರಿ ಸಂಗ್ರಹಿಸಿರುವುದಿಲ್ಲ ಎಂಬ ಪ್ರಮುಖ ಅಂಶಗಳಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಶೋಧನಾ ವಾರೆಂಟ್ ಅಥವಾ ಸರ್ಚ್‌ಮೆಮೊ ಇಲ್ಲದೇ ಸರ್ಚ್ ಮಾಡುವುದು ಕಾನೂನು ಉಲ್ಲಂಘನೆಯಾಗಿರುವುದೆಂದು ಉಲ್ಲೇಖಿಸಿದ್ದು, ಆ ಕಾರಣ ವಾಹನ ಸಂಖ್ಯೆ: ಕೆಎ–12–ಎಂ–8837 ವಶಪಡಿಸಿಕೊಂಡಿರುವುದು ನಿಯಮ ಬಾಹಿರವಾಗಿರುವುದಾಗಿ ತಿಳಿಸಿರುತ್ತಾರೆ. ವಾಹನದ ಮಾಲೀಕರ ಪರ ಮಂಡಿಸಿರುವ ವಾದಪತ್ರದಲ್ಲಿ ವಕೀಲರು ವಶಪಡಿಸಿಕೊಳ್ಳಲಾದ ವಾಹನದ ಮಾಲೀಕರು ಆರೋಪಿಯಾಗಿರುತ್ತಾರೆ ಹಾಗೂ ವಾಹನವನ್ನು ದಿನಾಂಕ:03.04.2001 ರಂದು ಆರೋಪಿಯವರು ಚಲಿಸುತ್ತಿದ್ದಾಗ ನಡೆದ ಘಟನೆಯಾದ ಅಪರಾಧ ಅರಿವು ಇರಲಿಲ್ಲವಾಗಿ ಮತ್ತು ವಾಹನದ ಚಾಲಕರಾದ ಮಾಲೀಕರೇ ಅಕ್ರಮ ಶೇಂದಿ ಜೀಪಿನಲ್ಲಿ ಸಾಗಿಸುತ್ತಿದ್ದರೆ ಎಂಬುದಕ್ಕೆ ಸಮರ್ಥಿಸುವ ಸಾಕ್ಷ್ಯಾಧಾರಗಳೇ ಇಲ್ಲವೆಂಬುದಾಗಿ ತಿಳಿಸಿದ್ದರೂ ದಿನಾಂಕ:23.04.2001ರಂದು ವಾಹನ ಸಂಖ್ಯೆ: ಕೆಎ–12–ಎಂ–8837ರ ಬಿಡುಗಡೆಗಾಗಿ ಕೋರಿದ್ದ ಸಂದರ್ಭದ ಲಿಖಿತ ಹೇಳಿಕೆಯ ಪತ್ರದಲ್ಲಿ ದಿನಾಂಕ:03.04.2001ರಂದು ಕಾಫಿ ಪ್ಲಾಂಟರ್‌ಗಳಿಂದ ಕಾಫಿ ಸಂಗ್ರಹಿಸಲು ತನ್ನ ಜೀಪಿನ ಚಾಲಕನನ್ನು ಜೀಪ್ ಸಂಖ್ಯೆ: ಕೆಎ–12–ಎಂ–8837ರಲ್ಲಿ ಕಳುಹಿಸಿದ್ದು, ಅದರಂತೆ ಶ್ರೀಮಂಗಲದಿಂದ ಪರಕಟಕೇರಿ ಮಾರ್ಗದಲ್ಲಿರುವಾಗ ಅಪರಿಚಿತ ವ್ಯಕ್ತಿಗಳು ಕೆಲವು ಪ್ಲಾಸ್ಟಿಕ್ ಕ್ಯಾನುಗಳನ್ನು ಹಿಡಿದುಕೊಂಡಿದ್ದು, ಜೀಪಿನಲ್ಲಿ ಡ್ರಾಪ್ ಕೊಡುವಂತೆ ವಿನಂತಿಸಿದ್ದರಿಂದ ಆ ಕ್ಯಾನಿನೊಳಗಿದ್ದ ವಸ್ತು/ ಪದಾರ್ಥಗಳನ್ನರಿಯದೇ ಅಪರಿಚಿತರನ್ನು ಜೀಪಿಗೆ ಹತ್ತಿಸಿಕೊಂಡಿದ್ದು, ಆ ನಂತರವೇ ಆರಕ್ಷಕರು ಜೀಪನ್ನು ವಶಪಡಿಸಿಕೊಂಡಿರುವರೆಂದು ಹೇಳಿರುತ್ತಾರೆ. ಅಲ್ಲದೇ ಅರ್ಜಿದಾರರು ಚಾಲಕನು ವಾಹನದ ಮಾಲೀಕನಾದ ನನ್ನ ಅರಿವಿಗೆ ಬಾರದಂತೆ ಅಪರಾಧವೆಸಗಿದ್ದು, ಅಕ್ರಮ ಶೇಂದಿ ಸಾಗಾಣಿಕೆಯ ಅಪರಾಧವು ತನಗೆ ತಿಳಿದಿರುವುದಿಲ್ಲವೆಂದು ಅಂತಿಮವಾಗಿ ಪ್ರಕರಣ ಇತ್ಯರ್ಥದ ಪೂರ್ವ ಈ ಪ್ರಕರಣದ ಜೀಪು ಸಂಖ್ಯೆ: ಕೆಎ–12–ಎಂ–8837ನ್ನು ಮಧ್ಯಂತರ ಬಿಡುಗಡೆಗಾಗಿ ವಿನಂತಿಸಿಕೊಂಡಿರುವುದನ್ನು ಉಲ್ಲೇಖಿಸಿದೆ. ಅಂದರೆ ಪ್ರಕರಣ ದಾಖಲಾದ ಸಂದರ್ಭದಲ್ಲಿ ವಾಹನ ಸಂಖ್ಯೆ: ಕೆಎ–12–ಎಂ–8837ರಲ್ಲಿ ಅಕ್ರಮ ಶೇಂದಿ ಸಾಗಾಣಿಕೆಯಾಗುತ್ತಿದ್ದನ್ನು ವಾಹನದ ಮಾಲೀಕರು ಒಪ್ಪಿಕೊಂಡಂತಾಗುತ್ತದೆ. ದಿನಾಂಕ:08.02.2007ರಂದು ಅವರ ಜೀಪಿನ ಹಿಂಬದಿಯಲ್ಲಿ ಶೇಂದಿ ಇತ್ತೆಂಬುದು ತಿಳುವಳಿಕೆಗೆ ಬಂದಿರುವುದಿಲ್ಲ. ಪರಿಚಯದ ಜನರನ್ನು ತಮ್ಮ ತಮ್ಮ ಊರಿಗೆ ತನ್ನ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ತಾವು ಜೀಪಿನ ಮಾಲೀಕರಾಗಿ ಚಾಲನೆ ಮಾಡುತ್ತಿರುವುದರಿಂದ ಜೀಪಿನಲ್ಲಿ ಶೇಂದಿ ಇತ್ತೆಂಬುದರ ಬಗ್ಗೆ ಅವರ ಗಮನಕ್ಕೆ ಬಂದಿರುವುದಿಲ್ಲದಿರುವುದರಿಂದ ಹಾಗೂ ಆರಕ್ಷಕ ಉಪ ನಿರೀಕ್ಷಕರು ಕಾನೂನಿನಂತೆ ಜೀಪನ್ನು ತಪಾಸಣೆ ಮಾಡುವಾಗ ಯಾವುದೇ ಸರ್ಚ್ ವಾರೆಂಟ್ ಪಡೆದಿರುವುದಿಲ್ಲ. ಸರ್ಚ್‌ಮೆಮೊ ಕೂಡಾ ತಯಾರು ಮಾಡಿರುವುದಿಲ್ಲವೆಂದು ತಿಳಿಸಿ ಪ್ರಕರಣವನ್ನು ವಜಾ ಮಾಡಲು ಕೇಳಿಕೊಂಡಿರುತ್ತಾರೆ. ಈ ಮೇಲಿನ ಸಂದರ್ಭದಲ್ಲಿ ವಾಹನದ ಮಾಲೀಕರು ಯಾವುದೇ ಅಬಕಾರಿ ಅಪರಾಧವಾಗಿಲ್ಲ ಎಂದು ನಿಲುವು ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ಅಬಕಾರಿ ಕಾಯ್ದೆ ಕಲಂ 53, 54 ಮತ್ತು ಇತರೇ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಅಂದರೆ ಘಟನೆಗೆ ಸಂಬಂಧಿಸಿದಂತೆ ವಿವಾದ ಇರಬೇಕಾಗುತ್ತದೆ. ಮಾನ್ಯ ಸರ್ವೋನ್ನತ ನ್ಯಾಯಾಲಯ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸಹ ಇದೇ ರೀತಿಯ ಸಂದರ್ಭಗಳಲ್ಲಿ ನೀಡುವ ರೂಲಿಂಗ್‌ನ ಪ್ರಕರಣ ಪ್ರಾಧಿಕೃತ ಅಧಿಕಾರಿಯವರು ವಿಚಾರಣೆ ನಡೆಸುವ ಸ್ವತ್ತು ಮುಟ್ಟುಗೋಲಿನ ಪ್ರಕರಣಕ್ಕೆ ಸಂಬಂಧಪಟ್ಟದ್ದಾಗಿರುವುದಿಲ್ಲ. ಸಾಮಾನ್ಯವಾಗಿ ಅಬಕಾರಿ ಅಪರಾಧದಲ್ಲಿ ಬಾಗಿಯಾದ ಆರೋಪಿತರುಗಳನ್ನು ಶಿಕ್ಷೆಗೆ ಗುರಿಪಡಿಸಿದ್ದು, ಅದರ ಮೇಲ್ಮನವಿಗೆ ಸಂಬಂಧಿಸಿದ್ದಾಗಿರುತ್ತದೆ. ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಅಬಕಾರಿ ಅಪರಾಧದ ಪ್ರಕರಣಗಳನ್ನು ವಿಚಾರಣೆ ನಡೆಸುವ ಪದ್ಧತಿ ಮತ್ತು ಪ್ರಾಧಿಕೃತ ಅಧಿಕಾರಿಯವರ ಸಮಕ್ಷಮ ಅಬಕಾರಿ ಅಪರಾಧದಲ್ಲಿ ಒಳಗೊಂಡ ಸ್ವತ್ತುಗಳ ಮುಟ್ಟುಗೋಲು ಪ್ರಕರಣ ವಿಚಾರಣೆ ನಡೆಸುವ ಪದ್ಧತಿ ಭಿನ್ನವಾಗಿರುತ್ತದೆ. ಸ್ವತ್ತು ಮುಟ್ಟುಗೋಲು ವಿಚಾರಣೆಯ ಪ್ರಕರಣದಲ್ಲಿ ವಾಹನದ ಮಾಲೀಕರು ತೆಗೆದುಕೊಂಡ ನಿಲುವನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಅಲ್ಲದೇ ವಾಹನದ ಮಾಲೀಕರ ಮೇಲೆ ಅವರು ಅಬಕಾರಿ ಅಪರಾಧದಲ್ಲಿ ಶಾಮೀಲಾಗಿರುವುದಿಲ್ಲ ಇಲ್ಲವೇ ಅವರ ತಿಳುವಳಿಕೆಗೆ ಬಾರದೇ ಅಬಕಾರಿ ಅಪರಾಧ ಸಂಭವಿಸಿದ ಮತ್ತು ಸಾಕಷ್ಟು ಮುಂಜಾಗರೂಕತಾ ಕ್ರಮ ತೆಗೆದು ಕೊಂಡಾಗ್ಯೂ ಅವರ ವಾಹನ ಅಬಕಾರಿ ಅಪರಾಧದಲ್ಲಿ ದುರ್ಬಳಕೆಯಾಗಿದೆ ಎಂದು ಪುರಾವೆ ಮಾಡುವ ಜವಾಬ್ದಾರಿ ಮಾಲೀಕರ ಮೇಲೆ ಇರುತ್ತದೆ.

ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಬಿ(2) ಇದನ್ನು ಸ್ಪಷ್ಟ ಪಡಿಸುತ್ತದೆ. ಅಲ್ಲದೇ ಇಂತಹ ಪ್ರಕರಣಗಳಲ್ಲಿ ವಾ ಮಾಲೀಕರ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸಲೀ ಇಲ್ಲವೇ ಸಲ್ಲಿಸದೇ ಇರಲೀ ಅಬಕಾರಿ ಅಪರಾಧದಲ್ಲಿ ಒಳಗೊಂಡಲ್ಲಿ ಅಬಕಾರಿ ಕಾನೂನು ಕಲಂ 43ಎ(2)ರಂತೆ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ವಾಹನದ ಮಾಲೀಕರ ಪರ ವಕೀಲರು ನೀಡಿರುವ ಲಿಖಿತ ವಾದಪತ್ರದಲ್ಲಿ ದಿನಾಂಕ:26/27.11.2008ರಲ್ಲಿ ವಿರಾಜಪೇಟೆಯ ಗೌ॥ ಮ್ಯಾಜಿಸ್ಟ್ರೇಟ್‌ರವರ ನ್ಯಾಯಾಲಯದಲ್ಲಿ ಕೂಡಾ ಮೊಕದ್ದಮೆ ದಾಖಲಿಸಿದ್ದ ಕ್ರಿಮಿನಲ್ ಪ್ರಕರ ಪ್ರತಿವಾದಿಯು ನಿರ್ದೋಷಿ ಎಂಬುದಾಗಿ ಬಿಡುಗಡೆ ಹೊಂದಿದ್ದಾರೆಂದು ಉಲ್ಲೇಖಿಸಿರುವುದನ್ನು ಗಮನಿಸಿದಾಗ ಪ್ರಾಧಿಕಾರವು ವಾಹನ ಮಾಲೀಕರು ದೋಷಿಯೋ ಅಥವಾ ನಿರ್ದೋಷಿಯೋ ಎಂಬುದನ್ನು ವಿಚಾರಣೆ ಮಾಡುವ ಕಾ ಹೋಗದೇ ಅಂತಹ ಅಬಕಾರಿ ಅಪರಾಧದಲ್ಲಿ ತೊಡಗಿದ್ದ ವಾಹನದ ಬಗ್ಗೆ ಮಾತ್ರವೇ ವಿಚಾರಮಾಡುತ್ತದೆ ಎಂಬ ಸ್ಪಷ್ಟಪಡಿಸಬೇಕಾಗುವುದು ಅತ್ಯಗತ್ಯವಾದ ಪ್ರಮುಖ ಅಂಶವಾಗಿರುತ್ತದೆ. ಆದರೆ ನ್ಯಾಯಾಲಯದಲ್ಲಿ ವಿಚಾರಣೆ ಆರೋಪಿಯ ಖುಲಾಸೆಗೂ ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿರುವ ಅಧಿಕೃತ ಅಧಿಕಾರಿಯವರ ನ್ಯಾಯಾಲ ಯಾವುದೇ ಸಂಬಂಧವಿರುವುದಿಲ್ಲ. ಅಲ್ಲದೇ ತನಗೆ ಸೇರಿದ ವಾಹನದಲ್ಲಿ ತಾನೇ ಅಬಕಾರಿ ಅಕ್ರಮ ಪರಿಗಣಿಸಬಹುದಾದ ಪದಾರ್ಥ/ ವಸ್ತುವನ್ನು ಹೊಂದಿರಲೀ ಸಾಗಾಣಿಕೆ ಮಾಡುತ್ತಿರಲೀ ಅಥವಾ ಇಲ್ಲದಿರಲೀ ಸಾಕ್ಷ್ಯಾಧಾರಗಳಿಂದ ಧೃಡಪಡಿಸಬೇಕಾಗಿದ್ದು, ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದಿದ್ದಾನೆಂದ ಮಾತ್ರಕ್ಕೆ ಆರೋಪಿತರು ಅ ಅಪರಾಧವೆಸಗಿಲ್ಲವೆಂದು ತೀರ್ಮಾನಕ್ಕೆ ಬರುವಂತಿಲ್ಲ, ಹಾಗೂ ಪೊಲೀಸ್ ತನಿಖಾಧಿಕಾರಿಯು ಸುಳ್ಳು ಹಾಗೂ ಅ ಮೊಕದ್ದಮೆ ಹೂಡಿದ್ದಾನೆಂದು ಭಾವಿಸುವಂತಿಲ್ಲ. ಆರಕ್ಷಕ ತನಿಖಾಧಿಕಾರಿಯ ಸಾಕ್ಷ್ಯವೆಂದೇ ಪರಿಗಣಿಸಬಹುದಾಗಿ ಭಾರತ ದಂಡ ಸಂಹಿತೆ ಸೆಕ್ಷನ್ 302, 324ರಲ್ಲಿ ಅಧಿಕೃತವಾಗಿ ಮತ್ತು ದೈನಂದಿನ ಕರ್ತವ್ಯ ನಿರ್ವಹಿಸುವ ಪೊ ಅಧಿಕಾರಿಯ ಸಾಕ್ಷ್ಯವನ್ನು ನಂಬದಿರಲು ಅವಕಾಶವಿರುವುದಿಲ್ಲವೆಂತಲೂ ಹಾಗೂ ಪೊಲೀಸ್ ತನಿಖಾಧಿಕಾರಿಯ ಸ ಮೌಲ್ಯವುಳ್ಳದ್ದು ಮತ್ತು ಅವರ ದಾಖಲೆಯನ್ನು ಅವರ ತನಿಖೆಯನ್ನು ಅಸತ್ಯವೆಂದು ಸಂಶಯಿಸಲು ಯಾ ಕಾರಣವಿರದೆಂಬುದನ್ನು ಈ ಕೆಳಕಂಡಂತೆ ದಾಖಲಿಸಲಾಗಿದೆ.

(A) Indian Penal Code-section 302, 324-Evidence of Investigating Officer-whether ca dishclieved-Held-Official act of the police have been regularly performed is a wise princip Presumption- The evidence of a Investigating Officer is reliable one-Facts, Further held-the eviden Police witnesses is reliable and on record there is no reasons to suspect the truthfulness of the reco the Police Investigation"

ಈ ಪ್ರಕರಣದಲ್ಲಿ ಸದರಿ ಅಂಶವನ್ನು ಅನ್ವಯಿಸಿ ಪರಿಗಣಿಸಬಹುದಾಗಿದೆ. ವಿಚಾರಣೆಯ ಪ್ರಮುಖ ಹಂತ ವಾಹನ ಮಾಲೀಕರಾದ ಶ್ರೀ ಎಂ.ಎಂ. ಬಿದ್ದಪ್ಪ ಇವರು ಅವರ ಜೀಪಿನ ಹಿಂಭಾಗದಲ್ಲಿ ಕ್ಯಾನ್‌ನಲ್ಲಿದ್ದ ಶೇಂದಿ ಸಾಗ ಅವರ ತಿಳುವಳಿಕೆಗೆ ಬಾರದೇ ಆಗಿರುತ್ತದೆಂಬ ಹೇಳಿಕೆ ಸಹಾ ನೀಡಿರುತ್ತಾರೆ. ಅಲ್ಲದೇ ಸರ್ಕಾರದ ಪರವಾದ ಅ ವಿಚಾರಣೆ ಮಾಡಲಾಗಿ, ಅಪರಾಧ ಪತ್ತೆ ಮಾಡಿದ ಪೊಲೀಸ್ ತನಿಖಾಧಿಕಾರಿಯೂ ವಾಹನದ ಮಾಲೀಕರ ಸ್ವಾಧೀನಗೊಳಿಸಿದ ವಾಹನ ಅಪರಾಧದಲ್ಲಿ ಒಳಗೊಂಡಿಲ್ಲ ಎಂಬಂತೆ ನಿಲುವು ತೆಗೆದುಕೊಂಡು ಸಲಹೆ ಸೂಚಿಸಿರುವುದಿ ಹಿನ್ನೆಲೆಯಲ್ಲಿ ಅಬಕಾರಿ ಅಪರಾಧ ಪತ್ತೆ ಮಾಡಿದ ಮತ್ತು ಸ್ವತ್ತು ಸ್ವಾಧೀನ ಪಡಿಸಿದ ಪೊಲೀಸ್ ತನಿಖಾಧಿಕಾರಿಯವ ನ್ಯಾಯಾಲಯದಿಂದ ಸರ್ಚ್‌ವಾರೆಂಟ್ ಪಡೆಯದಿರುವ ಕುರಿತು ನ್ಯೂನತೆಗಳು ಇದ್ದಾಗ್ಯೂ ವಾಹನದ ಮಾಲೀಕರ ವಿಚಾರಣಾ ಸಂದರ್ಭದಲ್ಲಿನ ನಿಲುವನ್ನು ಗಣನೆಗೆ ತೆಗೆದುಕೊಂಡಾಗ ಜೀಪು ಸಂಖ್ಯೆ: ಕೆಎ–12–ಎಂ–8837 ರಲ್ಲಿ ಶೇಂದಿ ಸಾಗಾಟ ಮಾಡಿರುವುದಕ್ಕೆ ಮತ್ತು ಸ್ವಾಧೀನ ಪಡಿಸಿದ್ದಕ್ಕೆ ಸಂಬಂಧಿಸಿದಂತೆ ಪುರಾವೆ ದೃಷ್ಟಿಯಿಂದ ಯಾ ರೀತಿಯಲ್ಲಿ ಬಾಧಿಸಲಾರದೆಂದು ಅಭಿಪ್ರಾಯ ಪಡುತ್ತೇನೆ ಹಾಗೂ ದಿನಾಂಕ:03.04.2001 ರಂದು ಜೀಪು ಸಂಖ್ಯೆ: ಕೆ ಎಂ–8837ರಲ್ಲಿ ಸಾಗಾಣಿಕೆಯಾದ ವಸ್ತು ಅಬಕಾರಿ ಪದಾರ್ಥ ಶೇಂದಿ ಎಂಬುದು ದೃಢಪಟ್ಟಿರುತ್ತದೆ.

ಈ ಎಲ್ಲಾ ಕಾರಣಗಳಿಂದಾಗಿ ಒಂದನೇ ವಿವಾದಾಂಶಕ್ಕೆ ಉತ್ತರ ಹೌದು ಎಂದಾಗುತ್ತದೆ.

(2) ಎರಡನೇ ವಿವಾದಾಂಶಕ್ಕೆ ಉತ್ತರ "ಇಲ್ಲ" ಎಂದಾಗುತ್ತದೆ

ಕಾರಣಗಳು: ವಾಹನದ ಮಾಲೀಕರು ಅಬಕಾರಿ ಕಾಯಿದೆ ಮತ್ತು ನಿಯಮಗಳ ಕಲಂ 43ಬಿ(2)ರಡಿ ಪ್ರಕರಣಗಳಲ್ಲಿ ಅವರ ನಿರಪರಾಧಿತ್ವವನ್ನು ಮತ್ತು ವಾಹನವನ್ನು ಅಕ್ರಮ ಸಾಗಾಣಿಕೆಗೆ ಬಳಸಲಾಗಿರುವುದಿಲ್ಲವೆಂಬ ನಿರಾಪರಾಧಿತ್ವವನ್ನು ಸಾಬೀತು ಪಡಿಸಬೇಕಾಗಿರುತ್ತದೆ. ಹಾಗೂ ವಾಹನದ ದುರುಪಯೋಗದ ವಿರುದ್ಧ ಎಲ್ಲಾ ಬಗೆ ಸಾಕಷ್ಟು ಮುಂಜಾಗ್ರತೆಯನ್ನು ತೆಗೆದುಕೊಂಡ ಬಗ್ಗೆ ನಿರೂಪಿಸಬೇಕಾಗಿರುತ್ತದೆ.

ಡಿಡಬ್ಲ್ಯೂ–1: ವಾಹನದ ಸಂಖ್ಯೆ: ಕೆಎ–12–ಎಂ–8837ರ ಮಾಲೀಕರಾದ ಶ್ರೀ ಎಂ.ಎಂ. ಬಿದ್ದಪ್ಪ ಹರಿಹರ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು, ದಕ್ಷಿಣ ಕೊಡಗು ಇವರು ಈ ಪ್ರಾಧಿಕಾರದ ಮುಂದೆ ದಿನಾಂಕ:23.04.200 ರಕ್ಷಣಾ ಲಿಖಿತ ಸಾಕ್ಷಿಯನ್ನು ತಮ್ಮ ಪರ ವಕೀಲರ ಮೂಲಕ ಪ್ರಕಟಿಸುತ್ತಾ ಸದರಿ ವಾಹನವು

ಮಾಲೀಕತ್ವದಲ್ಲಿರುವುದಾಗಿಯೂ ದಿನಾಂಕ:03.04.2001ರಂದು ಅಕ್ರಮ ಶೇಂದಿಯನ್ನು ಜೀಪಿನಲ್ಲಿ ಸಾಗಿಸುತ್ತಿದ್ದನೆಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32, 34 ಹಾಗೂ 43ರಂತೆ ತನ್ನ ವಿರುದ್ಧವಾಗಿ ಮೊಕದ್ದಮೆ ದಾಖಲಿಸಿದ್ದು, ಸದರಿ ಜೀಪನ್ನು ಸರ್ಕಾರಕ್ಕೆ ವಶಪಡಿಸಿಕೊಂಡಿದ್ದು, ತಾನು ನಿರ್ದೋಷಿಯಾಗಿರುವುದರಿಂದ ಯಾವುದೇ ಅಪರಾಧವೆಸಗಿಲ್ಲವೆಂಬುದಾಗಿ ಹೇಳಿರುತ್ತಾರೆ ಅಲ್ಲದೇ ತಾನು ಕಾಫಿ ಪ್ಲಾಂಟರಾ ಆಗಿದ್ದು, ಕಾಫಿ ವ್ಯವಹಾರವನ್ನು ಶ್ರೀಮಂಗಲದಲ್ಲಿ ನಡೆಸುತ್ತಿರುವುದರಿಂದ ದಿನಾಂಕ:03.04.2001ರಂದು ಬೆಳಿಗ್ಗೆ 7.00 ಗಂಟೆಯಲ್ಲಿ ಜೀಪನ್ನು ಚಾಲಕನೊಂದಿಗೆ ಕಳುಹಿಸಿದ್ದು, ಕಾಫಿ ಪ್ಲಾಂಟರ್‌ರಿಂದ ಕಾಫಿ ಸಂಗ್ರಹಿಸಿ ಅದನ್ನು ಸದರಿ ಜೀಪಿನಲ್ಲಿ ಸಾಗಿಸಿದ್ದಾರೆಂದು ಹೇಳಿರುವುದನ್ನು ಮುಂದುವರಿಸುತ್ತಾ, ಏತನ್ಮಧ್ಯೆ ಚಾಲಕನು ಶ್ರೀಮಂಗಲದಿಂದ ಪರಕಟಕೇರಿ ಮಾರ್ಗದಲ್ಲಿರುವಾಗ ಕೆಲವು ಅಪರಿಚಿತ ವ್ಯಕ್ತಿಗಳು ಕೆಲವು ಪ್ಲಾಸ್ಟಿಕ್ ಕ್ಯಾನ್‌ಗಳೊಂದಿಗೆ ಡ್ರಾಪ್ ಕೊಡಲು ವಿನಂತಿಸಿದ್ದರಿಂದ ಆ ಕ್ಯಾನುಗಳಲ್ಲಿ ಏನಿದೆಯೆಂದು ಅರಿಯದೇ ಅವರುಗಳನ್ನು ಹತ್ತಿಸಿಕೊಂಡು ಹೋಗುತ್ತಿದ್ದ ಸಮಯದಲ್ಲಿ ಪೊಲೀಸರು ಸದರಿ ಜೀಪನ್ನು ವಶಪಡಿಸಿಕೊಂಡಿದ್ದು, ಈ ವಿಷಯವು ಗೊತ್ತಾದ ತಕ್ಷಣ ಶ್ರೀಮಂಗಲ ಪೊಲೀಸ್ ಠಾಣೆಗೆ ತೆರಳಿದಾಗ ತನ್ನ ವಿರುದ್ದ ಮೊಕದ್ದಮೆ ಸಂಖ್ಯೆ:43/2001ರ ದಾಖಲಾಗಿದೆಯೆಂದು ಮತ್ತು ಜೀಪನ್ನು ಸರ್ಕಾರದ ವಶದಲ್ಲಿಟ್ಟುಕೊಳ್ಳಲಾಗಿದೆಯೆಂದೂ ತಿಳಿಯಿತೆಂದಿರುತ್ತಾರೆ. ಹಾಗೂ ಈ ಘಟನೆಯು ತನ್ನ ಅರಿವಿಗೆ ಬಾರದೇ ಚಾಲಕನೇ ಈ ಅಪರಾಧಕ್ಕೆ ಹೊಣೆಯಾಗಿದ್ದು ತಾನು ಏನೂ ತಪ್ಪೆಸಗಿಲ್ಲದಿರುವುದರಿಂದ ಮತ್ತು ದೈನಂದಿನ ಕಾಫಿ ವ್ಯವಹಾರ ಹಾಗೂ ವ್ಯವಸಾಯ ಕೆಲಸಕ್ಕಾಗಿ ಉಪಯೋಗಿಸಲು ಜೀಪನ್ನು ಬಿಡುಗಡೆಗೆ ಕೇಳಿಕೊಂಡಿದ್ದರಿಂದ ಮತ್ತು ಭದ್ರತೆ ನೀಡಿದ್ದರಿಂದ ಈ ಪ್ರಾಧಿಕಾರದ ಆದೇಶ ಸಂಖ್ಯೆ: ಇಎಕ್ಸ್‌ಇ:ಡಿಟಿಸಿಆರ್‌ಎಂ:175:2001-02, ದಿನಾಂಕ:29.09.2001ರ ಮೂಲಕವಾಗಿ ಷರತ್ತುಗಳ ಮೇರೆಗೆ ವಾಹನವನ್ನು ಮಧ್ಯಂತರಿಕವಾಗಿ ಬಿಡುಗಡೆಗೊಳಿಸಲಾಗಿರುತ್ತದೆ. ಆ ನಂತರ ದಿನಾಂಕ:08.02.2007ರಂದು ಆರೋಪಿತರು ತಮ್ಮ ವಕೀಲರ ಸಹಿಯೊಂದಿಗೆ ಸದರಿ ಪ್ರಕರಣಕ್ಕೆ ಲಿಖಿತ ಹೇಳಿಕೆ ನೀಡಿ ಅದರಲ್ಲಿ ಜೀಪು ಸಂಖ್ಯೆ: ಕೆಎ-12-ಎಂ-8837 ರಲ್ಲಿ ಜೀಪಿನ ಹಿಂಭಾಗದಲ್ಲಿ ಸುಮಾರು 25 ಲೀಟರ್‌ನಷ್ಟು ಶೇಂದಿಯನ್ನು ಇಟ್ಟುಕೊಂಡು ಚಾಲನೆ ಮಾಡುತ್ತಿದ್ದಾರೆಂಬುದು ಮತ್ತು 25 ಲೀಟರ್ ಶೇಂದಿ ತುಂಬಿರುವ ಕ್ಯಾನನ್ನು ವಶಕ್ಕೆ ತೆಗೆದುಕೊಂಡು ಮೊಕದ್ದಮೆ ದಾಖಲಿಸಿದ್ದಾಗಲೀ, ರಾಸಾಯನಿಕ ತಜ್ಞರಿಗೆ ಶೇಂದಿಯನ್ನು ಕಳುಹಿಸಿರುವ ಅಬಕಾರಿ ಉಪ ನಿರೀಕ್ಷಕರು, ಅದರಲ್ಲಿ ಮದ್ಯಸಾರದ ಪ್ರಮಾಣ 2.12% ಶೇಕಡಾ ಇರುವುದೆಂಬ ವರದಿ ಪಡೆದಿದ್ದಾರೆಂಬುದು ಸತ್ಯಕ್ಕೆ ದೂರವಾದ ವಿಚಾರವಾಗಿರುವುದಾಗಿ ತಿಳಿಸಿದ್ದು, ಪರಿಚಯದ ಜನರನ್ನು ತಮ್ಮ ತಮ್ಮ ಊರಿಗೆ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಜೀಪನ್ನು ಮಾಲೀಕರಾಗಿ ಚಾಲನೆ ಮಾಡುತ್ತಿರುವುದರಿಂದ ಅವರ ಗಮನಕ್ಕೆ ಯಾವುದೇ ವಿಷಯ ಬಂದಿರುವುದಿಲ್ಲವೆಂದು ಹಾಗೂ ಸರ್ಚ್ ಮೆಮೋ ಅಥವಾ ಸರ್ಚ್ ವಾರೆಂಟ್ ಪಡೆದಿಲ್ಲದಿರುವ ಕಾರಣ ಪ್ರಕರಣದ ಬಗ್ಗೆ ಸಂಶಯ ಉಂಟಾಗಿದ್ದು, ಸುಮ್ಮನೆ ಈ ಪ್ರಕರಣ ಹೂಡಿರುತ್ತಾರೆಂದು ತಿಳಿಸುತ್ತಾ, ಪ್ರಕರಣದ ವಜಾಕ್ಕಾಗಿ ಕೇಳಿಕೊಂಡಿರುತ್ತಾರೆ. ನಂತರ ಪುನಃ ದಿನಾಂಕ:26.11.2008ರಂದಿನ ತಮ್ಮ ವಕೀಲರ ಮೂಲಕ ಸಲ್ಲಿಸಿರುವ ಲಿಖಿತ ಹೇಳಿಕೆಯ ವಾದ ಪತ್ರದ ಮುಖ್ಯಾಂಶದಂತೆ ಶ್ರೀ ಎಂ.ಎಂ. ಬಿದ್ದಪ್ಪ ಇವರೇ ವಾಹನ ಸಂಖ್ಯೆ: ಕೆಎ-12-ಎಂ-8837ರ ಮಾಲೀಕರಾಗಿದ್ದು, ದಿನಾಂಕ:03.04.2001ರಂದು ಚಾಲನೆ ಮಾಡುತ್ತಿದ್ದರೆಂದು ಒಪ್ಪಿದ್ದರೂ ಕೂಡ ಅಕ್ರಮವಾಗಿ ಅವರ ಜೀಪಿನಲ್ಲಿ ಶೇಂದಿ ಸಾಗಾಣಿಕೆಯಾಗಿರುವುದು ತನ್ನ ತಿಳುವಳಿಕೆಗೆ ಬಂದಿರಲಿಲ್ಲವೆಂದು ಹೇಳಿದ್ದು, ಸ್ಥಳದ ಸರ್ಚ್ ವಾರೆಂಟ್ ಅಥವಾ ಸರ್ಚ್ ಮೆಮೊ ಇಲ್ಲದೇ ವಾಹನ ವಶಪಡಿಸಿಕೊಂಡಿರುವುದು ಅಕ್ರಮವೆಂದು ಹೇಳಿರುತ್ತಾರೆ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅಬಕಾರಿ ಕಾಯಿದೆ ಮತ್ತು ನಿಯಮಗಳ ಕಲಂ 43ಬಿ(2) ರಡಿ ವಾಹನದ ಮಾಲೀಕರು ಅವರ ನಿರಪರಾಧಿತ್ವವನ್ನು ಪುರಾವೆ ಮಾಡುವ ಜವಾಬ್ದಾರಿ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿರುತ್ತಾರೆಂದು ನಾನು ಅಭಿಪ್ರಾಯ ಪಡುತ್ತೇನೆ. ಈ ಪ್ರಕರಣದಲ್ಲಿ ಮೊಕದ್ದಮೆ ದಾಖಲಾದ ಸಂದರ್ಭದಲ್ಲಿ ಒಮ್ಮೆ ತಮ್ಮ ಚಾಲಕನೇ ಜೀಪನ್ನು ಓಡಿಸುತ್ತಿದ್ದನೆಂದೂ ಆತನೇ ಅಂತಹ ಕೃತ್ಯ ಘಟನೆಗೆ ಕಾರಣನೆಂಬುದಾಗಿ ಹೇಳಿರುತ್ತಾರೆ. ಮತ್ತು ಆದಕಾರಣ ನಿರಪರಾಧಿಯಾಗಿರುವುದರಿಂದ ವಾಹನದ ಬಿಡುಗಡೆಗೆ ಕೋರಿರುತ್ತಾರೆ. ಮತ್ತೊಮ್ಮೆ ಜೀಪನ್ನು ಯಾರು ಚಾಲನೆ ಮಾಡುತ್ತಿದ್ದರು ಹಾಗೂ ಜೀಪಿನಲ್ಲಿ ಜನರನ್ನು ಹತ್ತಿಸಿಕೊಂಡವರು ಯಾರೆಂಬ ಬಗ್ಗೆ ಸಂಶಯವುಂಟಾಗುವಂತೆ ವೈರುಧ್ಯ ಹೇಳಿಕೆಗಳನ್ನು ನೀಡಿರುವುದಲ್ಲದೇ ಪ್ರಕರಣ ನಡೆದಿರಬಹುದಾಗಿದ್ದರೂ ಅದು ತನ್ನ ತಿಳುವಳಿಕೆ ಅಥವಾ ಅರಿವಿಗೆ ಬಂದಿಲ್ಲವೆಂದು ನುಡಿದಿರುತ್ತಾರೆ. ಅಲ್ಲದೇ ದಿನಾಂಕ:26/27.11.2008ರಂದು ಸಲ್ಲಿಸಿದ ವಾದ ಪತ್ರದಲ್ಲಿ ಸಾಕ್ಷಿದಾರರಲ್ಲೊಬ್ಬರು ಪ್ರತಿಕೂಲ ಸಾಕ್ಷಿ ನುಡಿದಿದ್ದು ಮತ್ತೊಬ್ಬ ಸಾಕ್ಷಿಯು ಲಭ್ಯವಿಲ್ಲದ್ದರಿಂದಾಗಿಯೇ ಜೀಪಿನಲ್ಲಿ ಅಕ್ರಮ ಶೇಂದಿ ಸಾಗಾಣಿಕೆಯಾಗುತ್ತಿತ್ತೆನ್ನುವುದನ್ನು ಸಮರ್ಥಿಸಲು ಯಾವುದೇ ಸ್ವತಂತ್ರ ಸಾಕ್ಷ್ಯಾಧಾರವಿಲ್ಲವೆಂದು ತಿಳಿಸುವುದೂ ಸಹ ಪೊಲೀಸ್ ಸಹಾಯಕ ಉಪ ನಿರೀಕ್ಷಕರ ಸಾಕ್ಷ್ಯವನ್ನು ಪರಿಗಣಿಸಬಾರದೆಂಬುವ ಮನೋಭಾವವನ್ನು ತೋರ್ಪಡಿಸುತ್ತದೆಂಬ ಅನುಮಾನ ಮೂಡಿಸುತ್ತದೆ. ಇದಲ್ಲದೇ ಚಾಲಕನು ಕ್ಯಾನು ಹಿಡಿದಿದ್ದ ಅಪರಿಚಿತ ಜನರನ್ನು ಡ್ರಾಪ್ ಕೊಡಲು ಜೀಪಿಗೆ ಹತ್ತಿಸಿಕೊಂಡಿದ್ದಾನೆಯೇ ಮತ್ತು ಚಾಲಕ ಹಾಗೂ ಮಾಲೀಕರು ನಿರಪರಾಧಿಗಳೇ ಎಂಬ ಬಗ್ಗೆ ಪುರಾವೆ ಮಾಡಲು ಚಾಲಕನ ಸಾಕ್ಷ್ಯವನ್ನು ಅವರ ಪರ ಮಾಡಿಸದೇ ಕಲಂ 43ಬಿ(2) ಪ್ರಕಾರ ಅವರ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂಬ ಅಂಶಕ್ಕೆ ಪುಷ್ಟಿಕೊಡುತ್ತದೆ. ತಮ್ಮ ವಾಹನ ಜಪ್ತಿ ಮಾಡಿದ ಪೊಲೀಸರ ಮೇಲೆ ವೈಯುಕ್ತಿಕವಾಗಿ ಯಾವುದೇ ಆರೋಪ

ಮಾಡಲಾಗಿರುವ ಅಂಶ ಆಧಾರದ ಮೇಲಾಗಿ ಸುಮ್ಮನೆ ಈ ಪ್ರಕರಣವನ್ನು ನನ್ನ ಮೇಲೆ ಹೂಡಿರುತ್ತಾರೆಂದು ತಿಳಿಸಿರುತ್ತಾರೆ ಮತ್ತು ಈ ವಿಷಯದ ಆಧಾರದ ಮೇಲೆ ಪೊಲೀಸ್ ಸಹಾಯಕ ಉಪ ನಿರೀಕ್ಷಕರ ಮೊಕದ್ದಮೆ ಸಂಖ್ಯೆ: 43/2001ನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ. ಅಭಿಯೋಗದ ಪರ ಸಾಕ್ಷಿಯಾಗಿದ್ದವರು ಪ್ರತಿಕೂಲ ಸಾಕ್ಷಿ ನುಡಿದರೆಂದು ಸರ್ಕಾರದ ಕರ್ತವ್ಯ ನಿರ್ವಹಿಸುವ ಅಧಿಕೃತ ಪೊಲೀಸ್ ಅಧಿಕಾರಿಯೊಬ್ಬರ ಸಾಕ್ಷ್ಯವನ್ನು ತಳ್ಳಿಹಾಕಲು ಕಾನೂನು ಮತ್ತು ನಿಯಮಗಳಲ್ಲಿ ಅವಕಾಶವಿಲ್ಲವಾಗಿದ್ದು, ಈ ಮೇಲೆ ಚರ್ಚಿಸಿದ ಕಾರಣಗಳಿಂದಾಗಿ ವಾಹನದ ಮಾಲೀಕರಾಗಲೀ, ಅಥವಾ ಇತರೆ ಯಾರೇ ವ್ಯಕ್ತಿಗಳಾಗಲೀ ಕೃತ್ಯ ನಡೆದ ಸಮಯದಲ್ಲಿ ವಾಹನವು ಯಾರ ವಶದಲ್ಲಿತ್ತೋ ಅಂಥವರು ಎಲ್ಲರೂ ಪ್ರತಿಯೊಬ್ಬರೂ ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆಯು ತಮ್ಮ ತಿಳುವಳಿಕೆಗೆ ಬಾರದೇ ಹಾಗೂ ತಾವು ಶಾಮೀಲಾಗದೇ ಈ ಕೃತ್ಯವು ಸಂಭವಿಸಿದೆ ಎಂಬ ಅಂಶವನ್ನು ಪ್ರಾಧಿಕಾರದ ಮುಂದೆ ತೃಪ್ತಿಕರವಾಗಿ ನಿರೂಪಿಸಬೇಕಾಗುತ್ತದೆ. ಆದರೆ ಡಿಡಬ್ಲ್ಯೂ-1ರ ಸಾಕ್ಷಿಯನ್ನು ಗಮನಿಸಲಾಗಿ ವಾಹನದಲ್ಲಿ ತಮ್ಮ ತಿಳುವಳಿಕೆಗೆ ಬಾರದೇ ಹಾಗೂ ತಾವು ಶಾಮೀಲಾಗದೇ ಈ ಕೃತ್ಯ ಅಕ್ರಮ ಶೇಂದಿ ಸಾಗಾಣಿಕೆ ಸಂಭವಿಸಿದೆ ಎಂಬ ಬಗ್ಗೆ ಪ್ರಾಧಿಕಾರದ ಮುಂದೆ ನಿರೂಪಿಸುವಲ್ಲಿ ವಿಫಲರಾಗಿದ್ದಾರೆ ಮತ್ತು ರಕ್ಷಣಾ ಸಾಕ್ಷಿಯಾಗಿ ಬೇರೆಯಾರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

ಕಾರಣ ಎರಡನೇ ವಿವಾದಾಂಶಕ್ಕೆ ಉತ್ತರ ಇಲ್ಲ ಎಂದಾಗಿರುತ್ತದೆ.

(3) ಮೂರನೇ ವಿವಾದಾಂಶಕ್ಕೆ ಉತ್ತರ ಇಲ್ಲ ಎಂದಾಗುತ್ತದೆ:

ಕಾರಣಗಳು: 1 ಮತ್ತು 2ನೇ ವಿವಾದಾಂಶಗಳಲ್ಲಿ ಉತ್ತರಿಸುವಾಗ ಚರ್ಚಿಸಿ ಉಲ್ಲೇಖಿಸಿದ ಅಂಶಗಳನ್ನು ಅವಲೋಕಿಸುವುದರಿಂದ ವಾಹನದ ಮಾಲೀಕರು ನಿರಾಪರಾಧಿ ಎಂಬುವರ ಕುರಿತು ರುಜುವಾತುಪಡಿಸುವಲ್ಲಿ ವಿಫಲರಾಗಿರುವುದರಿಂದ ಮತ್ತು ಜೀಪಿನಲ್ಲಿ ಅಕ್ರಮವಾಗಿ ಶೇಂದಿಯು ಸಾಗಾಟವಾಗಿರುವುದು ಸಾಬೀತಾಗಿರುವುದರಿಂದ ಜೀಪಿನಲ್ಲಿ ಅಕ್ರಮ ಶೇಂದಿ ಸಾಗಾಟ ವಾಹನದ ಮಾಲೀಕರ ಗಮನಕ್ಕೆ ಒಳಪಟ್ಟ ವಿಚಾರವೆಂಬುದು ದೃಢಪಡುವುದರಿಂದ 3ನೇ ವಿವಾದಾಂಶಕ್ಕೆ ಉತ್ತರ ಇಲ್ಲ ಎಂದಾಗುತ್ತದೆ.

(4) ನಾಲ್ಕನೇ ವಿವಾದಾಂಶಕ್ಕೆ ಉತ್ತರ "ಹೌದು" ಎಂದಾಗುತ್ತದೆ:

ಕಾರಣಗಳು: ಈ ಅಂಶಕ್ಕೆ ಸಂಬಂಧಿಸಿದಂತೆ ಸಹಾಯಕ ಅಭಿಯೋಗ ನಿರ್ದೇಶಕರು, ಮಡಿಕೇರಿ ಇವರು ದಿನಾಂಕ:26/27.11.2008ರ ವಾದಪತ್ರದಲ್ಲಿ ಅಭಿಯೋಜನ ಪಕ್ಷದ ಪರವಾಗಿ ನ್ಯಾಯಾಲಯವಲ್ಲಿ ಬರವಣಿಗೆಯ ವಾದದ ಮಂಡನೆ ಮೂಲಕ ಸಲ್ಲಿಸಿದ್ದ ಅರ್ಜಿಯಲ್ಲಿ ಪ್ರಕರಣದ ಎಲ್ಲಾ ವಿವರಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ನೋಡಿದಾಗ ಅಭಿಯೋಜನೆ ಪಕ್ಷಕ್ಕೆ ಸಾಕ್ಷಿ ನೀಡಿದಿರುವ ಸಾಕ್ಷಿಗಳ ಪೈಕಿ ಸಾಕ್ಷಿ ಒಂಬನೇಯವರು ಮಾತ್ರ ತನಿಖಾಧಿಕಾರಿಗಳಾಗಿದ್ದು, ಇವರು ಅಭಿಯೋಜನೆ ಪಕ್ಷಕ್ಕೆ ಎಲ್ಲಾ ಕೋನಗಳಿಂದಲು ಚ್ಯುತಿ ಬಾರದಂತೆ ಸಾಕ್ಷಿ ನುಡಿದಿರುತ್ತಾರೆ. ಸದರಿ ಕೇಸಿನಲ್ಲಿ ಮಹಜರು ಸಾಕ್ಷಿ ಸ್ಟಾರ್ ಸಾಕ್ಷಿಯಾಗಿದ್ದು, ಈ ಸಾಕ್ಷಿಯು ಅಭಿಯೋಜನೆ ಪಕ್ಷಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಬೇರೆ ಸಾಕ್ಷಿಗಳು ವಾಹನದ ಮಾಲೀಕರ ಮೇಲೆ ಹೂಡಿರುವ ದಾವೆಯನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಆದರೂ ಕೂಡ ಭಾರತ ಸರ್ಕಾರದ ಮಾನ್ಯ ಸುಪ್ರೀಂ ಕೋರ್ಟಿನ ರೂಲಿಂಗ್ಸ್‌ಗಳಲ್ಲಿ ಹಾಗೂ ಮಾನ್ಯ ಉಚ್ಛ ನ್ಯಾಯಾಲಯಗಳಲ್ಲಿ ರೂಲಿಂಗ್ಸ್ ಪ್ರಕಾರ ಯಾವುದೇ ಕೇಸಿನಲ್ಲಿ ಒಬ್ಬ ಸಾಕ್ಷಿದಾರ ಉತ್ತಮವಾಗಿ ಸಾಕ್ಷಿ ನುಡಿದರೆ ಇನ್ನುಳಿದ ಸಾಕ್ಷಿದಾರರು ಬೇರೆ ಬೇರೆ ಕಾರಣಗಳಿಗೋಸ್ಕರ ವ್ಯತಿರಿಕ್ತವಾಗಿ ಸಾಕ್ಷಿ ನುಡಿದರೆ ಶಿಕ್ಷೆ ವಿಧಿಸಬಹುದಾಗಿದೆಯೆಂದು ಮೇಲ್ಕಂಡ ಘನವೆತ್ತ ನ್ಯಾಯಾಲಯಗಳು ತೀರ್ಮಾನಕ್ಕೆ ಬಂದಿರುತ್ತವೆ.

ಆರೋಪಿಗಳ ಮೇಲೆ ಹೊರಿಸಲಾದ ದೋಷಾರೋಪಣ ಪಟ್ಟಿಯಲ್ಲಿ ಅಬಕಾರಿ ಕಾಯಿದೆ ಕಲಂ 32, 34 ಪ್ರಕಾರ ಮಾನ್ಯ ಪ್ರಧಾನ ಸಿವಿಲ್ ಜಡ್ಜ್, ವಿರಾಜಪೇಟೆಯಲ್ಲಿ ಮೊಕದ್ದಮೆ ದಾಖಲಾಗಿದ್ದು, ಅಲ್ಲಿ ಆರೋಪಿಯ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದರಿಂದ ಆರೋಪಿಯನ್ನು ಖುಲಾಸೆಗೊಳಿಸಿರುತ್ತಾರೆ. ಆದರೆ ಅಬಕಾರಿ ಕಾಯಿದೆ 43ಎ(2)ರಲ್ಲಿ ಅಧಿಕೃತ ಅಧಿಕಾರಿಗಳು ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿದ್ದು ಸರಿ ಇರುತ್ತದೆ. ಆದರೆ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ಆರೋಪಿಯ ಖುಲಾಸೆಗೂ ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿರುವ ಅಧಿಕೃತ ಅಧಿಕಾರಿಯವರ ನ್ಯಾಯಾಲಯಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ನ್ಯಾಯಾಲಯದಲ್ಲಿ ಆರೋಪಿ ಖುಲಾಸೆಯಾದರಿಂದ ಈ ನ್ಯಾಯಾಲಯದಲ್ಲಿ ವಾಹನವನ್ನು ಬಿಡುಗಡೆ ಮಾಡಬೇಕೆಂದು ಯಾವುದೇ ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿರುವುದಿಲ್ಲ. ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಪರಾಮರ್ಶಿಸಿದಾಗ ವಾಹನ ಮಾಲೀಕರು ಮೇಲ್ಕಂಡ ದಿನಾಂಕದಂದು ಯಾವುದೇ ಪರವಾನಿಗೆ ಇಲ್ಲದೆ ತಮ್ಮ ವಾಹನದಲ್ಲಿ ಮಾನವನ ಜೀವಕ್ಕೆ ಹಾನಿಯಾಗುವಂತಹ ಶೇಂದಿಯನ್ನು ಸಾಗಾಟ ಮಾಡುತ್ತಿದ್ದದ್ದು ತನಿಖೆಯಿಂದ ಹಾಗೂ ಪಂಚಾಯಿತುದಾರರ ರೂಬು ರೂಬು ಜಪ್ತಿ ಮಾಡಿರುವುದು ನಿಜ ಸಂಗತಿಯಾಗಿರುತ್ತದೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಮಾನ್ಯ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಅಭಿಯೋಜನ ಪಕ್ಷವು ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ" ಎಂಬುದಾಗಿ ವಿನಂತಿಸಿರುವುದನ್ನು ಅವಲೋಕಿಸಲಾಗಿದೆ.

ಅಲ್ಲದೇ ವಿವಾದಾಂಶ 1 ರಿಂದ 3ಕ್ಕೆ ಉತ್ತರಿಸುವಾಗ ಈಗಾಗಲೇ ಚರ್ಚಿಸಿದ ವಿಷಯಗಳನ್ನು ಅವಲೋಕಿಸುವುದಾದರೆ ಹಾಗೂ ದಿನಾಂಕ:22.01.2009ರಂದು ನೀಡಲಾದ 43ಬಿ ನೋಟೀಸಿಗೆ ಪಡೆದ ಸಾಕ್ಷರ ಉತ್ತರದ ದಿನಾಂಕ:07.02.2008ರಲ್ಲಿನ ಉತ್ತರದಲ್ಲಿ ಜೀಪ್ ಸಂಖ್ಯೆ: ಕೆಎ-12-ಎಂ-8837 ರಲ್ಲಿ ದಿನಾಂಕ:03.04.2001ರಂದು ಅಕ್ರಮವಾಗಿ ಶೇಂದಿಯನ್ನು ಸಾಗಾಟ ಮಾಡಿರುವುದು ಸಾಬೀತಾಗಿರುವುದರಿಂದ ವಶಪಡಿಸಿಕೊಳ್ಳಲಾದ ವಾಹನ ಸಂಖ್ಯೆ: ಕೆಎ-12-ಎಂ-8837 ರನ್ನು ಮಧ್ಯಂತರಿಕವಾಗಿ ಬಿಡುಗಡೆಗೊಳಿಸಿರುವ ದಿನಾಂಕ:29.09.2001ರಂದಿನ ಆದೇಶ ಸಂಖ್ಯೆ: ಇಎಕ್ಸ್ಇ:3:ಡಿಟಿಸಿಆರ್ಎಂ:175:2001-02ನ್ನು ರದ್ದುಗೊಳಿಸಿ ಹಿಂಪಡೆಯಲು ಉದ್ದೇಶಿಸಲಾಗಿದ್ದು, ಕಲಂ 43(ಬಿ) ರಂತೆ ವಾಹನದ ಮಾಲೀಕರು ನಿರಾಪರಾಧಿತ್ವವನ್ನು ಪುರಾವೆ ಮಾಡಲು ವಿಫಲರಾಗಿರುವುದರಿಂದ ಮತ್ತು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಸಿ ಹಾಗೂ 43ಎ (3) ರನ್ವಯವಾಗಿ ಕ್ರಮವಾಗಿ ವಾಹನವಲ್ಲಿದ್ದ 25 ಲೀ. ಶೇಂದಿಯನ್ನು ದಿನಾಂಕ:22.12.2005ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು ನಾಶಪಡಿಸಲು ಆದೇಶವಾಗಿರುವುದರಿಂದ ಜೀಪ್ ಸಂಖ್ಯೆ: ಕೆಎ-12-ಎಂ-8837 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ ಎಂದು ಕಂಡುಬರುವುದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಇಎಕ್ಸ್ಇ:3:ಡಿಟಿಸಿಆರ್ಎಂ:175:2001-02, ದಿನಾಂಕ:10ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಮುಖ್ಯಾಂಶಗಳ ಹಿನ್ನೆಲೆಯಲ್ಲಿ ಸಿ.ಎಲ್. ಜಯರಾಂ. ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಕೊಡಗು ಜಿಲ್ಲೆ, ಮಡಿಕೇರಿ ಆದ ನಾನು ವಾಹನ ಸಂಖ್ಯೆ ಕೆಎ-12-ಎಂ-8837ನ್ನು ಮಧ್ಯಾಂತರಿಕವಾಗಿ ಬಿಡುಗಡೆ ಮಾಡಿರುವ ದಿನಾಂಕ:29.09.2001ರ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಹಿಂತೆಗೆದುಕೊಂಡಿರುತ್ತೇನೆ. ಹಾಗೂ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ರ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಶ್ರೀಮಂಗಲ ಪೋಲಿಸ್ ಠಾಣೆ. ಶ್ರೀಮಂಗಲ ಇವರು ದಾಖಲಿಸಿದ ಪ್ರಥಮ ವರ್ತಮಾನ ವರದಿ ಸಂಖ್ಯೆ:43:2001 ದಿನಾಂಕ:03.04.2001ರಲ್ಲಿ ಜಪ್ತು ಮಾಡಿದ ವಾಹನ ಸಂಖ್ಯೆ:ಕೆಎ-12-ಎಂ-8837ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

ಈ ಆದೇಶವನ್ನು ದಿನಾಂಕ:10.02.2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಯಲ್ಲಿ ಬರುತ್ತದೆ.

ಸಿ.ಎಲ್. ಜಯರಾಂ
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಕೊಡಗು ಜಿಲ್ಲೆ, ಮಡಿಕೇರಿ.

ಅನುಬಂಧ

ಅನುಬಂಧ-1

ಅಭಿಯೋಗದ ಪರ ಸಾಕ್ಷಿಗಳು

ಪಿಡಬ್ಲ್ಯೂ-1 ಶ್ರೀ ಟಿ.ಕೆ. ಮರಿಯಪ್ಪ, ಎ.ಎಸ್.ಐ. ಮೂರ್ನಾಡು

ಪಿಡಬ್ಲ್ಯೂ-2 ಶ್ರೀ ಬಿ.ಸಿ. ಬಾಲ, ಬಿನ್ ಚಾಮಿ. ಶ್ರೀಮಂಗಲ

ಅನುಬಂಧ-2

ಪ್ರತಿವಾದಿಗಳ ಪರ ಸಾಕ್ಷಿಗಳು

ಡಿಡಬ್ಲ್ಯೂ-1 ಶ್ರೀ ಎಂ.ಎಂ.ಬಿದ್ದಪ್ಪ ಬಿನ್ ಮಾದಪ್ಪ, ವಾಹನದ ಮಾಲೀಕರು
ಹರಿಹರ ಗ್ರಾಮ & ಅಂಚೆ, ವಿರಾಜಪೇಟೆ ತಾಲ್ಲೂಕು.

ಅನುಬಂಧ-3

ಅಭಿಯೋಗದ ಪರ ಗುರುತಿಸಲಾದ ದಾಖಲಾತಿಗಳು

ನಿಶಾನೆ-1 ಪಿ-1 ಮತ್ತು ಪಿ1ಎ :ಸ್ಥಳದ ಅಪರಾಧ ವಿವರ ನಮೂನೆ ಮತ್ತು ಪ್ರಥಮ ವರ್ತಮಾನ ವರದಿಯಲ್ಲಿ ಸಹಿ.

ನಿಶಾನೆ-2 ಪಿ-2 ಮತ್ತು ಪಿ-2ಎ ಪ್ರ.ವ.ವ.ಸಂ: 43/2001ರ ಪ್ರತಿ ಮತ್ತು ಸಹಿ.

ನಿಶಾನೆ-3 ಪಿ-3 ಮತ್ತು ಪಿ3ಎ : ದಿ.03.04.2001ರ ಮ್ಯಾಜಿಸ್ಟ್ರೇಟ್ ರವರಿಗೆ ಕಳುಹಿಸಿದ ಪ್ರತಿ ಪಟ್ಟಿ ಮತ್ತು ಸ್ಥಳ ಜಪ್ತಿ ಪಂಚನಾಮ ಸಹಿ.

ನಿಶಾನೆ-4 ಪಿ-4 ಮತ್ತು ಪಿ-4ಎ : ದಿ:04.04.2001ರ ಪೊಲೀಸ್ ಉಪ ನಿರೀಕ್ಷಕರು, ಶ್ರೀಮಂಗಲ ಪೊಲೀಸ್ ಠಾಣೆ, ಶ್ರೀಮಂಗಲ ಇವರ ಪತ್ರ ಹಾಗೂ ಕರ್ನಾಟಕ ಅಬಕಾರಿ ಕಾಯಿದೆ 43ಎ ರನ್ವಯ ಸಲ್ಲಿಸಿರುವ ವರದಿ.

ನಿಶಾನೆ-5 ಪಿ-5 : ಪೊನ್ನಂಪೇಟೆ ಉಪ ವಲಯದ ಅಬಕಾರಿ ಉಪ ನಿರೀಕ್ಷಕರು ರವರು

ಪಿ5(ಎ) : ದಿನಾಂಕ:20.04.2001 ರಂದು ಶ್ರೀಮಂಗಲ ಪೊಲೀಸ್ ಉಪ ನಿರೀಕ್ಷಕರಿಂದ ಪ್ರಕರಣದ ಸಂಬಂಧ ಮೂಲ ದಾಖಲೆ ಪಡೆದ ಬಗ್ಗೆ ಮಾಹಿತಿ ಪತ್ರ.

ನಿಶಾನೆ 6 ಪಿ 6: ರಾಸಾಯನಿಕ ವಿಶ್ಲೇಷಣಾ ವರದಿಯ ದೃಢೀಕೃತ ನಕಲು.

ಅನುಬಂಧ-4

ಪ್ರತಿವಾದಿಗಳ ಪರ ಮಂಡಿಸಲಾದ ದಾಖಲಾತಿಗಳು

- ಯಾವುದು ಇರುವುದಿಲ್ಲ -

ಅಧಿಕೃತ ಅಧಿಕಾರಿಗಳು ಹಾಗೂ

ಪಿ.ಆರ್.171 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಕೊಡಗು ಜಿಲ್ಲೆ, ಮಡಿಕೇರಿ.

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ. ಭದ್ರಾವತಿ ವಿಭಾಗ, ಭದ್ರಾವತಿ

ಅಧಿಸೂಚನೆ

ಸಂಖ್ಯೆ: ಎ3-ಪಿಓಎಸ್-ಸಿಆರ್-9/2009-10, ದಿನಾಂಕ:10ನೇ ಜುಲೈ, 2009

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಅಪರಾಧ ಪ್ರಕರಣ ಸಂಬಂಧ ಕೆಳಕಂಡ ವಾಹನಗಳನ್ನು ತರೀಕೆರೆ ವಲಯದ ಲಿಂಗದಹಳ್ಳಿ ಶಾಖೆಯ ವನಪಾಲಕರು ಹಾಗೂ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್-71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

ಕ್ರ. ಸಂ.	ಮೊಕದ್ದಮೆ ಸಂಖ್ಯೆ	ವಾಹನಗಳ ವಿವರ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1.	ತರೀಕೆರೆ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 37/2009-10, ದಿನಾಂಕ:01.07.2009	ಒಂದು ಮಾರುತಿ ಓಮಿನಿ ವ್ಯಾನ್ ಸಂಖ್ಯೆ: ಕೆಎ-17-ಎಂ-793 ಹಾಗೂ ಬೀಟೆ ತುಂಡುಗಳು 7=0.224 ಮತ್ತು ಒಂದು ಗ್ಯಾಸ್ ಸಿಲಿಂಡರ್	N2040247	STQIN938371

ಈ ಮೇಲ್ಕಂಡ ವಾಹನದ ನಿಜವಾದ ವಾರಸುದಾರರು ಯಾರದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾಧ್ಯತೆಗಳನ್ನು ಈ ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಈ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡಲು ಉಪಯೋಗಿಸಿದಕ್ಕಾಗಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ಈ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಎಸ್. ವೆಂಕಟೇಸನ್

ಪಿ.ಆರ್.657 ಉಪ ಅರಣ್ಯ ಸಂರಕ್ಷಣಾಧಿಕಾರಿ,

ಭದ್ರಾವತಿ ವಿಭಾಗ, ಭದ್ರಾವತಿ.

IN THE COURT OF THE 5TH ADDITIONAL CHIEF METROPOLITAN MAGISTRATE, BANGALORE CITY

Notification No. /2009, Dated:20th July, 2009

It is hereby notified for the information of the public that the unclaimed properties mentioned under are in the custody of the Kumarswamy layout Police Station, Bangalore City, as unclaimed shall be confiscted to the Government, and disposed off according to law of not claimed by the owner with proof of ownership within one months from the date of the publication of notification.

Sl. No.	"C" Mise/ CR.No.	PF-No.	Vehicle No. Eng & Chassis No.
1.	Cimiss No.208/05	40/05	KA-05-EJ-7690 TVS Victore GLX
2.	Cimiss No.527/05	125/05	KA-05-J-3762, Kinetic Honda

Sl. No.	"C" Mise/ CR.No.	PF-No.	Vehicle No. Eng & Chassis No.
3.	Cimiss No.529/05	127/05	KA-04-L-7026, RTZ Bike
4.	Cimiss No.634/06	125/06	CKW-6704, TVS Champ
5.	Cimiss No.357/08	85/08	TN-31-B-0894, Suzuki Bike
6.	Cimiss No.358/08	86/08	KA-05-EA-3523, TVS Moped
7.	Cimiss No.359/08	87/08	KA-01-E-1583, Kinetic Honda
8.	Cimiss No.360/08	88/08	KA-04-L-2293, Kawasaki Bajaj
9.	Cimiss No.369/08	90/08	CNN-1692, RX Yamaha
10.	Cimiss No.370/08	89/08	KA-04-X-1052, Kinetic Style
11.	Cimiss No.371/08	91/08	KA-02-X-3426, Bajaj Bike
12.	Cimiss No.372/08	92/08	CKN-9969, Bajaj Scooter
13.	Cimiss No.429/08	104/08	KA-05-V-6014, Bajaj Bike
14.	Cimiss No.430/08	105/08	KA-05-R-7594, TVS Champ
15.	Cimiss No.433/08	106/08	KA-05-S-6098, Kinetic Honda
16.	Cimiss No.435/08	107/08	ATN-3730, TVS Bike
17.	Cimiss No.437/08	108/08	CKK-9372, Bajaj Scooter
18.	Cimiss No.439/08	109/08	KA-03-J-1915, Hero puch
19.	Cimiss No.442/08	110/08	KL-10-N-6232, Hero Honda Spl.
20.	Cimiss No.443/08	111/08	KA-09-K-6509, Hero puch
21.	Cimiss No.447/08	114/08	KA-05-S-8717, Suzuki Bike
22.	Cimiss No.448/08	115/08	CNA-554, TVS Moped
23.	Cimiss No.188/09	39/09	KA-20-S-5548, Bajaj Pulser

PR-655 Vth Addl. Chief Metropolitan Magistrate, Bangalore.

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಯವರ ಕಛೇರಿ, ಸಾರಥಿಭವನ, ಅಜ್ಜರಕಾಡು, ಉಡುಪಿ

ಪ್ರಕಟಣೆ

ಸಂಖ್ಯೆ: ಬಿಸಿಎಂಉ:ಹಿವಕಾತಶೀವೆ:ಸಿಆರ್:21:2009-10, ದಿನಾಂಕ:10ನೇ ಜುಲೈ, 2009

ವಿಷಯ: ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರು ಮಾಡಲು ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್:68:ಎಸ್‌ಇಡಬ್ಲ್ಯೂ:89: ದಿನಾಂಕ:02.11.1990.

2) ಸರ್ಕಾರಿ ಆದೇಶ ಸಂಖ್ಯೆ: ಸಕಇ:446:ಬಿಎಂಎಸ್:2005, ದಿನಾಂಕ:01.11.2005.

ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ವಕೀಲಿ ವೃತ್ತಿಯಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರು ಾಡಲು ಜಿಲ್ಲೆಯ ಅರ್ಹ ಮತ್ತು ಆಸಕ್ತ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅರ್ಜಿ ಮೂನೆಗಳನ್ನು ಈ ಕಛೇರಿಯಿಂದ ಕಛೇರಿ ಕೆಲಸದ ಸಮಯದಲ್ಲಿ ಪಡೆದುಕೊಳ್ಳಬಹುದು.

1) ಅರ್ಜಿ ಸಲ್ಲಿಸುವ ಕಾನೂನು ಪದವೀಧರರು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ, ಮತ್ತು 3ಬಿ ಗಳಿಗೆ ರಿದವರಾಗಿರಬೇಕು. ಪ್ರವರ್ಗ 1 ನ್ನು ಹೊರತುಪಡಿಸಿ ಇತರೆ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿ ಪೋಷಕರ ಕುಟುಂಬದ ರ್ಷಿಕ ಆದಾಯವು ರೂ.15000/-ಗಳ ಮಿತಿಯಲ್ಲಿರಬೇಕು.

2) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಿಂದ ಹಿಂದಿನ ಎರಡು ವರ್ಷಗಳೊಳಗೆ ನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

3) ಹಿಂದುಳಿದ ವರ್ಗಗಳ ಪ್ರವರ್ಗ-2ಎ, 3ಎ, ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಗದಿಪಡಿಸಿದ ಕೊನೆಯ ದಿನಾಂಕದಂದು ಗರಿಷ್ಟ 30 ವರ್ಷಗಳ ವಯೋಮಿತಿಯಲ್ಲಿ ಇರಬೇಕು. ಪ್ರವರ್ಗ 1ಕ್ಕೆ ಸೇರಿದ ್ಯರ್ಥಿಗಳು ಗರಿಷ್ಟ 31 ವರ್ಷಗಳ ವಯೋಮಿತಿಯೊಳಗಿರಬೇಕು.

4) ಅಭ್ಯರ್ಥಿಗಳು ತಮ್ಮ ಹೆಸರನ್ನು ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು.

5) ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಅನುಭವಿ ಹಾಗೂ ನುರಿತ ವಕೀಲರ ಅಧೀನದಲ್ಲಿ ವಕೀಲಿ ವೃತ್ತಿಯಲ್ಲಿ ತರಬೇತಿ ಕೊಡಿಸಿ ನಾಲ್ಕು ವರ್ಷಗಳ ವರೆಗೆ ಮಾಹೆಯಾನ ರೂ.1000/- ಗಳಂತೆ ಶಿಷ್ಯವೇತನ ನೀಡಲಾಗುವುದು.

6) ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ಪಡೆದು ಸಂಪೂರ್ಣವಾಗಿ ಭರ್ತಿ ಮಾಡಿ ಕಾನೂನು ಪದವಿಗೆ ಸಂಬಂಧಿಸಿದ ಎಲ್ಲಾ ಅಂಕಪಟ್ಟಿಗಳ ದೃಢೀಕೃತ ಪ್ರತಿಗಳು, ಬಾರ್ ಕೌನ್ಸಿಲ್ ನೋಂದಾವಣೆ ಪತ್ರದ ಪ್ರತಿ ಮತ್ತು ಜಾತಿ, ಆದಾಯ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಸಲ್ಲಿಸಬೇಕು.

7) ಅರ್ಜಿಗಳನ್ನು ಅವಶ್ಯವಿರುವ ದಾಖಲಾತಿಗಳೊಡನೆ ದಿನಾಂಕ:18.08.2009 ರೊಳಗೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಸಾರಥಿಭವನ, ಅಜ್ಜರಕಾಡು, ಉಡುಪಿ ಇವರಿಗೆ ಸಲ್ಲಿಸಬೇಕು.

8) ನಿಗದಿತ ದಿನಾಂಕದ ನಂತರ ಬರುವ ಮತ್ತು ಅಪೂರ್ಣವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಸಾರಥಿಭವನ, ಅಜ್ಜರಕಾಡು, ಉಡುಪಿ, ಇವರನ್ನು ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ:0820-2531581)

ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಇಲಾಖೆ, ಉಡುಪಿ.

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಯವರ ಕಛೇರಿ, ಸಾರಥಿಭವನ, ಅಜ್ಜರಕಾಡು, ಉಡುಪಿ

ಪ್ರಕಟಣೆ

ಸಂಖ್ಯೆ: ಬಿಸಿಎಂಉ:ಅ.ಸಂ.ಕಾ.ತ.ಶೀ.ವೆ:ಸಿಆರ್:22:2009-10, ದಿನಾಂಕ:10ನೇ ಜುಲೈ, 2009

ವಿಷಯ: ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರು ಮಾಡಲು ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್:68:ಎಸ್‌ಇಡಬ್ಲ್ಯೂ:89: ದಿನಾಂಕ:02.11.1990.
2) ಸರ್ಕಾರಿ ಆದೇಶ ಸಂಖ್ಯೆ: ಸಕಇ:446:ಬಿಎಂಎಸ್:2005, ದಿನಾಂಕ:01.11.2005.

ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು ಮತ್ತು ಸಿಕ್ಕರು) ಕಾನೂನು ಪದವೀಧರರಿಗೆ ವಕೀಲಿ ವೃತ್ತಿಯಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರು ಮಾಡಲು ಜಿಲ್ಲೆಯ ಅರ್ಹ ಮತ್ತು ಆಸಕ್ತ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅರ್ಜಿ ನಮೂನೆಗಳನ್ನು ಈ ಕಛೇರಿಯಿಂದ ಕಛೇರಿ ಕೆಲಸದ ಸಮಯದಲ್ಲಿ ಪಡೆದುಕೊಳ್ಳಬಹುದು.

1) ಅರ್ಜಿ ಸಲ್ಲಿಸುವ ಕಾನೂನು ಪದವೀಧರರು ಅಲ್ಪಸಂಖ್ಯಾತರ ಸಮುದಾಯಕ್ಕೆ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು ಮತ್ತು ಸಿಕ್ಕರು) ಸೇರಿದವರಾಗಿರಬೇಕು. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.15000/-ಗಳ ಮಿತಿಯಲ್ಲಿರಬೇಕು.

2) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಿಂದ ಹಿಂದಿನ ಎರಡು ವರ್ಷಗಳೊಳಗೆ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

3) ಅಭ್ಯರ್ಥಿಗಳು ತಮ್ಮ ಹೆಸರನ್ನು ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು.

4) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಗರಿಷ್ಠ 30 ವರ್ಷಗಳ ವಯೋಮಿತಿಯಲ್ಲಿ ಇರಬೇಕು.

5) ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಅನುಭವಿ ಹಾಗೂ ನುರಿತ ವಕೀಲರ ಅಧೀನದಲ್ಲಿ ವಕೀಲಿ ವೃತ್ತಿಯಲ್ಲಿ ತರಬೇತಿ ಕೊಡಿಸಿ ನಾಲ್ಕು ವರ್ಷಗಳ ವರೆಗೆ ಮಾಹೆಯಾನ ರೂ.1000/- ಗಳಂತೆ ಶಿಷ್ಯವೇತನ ನೀಡಲಾಗುವುದು.

6) ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ಪಡೆದು ಸಂಪೂರ್ಣವಾಗಿ ಭರ್ತಿ ಮಾಡಿ ಕಾನೂನು ಪದವಿಗೆ ಸಂಬಂಧಿಸಿದ ಎಲ್ಲಾ ಅಂಕಪಟ್ಟಿಗಳ ದೃಢೀಕೃತ ಪ್ರತಿಗಳು, ಬಾರ್ ಕೌನ್ಸಿಲ್ ನೋಂದಾವಣೆ ಪತ್ರದ ಪ್ರತಿ ಮತ್ತು ಜಾತಿ, ಆದಾಯ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಸಲ್ಲಿಸಬೇಕು.

7) ಅರ್ಜಿಗಳನ್ನು ಅವಶ್ಯವಿರುವ ದಾಖಲಾತಿಗಳೊಡನೆ ದಿನಾಂಕ:18.08.2009 ರೊಳಗೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಸಾರಥಿಭವನ, ಅಜ್ಜರಕಾಡು, ಉಡುಪಿ ಇವರಿಗೆ ಸಲ್ಲಿಸಬೇಕು.

8) ನಿಗದಿತ ದಿನಾಂಕದ ನಂತರ ಬರುವ ಮತ್ತು ಅಪೂರ್ಣವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಸಾರಥಿಭವನ, ಅಜ್ಜರಕಾಡು, ಉಡುಪಿ, ಇವರನ್ನು ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ:0820-2531581)

ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಇಲಾಖೆ, ಉಡುಪಿ.

ಪಿ.ಆರ್.658

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ತುಮಕೂರು

ಪ್ರಕಟಣೆ

ಸಂಖ್ಯೆ: ಬಿಸಿಎಂ2/ಕಾ.ತ./ಸಿಆರ್27/09–10, ದಿನಾಂಕ:17ನೇ ಜುಲೈ, 2009

ವಿಷಯ: 2009–10ನೇ ಸಾಲಿನ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ತರಬೇತಿ ನೀಡುವ ಬಗ್ಗೆ.

ತುಮಕೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ 2009–10ನೇ ಸಾಲಿನಲ್ಲಿ ವಕೀಲ ವೃತ್ತಿಯಲ್ಲಿ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರು ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ತುಮಕೂರು ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಅವಶ್ಯಕ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ:25.08.2009ರೊಳಗಾಗಿ ಅಥವಾ ಕರ್ನಾಟಕ ಗೆಜೆಟ್‌ಗಾಗಿ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಡೆ ಸಲ್ಲಿಸಬಹುದು.

ನಿಬಂಧನೆಗಳು:

1) ಎಲ್.ಎಲ್.ಬಿ. ಪರೀಕ್ಷೆಯನ್ನು ಪಾಸು ಮಾಡಿದ ಹಿಂದುಳಿದ ವರ್ಗಗಳ ಅಭ್ಯರ್ಥಿಯಾಗಿರಬೇಕು. ವಕೀಲ ವೃತ್ತಿ ಅಭ್ಯಾಸಕ್ಕೆ (ಪ್ರಾಕ್ಟೀಸ್) ನಿಗದಿಪಡಿಸಿರುವ ಅರ್ಹತೆ ಹೊಂದಿರಬೇಕು. ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಎರಡು ವರ್ಷಗಳ ಅವಧಿಯೊಳಗೆ ಕಾನೂನು ಪದವಿಯ ಪರೀಕ್ಷೆಯನ್ನು ಪಾಸು ಮಾಡಿರುವ ಅಭ್ಯರ್ಥಿಗಳು ಮಾತ್ರ ತರಬೇತಿಗೆ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ.

2) ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.02.2002ರಲ್ಲಿ ವರ್ಗೀಕರಣ ಮಾಡಿರುವ ಪ್ರಕಾರ ವರ್ಗ–1, 2ಎ, 3ಎ ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳಾಗಿರಬೇಕು. ಸರ್ಕಾರದ ಆದೇಶ ಸಂಖ್ಯೆ: ಸಕಇ 222 ಬಿಸಿಎ 4 ದಿನಾಂಕ:20.09.2004ರ ಆದೇಶದಲ್ಲಿ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಪ್ರವರ್ಗ–1ರ ಅಭ್ಯರ್ಥಿಗಳನ್ನು ಹೊರತುಪಡಿಸಿ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ವಾರ್ಷಿಕ ಆದಾಯದ ಮಿತಿ ಎಲ್ಲಾ ಮೂಲಗಳಿಂದ ರೂ.15000/–ಗಳನ್ನು ಮೀರಬಾರದು.

3) ತರಬೇತಿಗೆ ಆಯ್ಕೆ ಮಾಡುವ ಅಭ್ಯರ್ಥಿಗಳ ಸಂಖ್ಯೆ ಆಗಾಗ್ಗೆ ಸರ್ಕಾರದಿಂದ ನಿಗದಿಪಡಿಸಿದಂತೆ ಮಾರ್ಪಾಡಾಗುತ್ತದೆ.

4) ತರಬೇತಿ ಅವಧಿ 4 ವರ್ಷಗಳಾಗಿದ್ದು ತರಬೇತಿಯ ಅವಧಿಯಲ್ಲಿ ತರಬೇತಿದಾರರಿಗೆ ಮಾಹೆಯಾನ ರೂ.1000/–ದಂತೆ ತರಬೇತಿ ಭತ್ಯೆ ನೀಡಲಾಗುವುದು.

5) ಈ ಸೌಲಭ್ಯ ಪಡೆಯಲಿಚ್ಚಿಸುವ ಅಭ್ಯರ್ಥಿಯ ವಯೋಮಿತಿ 30 ವರ್ಷಕ್ಕೆ ಮೀರಿರಬಾರದು, ವರ್ಗ–1ರ ಅಭ್ಯರ್ಥಿಗಳಿಗೆ ವಯೋಮಿತಿ 31 ವರ್ಷ ಮೀರಿರಬಾರದು.

6) ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

7) ಆಯ್ಕೆಯಾದ ಅಭ್ಯರ್ಥಿಯು ಸುಳ್ಳು ಜಾತಿ ಆದಾಯ ಪ್ರಮಾಣ ಪತ್ರ ನೀಡಿ ಆಯ್ಕೆಯಾಗಿರುವುದು ಕಂಡು ಬಂದಲ್ಲಿ ಶಿಕ್ಷೆಗೆ ಗುರಿಪಡಿಸಿ ಸ್ಟೈಫಂಡ್ ನೀಡಿರುವ ಒಟ್ಟು ಹಣದ ಜೊತೆಗೆ ಶೇ.10 ಬಡ್ಡಿ ಸೇರಿಸಿ ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲಾಗುವುದು.

8) ಸದಸ್ಯ ಕಾರ್ಯದರ್ಶಿಯವರು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲನೆ ಮಾಡಿ ಅಪೂರ್ಣ ಮಾಹಿತಿ ಹೊಂದಿರುವ ಹಾಗೂ ಕೇಳಿರುವ ಮಾಹಿತಿಯನ್ನು ಅರ್ಜಿ ಸಂಗಡ ಒದಗಿಸದ ಮತ್ತು ಅವಧಿ ಮೀರಿದಂತಹ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.

ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ
ಮತ್ತು ಅಲ್ಪಸಂಖ್ಯಾತರ ಇಲಾಖೆ, ತುಮಕೂರು.

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ತುಮಕೂರು

ಪ್ರಕಟಣೆ

ಸಂಖ್ಯೆ: ಬಿಸಿಎಂ2/ಮ.ಅ.ಕಾ.ತ/ಸಿಆರ್28/09–10, ದಿನಾಂಕ:17ನೇ ಜುಲೈ, 2009

ವಿಷಯ: 2009–10ನೇ ಸಾಲಿನ ಮತೀಯ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ ನೀಡುವ ಬಗ್ಗೆ.

ತುಮಕೂರು ಜಿಲ್ಲೆಯ ಮತೀಯ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ 2009–10ನೇ ಸಾಲಿನಲ್ಲಿ ವಕೀಲ ವೃತ್ತಿಯಲ್ಲಿ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮತೀಯ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ್ ಹಾಗೂ ಪಾರ್ಸಿ ಜನಾಂಗಕ್ಕೆ ಸೇರಿದ ಕಾನೂನು ಪದವೀಧರರು ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ತುಮಕೂರು ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಅವಶ್ಯಕ ದಾಖಲಾತಿಗಳೊಂದಿಗೆ ಭರ್ತಿ

ಮಾಡಿದ ಅರ್ಜಿಗಳನ್ನು ದಿನಾಂಕ:25.08.2009ರೊಳಗಾಗಿ ಅಥವಾ ಕರ್ನಾಟಕ ಗಜೆಟ್‌ಗಾಗಿ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಡೆ ಸಲ್ಲಿಸಬಹುದು.

ನಿಬಂಧನೆಗಳು:

1) ಎಲ್.ಎಲ್.ಬಿ. ಪರೀಕ್ಷೆಯನ್ನು ಪಾಸು ಮಾಡಿದ ಮತೀಯ ಅಲ್ಪಸಂಖ್ಯಾತ ಅಭ್ಯರ್ಥಿಯಾಗಿರಬೇಕು. ವಕೀಲ ವೃತ್ತಿ ಅಭ್ಯಾಸಕ್ಕೆ (ಪ್ರಾಕ್ಟೀಸ್) ನಿಗದಿಪಡಿಸಿರುವ ಅರ್ಹತೆ ಹೊಂದಿರಬೇಕು. ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಎರಡು ವರ್ಷಗಳ ಅವಧಿಯೊಳಗೆ ಕಾನೂನು ಪದವಿಯ ಪರೀಕ್ಷೆಯನ್ನು ಪಾಸು ಮಾಡಿರುವ ಅಭ್ಯರ್ಥಿಗಳು ಮಾತ್ರ ತರಬೇತಿಗೆ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ.

2) ಅಭ್ಯರ್ಥಿಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲ್ಯೂಎಲ್ 68 ಎಸ್.ಇ.ಡಬ್ಲ್ಯೂ:89 ದಿನಾಂಕ:02.11.1990 ರನ್ವಯ ಆಯ್ಕೆ ಮಾಡಲಾಗುವುದು ಕಾನೂನು ತರಬೇತಿ ಪಡೆಯುವ ಅಭ್ಯರ್ಥಿಯು ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ ಸಿಖ್ ಮತ್ತು ಪಾರ್ಸಿ ಸಮುದಾಯಗಳಿಗೆ ಸೇರಿದವರಾಗಿದ್ದು ರಾಜ್ಯದ ನಿವಾಸಿಯಾಗಿರಬೇಕು.

3) ಅಭ್ಯರ್ಥಿಯ ಕುಟುಂಬ ವಾರ್ಷಿಕ ಆದಾಯ ರೂ.15000/- ಗಳನ್ನು ಮೀರಬಾರದು ಪ್ರವರ್ಗ-1 ರಡಿಯಲ್ಲಿ ಬರುವ ಮತೀಯ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಆದಾಯದ ಮಿತಿ ಇರುವುದಿಲ್ಲ.

4) ತರಬೇತಿಗೆ ಆಯ್ಕೆ ಮಾಡುವ ಅಭ್ಯರ್ಥಿಗಳ ಸಂಖ್ಯೆ ಆಗಾಗ್ಗೆ ಸರ್ಕಾರದಿಂದ ನಿಗದಿಪಡಿಸಿದಂತೆ ಮಾರ್ಪಾಡಾಗುತ್ತದೆ.

5) ತರಬೇತಿ ಅವಧಿ 4 ವರ್ಷಗಳಾಗಿದ್ದು ತರಬೇತಿಯ ಅವಧಿಯಲ್ಲಿ ತರಬೇತಿದಾರರಿಗೆ ಮಾಹೆಯಾನ ರೂ.1000/- ರಂತೆ ತರಬೇತಿ ಭತ್ಯೆ ನೀಡಲಾಗುವುದು.

6) ಈ ಸೌಲಭ್ಯ ಪಡೆಯಲಿಚ್ಚಿಸುವ ಅಭ್ಯರ್ಥಿಯ ವಯೋಮಿತಿ 30 ವರ್ಷಕ್ಕೆ ಮೀರಿರಬಾರದು.

7) ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

8) ಆಯ್ಕೆಯಾದ ಅಭ್ಯರ್ಥಿಯು ಸುಳ್ಳು ಜಾತಿ ಆದಾಯ ಪ್ರಮಾಣ ಪತ್ರ ನೀಡಿ ಆಯ್ಕೆಯಾಗಿರುವುದು ಕಂಡು ಬಂದಲ್ಲಿ ಶಿಕ್ಷೆಗೆ ಗುರಿಪಡಿಸಿ ಸ್ಟೈಫಂಡ್ ನೀಡಿರುವ ಒಟ್ಟು ಹಣದ ಜೊತೆಗೆ ಶೇ.10 ಬಡ್ಡಿ ಸೇರಿಸಿ ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲಾಗುವುದು.

8) ಸದಸ್ಯ ಕಾರ್ಯದರ್ಶಿಯವರು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲನೆ ಮಾಡಿ ಅಪೂರ್ಣ ಮಾಹಿತಿ ಹೊಂದಿರುವ ಹಾಗೂ ಕೇಳಿರುವ ಮಾಹಿತಿಯನ್ನು ಅರ್ಜಿ ಸಂಗಡ ಒದಗಿಸದ ಮತ್ತು ಅವಧಿ ಮೀರಿದಂತಹ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.

ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ
ಪಿ.ಆರ್.675 ಮತ್ತು ಅಲ್ಪಸಂಖ್ಯಾತರ ಇಲಾಖೆ, ತುಮಕೂರು.

ಕರ್ನಾಟಕ ವಿಧಾನಸಭೆ

ಸಂಖ್ಯೆ: ವಿಸಸ/ಶಾರಶಾ/24/ಸಿಎ/2008-09, ದಿನಾಂಕ:14ನೇ ಜುಲೈ, 2009

ವಿಷಯ: ವಿಧಾನಸಭಾ ಸದಸ್ಯರ ವಿಳಾಸದ ಬದಲಾವಣೆ.

ಬಸವನ ಬಾಗೇವಾಡಿ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಎಸ್.ಕೆ.ಬೆಳ್ಳುಬ್ಬಿ ಅವರು ಕೆಳಕಂಡಂತೆ ತಮ್ಮ ವಿಳಾಸವನ್ನು ಬದಲಾಯಿಸಿರುತ್ತಾರೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ, ವಿಧಾನಸಭಾ ಸದಸ್ಯರು, ನಂ.5, ಫ್ಲೋರೆನ್ಸ್ ಸ್ಕೂಲ್, ನಾಗಶೆಟ್ಟಿಹಳ್ಳಿ, ಬೆಂಗಳೂರು.

ಆದಕಾರಣ, ಮಾನ್ಯ ಸದಸ್ಯರಿಗೆ ಇನ್ನು ಮುಂದೆ ಕಳುಹಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ಕೆ.ಪಿ. ಗೋಪಿಕೃಷ್ಣ
ಪಿ.ಆರ್.659 ಅಧೀನ ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.

ಕರ್ನಾಟಕ ವಿಧಾನಸಭೆ

ಸಂಖ್ಯೆ: ವಿಸಸ/ಶಾರಶಾ/24/ಸಿಎ/2008-09, ದಿನಾಂಕ:14ನೇ ಜುಲೈ, 2009

ವಿಷಯ: ವಿಧಾನಸಭಾ ಸದಸ್ಯರ ವಿಳಾಸದ ಬದಲಾವಣೆ.

ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ರೇಣುಕಾಚಾರ್ಯ ಅವರು ಕೆಳಕಂಡಂತೆ ತಮ್ಮ ವಿಳಾಸವನ್ನು ಬದಲಾಯಿಸಿರುತ್ತಾರೆ.

ಶ್ರೀ ಎಂ.ಪಿ. ರೇಣುಕಾಚಾರ್ಯ, ವಿಧಾನಸಭಾ ಸದಸ್ಯರು, ನಂ.36, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಪ್ಯಾಲೇಸ್ ಕ್ರಾಸ್ ರಸ್ತೆ, ಚಕ್ರವರ್ತಿ ಲೇಔಟ್, ವಸಂತನಗರ, ಬೆಂಗಳೂರು-560 020.

ಆದಕಾರಣ, ಮಾನ್ಯ ಸದಸ್ಯರಿಗೆ ಇನ್ನು ಮುಂದೆ ಕಳುಹಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ಕೆ.ಸಿ. ಗೋಪಿಕೃಷ್ಣ

ಪಿ.ಆರ್.660 ಅಧೀನ ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಐ 755 ಎಸ್‌ಪಿಕ್ಯೂ 2007, ಬೆಂಗಳೂರು, ದಿನಾಂಕ:17ನೇ ಜುಲೈ, 2009

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 4ರ ಮೇರೆಗೆ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಅಡಕನಹಳ್ಳಿ, ತಾಂಡವಪುರ ಮತ್ತು ಇಮ್ಮಾವು ಗ್ರಾಮಗಳ ಕೆಲವು ಸರ್ವೆ ನಂಬರ್‌ಗಳಲ್ಲಿನ ಜಮೀನನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 1(3) 3(1) ಮತ್ತು 28(1) ರಂತೆ ಅಧಿಸೂಚನೆ ಸಂಖ್ಯೆ: ಸಿಐ 64 ಎಸ್‌ಪಿಕ್ಯೂ 2006, ದಿನಾಂಕ:31.10.2006ರನ್ವಯ ಸರ್ಕಾರದಿಂದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಅಧಿಸೂಚನೆಗಳು ದಿನಾಂಕ:31.10.2006ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ.

ತಾಂಡವಪುರ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳಲ್ಲಿನ ಜಮೀನು ಸರ್ಕಾರಕ್ಕೆ ಅವಶ್ಯಕತೆ ಇಲ್ಲದ ಕಾರಣ (ಕೆ.ಎಸ್.ಐ.ಐ.ಡಿ.ಸಿ. ಸಂಸ್ಥೆ ಈ ಜಮೀನುಗಳನ್ನು ಭೂಸ್ವಾಧೀನದಿಂದ ಕೈಬಿಡುವಂತೆ ಕೋರಿರುವ ಮೇರೆಗೆ) ಸದರಿ ಜಮೀನುಗಳನ್ನು ಭೂಸ್ವಾಧೀನ ಕ್ರಮದಿಂದ ಕೈಬಿಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 4ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ 1(3) 3(1) ಮತ್ತು 28(1)ರ ಅಧಿಸೂಚನೆಯಿಂದ ಸದರಿ ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

ಗ್ರಾಮ: ತಾಂಡವಪುರ ಹೋಬಳಿ: ಚಿಕ್ಕಯ್ಯನಛತ್ರ

ತಾಲ್ಲೂಕು: ನಂಜನಗೂಡು ಜಿಲ್ಲೆ: ಮೈಸೂರು

ಕ್ರ. ಸಂ.	ಸರ್ವೆ ನಂಬರ್	ವಿಸ್ತೀರ್ಣ ಎ-ಗುಂ.
1.	477	1-06
2.	483	2-34
	ಒಟ್ಟು	**4-00**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಂ. ವೀರಯ್ಯ

ಪಿ.ಆರ್.663 ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಐ 160 ಎಸ್‌ಪಿಕ್ಯೂ 2008, ಬೆಂಗಳೂರು, ದಿನಾಂಕ:17ನೇ ಜುಲೈ, 2009

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 4ರ ಮೇರೆಗೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 (ಕರ್ನಾಟಕ ಕಾಯ್ದೆ 18:1966)ರ ಕಲಂ 28ರ ಉಪ ಕಲಂ 1 ನೇದ್ದರ ಕೆಳಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 551 ಎಸ್‌ಪಿಕ್ಯೂ 2007 ದಿನಾಂಕ:11.07.2007ರಂದು ಕರ್ನಾಟಕ ರಾಜ್ಯಪತ್ರದ ಪುಟ ಸಂಖ್ಯೆ: 1 ರಿಂದ 18ರವರೆಗಿನ ಭಾಗ-3ರಲ್ಲಿ ದಿನಾಂಕ:12.07.2007ರಂದು ಪ್ರಕಟಗೊಂಡ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳು ಹಾಗೂ ಅವುಗಳ ಕ್ಷೇತ್ರವನ್ನು ಅಂಕಣ 4 ರಿಂದ 7ರವರೆಗೆ ವಿವರಿಸಿದ ಪರಿಮಿತಿಯೊಂದಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 4ರನ್ವಯ ವಿಹಿತವಾಗಿರುವ ಅಧಿಕಾರದ ಮೇರೆಗೆ (ವಿಮಾನಯಾನ ಪ್ರಾಧಿಕಾರದವರು ಅಲೈನ್‌ಮೆಂಟ್ ಬದಲಾವಣೆ ಮಾಡಿರುವ ಕಾರಣ ಸದರಿ ಜಮೀನುಗಳು ಬಿಜಾಪುರ ವಿಮಾನ ನಿಲ್ದಾಣ ನಿರ್ಮಿಸಲು ಅಗತ್ಯವಿಲ್ಲವೆಂದು ಅಭಿಪ್ರಾಯ ಪಟ್ಟಿರುವ ಕಾರಣ) ಕೈಗಾರಿಕಾ ಪ್ರದೇಶದಿಂದ ಕೈಬಿಡಲಾಗಿದೆ ಅಂತಾ ಕರ್ನಾಟಕ ಸರ್ಕಾರವು ಈ ಮೂಲಕ ಘೋಷಿಸಿರುತ್ತದೆ.

ಅನುಸೂಚಿ

ಗ್ರಾಮ: ಅಲಿಯಾಬಾದ, ಬುರಾಣಾಪೂರ ಹಾಗೂ ಮಧುಬಾವಿ, ತಾಲ್ಲೂಕು: ಬಿಜಾಪುರ ಜಿಲ್ಲೆ: ಬಿಜಾಪುರ

ಅ. ನಂ.	ರಿ.ಸ.ನಂ.	ಕ್ಷೇತ್ರ ಎ-ಗುಂ-ಅ	ಚಕ್‌ಬಂದಿ (ಚತು:ಸೀಮೆ) 28(1)ರ ಅಧಿಸೂಚನೆ ಪ್ರಕಾರ			
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಗ್ರಾಮ: ಅಲಿಯಾಬಾದ						
--	–	–	–	–	–	–
ಗ್ರಾಮ: ಬುರಾಣಾಪೂರ						
1.	23	25–10	ಮಧುಬಾವಿ ಗ್ರಾಮದ ಗಡಿ ಮತ್ತು 24	18, 19, 20	21–22	23ರ ಉಳಿದ ಭಾಗ
ಗ್ರಾಮ: ಮಧುಬಾವಿ						
1.	8:ಅ2	2–30	31	8ಅ1ರ ಉಳಿವ ಭಾಗ	8ಅ1	8ಅ2ರ ಉಳಿದ ಭಾಗ
2.	13	1–10	8	12	14	13ರ ಉಳಿದ ಭಾಗ
3.	16	2–39	15:3	ಬುರಾಣಾಪೂರ ಗ್ರಾಮದ ಗಡಿ	16:2ರ ಉಳಿದ ಭಾಗ	12
4.	31:3	2–34	30	• 8ಅ1	31	31
	32:2	2–09	32:3	32:1	30	32:2ರ ಉಳಿದ ಭಾಗ
	33ರ ಪೈ	0–25	66	32	34	33ರ ಉಳಿದ ಭಾಗ
	48	21–18	48ರ ಉಳಿದ ಭಾಗ	51	49:1	48ರ ಉಳಿದ ಭಾಗ
	ಒಟ್ಟು	**34–05**				

ಘೋಷ್ವಾರೆ

ಕ್ರ. ಸಂ.	ಗ್ರಾಮದ ಹೆಸರು	ಕ್ಷೇತ್ರ ಎ-ಗುಂ.
1.	ಅಲಿಯಾಬಾದ	---
2.	ಬುರಾಣಾಪೂರ	25–10
3.	ಮಧುಬಾವಿ	34–05
	ಒಟ್ಟು	**59–15**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಂ. ವೀರಯ್ಯ

ಪಿ.ಆರ್.664

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

KARNATAKA PUBLIC SERVICE COMMISSION

Office of the Public Service Commission, "Udyoga Soudha", Bangalore

NOTIFICATION

No.Adm.973/2009-10/PSC, Bangalore, Dated:10th July, 2009

In pursuance of Regulation 13(a) of the Karnataka Public Service Commission (Conditions of Service) Regulations 1957, Sri H.B. Channaraju, Deputy Secretary, Karnataka Public Service Commission, (Group 'A' Senior Scale) in grade Rs.20025-28275 is promoted with immediate effect as

"Joint Secretary", Karnataka Public Service Commission (Group 'A' Selection-Time-Scale) in grade Rs.24450-31800, on officiating basis, in the existing vacancy.

By Order of the Commission,

V.B. PATIL

PR-665

Secretary,

Karnataka Public Service Commission.

KARNATAKA PUBLIC SERVICE COMMISSION

Office of the Public Service Commission, "Udyoga Soudha", Bangalore

NOTIFICATION

No.Adm.972/2009-10/PSC, Bangalore, Dated:10th July, 2009

In pursuance of Regulation 13(a) of the Karnataka Public Service Commission (Conditions of Service) Regulations 1957, read with Rule 2(3) of the Karnataka Civil Service (Regulation of Promotion, Pay and Pension) Rules, 1978, Sri K. Anil Kumar, Deputy Secretary (Retd.), Karnataka Public Service Commission, who was placed in independent charge of the post of Joint Secretary, Karnataka Public Service Commission, (Group 'A' Selection-Time-Scale) in the pay scale of Rs.24450-31800 w.e.f. 26.06.2007 in accordance with Rule 32 of the Karnataka Civil Service Rules vide Notification No.Adm:620/2007-08/PSC, Dated:25.06.2007 is accorded retrospective officiating promotion to the said post from the date he was placed in independent charge.

By Order of the Commission,

V.B. PATIL

PR-666

Secretary,

Karnataka Public Service Commission.

ವಾಣಿಜ್ಯ ತೆರಿಗೆ ಅಧಿಕಾರಿಯವರ ಕಛೇರಿ, (ವಸೂಲಿ) ಗುಲ್ಬರ್ಗಾ

ಸಂಖ್ಯೆ:ವಾತೆಅ(ಮ)/09–10/53, ದಿನಾಂಕ:17ನೇ ಜುಲೈ, 2009

ಕೇಂದ್ರ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ) ಅಡಿಯಲ್ಲಿ ನಮೂದಾಗಿರುವ ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲಬರ್ಗಾ ಕಛೇರಿಗೆ ಸಂಬಂಧಪಟ್ಟ ಈ ಕೆಳ ಕಾಣಿಸಿದ ವಿಷಯಗಳ ಸಂಪೂರ್ಣ ಮಾಹಿತಿಯನ್ನು ವಿವರಿಸಲಾಗಿದೆ.

ಈ ಕಛೇರಿಯಲ್ಲಿ ಈ ಕೆಳಕಂಡ ವಹಿಯನ್ನು ಮತ್ತು ಕಡತಗಳನ್ನು ನಿರ್ವಹಿಸಲಾಗುತ್ತಿದೆ.

1.	'ಎ' ವಹಿ	ವರ್ತಕರ ನೊಂದಣಿ ವಿವರಗಳು
2.	'ಡಿ' ವಹಿ	ಬೇಡಿಕೆ ವಹಿ
3.	'ಇ' ವಹಿ	ನೋಟಿಸು ವಹಿ
4.	'ಜಿ1' ವಹಿ	ದೈನಂದಿನ ಸಂಗ್ರಹಣೆಯ ವಹಿ
5.	'ಜಿ2' ವಹಿ	ಬೇಡಿಕೆ ಸಂಗ್ರಹಣೆ ಮತ್ತು ಬಾಕಿ ವಹಿ
6.	'ಹೆಚ್' ವಹಿ	ದೈನಂದಿನ ನಗದು ಸಂಗ್ರಹಣೆ ವಹಿ
7.	'ಐ' ವಹಿ	ವಸೂಲಿ ವಹಿ
8.	'ಕೆ' ವಹಿ	ಅಪರಾಧಗಳ ವಹಿ
9.	'ಎಮ್' ವಹಿ	ಧನಾದೇಶ ಸಂಗ್ರಹಣೆ ವಹಿ
10.	'ಪಿ' ವಹಿ	ಖಜಾನೆಗೆ ನಗದು ಪಾವತಿ ವಹಿ
11.	'ಕ್ಯೂ' ವಹಿ	ಮರುಪಾವತಿ ವಹಿ
12.	'ಆರ್' ವಹಿ	ಗುಪ್ತವಾರ್ತೆ ವರದಿ ವಹಿ
13.	'ಜೆ' ವಹಿ	ಮೇಲ್ಮನವಿಯ ವಹಿ
14.		ಶಾಸನ ಬದ್ಧ ವಹಿಗಳು
15.		ಚಿತ್ರಮಂದಿರಗಳ ಸೀಲಿಂಗ್ ವಹಿ

ಈ ಕಛೇರಿಯ ಕ್ಷೇತ್ರ ವ್ಯಾಪ್ತಿಗೆ ಬರುವ ನೊಂದಣಿ ಕಡತ ಹಾಗೂ ವರ್ತಕರ ತೆರಿಗೆ ಬಾಕಿ ಇರುವ ಪಟ್ಟಿಯನ್ನು ಮತ್ತು ಚಿತ್ರಮಂದಿರದ ವಾರದ ನಮೂನೆಯ ವಿವರಗಳು ಗಣಕಿಕೃತಗೊಳಿಸಲಾಗಿದೆ.

ಶ್ರೀಮತಿ ಪಾಟೀಲ ಶಿವಲಿಂಗಮ್ಮ
ವಾಣಿಜ್ಯ ತೆರಿಗೆ ಅಧಿಕಾರಿ,
(ವಸೂಲಿ) ಗುಲ್ಬರ್ಗಾ.

ಪಿ.ಆರ್.674

GOVERNMENT OF KARNATAKA
DIRECTORATE OF ECONOMICS AND STATISTICS, BANGALORE-1
Consumer Price Index Numbers For Industrial Workers

No. DES 08 PWX 2009 Month: May, 2009

State: Karnataka Base: 1987-88=100 Date :17-07-2009

	Group/Sub-Group	Bellary	Bhadra-vathi	Davan gere	Dan deli	Gul barga	Hari har	Hassan	Man dya	Man galore	Rai chur	Tum kur
	1	2	3	4	5	6	7	8	9	10	11	12
I.	FOOD: (a) Cereals & Products	587	668	641	545	462	549	555	620	472	591	620
	(b) Pulses & Products	484	536	556	620	500	506	494	540	502	516	479
	(c) Oil & Fats	299	288	267	289	309	270	314	290	266	267	279
	(d) Meat, Fish & Eggs	606	563	567	489	591	555	457	565	764	682	523
	(e) Milk & Products	385	348	409	390	407	420	371	431	356	433	360
	(f) Condiments & Spices	378	408	546	528	338	355	396	387	410	476	421
	(g) Vegetables & Fruits	444	383	493	567	349	445	462	386	391	376	485
	(h) Other Food	420	522	457	501	446	403	405	378	371	464	463
	FOOD GROUP INDEX	**485**	**518**	**531**	**502**	**431**	**456**	**459**	**510**	**466**	**509**	**489**
II.	Pan, Supari, Tobacco & Intoxicants	443	512	525	382	367	536	506	355	296	487	475
III.	Fuel & Light	337	367	401	509	463	386	364	380	335	620	319
IV.	Housing	100	100	100	100	100	100	100	100	100	100	100
V.	Clothing, Bedding & Footwear	275	268	234	390	334	257	428	472	242	547	233
VI.	**MISCELLANEOUS:** (a) Medical Care	663	794	385	427	253	253	450	424	321	427	242
	(b) Education, Recreation & Amusement	410	444	803	265	441	491	362	353	622	515	543

1	2	3	4	5	6	7	8	9	10	11	12
(c) Transport & Communication	416	485	405	397	598	524	453	567	464	393	434
(d) Personal Care & effects	309	322	335	335	336	290	334	321	363	305	301
(e) Others	394	394	375	534	366	297	320	272	287	428	278
Miscellaneous Group	431	431	447	397	379	343	369	332	400	402	341
GENERAL INDEX	**404**	**419**	**430**	**431**	**369**	**369**	**396**	**414**	**388**	**458**	**356**
To convert to Base 1960 Multiply by Linking Factor.	**7.39**	**9.19**	**8.27**	...	**8.26**	**8.56**	**9.25**	**7.92**	**9.31**	...	...

For Director.

Government of India,

Ministry of Labour and Employment

Labour Bureau

CONSUMER PRICE INDEX NUMBERS OF INDUSTRIAL WORKERS ON BASE-2001=100

State: Karnataka Month/Year: May, 2009

Group/Sub-Groups	Bangalore	Belgaum	Hubli-Dharwar	Mercara	Mysore
1	2	3	4	5	6
Food Sub Group					
(a) Cereals & Products	195	176	182	168	189
(b) Pulses & Products	175	186	195	170	164
(c) Oils & Fats	165	168	175	160	148
(d) Meat, Fish & Eggs	190	200	202	173	193
(e) Milk & Milk Products	147	139	119	142	151
(f) Condiments & Spices	154	156	150	139	165
(g) Vegetables & Fruits	169	185	172	144	167
(h) Other Food	180	166	156	173	170
I. FOOD GROUP	177	171	169	163	172
II-Pan, Supari, Tobacco & Intoxicants	162	144	142	126	152
III-Fuel & Light Group	127	140	139	106	147
IV-Housing Group	163	131	153	109	146
V-Clothing, Bedding & Footwear	112	121	127	123	123
Miscellaneous Sub Group:					
(a) Medical Care	163	160	147	158	143
(b) Education, Recreation & Amusement	141	146	154	146	119
(c) Transport & Communication	199	185	180	160	163
(d) Personal Care & effects	143	142	142	139	143
(e) Others Miscellaneous Items	175	161	143	177	174
VI. Miscellaneous Group	166	158	154	151	144
CENTRE INDEX	**164**	**158**	**158**	**146**	**157**

HARITA SABHARWAL

DEPUTY DIRECTOR.

PR-676

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಐ 379 ಎಸ್‌ಪಿಕ್ಯೂ 2008, ಬೆಂಗಳೂರು, ದಿನಾಂಕ:21ನೇ ಜುಲೈ, 2009

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ಕಲಂ 4ರ ಮೇರೆಗೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966 ಕರ್ನಾಟಕ ಕಾಯ್ದೆ 18, 1966)ರ ಕಲಂ 1(3) ಹಾಗೂ 3(1)ರ ಮೇರೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 275 ಎಸ್‌ಪಿಕ್ಯೂ 2007, ಬೆಂಗಳೂರು ದಿನಾಂಕ:21.04.2007 ರಾಜ್ಯಪತ್ರದಲ್ಲಿ ಪ್ರಕಟಣೆ ದಿನಾಂಕ:21.04.2007 ಮತ್ತು ಕಲಂ 28(1)ರ ಅಧಿಸೂಚನೆ ಸಂಖ್ಯೆ: ಸಿಐ 275 ಎಸ್‌ಪಿಕ್ಯೂ 2007, ಬೆಂಗಳೂರು ದಿನಾಂಕ:21.04.2007 ರಾಜ್ಯ ಪತ್ರ ಪ್ರಕಟಣೆ ದಿನಾಂಕ:21.04.2007ರಂದು ಪ್ರಕಟವಾಗಿದ್ದು, ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ಸೋಗಾನೆ ಗ್ರಾಮದ ಅಂಕಣ 3ರಲ್ಲಿ ಕಾಣಿಸಿರುವ ಜಮೀನಿನಲ್ಲಿ ಹೊಂದಿಕೊಂಡಂತೆ ಅಂಕಣ 4ರಲ್ಲಿರುವ ವಿಸ್ತೀರ್ಣ ಹಾಗೂ ಅಂಕಣ 5ರಲ್ಲಿ ಕಾಣಿಸಿಕೊಂಡಿರುವ ಚಕ್ಕುಬಂದಿಗಳನ್ನು ಒಳಗೊಂಡ ಪ್ರದೇಶಗಳನ್ನು (ವಿಮಾನ ಪ್ರಾಧಿಕಾರದವರು ಮತ್ತು ಎ.ಡಿ.ಎಫ್.ಆರ್. ರವರು ಸರ್ವೆ ಮಾಡಿದಾಗ ಈ ಜಮೀನುಗಳನ್ನು ಅಂತಿಮವಾಗಿ ಭೂಸ್ವಾಧೀನಪಡಿಸಲು ಗುರುತಿಸದ ಕಾರಣ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ಕಲಂ 4ರನ್ವಯ ವಿಹಿತವಾಗಿರುವ ಅಧಿಕಾರದ ಮೇರೆಗೆ ಕೈಗಾರಿಕಾ ಪ್ರದೇಶದಿಂದ ಕೈಬಿಡಲಾಗಿದೆ.

ಗ್ರಾಮ: ಸೋಗಾನೆ ಹೋಬಳಿ: ನಿಧಿಗೆ

ತಾಲ್ಲೂಕು: ಶಿವಮೊಗ್ಗ ಜಿಲ್ಲೆ: ಶಿವಮೊಗ್ಗ

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂಬರ್	ವಿಸ್ತೀರ್ಣ ಎ-ಗುಂ	ಗಡಿಗಳು			
				ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ
1.	ಸೋಗಾನೆ	111	4-02	111 (ಅಂಶ)	ದಾರಿ	120	120

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಂ. ವೀರಯ್ಯ

ಪಿ.ಆರ್.677

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಐ 210 ಎಸ್‌ಪಿಕ್ಯೂ 2007, ಬೆಂಗಳೂರು, ದಿನಾಂಕ:24ನೇ ಜುಲೈ, 2009

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ಕಲಂ 4ರ ಮೇರೆಗೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966 ಕರ್ನಾಟಕ ಕಾಯ್ದೆ 18, 1966)ರ ಕಲಂ 1(3) ಹಾಗೂ 3(1)ರ ಮೇರೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 75 ಎಸ್‌ಪಿಕ್ಯೂ 2004, ಬೆಂಗಳೂರು ದಿನಾಂಕ:20.03.2004 ರಾಜ್ಯಪತ್ರದಲ್ಲಿ ಪ್ರಕಟಣೆ ದಿನಾಂಕ:20.03.2004 ಮತ್ತು ಕಲಂ 28(1)ರ ಅಧಿಸೂಚನೆ ಸಂಖ್ಯೆ: ಸಿಐ 75 ಎಸ್‌ಪಿಕ್ಯೂ 2004, ರಾಜ್ಯ ಪತ್ರದಲ್ಲಿ ದಿನಾಂಕ:20.03.2004ರಂದು ಪ್ರಕಟವಾಗಿದ್ದು, ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ನಗದೀಯತ್ ಕಾವಲ್ ಗ್ರಾಮದ ಅಂಕಣ 3ರಲ್ಲಿ ಕಾಣಿಸಿರುವ ಜಮೀನಿನಲ್ಲಿ ಹೊಂದಿಕೊಂಡಂತೆ ಅಂಕಣ 4ರಲ್ಲಿರುವ ವಿಸ್ತೀರ್ಣ ಹಾಗೂ ಅಂಕಣ 5ರಲ್ಲಿ ಕಾಣಿಸಿಕೊಂಡಿರುವ ಚಕ್ಕುಬಂದಿಗಳನ್ನು ಒಳಗೊಂಡ ಪ್ರದೇಶಗಳನ್ನು (ಕಂಪನಿಯು ಭೂಸ್ವಾಧೀನ ಪ್ರಕ್ರಿಯೆಯಿಂದ ಹಿಂದಕ್ಕೆ ಸರಿದ ಕಾರಣ ಹಾಗೂ ಯಾವುದೇ ಉದ್ದಿಮೆದಾರರು ಕೈಗಾರಿಕೆ ಸ್ಥಾಪಿಸಲು ಆಸಕ್ತಿ ತೋರಿಸದೇ ಇರುವ ಕಾರಣ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ಕಲಂ 4ರನ್ವಯ ವಿಹಿತವಾಗಿರುವ ಅಧಿಕಾರದ ಮೇರೆಗೆ ಕೈಗಾರಿಕಾ ಪ್ರದೇಶದಿಂದ ಕೈಬಿಡಲಾಗಿದೆ.

ಗ್ರಾಮ: ನಗದೀಯತ್ ಕಾವಲ್ ಹೋಬಳಿ: ಕಸಬಾ

ತಾಲ್ಲೂಕು: ಕಡೂರು ಜಿಲ್ಲೆ: ಚಿಕ್ಕಮಗಳೂರು

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂಬರ್	ವಿಸ್ತೀರ್ಣ ಎ-ಸೆಂ	ಚಕ್ಕುಬಂದಿ			
				ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ
1.	ನಗದೀಯತ್ ಕಾವಲ್	13 (ಅಂಶ)	6-00	14	17	ಕಾರೇಹಳ್ಳಿ ಗಡಿ	ಇದೇ ಸ.ಡಿ. ಉಳಿಕೆ

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂಬರ್	ವಿಸ್ತೀರ್ಣ ಎ-ಸೆಂ	ಚಕ್ಕುಬಂದಿ			
				ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ
2.	ನಗದೀಯತ್ ಕಾವಲ್	17 (ಅಂಶ)	14–00	ಇದೇ ಸ.ಡಿ. ಉಳಿಕೆ	ಇದೇ ಸ.ಡಿ. ಉಳಿಕೆ	ಕಾರೇಹಳ್ಳಿ ಗಡಿ	13
	ಒಟ್ಟು		20–00				

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಂ. ವೀರಯ್ಯ

ಪಿ.ಆರ್.679

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on (1) bentonite for use as sand (for use as cat litter) and (2) dog chews (snacks for dogs and cats)-reg.

Ref: Application Dated:04.02.2009 of Sri Md. Shafiulla Shariff, Proprietor, Fine Furniture, #2, Meenakshi Koil Street, (Near Shivajinagar Bus Stand), Bangalore-560 051.

In the application cited above Sri Md. Shafiulla Shariff, Proprietor, Fine Furniture, #2, Meenakshi oil Street, (Near Shivajinagar Bus Stand), Bangalore-560 051, has sought the rate of tax applicable on) bentonite sand (for use as cat litter) and (2) dog chews (snacks for dogs and cats).

2. Section 59(4) of the Karnataka Value Added Tax Act, 2003 empowers the Commissioner of ommercial Taxes to clarify the rate of tax payable under the Act, if he considers it necessary or xpedient so to do, for the purpose of maintaining uniformity in the work of assessments and collection of venue. It is examined and found that the clarification requested by the petitioner is within the scope of e aforesaid provision and it is necessary that the clarification be issued for the purpose of maintaining iformity in the work of assessments and collection of revenue.

3. Hence the following clarification is issued.

Clarification No. CLR.CR.264/08-09, Dated:4th July, 2009

It is hereby clarified that rates of tax applicable on the following goods are as under.

Sl. No.	Commodity	Rate of tax/ Section
1.	Bentonite Sand (for use as cat litter)	12.5% under Section 4(1) (b) of the KVAT Act, 2003.
2.	Dog Chews (snacks for dogs and cats)	12.5% under Section 4(1) (b) of the KVAT Act, 2003.

B.A. HARISH GOWDA

PR-680

Commissioner of Commercial Taxes (Karnataka), Bangalore.

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), ANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on 'execution of works contract of erection/ installation of electric generator sets supplied by customers'-reg.

Ref: Application Dated:25.05.2009 of Sri P. Prakash, Partner, Empower, No.33/12, 1st flo Victoria Road, 1st Cross, Xavier Layout, Bangalore-560 047.

In the application cited above Sri P. Prakash, Partner, Empower, No.33/12, 1st floor, Victo Road, 1st Cross, Xavier Layout, Bangalore-560 047, has sought clarification regarding the rate of applicable on 'execution of works contract of erection installation of electric generator sets supplied customers'.

2. Section 59(4) of the Karnataka Value Added Tax Act, 2003 empowers the Commissioner Commercial Taxes to clarify the rate of tax payable under the Act, if he considers it necessary expedient so to do, for the purpose of maintaining uniformity in the work of assessments and collection revenue. It is examined and found that the clarification requested by the petitioner is within the scope the aforesaid provision and it is necessary that the clarification be issued for the purpose of maintain uniformity in the work of assessments and collection of revenue.

3. Hence the following clarification is issued.

Clarification No. CLR.CR.35/09-10, Dated:1st July, 2009

It is hereby clarified that 'the taxable turnover relating to transfer of property in goods involved the execution of works contract of supply of electric cable, pipes and earthing wires connected w installation of generator sets supplied by customer's is liable to tax at 12.5% under entry 23 of the Si Schedule read with Section 4(1)(c) of the KVAT Act, 2003.

B.A. HARISH GOWDA

PR-681 Commissioner of Commercial Taxes (Karnataka), Bangalor

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TA ACT, 2003

Sub: KVAT Act, 2003-Clarification under Section 59(4) regarding the rate of tax applicable 'MP4(MPEG4) Player'-reg.

Ref: Application Dated:16.06.2009 of Sony India Pvt Ltd., # 768, 100ft Road, HAL IInd Stage, Main, Indiranagar, Bangalore-560 038.

In the application cited above Sony India Pvt Ltd., # 768, 100ft Road, HAL IInd Stage, 12th Ma Indiranagar, Bangalore-560 038, has sought clarification regarding the rate of tax applicable 'MP4(MPEG4) Player'.

2. Section 59(4) of the Karnataka Value Added Tax Act, 2003 empowers the Commissione Commercial Taxes to clarify the rate of tax payable under the Act, if he considers it necessary expedient so to do, for the purpose of maintaining uniformity in the work of assessments and collectio revenue. It is examined and found that the clarification requested by the petitioner is within the scope the aforesaid provision and it is necessary that the clarification be issued for the purpose of maintain uniformity in the work of assessments and collection of revenue.

3. Hence the following clarification is issued.

Clarification No. CLR.CR.21/09-10, Dated:10th July, 2009

It is hereby clarified that 'MP4 (MPEG4) Player' is taxable at 12.5% under Section 4(1) of KVAT Act, 2003.

PRADEEP SINGH KHAROLA

PR-682 Commissioner of Commercial Taxes (Karnataka), Bangalor

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/582/ಡಿಟಿಸಿಆರ್/1999-2000, ದಿನಾಂಕ:30ನೇ ಮೇ, 2009

ಉಪಸ್ಥಿತರು: ನೂರ್ ಮುಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು,
ಬಂಟ್ವಾಳ ವಲಯ, ಬಂಟ್ವಾಳ.

ಆರೋಪಿ:

ಸಂಕಪ್ಪ ಪೂಜಾರಿ, ಬಿನ್: ಲೋಕಯ್ಯ ಪೂಜಾರಿ, ಬೋಳಂಗಡಿ ಮನೆ, ಬಂಟ್ವಾಳ ತಾಲ್ಲೂಕು.

ವಾಹನ ಮಾಲೀಕರು:

ಸಂಕಪ್ಪ ಪೂಜಾರಿ, ಬಿನ್: ಲೋಕಯ್ಯ ಪೂಜಾರಿ, ಬೊಳಂಗಡಿ ಮನೆ, ಬಂಟ್ವಾಳ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:13-6-2000 ರಂದು ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ಪಾಣೆಮಂಗಳೂರು ಕಲ್ಲಡ್ಕ ರಸ್ತೆ ಅಕ್ಕರಂಗಡಿ ಕಾಡು ಪ್ರದೇಶದಲ್ಲಿ ಅಕ್ರಮವಾಗಿ ಸಾರಾಯಿ ವ್ಯಾಪಾರ ನಡೆಸುತ್ತಿರುತ್ತಾರೆ ಎಂಬ ಮಾಹಿತಿ ಮೇರೆಗೆ ಸದರಿ ಸ್ಥಳಕ್ಕೆ ದಾಳಿ ನಡೆಸಿದಾಗ, ಒಬ್ಬ ಆಸಾಮಿಯು ಆಟೋರಿಕ್ಷಾ ನೋಂದಣಿ ಸಂಖ್ಯೆ: ಸಿಆರ್‌ಎಕ್ಸ್-9518 ವನ್ನು ಚಲಾಯಿಸಿಕೊಂಡು ಬಂದು, ಸಮವಸ್ತ್ರದಲ್ಲಿದ್ದ ಸಿಬ್ಬಂದಿಯವರನ್ನು ಕಂಡ ಕೂಡಲೇ ರಿಕ್ಷಾವನ್ನು ಅನುಮಾನದಿಂದ ಚಲಾಯಿಸುತ್ತ, ನಂತರ ರಿಕ್ಷಾವನ್ನು ಬಿಟ್ಟು ಓಡಲು ಪ್ರಯತ್ನಿಸಿದಾಗ, ಅನುಮಾನಗೊಂಡ ಸಿಬ್ಬಂದಿಯವರು ಆತನನ್ನು ಹಿಡಿದು ರಿಕ್ಷಾದ ಎದುರಿನ ಸೀಟನ್ನು ಪರಿಶೀಲಿಸಿದಾಗ, ಅದರಲ್ಲಿ ಘಾಟು ವಾಸನೆಯಿಂದ ಕೂಡಿದ ಸಾರಾಯಿ ಇದ್ದುದು ಕಂಡು ಬಂತು. ರಿಕ್ಷಾದ ಹಿಂದಿನ ಸೀಟಿನಲ್ಲಿ ಪರಿಶೀಲಿಸಿದಾಗ, ಅದರಲ್ಲಿ ಒಂದು ಗೋಣಿ ಚೀಲವಿದ್ದು, ಅದರಲ್ಲಿ 100 ಎಂ.ಎಲ್.ನ 120 ಸಾರಾಯಿ ಸ್ಯಾಚೆಟ್‌ಗಳು ಇದ್ದು, ಅವುಗಳ ಮೇಲೆ ಕೆಂಪು ಬಣ್ಣದ ಬರಹದಲ್ಲಿ ಕರ್ನಾಟಕ ಸರಕಾರ ಎಂಬ ಲೇಬಲ್ ಇದ್ದು, 100 ಎಂ.ಎಲ್.ನ 35 ಡಿಗ್ರಿ ಯು.ಪಿ. ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಿದೆ. ಮೈಶುಗರ್ ಕಂಪೆನಿ ಲಿಮಿಟೆಡ್ ಮಂಗಳೂರು, ಮದ್ಯಪಾನ ಆರೋಗ್ಯಕ್ಕೆ ಹಾನಿಕರ, ಲೈಸನ್ಸು ನಂ:ಇಸಿ೯/5/ಎಜಜ/99 ದಿ:30-6-1999 ಎಂದು ಮುದ್ರಿಸಿರುವುದು ಕಂಡು ಬಂತು. ನಂತರ ಚಾಲಕ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ, ಆತನು ಸಂಕಪ್ಪ ಪೂಜಾರಿ, ಬಿನ್: ಲೋಕಯ್ಯ ಪೂಜಾರಿ, ಬೊಳಂಗಡಿ ಮನೆ ಮತ್ತು ಗ್ರಾಮ, ಬಂಟ್ವಾಳ ಎಂದು ಆಟೋರಿಕ್ಷಾವು ತನ್ನದಾಗಿದ್ದು, ತಾನು ಸಾರಾಯಿ ಅಂಗಡಿಯಲ್ಲಿ ನೌಕರನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿದನು. ಸಾರಾಯಿ ಸಾಗಾಟ ಮಾಡಲು ರಹದಾರಿ ಪತ್ರ ಹಾಗೂ ದಾಖಲಾತಿಗಳು ಇದೆಯೇ ಎಂದು ವಿಚಾರಿಸಿದಾಗ, ತನ್ನ ಬಳಿ ಅದು ಯಾವುದೂ ಇಲ್ಲವೆಂದು ತಿಳಿಸಿರುವ ಮೇರೆಗೆ ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ಸಾರಾಯಿ ಸ್ಯಾಚೆಟ್‌ಗಳಿಂದ 100 ಎಂ.ಎಲ್.ನ 2 ಸಾರಾಯಿ ಸ್ಯಾಚೆಟ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಾಗಿ ತೆಗೆದು ಇಲಾಖಾ ಸೀಲ್‌ನಿಂದ ಸೀಲ್ ಮಾಡಿ, ಇದು ಅಕ್ರಮ ಸಾರಾಯಿ ಸಾಗಾಣಿಕೆಯಾಗಿರುವುದರಿಂದ, ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 11 ಮತ್ತು 14 ಹಾಗೂ ಕಲಂ 34, 38ಎ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಆರೋಪಿಯ ವಿರುದ್ಧ ತಕ್ಷೀರು ಸಂಖ್ಯೆ: 2/99-00 ದಿ:13-6-2000 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು, ಅಕ್ರಮ ಸಾಗಾಣಿಕೆಗೆ ಬಳಸಿದ ಆಟೋರಿಕ್ಷಾ ಸಂಖ್ಯೆ: ಸಿಆರ್‌ಎಕ್ಸ್-9518 ನ್ನು ಮತ್ತು ಸಾರಾಯಿ ಸ್ಯಾಚೆಟ್‌ಗಳನ್ನು ಚಾಲಕನ ಸಮೇತ ದಸ್ತಗಿರಿ ಮಾಡಿ ಸ್ಥಳದಲ್ಲಿಯೇ ಪಂಚನಾಮೆ, ಮಹಜರನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ತಕ್ಷೀರಿನ ಆರೋಪಿಯಾದ ಶ್ರೀ ಸಂಕಪ್ಪ ಪೂಜಾರಿ, ಬಿನ್: ಲೋಕಯ್ಯ ಪೂಜಾರಿ, ಬೋಳಂಗಡಿ ಮನೆ, ಬಂಟ್ವಾಳ ತಾಲ್ಲೂಕು ಇವರು ತನ್ನ ವಕೀಲರ ಮುಖಾಂತರ ದಿ: 30-6-2000 ರಂದು ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ವಶಪಡಿಸಿಕೊಂಡ ಆಟೋರಿಕ್ಷಾವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ವಿನಂತಿಸಿರುತ್ತಾರೆ. ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರುರವರು ವಾಹನ ಮಾಲೀಕರ ಅರ್ಜಿಯನ್ನು ಪರಿಶೀಲಿಸಿ, ಅರ್ಜಿದಾರರು ತನ್ನ ಗಮನಕ್ಕೆ ಬಾರದೆ ನಡೆದಿದೆ ಎನ್ನುವುದಕ್ಕೆ ಈ ಹಂತದಲ್ಲಿ ಯಾವುದೇ ಸಾಕ್ಷ್ಯಾದಾರಗಳು ಇರುವುದಿಲ್ಲ. ಒಂದು ವೇಳೆ ಸದರಿ ಆಟೋರಿಕ್ಷಾವನ್ನು ಅರ್ಜಿದಾರರ ವಶಕ್ಕೆ ತಾತ್ಕಾಲಿಕ ನೆಲೆಯಲ್ಲಿ ಬಿಟ್ಟುಕೊಟ್ಟಲ್ಲಿ ಅದನ್ನು ಮುಂದೆ ಇಂತಹದೇ ಅಕ್ರಮ ಸಾಗಾಟಕ್ಕೆ ಉಪಯೋಗಿಸುವ ಸಾಧ್ಯತೆಯಿರುವುದರಿಂದ, ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಈ ಪ್ರಾಧಿಕಾರದ ಆದೇಶ ಸಂಖ್ಯೆ:ಎಸ್‌ಡಿಕೆ/582/ಡಿಟಿಸಿಆರ್/1999-2000 ದಿ:25-7-2000 ರಂದು ತಿರಸ್ಕರಿಸಿರುತ್ತಾರೆ.

ಸದರಿ ಆದೇಶದಿಂದ ಭಾದಿತರಾದ ಅರ್ಜಿದಾರರು ದಕ್ಷಿಣ ಕನ್ನಡ ಜಿಲ್ಲಾ ಸೆಷನ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ಸಂಖ್ಯೆ: 124/2000 ರಂತೆ ಮೇಲ್ಮನವಿ ಸಲ್ಲಿಸಿದ್ದು, ಇವರ ಮೇಲ್ಮನವಿಯನ್ನು ಪರಿಗಣಿಸಿದ ಒಂದನೇ ಹೆಚ್ಚುವರಿ ಸೆಷನ್ ನ್ಯಾಯಾಧೀಶರು ತಮ್ಮ ಆದೇಶ ಕ್ರಿಮಿನಲ್ ಅಪೀಲ್ ಸಂ:124/2000 ದಿ:11-8-2000 ರಲ್ಲಿ ಈ ಪ್ರಾಧಿಕಾರದ ಆದೇಶ ದಿ:25-7-2000 ವನ್ನು ತಳ್ಳಿ ಹಾಕಿ, ಅರ್ಜಿದಾರರು ಅಧಿಕೃತ ಅಧಿಕಾರಿ ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರು

ಇವರಿಗೆ ತೃಪ್ತಿಕರವಾಗುವ ಹಾಗೂ ಅರ್ಜಿದಾರರು ಪ್ರಚಲಿತ ಇಂಡೆಮ್ನಿಟಿ ಬಾಂಡ್ ರೂ.50,000/- ಮತ್ತು ಸಾಲ್ವೆಂಟ್ ಶ್ಯೂರಿಟಿಯನ್ನು ಹಾಗೂ ಕೆಲವು ಷರತ್ತುಗಳಿಗೆ ಬದ್ದರಾದಲ್ಲಿ ಅಧಿಕೃತ ಅಧಿಕಾರಿಗಳು ಜಪ್ತು ಮಾಡಿರುವ ಆಟೋರಿಕ್ಷಾ ಸಂ: ಸಿಆರ್‌ಎಕ್ಸ್-9518 ನ್ನು ತಾತ್ಕಾಲಿಕ ನೆಲೆಯಲ್ಲಿ ಅರ್ಜಿದಾರರ ವಶಕ್ಕೆ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ.

ಸತ್ರ ನ್ಯಾಯಾಲಯದ ಆದೇಶದ ಪ್ರಕಾರ ಅರ್ಜಿದಾರರು ರೂ.50,000/- ಇಂಡೆಮ್ನಿಟಿ ಬಾಂಡ್‌ಗೆ ಸಮನಾಗಿ ಒಬ್ಬ ಸಾಲ್ವೆಂಟ್ ಶ್ಯೂರಿಟಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದರಿಂದ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತಕ್ಷೀರು ಸಂಖ್ಯೆ:2/1999-00 ದಿ:13-6-2000 ರಲ್ಲಿ ಜಪ್ತು ಮಾಡಿರುವ ಆಟೋರಿಕ್ಷಾ ಸಂ:ಸಿಆರ್‌ಎಕ್ಸ್-9518 ನ್ನು ಅರ್ಜಿದಾರರ ಸುಪರ್ಧಿಗೆ ಈ ಪ್ರಾಧಿಕಾರ ಆದೇಶ ಸಮ ಸಂಖ್ಯೆ ದಿ:5-9-2000 ರಂದು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿದೆ.

ವಾಹನ ಮಾಲೀಕರಿಗೆ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ದಿ:24-11-2000 ರಂದು ನೀಡಲಾಗಿದ್ದು, ಸದರಿ ನೋಟೀಸಿಗೆ ಅನುಗುಣವಾಗಿ ಅವರು ತನ್ನ ವಕೀಲರ ಮುಖಾಂತರ ದಿ:5-12-2000 ರಂದು ಉತ್ತರವನ್ನು ಸಲ್ಲಿಸಿರುತ್ತಾರೆ. ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: ಇಎಕ್ಸ್‌ಇ/ ಬಿಎನ್‌ಟಿ/ಸಿಆರ್‌ಎಂ/81/99-00 ದಿ:22-1-2001 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳಿಂದ ಸ್ಯಾಂಪಲ್‌ನ್ನು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ಪತ್ರ ಸಂಖ್ಯೆ: ಇ-765/ 2000-01 ದಿ:5-7-2000 ರಲ್ಲಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.27-10 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಸಾರಾಯಿ ಸ್ಯಾಚೆಟ್‌ಗಳು ಉಬ್ಬಿಕೊಂಡು ಉಪಯೋಗಿಸಲು ಸಾಧ್ಯವಿಲ್ಲದ ಕಾರಣ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ಮುಟ್ಟುಗೋಲು ಆದೇಶ ಸಂಖ್ಯೆ: ಎಸ್‌ಡಿಕೆ/582/ಡಿಟಿಸಿಆರ್/1999-00 ದಿ:31-1-2001 ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಿಯಮ 43ಎ ರನ್ವಯ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ಸಮಕ್ಷಮ ನಾಶಪಡಿಸಲು ಆದೇಶಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಸರಕಾರದ ಅಭಿಯೋಜನೆ ಪರ ಸಾಕ್ಷಿಯನ್ನು ಪಡೆಯಲಾಗಿದೆ. ಈ ಪ್ರಕರಣದಲ್ಲಿ ಸರಕಾರದ ಪರ ಹಾಗೂ ವಾಹನ ಮಾಲೀಕರ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ `ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿರುವುದು ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿ: 13-6-2000 ರಂದು ಆಟೋರಿಕ್ಷಾ ಸಂಖ್ಯೆ: ಸಿಆರ್‌ಎಕ್ಸ್-9518 ರಲ್ಲಿ ಅಕ್ರಮ ಸಾರಾಯಿ ಸಾಗಾಟ ಮಾಡಲಾಗಿತ್ತೇ?

2) ಸದರಿ ವಾಹನದಲ್ಲಿ ಅಕ್ರಮ ಸಾರಾಯಿಯನ್ನು ತನ್ನ ತಿಳುವಳಿಕೆಗೆ ಬಾರದೆ ಮಾಡಲಾಗಿತ್ತೇ ಎಂಬುವುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷಿಗಳ ಆಧಾರದ ಮೇಲೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು, ಎರಡನೇ ಅಂಶವನ್ನು ಸಕರಾತ್ಮಕವಾಗಿ ಇಲ್ಲವೆಂದು ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಶ್ರೀ.ಹೆಚ್.ಎನ್.ಹಳಿಯಾಳ್‌ಕರ್, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಈ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾಗಿದ್ದು, ಇವರು ದಿ:12-7-2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು ದಿನಾಂಕ:13-6-2000 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಯೊಂದಿಗೆ ಪಾಣೆಮಂಗಳೂರು ಅಕ್ಕರಹಂಗಡಿಯಲ್ಲಿ ರಸ್ತೆಗಾವಲು ಮಾಡುತ್ತಿರುವ ಸಮಯದಲ್ಲಿ ಅನುಮಾನದ ಮೇರೆಗೆ ಒಂದು ಆಟೋರಿಕ್ಷಾವನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಚಾಲಕನು ರಿಕ್ಷಾವನ್ನು ನಿಲ್ಲಿಸಿ ಓಡಲು ಪ್ರಯತ್ನಿಸಿದಾಗ ಆತನನ್ನು ಹಿಡಿದರು. ನಂತರ ಸದ್ರಿ ರಿಕ್ಷಾವನ್ನು ತಪಾಸಣೆ ಮಾಡಲಾಗಿ, ಕಾಲು ಇಡುವ ಜಾಗದಲ್ಲಿ ಘಾಟು ವಾಸನೆ ಬರುತ್ತಿರುವ ಒಂದು ಗೋಣಿ ಚೀಲವನ್ನು ನೋಡಲಾಯಿತು. ಸದರಿ ಗೋಣಿ ಚೀಲವನ್ನು ತೆರೆದು ನೋಡಲಾಗಿ, ಅದರಲ್ಲಿ 100 ಎಂ.ಎಲ್.ನ 120 ಸಾರಾಯಿ ಸ್ಯಾಚೆಟ್‌ಗಳು ಕಂಡು ಬಂತು. ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸಲು ಅವಶ್ಯ ರಹದಾರಿ ಪತ್ರ ಇದೆಯೇ ಎಂದು ವಿಚಾರಿಸಿದಾಗ ಆತನಲ್ಲಿ ಇಲ್ಲ ಎಂದು ತಿಳಿಸಿದನು. ನಂತರ ಆತನ ಹೆಸರು ಕೇಳಲಾಗಿ ಸಂಕಪ್ಪ, ಬಿನ್: ಲೋಕಯ್ಯ ಪೂಜಾರಿ, ಬೊಳದಂಗಡಿ ಮನೆ, ಬಂಟ್ವಾಳ ತಾಲ್ಲೂಕು ಎಂದು ತಿಳಿಸಿದನು. ನಂತರ ಸದರಿ ಸಾರಾಯಿ ಸ್ಯಾಚೆಟ್‌ಗಳಿಂದ 2 ಸಾರಾಯಿ ಸ್ಯಾಚೆಟ್‌ಗಳನ್ನು ಪ್ರತ್ಯೇಕಿಸಿ ಮಾದರಿ ತಯಾರಿಸಿದೆವು. ಅವುಗಳಿಗೆ ಬಟ್ಟೆ ಸುತ್ತಿ ಇಲಾಖಾ ಸೀಲ್‌ನ್ನು ಮುದ್ರಿಸಿದೆವು ಹಾಗೂ ಉಳಿದ ಸಾರಾಯಿ ಸ್ಯಾಚೆಟ್‌ಗಳ ಗೋಣಿ ಚೀಲಗಳಿಗೆ ಸೀಲ್ ಮಾಡಲಾಯಿತು. ನಂತರ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಣಿಕೆಗೆ ಬಳಸಿದ ಆಟೋರಿಕ್ಷಾವನ್ನು ಮತ್ತು ಚಾಲಕನನ್ನು ವಶಕ್ಕೆ

ತೆಗೆದುಕೊಂಡು ಮಹಜರನ್ನು, ಮಾದರಿ ಸೀಲನ್ನು ಮತ್ತು ಸೊತ್ತುಗಳ ಪಟ್ಟಿಯನ್ನು ಸ್ಥಳದಲ್ಲಿಯೇ ತಯಾರಿಸಿದೆವು. ಮಹಜರಿನ ಮೂಲ ಪ್ರತಿಯು ಮಾನ್ಯ ನ್ಯಾಯಾಲಯದಲ್ಲಿದ್ದು, ಅದರ ಛಾಯ ಪ್ರತಿಯನ್ನು ಗುರುತಿಸಿ ನಿಶಾನೆ ಪಿ-1 ಎಂದು, ಮಾದರಿ ಸೀಲನ್ನು ನಿಶಾನೆ ಪಿ-2 ಎಂದು, ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ವಶಪಡಿಸಿಕೊಂಡ ಸೊತ್ತುಗಳು ಕರ್ನಾಟಕ ಅಬಕಾರಿ ಕಾನೂನಿನಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದಂತಹ ಸೊತ್ತುಗಳಾಗಿರುವುದರಿಂದ, ಈ ಬಗ್ಗೆ ತನಿಖಾ ವರದಿಯನ್ನು ತಯಾರಿಸಿ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರು ಇವರಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ-5 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲಿಗೆ ಉತ್ತರಿಸುತ್ತಾ, ದೊರೆತ ಖಚಿತ ಮಾಹಿತಿಯನ್ನು ದಿನಚರಿಯಲ್ಲಿ ನಮೂದಿಸಿರುತ್ತೇನೆ. ಸದರಿ ಗೋಣಿ ಚೀಲವನ್ನು ರಿಕ್ಷಾದ ಹಿಂದಿನ ಸೀಟಿನ ಕಾಲು ಇಡುವ ಸ್ಥಳದಲ್ಲಿ ಇಡಲಾಗಿತ್ತು. ರಿಕ್ಷಾವು ಸಾರ್ವಜನಿಕರನ್ನು ಬಾಡಿಗೆಗಾಗಿ ಸಾಗಾಟ ಮಾಡುವ ರಿಕ್ಷಾ ಎಂದರೆ ಸರಿ. ಗೋಣಿ ಚೀಲದಲ್ಲಿ ದನಗಳ ಆಹಾರ ಇದೆ ಎಂದರೆ ಸರಿಯಲ್ಲ. ರಿಕ್ಷಾ ಚಾಲಕನ ವಿರುದ್ದ ಸುಳ್ಳು ಮೊಕದ್ದಮೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಆರ್.ಸಿ.ಮಾಲೀಕರಾದ ಶ್ರೀ.ಸಂಕಪ್ಪ ಪೂಜಾರಿ ಇವರು ದಿ:27-5-2009 ರಂದು ಈ ಪ್ರಾಧಿಕಾರದ ಮುಂದೆ ವಿಚಾರಣೆಗೆ ಹಾಜರಾಗಿ, ತಾನು ವೈಯಕ್ತಿಕ ಕೌಟುಂಬಿಕ ಸಮಸ್ಯೆಗಳಿಂದಾಗಿ ಪ್ರಾಧಿಕಾರದ ಮುಂದೆ ಹೆಚ್ಚು ಆಸಕ್ತಿ ವಹಿಸಲು ಸಾಧ್ಯವಾಗದೇ ಇರುವ ಕಾರಣ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆ ಪಡೆದಿರುವ ಆಟೋರಿಕ್ಷಾವನ್ನು ದಿ:7-1-2009 ರಂದು ಅಬಕಾರಿ ಉಪ ನಿರೀಕ್ಷಕರು (2), ಬಂಟ್ವಾಳ ವಲಯ, ಬಂಟ್ವಾಳ ಇವರ ವಶಕ್ಕೆ ಹಿಂತಿರುಗಿಸಿರುತ್ತೇನೆ ಎಂದು ಪ್ರಾಧಿಕಾರದ ವಿಚಾರಣೆ ಸಂದರ್ಭದಲ್ಲಿ ಹೇಳಿಕೆ ನೀಡಿರುತ್ತಾರೆ. ಈ ಕುರಿತು ದಿ:27-1-2009 ರ ಅಬಕಾರಿ ಉಪ ನಿರೀಕ್ಷಕರು (2), ಬಂಟ್ವಾಳ ವಲಯ, ಬಂಟ್ವಾಳ ಇವರ ವರದಿಯಂತೆ ಸದ್ರಿ ಆಟೋರಿಕ್ಷಾವನ್ನು ಅವರ ಕಚೇರಿಗೆ ಒಪ್ಪಿಸಿರುವ ಬಗ್ಗೆ ವರದಿ ಮಾಡಿರುವುದು ಕಂಡು ಬರುತ್ತದೆ ಹಾಗೂ ವಾಹನ ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿದ ಆಟೋರಿಕ್ಷಾವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನ್ನಿಂದ ಯಾವುದೇ ತಕರಾರು ಇರುವುದಿಲ್ಲ ಮತ್ತು ಪ್ರಕರಣದ ವಿಚಾರಣೆಯನ್ನು ಕೈಬಿಡಲು ಹಾಗೂ ಮುಕ್ತಾಯಗೊಳಿಸಬೇಕೆಂದು ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತಾರೆ.

ಅರ್ಜಿದಾರರ ಹಾಗೂ ಸಹಾಯಕ ಅಭಿಯೋಜಕ ನಿರ್ದೇಶಕರ ವಾದ ವಿವಾದವನ್ನು ಪರಿಗಣಿಸಿ ಪ್ರಕರಣದ ದಾಖಲೆಗಳನ್ನು ಆಧರಿಸಿ,ತನಿಖಾ ವರದಿ ಹಾಗೂ ಪ್ರಕರಣದ ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನದಲ್ಲಿ ದಿ:13-6-2000 ರಂದು ಅಕ್ರಮವಾಗಿ ಸಾರಾಯಿ ಸಾಗಾಣಿಕೆ ಮಾಡಲಾಗಿರುವುದು ಪತ್ತೆಯಾಗಿರುವುದರಿಂದ, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 11, 14 ರಂತೆ ಅಪರಾಧವಾಗಿದ್ದು, ಕಲಂ 34, 38ಎ ರೀತ್ಯಾ ಶಿಕ್ಷಾರ್ಹವಾಗಿರುವುದರಿಂದ, ಸದರಿ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಲಾಗಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 43ಎ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ. ಮೇಲಿನ ಸಾಕ್ಷ್ಯಾಧಾರಗಳು ಮತ್ತು ಸಾಕ್ಷಿ ವಿಚಾರಣೆಗಳಿಂದಾಗಿ ಆರ್.ಸಿ. ಮಾಲೀಕರು ತನ್ನ ವಾಹನದಲ್ಲಿ ಅಕ್ರಮವಾಗಿ ಸಾರಾಯಿಯನ್ನು ಸಾಗಿಸುತ್ತಿದ್ದುದು ಪತ್ತೆಯಾಗಿರುವುದರಿಂದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತೀರ್ಮಾನಿಸಿ ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/582/ಡಿಟಿಸಿಆರ್/1999-2000, ದಿನಾಂಕ:30ನೇ ಮೇ, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತಕ್ಷೀರು ಸಂಖ್ಯೆ: 2/1999-00 ದಿ:13-6-2000 ರಲ್ಲಿ ಜಪ್ತುಪಡಿಸಿರುವ ವಾಹನ ಆಟೋರಿಕ್ಷಾ ಸಂಖ್ಯೆ: ಸಿಆರ್‌ಎಕ್ಸ್-9518 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ: 30-05-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.-1: ಶ್ರೀ.ಹೆಚ್.ಎನ್.ಹಳಿಯಾಳ್‌ಕರ್, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರಿನ ಪ್ರತಿ

ನಿಶಾನೆ ಪಿ-2 : ಮಾದರಿ ಸೀಲ್‌ನ ಪ್ರತಿ.

ನಿಶಾನೆ ಪಿ-3 : ಸೊತ್ತುಗಳ ಪಟ್ಟಿ

ನಿಶಾನೆ ಪಿ-4 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ-5 : ಅಧಿಕೃತ ಅಧಿಕಾರಿಯವರಿಗೆ ಸಲ್ಲಿಸಿದ ವರದಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:-

ಪಿಡಬ್ಲ್ಯ-1: ಶ್ರೀ ಸಂಕಪ್ಪ ಪೂಜಾರಿ (ವಾಹನ ಮಾಲೀಕರು)

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್

ಪಿ.ಆರ್.622 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/306/ಡಿಟಿಸಿಆರ್/2005-2006, ದಿನಾಂಕ:20ನೇ ಜೂನ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ.

ಆರೋಪಿ:

ಆರೋಪಿಗಳು ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:

ಶ್ರೀಮತಿ.ಲಕ್ಷ್ಮಿ (71 ವರ್ಷ)

ಕೋಂ: ದಿ.ಜಾಯಿರ ಯಾನೆ ಅಥಾರ್ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:16-12-2005 ರಂದು ಪೂರ್ವಾಹ್ನ ಸುಮಾರು 9-30 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ರಸ್ತೆಗಾವಲು ನಡೆಸುತ್ತಿದ್ದಾಗ ಕಲ್ಲಡ್ಕದಿಂದ ಪುತ್ತೂರು ಕಡೆಗೆ ಅತೀ ವೇಗವಾಗಿ ಜೀಪು ಬರುತ್ತಿರುವುದನ್ನು ಸಿಬ್ಬಂದಿಯವರು ಗಮನಿಸಿ, ಸದರಿ ಜೀಪನ್ನು ನಿಲ್ಲಿಸುವಂತೆ ಸೂಚನೆ ನೀಡಿದಾಗ ಜೀಪಿನ ಚಾಲಕನು ಅತೀ ವೇಗವಾಗಿ ಮುಂದಕ್ಕೆ ಚಲಾಯಿಸಿಕೊಂಡು ಹೋದಾಗ, ಕೂಡಲೇ ಸರಕಾರಿ ವಾಹನದಲ್ಲಿ ಸದರಿ ಜೀಪನ್ನು ಬೆನ್ನಟ್ಟಿ ಹಿಂಭಾಲಿಸಿದಾಗ, ಆತನು ಸುಮಾರು ಅರ್ಧ ಫರ್ಲಾಂಗು ದೂರದಲ್ಲಿ ಸದರಿ ಜೀಪನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಮರಗಳ ಮಧ್ಯೆ ಓಡಿ ಪರಾರಿಯಾದನು.

ಸದರಿ ಜೀಪನ್ನು ತಪಾಸಣೆಗೆ ಒಳಪಡಿಸಿದಾಗ ಅದರಲ್ಲಿ 35 ಲೀಟರ್ ಗಾತ್ರದ 7 ಪ್ಲಾಸ್ಟಿಕ್ ಕ್ಯಾನ್‌ಗಳಿದ್ದು, ಅದರಲ್ಲಿ ಸುಮಾರು 245 ಲೀಟರ್ ಶೇಂದಿ ಇರುವುದು ಖಚಿತವಾಯಿತು. ಈ ಬಗ್ಗೆ ಜೀಪಿನ ಶೋಧನೆ ಮಾಡಲೆಂದು ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದಿರುವುದರಿಂದ, ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 54 ರೀತ್ಯಾ ರೆಕಾರ್ಡ್ ಆಫ್ ರೀಜೆನ್ಸ್‌ನಂತೆ ವರದಿ ತಯಾರಿಸಿ ಸಿಬ್ಬಂದಿಯವರನ್ನು ಪಂಚರನ್ನಾಗಿ ಇರಿಸಿಕೊಂಡ ವಾಹನ ಸಂಖ್ಯೆ: ಕೆಎ-19-ಎಂ-5256 ಜೀಪನ್ನು ಶೋಧನೆ ಮಾಡಲಾಯಿತು. ಸದ್ರಿ ಕ್ಯಾನ್‌ಗಳಿಂದ ತಲಾ 750 ಎಂ.ಎಲ್.ನ ಬಾಟಲ್‌ಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ 7 ಮಾದರಿಗಳಲ್ಲಿ ಶೇಂದಿಯನ್ನು ತೆಗೆಯಲಾಯಿತು. ದೊರೆತ ಪ್ಲಾಸ್ಟಿಕ್ ಕ್ಯಾನ್‌ಗಳಿಗೆ ಕ್ರಮವಾಗಿ 1 ರಿಂದ 7 ರವರೆಗೆ ಕ್ರಮ ಸಂಖ್ಯೆ ನೀಡಿ, ಮಾದರಿ ಬಾಟಲ್‌ಗಳಿಗೆ ಮತ್ತು ಉಳಿದ ಕ್ಯಾನ್‌ಗಳಿಗೂ ಬಟ್ಟೆದಾರ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ನಂತರ ಅಕ್ರಮ ಸಾಗಾಟಕ್ಕೆ ಉಪಯೋಗಿಸಿದ ಜೀಪ್ ಸಂಖ್ಯೆ: ಕೆಎ-19-ಎಂ-5256 ನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ,ಅದರ ಇಂಜಿನ್ ಸಂ: ಡಿಎಸ್51674 ಮತ್ತು ಚಾಸೀಸ್ ಸಂ: ಎಂಎಸ್‌ಡಿಎಸ್ 51674 ಆಗಿದ್ದು, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14 ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 34, 38ಎ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದ್ದ ಶೇಂದಿ ಮತ್ತು

ಜೀಪನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಓಡಿ ಪರಾರಿಯಾದ ಚಾಲಕನ ವಿರುದ್ಧ ತಕ್ಷೀರು ಸಂ: 5/2005-06 ದಿನಾಂಕ: 16-12-2005 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕಳೆಂದು ಶ್ರೀಮತಿ.ಲಕ್ಷ್ಮಿ ಪ್ರಾಯ 71 ವರ್ಷ, ಕೋಂ: ದಿ.ಜಾಯಿರ ಯಾನೆ ಅಥಾರ್ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ: 10-3-2006 ರಂದು ಅರ್ಜಿ ಸಲ್ಲಿಸಿ, ತನ್ನ ಗಮನಕ್ಕೆ ಬಾರದೆ ಅಕ್ರಮವಾಗಿ ಶೇಂದಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಿರುವುದು, ಈ ಬಗ್ಗೆ ತನಗೆ ಯಾವುದೇ ತಿಳುವಳಿಕೆ ಇರುವುದಿಲ್ಲ. ತನ್ನ ವಾಹನವನ್ನು ತನಗೆ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ. ಮತ್ತು ಉಡುಪಿ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ ಮಧ್ಯಂತರ ಬಿಡುಗಡೆಗೆ ಸಲ್ಲಿಸಿದ ಅರ್ಜಿಯ ಬಗ್ಗೆ ವಿಚಾರಣೆಯನ್ನು ಕೈಗೊಂಡು, ವಾಹನದ ಅಂದಾಜು ಮೌಲ್ಯವನ್ನು ನಿರ್ಧರಿಸಲು ದೃಢೀಕರಣ ಪತ್ರ ಪಡೆಯಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ.ಜಿಲ್ಲೆ, ಮಂಗಳೂರು ಇವರಿಗೆ ದಿ: 6-5-2006 ಮತ್ತು ದಿ: 29-5-2006 ರಂದು ಪತ್ರ ಬರೆಯಲಾಗಿರುತ್ತದೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತನಿಖಾ ವರದಿ ಸಂ: ಸಿಆರ್ಎಂ/14/2005-06 ದಿ: 27-4-2006 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 245 ಲೀಟರ್ ಶೇಂದಿಯಲ್ಲಿ ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿಗಳನ್ನು ಕರ್ನಾಟಕ ಸರಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ದಿ:28-12-2005 ರಂದು ಕಳುಹಿಸಲಾಗಿದ್ದು, ಅವರ ಪತ್ರ ಸಂಖ್ಯೆ: 652-7 ದಿ: 02-01-2006 ರ ವರದಿಯಲ್ಲಿ ಶೇಂದಿಯ ಮದ್ಯಸಾರ ಪ್ರಮಾಣ ಶೇ.04-0 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ವಶಪಡಿಸಿಕೊಂಡ ಶೇಂದಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಹಾಗೂ ಜಪ್ತುಪಡಿಸಿಕೊಳ್ಳಲಾದ ವಾಹನದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ಪಡೆಯಲಾಗಿದ್ದು, ವಾಹನದ ಮಾಲೀಕರ ಹೆಸರು ಜಾಯಿರ ಯಾನೆ ಅಥಾರ್ ಬೆಳ್ಚಪಾಡ ಎಂಬುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ.

ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮತ್ತು ಉಡುಪಿ ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಂಎನ್‌ಜಿ/ಇ.ಐ.ಬಿ/ಡಿಟಿಸಿಆರ್/305/2005-06 ದಿ:5-8-2006ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಶೇಂದಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಶೇಂದಿಯನ್ನು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ಸಮಕ್ಷಮ ನಾಶಪಡಿಸಲು ಹಾಗೂ ಖಾಲಿ ಪ್ಲಾಸ್ಟಿಕ್ ಕ್ಯಾನ್‌ಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಆದೇಶಿಸಿರುತ್ತಾರೆ.

ಶ್ರೀಮತಿ.ಲಕ್ಷ್ಮಿ ಪ್ರಾಯ 71 ವರ್ಷ, ಕೋಂ: ದಿ.ಜಾಯಿರ ಯಾನೆ ಅಥಾರ್ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು ಇವರು ತನ್ನ ವಕೀಲರ ಮುಖಾಂತರ ದಿ:21-4-2006 ರಂದು ಅರ್ಜಿ ಸಲ್ಲಿಸಿ, ತನ್ನ ಗಂಡ ವಾಹನದ ನೋಂದಣಿ ಮಾಲೀಕರಾಗಿದ್ದು, ಇವರು ದಿ:5-2-2000 ರಂದು ನಿಧನರಾಗಿದ್ದು, ವಾಹನದ ಮಾಲೀಕತ್ವದ ಅಧಿಕಾರವನ್ನು ಅಫಿಡಾವಿತ್ ಮೂಲಕ ಹಾಗೂ ತಹಶೀಲ್ದಾರ್, ಬಂಟ್ವಾಳ ಇವರು ನೀಡಿದ ದೃಢಪತ್ರದ ಮೂಲಕ ವಾಹನದ ಮಾಲೀಕತ್ವವನ್ನು ಮುಂದುವರಿಸಿರುವ ಬಗ್ಗೆ ದೃಢೀಕರಣವನ್ನು ನೀಡಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ಪತ್ರ ಸಂಖ್ಯೆ: ಸಿಆರ್ಎಂ/5/2005-06 ದಿ:1-9-2006 ರ ವರದಿಯಲ್ಲಿ, ವಾಹನದ ಇಂದಿನ ಮಾರುಕಟ್ಟೆ ಮೌಲ್ಯ ರೂ.20,000/- ಗಳಾಗಬಹುದೆಂದು ಮೋಟಾರು ವಾಹನ ನಿರೀಕ್ಷಕರು, ಮಂಗಳೂರು ಇವರಿಂದ ದೃಢೀಕರಣ ಪತ್ರ ಪಡೆದು ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮತ್ತು ಉಡುಪಿ ಜಿಲ್ಲೆ, ಮಂಗಳೂರು ಇವರು ದಿ:25-11-2006 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ.ಜಿಲ್ಲೆ, ಮಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು, ವಾಹನಕ್ಕೆ ಸಂಬಂಧಿಸಿದಂತೆ ಮೃತರು ವಾಹನ ಮಾಲೀಕರ ಅಧಿಕೃತ ವಾರೀಸುದಾರರೆಂದು ನಿರ್ಧರಿಸುವ ವಿಷಯವು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ, ಈ ಕುರಿತು ವರದಿ ಸಲ್ಲಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ.ಜಿಲ್ಲೆ, ಮಂಗಳೂರು ಇವರಲ್ಲಿ ಕೋರಲಾಗಿತ್ತು. ನಂತರ ಶ್ರೀಮತಿ.ಲಕ್ಷ್ಮಿಯವರ ಹೆಸರಿಗೆ ವಶಪಡಿಸಿಕೊಂಡ ಜೀಪು ಸಂಖ್ಯೆ: ಕೆಎ-19-ಎಂ-5256 ರ ಮಾಲೀಕತ್ವವನ್ನು ತನ್ನ ಗಂಡನಿಂದ ತನ್ನ ಹೆಸರಿಗೆ ದಿ:24-5-2007 ರಿಂದ ವರ್ಗಾಯಿಸಿದ ಬಗ್ಗೆ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ದಿನಾಂಕ:12-7-2007 ರಂದು ಈ ಪ್ರಾಧಿಕಾರಕ್ಕೆ ತನ್ನ ವಕೀಲರ ಮುಖಾಂತರ ಸಲ್ಲಿಸಿರುತ್ತಾರೆ.

ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮತ್ತು ಉಡುಪಿ ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ:ಇ.ಐ.ಬಿ/ಡಿಟಿಸಿಆರ್/306/2005-06 ದಿ:12-7-2007 ರಲ್ಲಿ ವಾಹನ ಮಾಲೀಕರು ವಾಹನದ ಮೌಲ್ಯಕ್ಕೆ ಅನುಗುಣವಾಗಿ ರೂ.20,000/- ಬ್ಯಾಂಕ್ ಗ್ಯಾರಂಟಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಲು ಹಾಗೂ ಇತರ ಷರತ್ತುಗಳಿಗೆ ಬದ್ಧರಾದಲ್ಲಿ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ. ಈ ಬಗ್ಗೆ ಅರ್ಜಿದಾರರು ಸಿಂಡಿಕೇಟ್ ಬ್ಯಾಂಕ್, ಕನ್ಯಾನ ಶಾಖೆ, ಬಂಟ್ವಾಳ ಇವರಿಂದ ಬ್ಯಾಂಕ್ ಗ್ಯಾರಂಟಿ ಸಂಖ್ಯೆ: 2/2007 ದಿ:1-8-2007 ರಲ್ಲಿ

ರೂ.20,000/- ರ ಬ್ಯಾಂಕ್ ಭದ್ರತೆಯನ್ನು ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿ ಹಾಗೂ ಮಧ್ಯಂತರ ಬಿಡುಗಡೆ ಬಗ್ಗೆ ಪ್ರಾಧಿಕಾ ವಿಧಿಸಿದ ಷರತ್ತುಗಳನ್ನು ಪಾಲಿಸಿರುವುದಾಗಿ ಮುಚ್ಚಳಿಕೆ ಪತ್ರ ನೀಡಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ಸಂಖ್ಯೆ ಕೆಎ-19-ಎಂ-5256ನ್ನು ಅರ್ಜಿದಾರರ ಸುಪರ್ಧಿಗೆ ತಾತ್ಕಾಲಿಕ ನೆಲೆಯಲ್ಲಿ ದಿ:10-8-2007 ರಂದು ಬಿಡುಗಡೆಗೊಳಿಸಲಾಗಿರುತ್ತದೆ.

ವಾಹನದ ನೋಂದಣಿ ಮಾಲೀಕಳಾದ ಶ್ರೀಮತಿ.ಲಕ್ಷ್ಮಿ ಪ್ರಾಯ 71 ವರ್ಷ, ಕೋಂ: ದಿ.ಜಾಯಿರ ಯಾನೆ ಅಥಾರ್ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ಈ ಪ್ರಾಧಿಕಾರದ ದಿ:2-8-07 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸಿಗೆ ತನ್ನ ವಕೀಲರ ಮುಖಾಂತರ ದಿ: 18-9-2007 ರಂದು ಉತ್ತರವನ್ನು ಸಲ್ಲಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ:16-12-2005 ರಂದು ಜೀಪು ಸಂಖ್ಯೆ: ಕೆಎ-19-ಎಂ-5256 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಶೇಂದಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ಸಕಾರಾತ್ಮಕವಾಗಿ ಇಲ್ಲವೆಂದು ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ.ಅಮರನಾಥ.ಎಸ್.ಎಸ್ ಭಂಡಾರಿ, ಅಬಕಾರಿ ನಿರೀಕ್ಷಕರು ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:21-06-2007 ರಂದು ಈ ಪ್ರಾಧಿಕಾರದ ಮುಂದ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:16-12-2005 ರಂದು ಬೆಳಿಗ್ಗೆ 9-30 ಗಂಟೆ ಕಲ್ಲಡ್ಕ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆಗಾವಲು ನಡೆಸುತ್ತಿದ್ದು, ಆ ಸಮಯಕ್ಕೆ ಕಲ್ಲಡ್ಕ ಕಡೆಯಿಂದ ಪುತ್ತೂರು ಕಡೆಗೆ ಜೀಪು ಬರುತ್ತಿದ್ದು, ಸದರಿ ಜೀಪನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಅದನ್ನು ನಿಲ್ಲಿಸದೆ ಮುಂದಕ್ಕೆ ಚಲಾಯಿಸಿಕೊಂಡು ಹೋದನು. ತಾವು ಕೂಡಲೇ ತಮ್ಮ ಇಲಾಖಾ ವಾಹನದಲ್ಲಿ ಜೀಪನ್ನು ಬೆನ್ನಟ್ಟಿ, ಜೀಪು ಅರ್ಧ ಫರ್ಲಾಂಗು ದೂರದಲ್ಲಿ ನಿಲ್ಲಿಸಿ ಚಾಲಕನು ಓಡಿ ಪರಾರಿಯಾದನು. ಸದರಿ ಜೀಪನ್ನು ಪರಿಶೀಲಿಸಿದಾಗ, ಶೇಂದಿ ತುಂಬಿದ 35 ಲೀಟರ್ ಗಾತ್ರದ 7 ಪ್ಲಾಸ್ಟಿಕ್ ಕ್ಯಾನ್‌ಗಳಿದ್ದವು. ಯಾರೂ ಸ್ವತಂತ್ರ ಸಾಕ್ಷಿದಾರರು ದೊರಕದೇ ಇರುವುದರಿಂದ, ಇಲಾಖಾ ಸಿಬ್ಬಂದಿಯವರನ್ನೇ ಸಾಕ್ಷಿಯಾಗಿ ಶೋಧನಾ ಕಾರ್ಯವನ್ನು ಮುಂದುವರಿಸಿ, ಪ್ರತಿ ಕ್ಯಾನ್‌ಗಳಿಂದ ತಲಾ 750 ಎಂ.ಎಲ್.ನ ಒಟ್ಟು 7 ಬಾಟಲ್‌ಗಳಲ್ಲಿ ಶೇಂದಿಯನ್ನು ಪ್ರತ್ಯೇಕಿಸಿ ಮಾದರಿ ಸೀಲ್‌ನ್ನು ತಯಾರಿಸಲಾಯಿತು. ಬಾಟಲ್ ಹಾಗೂ ಕ್ಯಾನ್‌ಗಳಿಗೆ ಸೀಲ್ ಮಾಡಿ ಇಲಾಖಾ ಮುದ್ರೆಯನ್ನು ಹಾಕಿದೆವು. ಸ್ಥಳದಲ್ಲಿಯೇ ಯಾದಸ್ತನ್ನು ತಯಾರಿಸಿದೆವು. ಯಾದಸ್ತನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಸ್ಥಳದಲ್ಲಿಯೇ ವಾಹನವನ್ನು ತಪಾಸಣೆ ಮಾಡುವ ಮೊದಲು ನ್ಯಾಯಾಲಯದಿಂದ ವಾರಂಟ್‌ನ್ನು ಪಡೆಯದೆ ಇರುವುದಕ್ಕೆ ಕಾರಣಗಳನ್ನು ನಮೂದಿಸಿ ಒಂದು ಮೆಮೊವನ್ನು ತಯಾರಿಸಿದೆವು. ಸದರಿ ಮೆಮೊವನ್ನು ನಿಶಾನೆ ಪಿ-2 ಎಂದು, ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಕಚೇರಿಗೆ ಬಂದು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದೆವು. ಅದನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ತನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿದೆನು. ಸದರಿ ದಿನಾಂಕದಂದೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಎ ರಡಿಯಲ್ಲಿ ವರದಿಯನ್ನು ತಯಾರಿಸಿ ಅಬಕಾರಿ ಅಧೀಕ್ಷಕರಿಗೆ ಸಲ್ಲಿಸಿದೆನು. ಸದರಿ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ದಿ:27-12-2005 ರಂದು ತನ್ನ ರಕ್ಷಕರ ಮೂಲಕ ಮಾದರಿ ಸೀಸೆಗಳನ್ನು ರಾಸಾಯನಿಕ ತಜ್ಞರಿಗೆ ಕಳುಹಿಸಿರುತ್ತೇನೆ. ಅವರಿಂದ ಪಡೆದ ವರದಿಯನ್ನು ನಿಶಾನೆ ಪಿ-5 ಎಂದು ಗುರುತಿಸಲಾಯಿತು. ನಂತರ ವಾಹನದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು ಅವರಿಂದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆದಿರುತ್ತೇನೆ. ಇದರ ಪ್ರಕಾರ ವಾಹನದ ನೋಂದಣಿ ಮಾಲೀಕ ಜಾಯಿರ ಯಾನೆ ಅಥಾರ್ ಬೆಳ್ಚಪಾಡ ಎಂಬುವುದಾಗಿ, ಈ ಬಗ್ಗೆ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಆ ವರದಿಯನ್ನು ನಿಶಾನೆ ಪಿ- ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತನಗೆ ಯಾವುದೇ ಖಚಿತ ವರ್ತಮಾನ ಬಂದಿರುವುದಿಲ್ಲ. ಸದರಿ ಜೀಪಿನಲ್ಲಿ ಒಬ್ಬನೇ ಇರುವುದನ್ನು ನೋಡಿದೆವು. ತಕ್ಷೀರು ನಡೆದ ಸ್ಥಳವು ಕೋಮು ಗಲಭೆ ನಡೆಯುವಂತಹ ಸೂಕ್ಷ್ಮ

ಪ್ರದೇಶವಾಗಿರುತ್ತದೆ. ಅಲ್ಲಿ ಯಾವಾಗಲೂ ಪೊಲೀಸ್ ಬಂದೋಬಸ್ತ್ ಇರುತ್ತದೆ. ವಾಹನವನ್ನು ಶೋಧನೆ ಮಾಡುವ ಸ್ಥಳದಲ್ಲಿ ಯಾವೊಬ್ಬ ಸಾರ್ವಜನಿಕರು ಬಂದಿರುವುದಿಲ್ಲ. ಸಾರ್ವಜನಿಕರನ್ನು ಪಂಚರ ಸಾಕ್ಷಿಯನ್ನಾಗಿ ಬರಬೇಕೆಂದು ಕರೆದರೂ ಯಾರೂ ಬಂದಿಲ್ಲ. ಶೇಂದಿಯಲ್ಲಿ ಎಷ್ಟು ಪ್ರಮಾಣ ಈಥೈಲ್ ಮದ್ಯಸಾರ ಇರಬೇಕೆಂದು ಸರಿಯಾಗಿ ಗೊತ್ತಿಲ್ಲ. ವಶಪಡಿಸಿಕೊಂಡ ಶೇಂದಿಯು ಮಾನವನ ಸೇವನೆಗೆ ಯೋಗ್ಯವಾಗಿದೆಯೇ ಅಥವಾ ಇಲ್ಲವೇ ಎಂಬುವುದರ ಬಗ್ಗೆ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ನಮೂದಿಸಿರುವುದಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಈ ಬಗ್ಗೆ ವಾಹನ ಮಾಲೀಕರು ಭಾಗಿಯಾದ ಬಗ್ಗೆ ಯಾವುದೇ ಪುರಾವೆಯನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ತಾನು ಸರಿಯಾಗಿ ತನಿಖೆ ಮಾಡದೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:16-12-2005 ರಂದು ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಾಳಿ ನಡೆಸಿದ ಸಂದರ್ಭದಲ್ಲಿ ಜಪ್ತುಪಡಿಸಿಕೊಂಡಿರುವ ಜೀಪು ಸಂಖ್ಯೆ: ಕೆಎ-19-ಎಂ-5256 ರಲ್ಲಿ ಸುಮಾರು 245 ಲೀಟರ್ ಶೇಂದಿಯನ್ನು ಜೀಪಿನಿಂದಲೇ ವಶಪಡಿಸಿಕೊಳ್ಳಲಾಗಿದೆ ಎಂಬುವುದರ ಬಗ್ಗೆ ಸ್ಥಳ ಮಹಜರಿನಲ್ಲಿ ಕೇವಲ ಇಲಾಖಾ ಸಿಬ್ಬಂದಿಗಳು ಮಾತ್ರ ಸಹಿ ಮಾಡಿದ್ದು, ಹತ್ತಿರದಲ್ಲಿರುವ ಪೊಲೀಸರನ್ನು ಮತ್ತು ಯಾವುದೇ ಪಂಚರ ಸಹಿಯನ್ನು ಪಡೆಯದಿರುವುದು ಸಂಶಯಕ್ಕೆ ಆಸ್ಪದವಾಗಿದ್ದು, ಸದರಿ ಶೇಂದಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂಬುವುದು ಸಾಬೀತುಪಡಿಸುವ ಬಗ್ಗೆ ಸ್ಪಷ್ಟ ಸಾಕ್ಷ್ಯಾಧಾರಗಳು ಲಭ್ಯವಿರುವುದಿಲ್ಲ.

ಜೀಪು ಸಂಖ್ಯೆ: ಕೆಎ-19-ಎಂ-5256 ರ ಆರ್.ಸಿ.ಮಾಲೀಕರಾದ ಜಾಯಿರ ಯಾನೆ ಅತ್ತಾರ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು ಇವರು ಈ ಪ್ರಕರಣ ದಾಖಲಿಸಿರುವ ಪೂರ್ವದಲ್ಲಿ ದಿ:5-2-2000 ರಂದು ನಿಧನರಾಗಿದ್ದು, ಈ ಬಗ್ಗೆ ದೃಢಪತ್ರವನ್ನು ಅವರ ಪತ್ನಿ ಶ್ರೀಮತಿ.ಲಕ್ಷ್ಮಿ ಇವರು ಈ ಪ್ರಾಧಿಕಾರಕ್ಕೆ ನೀಡಿರುತ್ತಾರೆ ಹಾಗೂ ವಾಹನದ ಮಾಲೀಕತ್ವದ ಅಧಿಕಾರವನ್ನು ಅಫಿಧಾವಿತ್ ಮೂಲಕ ಹಾಗೂ ತಹಶೀಲ್ದಾರ್, ಬಂಟ್ವಾಳ ಇವರು ನೀಡಿದ ದೃಢಪತ್ರದ ಮೂಲಕ ವಾಹನದ ಮಾಲೀಕತ್ವವನ್ನು ಅವರ ಪತ್ನಿಯರಾದ ಶ್ರೀಮತಿ.ಲಕ್ಷ್ಮಿ ಪ್ರಾಯ 71 ವರ್ಷ ಇವರಿಗೆ ಮುಂದುವರಿಸಿರುವ ಬಗ್ಗೆ ದೃಢೀಕರಣ ನೀಡಿರುತ್ತಾರೆ. ಆದರೆ ತಕ್ಷೀರನ್ನು ದಿ:16-12-2005 ರಂದು ದಾಖಲಿಸಿದ್ದು, ದಿವಂಗತರಾದ ಜಾಯಿರ ಯಾನೆ ಅತ್ತಾರ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲ್ಲೂಕು ಇವರು ದಿ:5-2-2000 ರಂದು ನಿಧನರಾಗಿರುವುದರಿಂದ ಹಾಗೂ ಅವರ ಪತ್ನಿ ಶ್ರೀಮತಿ.ಲಕ್ಷ್ಮಿರವರಿಗೆ 71 ವರ್ಷವಾಗಿದ್ದು, ಇವರು ಮಾಲೀಕತ್ವದ ಬಗ್ಗೆ ಮುಂದುವರಿಸಿ ತದನಂತರ ದಿ:24-5-2007 ರಿಂದ ದಿವಂಗತರಾದ ಜಾಯಿರ ಯಾನೆ ಅತ್ತಾರ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು, ತನ್ನ ಗಂಡನ ಹೆಸರಿನಿಂದ ವಾಹನದ ಮಾಲೀಕತ್ವವನ್ನು ತನ್ನ ಹೆಸರಿಗೆ ವರ್ಗಾಯಿಸಿದ ಬಗ್ಗೆ ದೃಢಪತ್ರವನ್ನು ದಿ:12-7-2007 ರಂದು ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯೊಂದಿಗೆ ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಆದುದರಿಂದ ಈ ಪ್ರಕರಣಕ್ಕೆ ಸಂಬಂಧಿಸಿ ವಾಹನದ ಮಾಲೀಕಳಾದ ಶ್ರೀಮತಿ.ಲಕ್ಷ್ಮಿ ಇವರು ಭಾಗಿಯಾಗಿದ್ದಾರೆ ಎಂಬುವುದರ ಬಗ್ಗೆ ಯಾವುದೇ ಪುರಾವೆಗಳು ಲಭ್ಯವಾಗದೇ ಹಾಗೂ ಆರ್.ಸಿ. ಮಾಲೀಕಳು ಪ್ರಾಯಸ್ಥ ಮಹಿಳೆಯಾಗಿದ್ದು, ತನ್ನ ತಿಳುವಳಿಕೆಯಿಂದಲೇ ಇಂತಹ ಅಕ್ರಮ ಎಸಗಲು ಅವರು ಖುದ್ದಾಗಿ ಭಾಗಿಯಾಗಿರುವ ಬಗ್ಗೆ ಯಾವುದೇ ಸೂಕ್ತ ಪುರಾವೆಗಳು ಲಭ್ಯವಿರುವುದಿಲ್ಲ. ಅಲ್ಲದೆ ಪ್ರಕರಣ ದಾಖಲಿಸಿರುವ ದಿನಾಂಕ:16-12-2005 ರ ಪೂರ್ವದಲ್ಲಿ ತಕ್ಷೀರಿನಲ್ಲಿ ಜಪ್ತುಪಡಿಸಿದ ಆರ್.ಸಿ. ಮಾಲೀಕರಾದ ಜಾಯಿರ ಯಾನೆ ಅತ್ತಾರ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು ಎಂಬುವವರು ದಿ:5-2-2000 ರಂದು ಮರಣ ಹೊಂದಿದ್ದು, ಪ್ರಕರಣ ಪತ್ತೆಯಾದ ದಿನಾಂಕದಂದು ಸದರಿ ವಾಹನದ ಆರ್.ಸಿ. ಮಾಲೀಕತ್ವವನ್ನು ಹೊಂದಿರುವುದಿಲ್ಲ. ಸದರಿಯವರು ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಿಂದ ಸದರಿ ವಾಹನದ ಆರ್.ಸಿ. ಮಾಲೀಕತ್ವವನ್ನು ತನ್ನ ಗಂಡನ ಹೆಸರಿನಿಂದ ತನ್ನ ಹೆಸರಿಗೆ ದಿ:24-5-2007 ರಿಂದ ವರ್ಗಾಯಿಸಿದ ಬಗ್ಗೆ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಿಂದ ತಿಳಿದು ಬಂದಿರುತ್ತದೆ. ಅಲ್ಲದೆ ತನಿಖಾಧಿಕಾರಿಯವರು ಸದರಿ ಪ್ರಕರಣ ದಾಖಲಿಸಿದ ನಂತರ ಓಡಿ ತಪ್ಪಿಸಿಕೊಂಡಿರುವ ಆರೋಪಿ ಯಾರೆಂಬುದು ಇದುವರೆಗೂ ಪತ್ತೆ ಮಾಡಲು ಹಾಗೂ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಂಡು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ. ಆದುದರಿಂದ ಎರಡನೇ ವಿವಾದಾಂಶವನ್ನು ಸಕಾರಾತ್ಮಕವಾಗಿ ಪರಿಗಣಿಸಬಹುದಾಗಿದೆ.

ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತ ಸಾಕ್ಷ್ಯಾಧಾರಗಳು ಇಲ್ಲದಿರುವುದು ಮನವರಿಕೆಯಾಗಿರುವುದರಿಂದ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/306/ಡಿಟಿಸಿಆರ್/2005-2006, ದಿನಾಂಕ:20ನೇ ಜೂನ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತಕ್ಷೀರು ಸಂ: 5/2005-06 ದಿ:16-12-2005 ರಲ್ಲಿ ಜಪ್ತುಪಡಿಸಿರುವ ಜೀಪು ಸಂಖ್ಯೆ: ಕೆಎ-19-ಎಂ-5256 ನ್ನು

ಪ್ರಕರಣ ದಾಖಲಿಸಿದ ನಂತರದಲ್ಲಿ ಆರ್.ಸಿ.ಮಾಲೀಕಳಾದ ಶ್ರೀಮತಿ.ಲಕ್ಷ್ಮಿ ಪ್ರಾಯ 71 ವರ್ಷ, ಕೋಂ: ದಿವಂಗತ ಜಾಯಿರ ಯಾನೆ ಅತ್ತಾರ ಬೆಳ್ಚಪಾಡ, ಕನ್ಯಾನ ಗ್ರಾಮ, ಬಂಟ್ವಾಳ ತಾಲ್ಲೂಕು ಇವರ ಪರ ಬಿಡುಗಡೆಗೆ ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:12–7–2007 ರಂದು ವಾಹನ ಬಿಡುಗಡೆಗೊಳಿಸಿ ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಮಧ್ಯಂತರ ಬಿಡುಗಡೆ ಹೊಂದಿರುವ ಜೀಪು ಸಂಖ್ಯೆ: ಕೆಎ–19–ಎಂ–5256 ಕ್ಕೆ ಸಂಬಂಧಿಸಿ ಈ ಪ್ರಾಧಿಕಾರಕ್ಕೆ ಒಪ್ಪಿಸಿರುವ ಬ್ಯಾಂಕ್ ಗ್ಯಾರಂಟಿ ಪತ್ರವನ್ನು ಹಿಂದಕ್ಕೆ ನೀಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:20–06–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಶ್ರೀ.ಅಮರನಾಥ.ಎಸ್.ಎಸ್. ಭಂಡಾರಿ, ಅಬಕಾರಿ ನಿರೀಕ್ಷಕರು ಬಂಟ್ವಾಳ ಉಪ ವಿಭಾಗ, ಬಂಟ್ವಾಳ

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರ್ ಪ್ರತಿ
ನಿಶಾನೆ ಪಿ–1ಎ : ಮಹಜರ್‌ನಲ್ಲಿ ಫಿರ್ಯಾದುದಾರರ ಸಹಿ
ನಿಶಾನೆ ಪಿ–2 : ಸರ್ಚ್ ಮೆಮೊ
ನಿಶಾನೆ ಪಿ–3 : ಸೊತ್ತುಗಳ ಪಟ್ಟಿ
ನಿಶಾನೆ ಪಿ–4 : ಕಲಂ 43ಎ ಅಡಿಯಲ್ಲಿ ವರದಿ ಪ್ರತಿ
ನಿಶಾನೆ ಪಿ–5 : ಕೆಮಿಕಲ್ ವರದಿ
ನಿಶಾನೆ ಪಿ–6 : ತನಿಖಾ ವರದಿ

ನೂರ್ ಮಹಮ್ಮದ್ ಹುಸೇನ್
ಪಿ.ಆರ್.623 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/91/ಡಿಟಿಸಿಆರ್/2007–08, ದಿನಾಂಕ:20ನೇ ಜೂನ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:
ಅಬಕಾರಿ ಉಪ ನಿರೀಕ್ಷಕರು(ನಂ.2),
ಜಾರಿ ಮತ್ತು ತನಿಖೆ, ಬಂಟ್ವಾಳ.

ಆರೋಪಿ:
ಆರೋಪಿಗಳು ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:
ಶ್ರೀ.ಉಮೇಶ್ ಮೂಲ್ಯ, ಬಿನ್: ಮೊಂಟೆ ಮೂಲ್ಯ, ಕಾವಳಮೂಡು ಗ್ರಾಮ, ಕಾವಳಕಟ್ಟೆ ಅಂಚೆ, ಬಂಟ್ವಾಳ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:26–09–2007 ರಂದು ಮಧ್ಯಾಹ್ನ ಸುಮಾರು 3–00 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಬಂಟ್ವಾಳ ತಾಲ್ಲೂಕು ಮಣಿನಾಲ್ಕೂರು ಗ್ರಾಮದಲ್ಲಿ ಬಂಟ್ವಾಳದಿಂದ ಬೆಳ್ತಂಗಡಿಗೆ ಹೋಗುವ ರಸ್ತೆಯ ಬದಿಯಲ್ಲಿ ರಸ್ತೆಗಾವಲು ನಡೆಸಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಸಂದರ್ಭದಲ್ಲಿ ಸುಮಾರು 100 ಮೀಟರ್ ದೂರದಿಂದ ಬಜಾಜ್ ಆಟೋರಿಕ್ಷಾ ಬರುತ್ತಿದ್ದು, ಸಮವಸ್ತ್ರದಲ್ಲಿದ್ದ ಸಿಬ್ಬಂದಿಯವರನ್ನು ಕಂಡು ಸದರಿ ಆಟೋರಿಕ್ಷಾದ ಚಾಲಕ ರಿಕ್ಷಾವನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಪಕ್ಕದ ಗುಡ್ಡ ಪ್ರದೇಶಕ್ಕೆ ಓಡಿ ಹೋದನು. ಸಂಶಯದ ಮೇರೆಗೆ ಸದರಿ ಆಟೋರಿಕ್ಷಾವನ್ನು ಪರಿಶೀಲಿಸಿದಾಗ, 5 ಗೋಣಿ ಚೀಲಗಳಲ್ಲಿ ಸಾರಾಯಿ ತುಂಬಿದ ಸ್ಯಾಚೆಟ್‌ಗಳಿರುವುದು ಕಂಡು ಬಂತು. ಇದನ್ನು ಅಕ್ರಮವಾಗಿ ಮಾರಾಟ ಮಾಡಲು ಉದ್ದೇಶಿಸಿ

ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಎಣಿಸಿದಾಗ 5 ನೈಲಾನ್ ಚೀಲದಲ್ಲಿ ತಲಾ 260 ರಂತೆ ಒಟ್ಟು 1300 ಸಾರಾಯಿ ಸ್ಯಾಚೆಟ್‌ಗಳಿರುವುದು ಕಂಡು ಬಂತು. ತಕ್ಷೀರು ನಡೆದ ಸ್ಥಳವು ನಿರ್ಜನವಾಗಿದ್ದು, ರಸ್ತೆಯಲ್ಲಿ ಓಡಾಡುತ್ತಿದ್ದ ವ್ಯಕ್ತಿಗಳಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದಾಗ, ಯಾರೂ ಮುಂದೆ ಬಾರದ ಕಾರಣ ಸಿಬ್ಬಂದಿಯವರನ್ನೇ ಪಂಚರಾಗಿ ಇರಿಸಿಕೊಂಡು, ಸದರಿ 5 ಚೀಲಗಳಿಂದ ರಾಸಾಯನಿಕ ಪರೀಕ್ಷೆಗಾಗಿ ತಲಾ 100 ಎಂ.ಎಲ್. ನ 5 ಸಾರಾಯಿ ಸ್ಯಾಚೆಟ್‌ಗಳನ್ನು ಪ್ರತ್ಯೇಕಿಸಿ, ಅದಕ್ಕೆ ಬಟ್ಟೆದಾರ ಕಟ್ಟಿ ದೊರೆತ ಸೊತ್ತುಗಳಿಗೆ ಕ್ರಮವಾಗಿ 1 ರಿಂದ 5 ವರೆಗೆ ಕ್ರಮ ಸಂಖ್ಯೆಯನ್ನು ನೀಡಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ನಂತರ ಸಾಗಾಟಕ್ಕೆ ಬಳಸಿದ ಆಟೋರಿಕ್ಷಾ ನೋಂದಣಿ ಸಂಖ್ಯೆ: ಕೆಎ-19-ಬಿ-7081 ಹೊಂದಿರುವ ಬಜಾಜ್ ಆಟೋರಿಕ್ಷಾ ಮತ್ತು ಸೊತ್ತುಗಳನ್ನು ಮಹಜರು ಮುಖೇನ ಸ್ಥಳದಿಂದ ಇಲಾಖಾ ವಶಕ್ಕೆ ತೆಗೆದುಕೊಂಡು, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14 ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 34, 38ಎ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಮಹಜರನ್ನು ಸ್ಥಳದಲ್ಲಿಯೇ ಬರೆದು, ಓಡಿ ಹೋದ ಚಾಲಕನ ಹೆಸರು ಉಮೇಶ್ ಮೂಲ್ಯ ಎಂದು ತಿಳಿದು ಇವರ ವಿರುದ್ದ ತಕ್ಷೀರು ಸಂ:5/2007-08 ದಿ:26-09-2007 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕರೆಂದು ಉಮೇಶ್ ಮೂಲ್ಯ,ಬಿನ್:ಮೊಂಟೆ ಮೂಲ್ಯ, ಕಾವಳಮೂಡು ಗ್ರಾಮ, ಕಾವಳಕಟ್ಟೆ ಅಂಚೆ, ಬಂಟ್ವಾಳ ತಾಲ್ಲೂಕು ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ: 22-12-2007 ಮತ್ತು ದಿ: 27-12-2007 ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಎ ಪ್ರಕಾರ ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ತನ್ನ ಅರ್ಜಿಯಲ್ಲಿ ಕೋರಿರುತ್ತಾರೆ.

ಅರ್ಜಿದಾರರು ಸಲ್ಲಿಸಿದ ಅರ್ಜಿಯ ಬಗ್ಗೆ ಸಹಾಯಕ ಅಭಿಯೋಗ ನಿರ್ದೇಶಕರು, ಮಂಗಳೂರು ಇವರಿಗೆ ಈ ಪ್ರಾಧಿಕಾರದಿಂದ ದಿ: 24-12-2007 ರಂದು ಮಧ್ಯಂತರ ಬಿಡುಗಡೆ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಪತ್ರ ಬರೆಯಲಾಗಿದೆ ಹಾಗೂ ವಾಹನದ ಪ್ರಸ್ತುತ ಮೌಲ್ಯವನ್ನು ನಿರ್ಧರಿಸುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ.ಜಿಲ್ಲೆ, ಮಂಗಳೂರು ಇವರಿಗೆ ಈ ಪ್ರಾಧಿಕಾರದಿಂದ ದಿ: 27-12-2007 ರಂದು ಪತ್ರ ಬರೆಯಲಾಗಿದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ: ಕೆಎ-19-ಬಿ-7081 ರ ಮಧ್ಯಂತರ ಬಿಡುಗಡೆಗೆ ಸಲ್ಲಿಸಿದ ಅರ್ಜಿಯ ಬಗ್ಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಕೈಗೊಂಡು ಮೋಟಾರು ವಾಹನ ನಿರೀಕ್ಷಕರು, ಸಾರಿಗೆ ಇಲಾಖೆ, ಮಂಗಳೂರು ಇವರು ದಿ:12-2-08 ರಂದು ನೀಡಿದ ದೃಢೀಕರಣ ಪತ್ರದಲ್ಲಿ ವಾಹನದ ಈಗಿನ ಪ್ರಸ್ತುತ ಮೌಲ್ಯ ರೂ.45,000/-ಕ್ಕೆ ಅನುಗುಣವಾಗಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಬ್ಯಾಂಕ್ ಭದ್ರತೆಯನ್ನು ಒದಗಿಸಿದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಆಟೋರಿಕ್ಷಾವನ್ನು ಈ ಪ್ರಾಧಿಕಾರದ ಆದೇಶ ಸಂಖ್ಯೆ: ಇ.ಐ.ಬಿ/ ಡಿಟಿಸಿಆರ್/91/2007-08 ದಿ:20-2-2008 ರ ಆದೇಶದಲ್ಲಿ ಇತರ ಷರತ್ತುಗಳಿಗೆ ಅನುಗುಣವಾಗಿ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ.

ಅರ್ಜಿದಾರರು ಸದರಿ ಆದೇಶದ ಅನುಸಾರ ಈ ಪ್ರಾಧಿಕಾರಕ್ಕೆ ವಾಹನದ ಮೌಲ್ಯಕ್ಕೆ ಸಮಾನವಾದ ಮೊತ್ತ ರೂ.45,000/-ಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ಸಿಂಡಿಕೇಟ್ ಬ್ಯಾಂಕ್, ಕಾವಳಪಡೂರು, ವಗ್ಗ ಶಾಖೆ ಇಲ್ಲಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ ಹಾಗೂ ಪ್ರಾಧಿಕಾರದ ಮುಂದೆ ಷರತ್ತುಗಳ ಪಾಲನೆ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವನ್ನು ಅರ್ಜಿದಾರರ ಮಧ್ಯಂತರ ಸುಪರ್ಧಿಗೆ ದಿ:4-3-08 ರಂತೆ ಬಿಡುಗಡೆಗೊಳಿಸಲಾಗಿರುತ್ತದೆ.

ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತನಿಖಾ ವರದಿ ಸಂ:ಸಿಆರ್‌ಎಂ/26/ 2007-08 ದಿ: 27-6-2008 ರ ವರದಿ ಮತ್ತು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ:ಬಿಎನ್‌ಟಿ/ಸಿಆರ್‌ಎಂ/14/2007-08 ದಿ:20-6-08ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳಿಂದ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ಕಳುಹಿಸಲಾಗಿದ್ದು, ಇವರ ವರದಿ ಸಂಖ್ಯೆ: ಇ-319-20 ದಿ:6-11-2007 ರ ವರದಿಯಲ್ಲಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.30 ಇರುವುದಾಗಿ ದೃಢೀಕರಣ ಪತ್ರ ನೀಡಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ಉಪ ಅಧೀಕ್ಷಕರು ಹಾಗೂ ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಸ್‌ಡಿಕೆ/91/ಡಿಟಿಸಿಆರ್/2007-08 ದಿ:20-1-2009 ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಸಾರಾಯಿಯನ್ನು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ಸಮಕ್ಷಮ ನಾಶಪಡಿಸಲು ಆದೇಶಿಸಲಾಗಿದೆ.

ವಾಹನದ ಮಾಲೀಕರಾದ ಉಮೇಶ್ ಮೂಲ್ಯ ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ಈ ಪ್ರಾಧಿಕಾರದ ಆದೇಶ ಸಮ ಸಂಖ್ಯೆ ದಿ:17-7-2008 ರಂದು ನೋಂದಣಿ ಅಂಚೆ ಮೂಲಕ

ನೀಡಲಾಗಿದ್ದು, ಸದರಿ ನೋಟೀಸನ್ನು ಅರ್ಜಿದಾರರು ದಿ:25-7-2008 ರಂದು ಸ್ವೀಕರಿಸಿ, ಅವರು ತನ್ನ ವಕೀಲರ ಮುಖಾಂತರ ಕಾರಣ ಕೇಳಿ ನೋಟೀಸಿಗೆ ದಿ:29-7-2008 ರಂದು ಉತ್ತರವನ್ನು ಸಲ್ಲಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ:26-9-2007 ರಂದು ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಬಿ-7081 ರಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಷನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀಮತಿ.ಶೋಭಾ, ಅಬಕಾರಿ ಉಪ ನಿರೀಕ್ಷಕರು (ನಂ.2), ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:10-12-2008 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ಕಳೆದ ಎರಡು ವರ್ಷಗಳಿಂದ ಬಂಟ್ವಾಳ ಜಾರಿ ಮತ್ತು ತನಿಖೆ ವಿಭಾಗದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ: 26-9-07 ರಂದು ಬಂಟ್ವಾಳದಿಂದ ಬೆಳ್ತಂಗಡಿಗೆ ಹೋಗುವ ಮುಖ್ಯ ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿರುವಾಗ, ಮಣಿನಾಲ್ಕೂರು ಕಡೆಯಿಂದ ಬೆಳ್ತಂಗಡಿ ಕಡೆಗೆ ಬರುತ್ತಿದ್ದ ಬಜಾಜ್ ಆಟೋರಿಕ್ಷಾವನ್ನು ತಡೆದು ನಿಲ್ಲಿಸಿದಾಗ, ಅದರಲ್ಲಿ ಚಾಲಕ ಮಾತ್ರ ಇದ್ದು, ಆತನು ರಿಕ್ಷಾ ಬಿಟ್ಟು ಓಡಿ ಹೋದನು. ಸದರಿ ಆಟೋರಿಕ್ಷಾವು ಪ್ಯಾಸೆಂಜರ್ ವಾಹನವಾಗಿದ್ದು, ಅದರ ಎರಡು ಬದಿಯಲ್ಲಿ ಟರ್ಪಾಲ್ ಮುಚ್ಚಲಾಗಿದ್ದು ಅದನ್ನು ಬಿಚ್ಚಿ ನೋಡಿದಾಗ, ಅದರಲ್ಲಿ 5 ಗೋಣಿ ಚೀಲಗಳಿದ್ದು, ಪ್ರತಿಯೊಂದರಲ್ಲಿ ತಲಾ 260 ರಂತೆ ಒಟ್ಟು 1300 ಸಾರಾಯಿ ಸ್ಯಾಚೆಟ್‌ಗಳಿದ್ದವು. ಸದರಿ ಸ್ಥಳದಲ್ಲಿ ಮಹಜರನ್ನು ತಯಾರಿಸಲು ಯಾರೂ ಪಂಚರು ಸಿಗದ ಕಾರಣ ಇಲಾಖಾ ಸಿಬ್ಬಂದಿಯವರನ್ನೇ ಮುಂದಿಟ್ಟು ಮಹಜರನ್ನು ಬರೆಯಲಾಯಿತು. ಪ್ರತಿಯೊಂದು ಗೋಣಿ ಚೀಲದಿಂದ ತಲಾ 4 ರಂತೆ 5 ಬ್ಯಾಗ್‌ಗಳಿಂದ ಒಟ್ಟು 20 ಸಾರಾಯಿ ಸ್ಯಾಚೆಟ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕಿಸಿ ಬಟ್ಟೆದಾರ ಕಟ್ಟಿ ಸೀಲ್ ಮಾಡಲಾಯಿತು. ಸಾಗಾಟಕ್ಕೆ ಬಳಸಿದ ಬಜಾಜ್ ಆಟೋರಿಕ್ಷಾವನ್ನು ಪರಿಶೀಲಿಸಿದಾಗ, ಇದರ ನೋಂದಣಿ ಸಂಖ್ಯೆ: ಕೆಎ-19-ಬಿ-7081 ಆಗಿರುತ್ತದೆ. ಅದೇ ದಾರಿಯಲ್ಲಿ ಹೋಗುತ್ತಿದ್ದ ವ್ಯಕ್ತಿಯನ್ನು ವಿಚಾರಿಸಿದಾಗ, ಚಲಾಯಿಸುತ್ತಿದ್ದ ರಿಕ್ಷಾ ಚಾಲಕ ಉಮೇಶ್ ಮೂಲ್ಯ ಎಂಬುವುದು ತಿಳಿದು ಬಂತು. ಮಹಜರನ್ನು ಮಧ್ಯಾಹ್ನ 3-00 ಗಂಟೆಯಿಂದ 3-45 ಗಂಟೆಯವರೆಗೆ ಸ್ಥಳದಲ್ಲಿಯೇ ಮಹಜರು ಬರೆದು ರಿಕ್ಷಾ ಸಮೇತ ಸಾರಾಯಿಯನ್ನು ವಶಪಡಿಸಿಕೊಳ್ಳಲಾಯಿತು. ಮಹಜರನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು, ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-2 ಎಂದು, ಸಾರಿಗೆ ಅಧಿಕಾರಿಗಳು ಸಲ್ಲಿಸಿದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ನಿಶಾನೆ ಪಿ-3 ಎಂದು, ರಾಸಾಯನಿಕ ತಜ್ಞರು ಸಲ್ಲಿಸಿದ ವರದಿಯನ್ನು ನಿಶಾನೆ ಪಿ-4 ಎಂದು ಹಾಗೂ ತಾನು ದಿ:11-7-2008 ರಂದು ಸಲ್ಲಿಸಿದ ವರದಿಯನ್ನು ನಿಶಾನೆ ಪಿ-5 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-5ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತಕ್ಷೀರು ನಡೆದ ದಿನಾಂಕದಂದು ತಾನು ಐದಾರು ವಾಹನಗಳನ್ನು ಪರಿಶೀಲಿಸಿದೆನು. ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ತಾನು ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿದಾರರು ನೀಡಿರುವ ಸಾಕ್ಷಿಯು ಮಹಜರಿನಲ್ಲಿ ನಮೂದಿಸಿದ ಅಂಶಗಳಿಗೂ ಹಾಗೂ ಅವರು ನೀಡಿರುವ ಸಾಕ್ಷಿಯು ಒಂದಕ್ಕೊಂದು ಪೂರಕವಾಗಿರುತ್ತದೆ. ಈ ಸಾಕ್ಷಿದಾರರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನ ದೊರೆತ್ತಿರುವುದಿಲ್ಲ.

ಪ್ರಾ.ಸಾ: 2

ಪ್ರಾಸಿಕ್ಯೂಷನ್ ಪರ ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆಗಿದ್ದ ಶ್ರೀ.ಶಿವರಾಮ, ಅಬಕಾರಿ ರಕ್ಷಕ ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:10-12-2008 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:5-10-2007 ರಂದು 100 ಎಂ.ಎಲ್.ನ ಒಟ್ಟು 20 ಸಾರಾಯಿ ಸ್ಯಾಚೆಟ್‌ಗಳನ್ನು ರಾಸಾಯನಿಕ ತಜ್ಞರಲ್ಲಿ ಪರೀಕ್ಷೆಗೆ ತೆಗೆದುಕೊಂಡು ಹೋಗಿರುತ್ತೇನೆ ಹಾಗೂ ದಿ:6-11-2007 ರಂದು ರಾಸಾಯನಿಕ ತಜ್ಞರು ಪರಿಶೀಲಿಸಿದ ವರದಿ ಹಾಗೂ ಸ್ಯಾಂಪಲ್‌ಗಳನ್ನು ತೆಗೆದುಕೊಂಡು ಕಚೇರಿಗೆ ತಲುಪಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ,ತಾನು ಮೇಲಾಧಿಕಾರಿಗಳಿಗೆ ತೃಪ್ತಿಪಡಿಸುವ ಬಗ್ಗೆ ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರಿಗೆ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ರಕ್ಷಣಾ ಸಾಕ್ಷಿ ವಿಚಾರಣೆಯನ್ನು ಹಾಜರುಪಡಿಸಲು ಹಲವಾರು ಬಾರಿ ನೋಟೀಸನ್ನು ನೀಡಿದರೂ ಸದರಿ ನೋಟೀಸು ಸ್ವೀಕೃತವಾದ ಬಗ್ಗೆ ಸ್ವೀಕೃತಿ ರಶೀದಿ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿದ್ದು, ಈ ಬಗ್ಗೆ ಸಾಕಷ್ಟು ಕಾಲಾವಕಾಶ ನೀಡಿದರೂ ತಮ್ಮ ರಕ್ಷಣಾ ಸಾಕ್ಷಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುವುದಿಲ್ಲ.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:26–9–2007 ರಂದು ಜಪ್ತುಪಡಿಸಿಕೊಂಡಿರುವ ಆಟೋರಿಕ್ಷಾ ಸಂ:ಕೆಎ–19–ಬಿ–7081 ರಲ್ಲಿ ಅಕ್ರಮವಾಗಿ 100 ಎಂ.ಎಲ್.ನ 1300 ಸಾರಾಯಿ ಸ್ಯಾಚೇಟ್‌ಗಳನ್ನು ಅಕ್ರಮ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೆ ಈ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನೀಡಿರುವುದಿಲ್ಲ. ಅಬಕಾರಿ ಉಪ ನಿರೀಕ್ಷಕರು(ನಂ.2),ಜಾರಿ ಮತ್ತು ತನಿಖೆ, ಬಂಟ್ವಾಳ ಇವರು ದಿ:26–9–2007 ರಂದು ಅಕ್ರಮ ಸಾರಾಯಿ ಸಾಗಾಟ ಮಾಡುತ್ತಿರುವುದನ್ನು ಪತ್ತೆ ಮಾಡಿದ್ದು, ಇದು ಅಕ್ರಮ ನಕಲಿ ಸಾರಾಯಿ ಸಾಗಾಟವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಹಾಗೂ ತಕ್ಷೀರು ನಡೆದ ಸಂದರ್ಭದಲ್ಲಿ ವಾಹನ ಸಾರ್ವಜನಿಕರ ಬಾಡಿಗೆ ವಾಹನವಾಗಿದ್ದರೂ, ಅದರಲ್ಲಿ ಚಾಲಕನಲ್ಲದೆ ಬೇರೆ ಯಾವುದೇ ಪ್ರಯಾಣಿಕರು ಪ್ರಯಾಣಿಸುತ್ತಿರಲಿಲ್ಲ. ಆದುದರಿಂದ ವಾಹನ ಮಾಲೀಕನೇ ಸ್ವತ: ತನ್ನ ಆಟೋರಿಕ್ಷಾವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಆಟೋರಿಕ್ಷಾದಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಟ ಮಾಡಲು ಬಳಸಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಆಟೋರಿಕ್ಷಾ ಸಂಖ್ಯೆ: ಕೆಎ–19–ಬಿ–7081 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/91/ಡಿಟಿಸಿಆರ್/2007–08, ದಿನಾಂಕ:20ನೇ ಜೂನ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು(ನಂ.2), ಜಾರಿ ಮತ್ತು ತನಿಖೆ, ಬಂಟ್ವಾಳ ಇವರ ತಕ್ಷೀರು ಸಂ: 5/2007–08 ದಿ:26–9–2007 ರಲ್ಲಿ ಜಪ್ತುಪಡಿಸಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–ಬಿ–7081 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:20–2–2008 ಮತ್ತು ದಿ:3–3–2008 ರಂದು ವಾಹನ ಬಿಡುಗಡೆಗೊಳಿಸಿ ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಆಟೋರಿಕ್ಷಾ ಸಂಖ್ಯೆ: ಕೆಎ–19–ಬಿ–7081 ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ ಮೊತ್ತ ರೂ.45,000/– ವನ್ನು ಸರಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿ:20–06–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್

ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾಸಾ: 1 - ಅಬಕಾರಿ ಉಪ ನಿರೀಕ್ಷಕರು(ನಂ.2), ಜಾರಿ ಮತ್ತು ತನಿಖೆ, ಬಂಟ್ವಾಳ.

ಪ್ರಾಸಾ: 2 - ಶ್ರೀ.ಶಿವರಾಮ, ಅಬಕಾರಿ ರಕ್ಷಕ ಬಂಟ್ವಾಳ ವಲಯ, ಬಂಟ್ವಾಳ.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರ್ ಪ್ರತಿ

ನಿಶಾನೆ ಪಿ-1ಎ : ಮಹಜರ್‌ನಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ-2 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ-2ಎ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ-3 : ಬಿ ಆಬ್ ಸ್ಟ್ರ್ಯಾಕ್ಟ್ ವರದಿ.

ನಿಶಾನೆ ಪಿ-4 : ಕೆಮಿಕಲ್ ವರದಿ

ನಿಶಾನೆ ಪಿ-5 : ತನಿಖಾ ವರದಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್

ಪಿ.ಆರ್.624

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/413/ಡಿಟಿಸಿಆರ್/2007-08, ದಿನಾಂಕ:20ನೇ ಜೂನ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ.

ಆರೋಪಿ:

ಆರೋಪಿಗಳು ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:

ಶ್ರೀ.ವಿಲಿಯಂ ಪಿಂಟೊ, ಬಿನ್: ಸಾಲ್ವದೋರ್ ಪಿಂಟೊ, ಹುಣಸೆಕಟ್ಟೆ ಹೌಸ್, ಬೆಳ್ತಂಗಡಿ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:24-5-2008 ರಂದು ಸಾಯಂಕಾಲ ಸುಮಾರು 3-45 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಬೆಳ್ತಂಗಡಿ ತಾಲ್ಲೂಕು ಪಡಂಗಡಿ ಗ್ರಾಮದ ಬದ್ಯಾರ್‌ನ ಕರ್ನಾಟಕ ಅಡಿಟೋರಿಯಂ ಎದುರುಗಡೆ ಅಕ್ರಮ ಮದ್ಯ ಸಾಗಾಟ ಮಾಡುತ್ತಿರುವ ಬಗ್ಗೆ ದೂರವಾಣಿ ಮುಖೇನ ದೊರೆತ ಖಚಿತ ವರ್ತಮಾನದ ಮೇರೆಗೆ ಸದರಿ ಸ್ಥಳಕ್ಕೆ ದಾಳಿ ನಡೆಸಿದಾಗ, ಇಲಾಖಾ ವಾಹನ ಹಾಗೂ ಸಮವಸ್ತ್ರದಲ್ಲಿದ್ದ ಸಿಬ್ಬಂದಿಗಳನ್ನು ಕಂಡ ಆಟೋರಿಕ್ಷಾದ ಚಾಲಕ ಹಿಂಬದಿಯ ಪೊದೆಯಲ್ಲಿ ಓಡಿ ಕಣ್ಮರೆಯಾದನು. ಸಿಬ್ಬಂದಿಗಳು ಆತನನ್ನು ಹಿಡಿಯಲು ಬೆನ್ನಟ್ಟಿದರೂ ಆರೋಪಿ ತಪ್ಪಿಸಿಕೊಂಡಿರುತ್ತಾನೆ. ನಂತರ ಸದರಿ ಆಟೋರಿಕ್ಷಾವನ್ನು ಪರಿಶೀಲಿಸಲು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದೇ ಇರುವುದರಿಂದ, ಸ್ಥಳದಲ್ಲಿಯೇ ಸರ್ಚ್ ಮೆಮೊವನ್ನು ತಯಾರಿಸಿ ಸದರಿ ಆಟೋರಿಕ್ಷಾವನ್ನು ಪರಿಶೀಲಿಸಿದಾಗ, ಸದರಿ ವಾಹನದ ನೋಂದಣಿ ಸಂಖ್ಯೆ: ಕೆಎ-21-1702 ಆಗಿದ್ದು, ಅದರ ಒಳಗಡೆ 3 ರಟ್ಟಿನ ಪೆಟ್ಟಿಗೆಗಳಿದ್ದು, ಒಂದನೇ ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್.ನ 15 ಸೀಸೆಗಳಿರುವ ಹೈವೆ ನಂ.1 ವಿಸ್ಕಿ ಮತ್ತು ಎರಡನೇ ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್.ನ 48 ಸೀಸೆಗಳಲ್ಲಿ ವನ್‌ಅಪ್ ವಿಸ್ಕಿ ಮತ್ತು ಮೂರನೇ ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್.ನ 48 ವಿಂಡ್ಸರ್ ವಿಸ್ಕಿ ತುಂಬಿದ ಸೀಸೆಗಳಿರುವುದು ಪತ್ತೆಯಾದವು. 180 ಎಂ.ಎಲ್.ನ 111 ಸೀಸೆಗಳಲ್ಲಿ ಒಟ್ಟು 19-980 ಲೀಟರ್ ಮದ್ಯಗಳಿದ್ದವು. ಸದರಿ ಆಟೋರಿಕ್ಷಾವನ್ನು ಪರಿಶೀಲಿಸಲಾಗಿ, ಇದರ ಚಾಸೀಸ್ ಸಂಖ್ಯೆ ಕಾಣಿಸಿರುವುದಿಲ್ಲ ಮತ್ತು ಇಂಜೀನ್ ಸಂಖ್ಯೆ: 24-96ಬಿ80491 ಆಗಿದ್ದು, ನಂತರ ಸದರಿ ಪರಿಸರದಲ್ಲಿ ಪಂಚರ ಸಾಕ್ಷಿದಾರರನ್ನು ಹುಡುಕಲಾಗಿ, ಯಾರೂ ಪತ್ತೆಯಾಗದ ಕಾರಣ ಮದ್ಯದ ರಟ್ಟಿನ ಪೆಟ್ಟಿಗೆಯಿಂದ ರಾಸಾಯನಿಕ ಪರೀಕ್ಷೆಗಾಗಿ 9 ಸೀಸೆಗಳನ್ನು ತೆಗೆದು ಪ್ರತ್ಯೇಕಿಸಲಾಗಿ, ಅದಕ್ಕೆ ಬಟ್ಟೆದಾರ ಕಟ್ಟಿ ಅರಗು ಹಾಕಿ ಇಲಾಖಾ ಸೀಲ್‌ನಿಂದ ಮೊಹರು ಮಾಡಲಾಯಿತು. ಮಾದರಿ ಸೀಲನ್ನು ಸ್ಥಳದಲ್ಲಿಯೇ ತಯಾರಿಸಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 14, 15 ರ

ಪ್ರಕಾರ ಅಪರಾಧವಾಗಿದ್ದು, ಕಲಂ 32, 34, 38ಎ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಟಕ್ಕೆ ಬಳಸಿದ ಮದ್ಯ ಮತ್ತು ಆಟೋರಿಕ್ಷಾವನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಓಡಿ ಹೋದ ಚಾಲಕನ ವಿರುದ್ಧ ತಕ್ಷೀರು ಸಂ:8/2008-09 ದಿ: 24-05-2008 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ತನಿಖಾ ವರದಿ ಸಂಖ್ಯೆ: ಬಿಎಲ್‌ಡಿ/ಇಎಕ್ಸ್‌ಇ/ಸಿಆರ್‌ಎಂ /12/2008-09 ದಿ:25-9-2008 ರ ವರದಿಯಲ್ಲಿ ವಶಪಡಿಸಿಕೊಂಡಿರುವ ಮದ್ಯದ ಸೀಸೆಗಳಿಂದ 9 ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ದಿ:28-6-2008 ರಂದು ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ: ಇ-345-9 ದಿ:12-8-2008 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.43 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ ಆಟೋರಿಕ್ಷಾ ಸಂಖ್ಯೆ:ಕೆಎ-21-1702 ರ ಮಾಲೀಕತ್ವದ ಬಗ್ಗೆ ದಿ:26-5-2008 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ವಿಭಾಗ, ಪುತ್ತೂರು ಇವರಲ್ಲಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆಯಲು ಸಂಪರ್ಕಿಸಿ, ಅವರು ದಿ:2-6-08 ರಂದು ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಸಲ್ಲಿಸಿರುತ್ತಾರೆ. ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ಸದರಿ ವಾಹನವು ಬಜಾಜ್ ಆಟೋರಿಕ್ಷಾವಾಗಿದ್ದು, ಇದರ ನೋಂದಣಿ ಮಾಲೀಕ ಶ್ರೀ.ವಿಲಿಯಂ ಪಿಂಟೊ, ಬಿನ್: ಸಾಲ್ವದೋರ್ ಪಿಂಟೊ, ಹುಣಸೆಕಟ್ಟೆ ಹೌಸ್, ಬೆಳ್ತಂಗಡಿ ತಾಲ್ಲೂಕು ಎಂದು, ಇದರ ಚಾಸೀಸ್ ನಂ: 24ಎಫ್95ಎಲ್58724 ಮತ್ತು ಇಂಜೀನ್ ನಂ: 24ಎಂ95ಎಲ್58747 ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಆದರೆ ವಶಪಡಿಸಿಕೊಂಡಿರುವ ಆಟೋರಿಕ್ಷಾದ ಚಾಸೀಸ್ ಸಂಖ್ಯೆ ಕಾಣಸದೇ ಇದ್ದು, ಇದರ ಇಂಜೀನ್ ನಂ: 24ಎಂ96ಬಿ80491 ಆಗಿರುತ್ತದೆ. ಇದರಿಂದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ನೀಡಿರುವ ಇಂಜೀನ್ ನಂಬರಿಗೂ ಹಾಗೂ ವಶಪಡಿಸಿಕೊಂಡಿರುವ ಇಂಜೀನ್ ನಂಬರಿಗೂ ಒಂದಕ್ಕೊಂದು ತಾಳೆ ಬರುವುದಿಲ್ಲ. ಆದುದರಿಂದ ವಶಪಡಿಸಿಕೊಂಡ ಆಟೋರಿಕ್ಷಾವು ನಕಲಿ ಸಂಖ್ಯೆಯಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾನೆ ಹಾಗೂ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ತೋರಿಸಿದ ನೋಂದಣಿ ಮಾಲೀಕರಿಗೆ ವಿವರಣೆಯನ್ನು ಸಲ್ಲಿಸಲು ದಿ:15-09-2008 ರಂದು ನೋಟೀಸು ಕಳುಹಿಸಲಾಗಿದ್ದು, ಆದರೆ ಯಾವುದೇ ವ್ಯಕ್ತಿಯು ಇದುವರೆಗೂ ತಮ್ಮ ಕಚೇರಿಯಲ್ಲಿ ಸಂಪರ್ಕಿಸಿರುವುದಿಲ್ಲವೆಂದು ವಾಗೂ ಸದರಿ ವಾಹನವು ಅಕ್ರಮ ದಂಧೆಯಲ್ಲಿ ಭಾಗಿಯಾಗಿರುವುದು ಸ್ಪಷ್ಟವಾಗಿರುವುದರಿಂದ, ವಶಪಡಿಸಿಕೊಂಡ ಮದ್ಯ ವಾಗೂ ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಮತ್ತು ಆಟೋರಿಕ್ಷಾವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಆದೇಶ ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/413/ ಡಿಟಿಸಿಆರ್/ 2007-08 ದಿ:6-12-2008 ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಆಟೋರಿಕ್ಷಾವನ್ನು ಹೊರತುಪಡಿಸಿ, ಉಳಿದ 19-980 ಲೀಟರ್ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಐಎಸ್/2007 ದಿ:13-7-2007 ರಂತೆ ಮಾರಾಟ ಮಾಡಲು ನಿರ್ದೇಶಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸಲು ಆದೇಶಿಸಿರುವುದರಿಂದ, ಸದರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರನ್ವಯ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿ/73/ಸಿಆರ್‌ಎಂ/2004 ದಿ:12-9-2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ಮದ್ಯವನ್ನು ನಾಶಪಡಿಸಲಾಗಿದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರು ಸಲ್ಲಿಸಿದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಶ್ರೀ.ವಿಲಿಯಂ ಪಿಂಟೊ, ಬಿನ್: ಸಾಲ್ವದೋರ್ ಪಿಂಟೊ, ಹುಣಸೆಕಟ್ಟೆ ಹೌಸ್, ಬೆಳ್ತಂಗಡಿ ತಾಲ್ಲೂಕು ಮತ್ತು ಫೈನಾನ್ಸ್‌ರಾದ ಪ್ರವೀನ್ ಫೈನಾನ್ಸ್ ಕಾರ್ಪೊರೇಶನ್, ದರ್ಬೆ, ಪುತ್ತೂರು ಇವರುಗಳಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ದಿ:6-12-2008 ಮತ್ತು ದಿ:18-2-2009 ರಂದು ನೀಡಲಾಗಿದ್ದು, ವಾಹನ ಮಾಲೀಕರಿಗೆ ನೀಡಲಾಗಿದ್ದ ನೋಟೀಸು ಜಾರಿಯಾಗದೆ ಹಿಂದೆ ಬಂದಿರುತ್ತದೆ. ಫೈನಾನ್ಸ್ ರವರಿಗೆ ನೀಡಿದ ನೋಟೀಸು ದಿನಾಂಕ: 26-2-2009 ರಂದು ಸ್ವೀಕೃತಿಯಾದ ಬಗ್ಗೆ ಸ್ವೀಕೃತಿ ರಶೀದಿ ಬಂದಿರುತ್ತದೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ:24-5-2008 ರಂದು ಆಟೋರಿಕ್ಷಾ ಸಂಖ್ಯೆ: ಕೆಎ-21-1702 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಮಹಜರು ಸಾಕ್ಷಿಯಾದ ಶ್ರೀ.ಅಮರನಾಥ.ಎಸ್.ಎಸ್. ಭಂಡಾರಿ, ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ-2, ಮಂಗಳೂರು ಇವರು ದಿ:3-6-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:20-02-2007 ರಿಂದ ದಿ:15-10-2008 ರವರೆಗೆ ಬಂಟ್ವಾಳ ಉಪ ವಿಭಾಗದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತನ್ನ ವ್ಯಾಪ್ತಿಗೆ ಬಂಟ್ವಾಳ ಹಾಗೂ ಬೆಳ್ತಂಗಡಿ ತಾಲೂಕುಗಳ ವ್ಯಾಪ್ತಿಗಳು ಒಳಗೊಂಡಿರುತ್ತದೆ. ತನಗೆ ಸಾಯಂಕಾಲ 3-45 ಗಂಟೆ ಸಮಯಕ್ಕೆ ತನಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಬೆಳ್ತಂಗಡಿ ತಾಲ್ಲೂಕು ಪಡಂಗಡಿ ಗ್ರಾಮದ ಬದ್ಯಾರ್ ಎಂಬಲ್ಲಿಯ ಆಡಿಟೋರಿಯಂ ಎದುರುಗಡೆ ಆಟೋರಿಕ್ಷಾವೊಂದರಲ್ಲಿ ಒಬ್ಬ ವ್ಯಕ್ತಿಯು ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ವರ್ತಮಾನ ದೊರೆತ್ತಿದ್ದು, ಸದರಿ ಸಮಯಕ್ಕೆ ತಮ್ಮ ಅಬಕಾರಿ ಉಪ ನಿರೀಕ್ಷಕರು ಮತ್ತು ಸಿಬ್ಬಂದಿಯವರೊಂದಿಗೆ ಸದರಿ ಸ್ಥಳಕ್ಕೆ ಧಾವಿಸಿ ದಾಳಿ ನಡೆಸಿದಾಗ, ಆಟೋರಿಕ್ಷಾದ ಬದಿಯಲ್ಲಿ ಒಬ್ಬ ವ್ಯಕ್ತಿಯು ನಿಂತಿರುವುದನ್ನು ದೂರದಿಂದಲೇ ಕಂಡು ರಿಕ್ಷಾದ ಹತ್ತಿರ ಸಮೀಪಿಸುತ್ತಿದ್ದಾಗ, ಇಲಾಖಾ ವಾಹನ ಹಾಗೂ ಸಮವಸ್ತ್ರದಲ್ಲಿ ತಮ್ಮನ್ನು ಕಂಡು ಆ ವ್ಯಕ್ತಿಯು ಓಡಿ ಹೋಗಿ ಪರಾರಿಯಾದನು. ಆತನನ್ನು ಹಿಡಿಯಲು ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ಪರಿಶೀಲಿಸುವ ಮುನ್ನ ಮಾನ್ಯ ನ್ಯಾಯಾಲಯದಿಂದ ಯಾವುದೇ ಸರ್ಚ್ ವಾರಂಟ್ ಪಡೆಯಲು ತಮಗೆ ಸಮಯಾವಕಾಶ ದೊರೆಯದ ಕಾರಣ ಸ್ಥಳದಲ್ಲಿಯೇ ಸರ್ಚ್ ಮೊಮೆವನ್ನು ತಯಾರಿಸಿ ಆಟೋರಿಕ್ಷಾವನ್ನು ಪರಿಶೀಲಿಸಿದಾಗ, ಅದರ ನೋಂದಣಿ ಸಂಖ್ಯೆ: ಕೆಎ-21-1702 ಆಗಿರುತ್ತದೆ. ರಿಕ್ಷಾದಲ್ಲಿ 3 ರಟ್ಟಿನ ಪೆಟ್ಟಿಗೆಗಳಿದ್ದು, ಅದರಲ್ಲಿ 180 ಎಂ.ಎಲ್.ನ 111 ಸೀಸೆಗಳಲ್ಲಿ ಒಟ್ಟು 19-980 ಲೀಟರ್ ಮದ್ಯವಿರುವುದು ಕಂಡು ಬಂತು. ಇದು ಅಕ್ರಮ ಮದ್ಯವಾಗಿರುವುದರಿಂದ, ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ತನ್ನ ಅಬಕಾರಿ ಉಪ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿ ಮಹಜರನ್ನು ಸ್ಥಳದಲ್ಲಿಯೇ ಬರೆದಿರುತ್ತಾರೆ. ಮಹಜರನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಪರ ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:24-5-2008 ರಂದು ಜಪ್ತುಪಡಿಸಿಕೊಂಡಿರುವ ಆಟೋರಿಕ್ಷಾ ಸಂಖ್ಯೆ: ಕೆಎ-21-1702 ರಲ್ಲಿ ಅಕ್ರಮವಾಗಿ 19-980 ಲೀಟರ್ ಮದ್ಯವನ್ನು ಅಕ್ರಮ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಅಬಕಾರಿ ಉಪ ನಿರೀಕ್ಷಕರು (ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 19-980 ಲೀಟರ್ ಮದ್ಯವನ್ನು ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ:ಕೆಎ-21-1702 ನ್ನು ವಶಪಡಿಸಿಕೊಂಡು ಸುಮಾರು ಒಂದು ವರ್ಷ ಒಂದು ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಬೆಳ್ತಂಗಡಿ ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ವಾಹನ ಮಾಲೀಕರು ಹಾಗೂ ಓಡಿ ಹೋದ ಆರೋಪಿಯು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ವಾಹನ ಮಾಲೀಕರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟೀಸು ಮತ್ತು ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಅದು ಸ್ವೀಕೃತಿಯಾಗದೆ ಹಿಂದೆ ಬಂದಿರುವ ಕಾರಣದಿಂದ ವಾಹನ ಮಾಲೀಕರೇ ಸ್ವತ: ತನ್ನ ಆಟೋರಿಕ್ಷಾದಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವು ಈಗಾಗಲೇ ಒಂದು ವರ್ಷ ಒಂದು ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಸರಕಾರದ ಆರ್ಥಿಕ ಹಿತದೃಷ್ಟಿಯಿಂದ ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಆಟೋರಿಕ್ಷಾ ಸಂಖ್ಯೆ: ಕೆಎ-21-1702ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/413/ಡಿಟಿಸಿಆರ್/2007-08, ದಿನಾಂಕ:20ನೇ ಜೂನ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ತಕ್ಷೀರು ಸಂ: 8/2008-09 ದಿ:24-5-2008 ರಲ್ಲಿ ಜಪ್ತುಪಡಿಸಿರುವ ನಕಲಿ ನೋಂದಣಿ ಸಂಖ್ಯೆಯ ಆಟೋರಿಕ್ಷಾ ಸಂಖ್ಯೆ:ಕೆಎ-21-1702 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:20-06-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಅಮರನಾಥ.ಎಸ್.ಎಸ್. ಭಂಡಾರಿ, ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ-2, ಮುಗಳೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರ್ ಪ್ರತಿ

ನಿಶಾನೆ ಪಿ-1ಎ : ಮಹಜರ್ ಸಾಕ್ಷಿದಾರರ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿಆರ್.626

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ನಡವಳಿಗಳು, ಬೆಂಗಳೂರು

ವಿಷಯ: ಶ್ರೀ ಭಾಸ್ಕರ್ ಡಬ್ಲ್ಯೂ. ಪಾಟೀಲ್ ಸಾಧನ ಸಲಕರಣೆಗಳ ತಂತ್ರಜ್ಞ ಇವರ ಅನಧಿಕೃತ ಗೈರುಹಾಜರಿ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ: 1) ಜಿಲ್ಲಾ ಶಸ್ತ್ರಚಿಕಿತ್ಸಕರು ಜಿಲ್ಲಾ ಆಸ್ಪತ್ರೆ ಕೋಲಾರ ಇವರ ದೋಷಾರೋಪಣಾ ಪಟ್ಟಿ ನಂ. ಎಸ್.ಎನ್.ಆರ್. ಸಿಬ್ಬಂದಿ (1):91:97–98, ದಿನಾಂಕ:17.02.2007.

2) ವಿಚಾರಣಾಧಿಕಾರಿಗಳ ನೇಮಕಾತಿ ಆದೇಶ ಸಂಖ್ಯೆ: ಎಸ್.ಎನ್.ಆರ್. ಸಿಬ್ಬಂದಿ (1):91:05–06, ದಿನಾಂಕ:30.04.2008.

3) ವಿಚಾರಣಾ ವರದಿ ಸಂಖ್ಯೆ: ಎಸ್ಎನ್ಆರ್.ಸಿಬ್ಬಂದಿ(1): 91:05–06, ದಿನಾಂಕ:02.06.2008.

4) ವಿಚಾರಣಾ ವರದಿ ನೌಕರರಿಗೆ ಜಾರಿ ಮಾಡಿರುವ ಪತ್ರ ಸಂಖ್ಯೆ: ಎಸ್ಎನ್ಆರ್.ಸಿಬ್ಬಂದಿ (1): 91:07–08, ದಿನಾಂಕ:17.10.2008.

5) ಕೋಲಾರ ಧ್ವನಿ ದಿನ ಪತ್ರಿಕೆ ಪ್ರಕಟಣೆ ದಿನಾಂಕ:19.11.2008 ಹಾಗೂ ಈ ಮುಂಜಾನೆ ದಿನ ಪತ್ರಿಕೆ ಪ್ರಕಟಣೆ ದಿನಾಂಕ:20.11.2008.

6) ಜಿಲ್ಲಾ ಶಸ್ತ್ರಚಿಕಿತ್ಸಕರು ಜಿಲ್ಲಾ ಆಸ್ಪತ್ರೆ ಕೋಲಾರ ಇವರ ಪತ್ರ ಸಂಖ್ಯೆ: ಎಸ್ಎನ್ಆರ್.ಸಿಬ್ಬಂದಿ (1): 91:97–98, ದಿನಾಂಕ:29.04.2009.

ಪ್ರಸ್ತಾವನೆ:

ಶ್ರೀ ಭಾಸ್ಕರ್ ಡಬ್ಲ್ಯೂ. ಪಾಟೀಲ್, ಸಾಧನ ಸಲಕರಣೆಗಳ ತಂತ್ರಜ್ಞ ಇವರು ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ ಕೋಲಾರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ:21.06.2005 ರಿಂದ 20.08.2005ರ ವರೆಗೆ 61 ದಿನಗಳ ಪರಿವರ್ತಿಶ ರಜೆಯನ್ನು ವೈದ್ಯಕೀಯ ಆಧಾರದ ಮೇಲೆ ಮಂಜೂರಾತಿ ಕೋರಿದ್ದು ಕಾರ್ಯಭಾರ ವಹಿಸಿರುವುದಿಲ್ಲ. ನಂತರ ಇವರಿಗೆ ಕರ್ತವ್ಯಕ್ಕೆ ಹಾಜರಾಗಲು ಮರುಕರೆ ನೋಟೀಸ್ ಕಳುಹಿಸಿದ್ದರೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಇವರ ಅನಧಿಕೃತ ಗೈರು ಹಾಜರಿ ಬಗ್ಗೆ ಮೇಲೆ ಓದಲಾದ (1)ರಲ್ಲಿ ದೋಷಾರೋಪಣಾ ಪಟ್ಟಿ ಜಾರಿಗೊಳಿಸಿದ್ದು ನೌಕರರು ಅಹವಾಲು ಸಲ್ಲಿಸಿರುವುದಿಲ್ಲ. ಆದುದರಿಂದ ಪ್ರಕರಣದ ಸತ್ಯಾಸತ್ಯತೆ ಕಂಡುಕೊಳ್ಳಲು ಮೇಲೆ ಓದಲಾದ (2)ರ ಮೇರೆಗೆ ವಿಚಾರಣೆ ನಡೆಸಿ ಆರೋಪ ಸಾಭೀತಾಗಿದೆಯೆಂದು ಮೇಲೆ ಓದಲಾದ (3)ರಲ್ಲಿ ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ಮೇಲೆ ಓದಲಾದ (4)ರಲ್ಲಿ ನೌಕರರಿಗೆ ವಿಚಾರಣಾ ವರದಿ ಜಾರಿಗೊಳಿಸಿದ್ದು ಪತ್ರ ವಾಪಸ್ಸು ಬಂದಿರುತ್ತದೆ. ಮೇಲೆ ಓದಲಾದ (5)ರಲ್ಲಿ ಎರಡು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದ್ದರೂ ನೌಕರರು ಅಹವಾಲು ಸಲ್ಲಿಸಿರುವುದಿಲ್ಲ. ಹಾಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆದುದರಿಂದ ಇವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಜಿಲ್ಲಾ ಶಸ್ತ್ರಚಿಕಿತ್ಸಕರು ಮೇಲೆ ಓದಲಾದ (6) ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ್ದು ನೌಕರರಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕರ್ತವ್ಯಕ್ಕೆ ಹಾಜರಾಗದೆ ಅಹವಾಲು ಸಲ್ಲಿಸಲು ವಿಫಲರಾಗಿರುತ್ತಾರೆ. ಸದರಿಯವರು ತಮಗೆ ನೀಡಿದ್ದ ನೈಸರ್ಗಿಕ ನ್ಯಾಯ ಪಡೆದುಕೊಳ್ಳಲು ವಿಫಲರಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ: ಡಿಪಿಎನ್ (2): ಸಿಆರ್.8:2006–07, ಬೆಂಗಳೂರು, ದಿನಾಂಕ:13ನೇ ಜೂಲೈ, 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ: ಉಷಾ ವಾಸುನಕರ, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಆದ ನಾನು ಶ್ರೀ ಭಾಸ್ಕರ್ ಡಬ್ಲ್ಯೂ. ಪಾಟೀಲ, ಸಾಧನ ಸಲಕರಣೆಗಳ ತಂತ್ರಜ್ಞ, ಶ್ರೀ ನರಸಿಂಹರಾಜ, ಜಿಲ್ಲಾ ಆಸ್ಪತ್ರೆ, ಕೋಲಾರ ಇವರ ಅನಧಿಕೃತ ಗೈರುಹಾಜರಿಗೆ ದಂಡನೆಯಾಗಿ ಸದರಿ ನಿಯಮ 8(vii) ರ ಪ್ರಕಾರ ಸರ್ಕಾರಿ ಸೇವೆಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವಜಾಗೊಳಿಸಿ ಆದೇಶಿಸಿರುತ್ತೇನೆ.

ಡಾ: ಉಷಾ ವಾಸುನಕರ್

ಪಿ.ಆರ್.661

ನಿರ್ದೇಶಕರು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು

ನೋಂದಣಿ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಉತ್ತರ), ಯಶವಂತಪುರ, ಬೆಂಗಳೂರು–22, ಇವರ ಕಛೇರಿ ನಡಾವಳಿ

ಉಪಸ್ಥಿತರು: ಶ್ರೀ ರುದ್ರಾ ನಾಯಕ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ತೆರಿಗೆ ಪ್ರಾಧಿಕಾರಿ ಮತ್ತು ನೋಂದಣಿ ಪ್ರಾಧಿಕಾರಿ, ಬೆಂಗಳೂರು (ಉತ್ತರ).

ವಿಷಯ: ವಾಹನ ಸಂಖ್ಯೆ: ಕೆಎ–02—8868 (Maxi Cab) ವಾಹನಕ್ಕೆ ತೆರಿಗೆ ವಿನಾಯಿತಿ ನೀಡಿ ನೋಂದಣಿ ರದ್ದುಗೊಳಿಸುವ ಬಗ್ಗೆ.

ಉಲ್ಲೇಖ: 1) ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ರವರ ಪತ್ರ ದಿನಾಂಕ:10.01.2006.

2) ಈ ಕಛೇರಿಯ ನೋಟೀಸ್ ದಿನಾಂಕ:19.01.2006.

3) ಮೇಲ್ಮನವಿ ಸಂಖ್ಯೆ: ತೆರಿಗೆ 70/05–06

4) ಈ ಕಛೇರಿಯ ಹಿಂಬರಹ ದಿನಾಂಕ:06.11.2006.

5) ಮೇಲ್ಮನವಿ ಸಂಖ್ಯೆ: ತೆರಿಗೆ 13/ತೆರಿಗೆ/ 2006–07.

6) ಈ ಕಛೇರಿಯ ತಿಳುವಳಿಕೆ ಪತ್ರ ಸಂಖ್ಯೆ: ಪ್ರಾಸಾಅ/ಬೆಂ(ಉ)/ಸಿ–4/08–09, ದಿನಾಂಕ:22.12.2008.

7) ಮೋ.ವಾನಿ ವರದಿ ದಿನಾಂಕ:11.05.2009.

8) ಆರಕ್ಷಕ ಉಪ ನಿರೀಕ್ಷಕರು, ಮಾಗಡಿ ಪೊಲೀಸ್ ಠಾಣೆ ಇವರ ಪತ್ರ ಸಂಖ್ಯೆ: ಇ3ಪಿಎಸ್/ ಎಂಆರ್‌ಆರ್/ 175/2009, ದಿನಾಂಕ:30.04.2009.

9) ಈ ಕಛೇರಿಯ ಪತ್ರ ಸಂಖ್ಯೆ:ಪ್ರಾಸಾಅ/ಬೆಂ(ಉ)/ಸಾರಿಗೆ/ಕೆಎ–02–8868/2009–10, ದಿನಾಂಕ:2.6.2009.

10) ವಾಹನ ಮಾಲೀಕರ ಮನವಿ ದಿನಾಂಕ:22.06.2009.

ಸ್ತಾವನೆ:

ವಾಹನ ಸಂಖ್ಯೆ: ಕೆಎ–02—8868 (Maxi Cab)ರ ಮಾಲೀಕರು ಶ್ರೀ ಎಸ್.ಕೆ. ಗೋಪಿನಾಥ್ ಬಿನ್ ಎಸ್. ಷ್ಣರಾಜು, ನಂ.3, 15ನೇ ಕ್ರಾಸ್, 1ನೇ ಮೈನ್, ಬಿ.ಕೆ. ನಗರ, ಯಶವಂತಪುರ, ಬೆಂಗಳೂರು–22 ರಾಗಿದ್ದು, ಸದರಿ ವಾಹನಕ್ಕೆ ನಾಂಕ:30.06.2004 ರವರೆಗೆ ತೆರಿಗೆ ಪಾವತಿಸಿದ್ದು, ಉಲ್ಲೇಖಿತ (1)ರ ಇನ್ಸೂರೆನ್ಸ್ ಕಂಪನಿ ಅವರ ಪತ್ರದಲ್ಲಿ ಈ ವಾಹನ ಟ್ಟು ಹೋಗಿರುವುದರಿಂದ ಒಟ್ಟು ನಷ್ಟ ಎಂದು ಪರಿಗಣಿಸಿರುವುದಾಗಿ ತಿಳಿಸಿದ ಹಿನ್ನೆಲೆಯಲ್ಲಿ ಉಲ್ಲೇಖ (2)ರ ೋಟೀಸ್‌ನಲ್ಲಿ ವಾಹನ ಮಾಲೀಕರಿಗೆ ದಿನಾಂಕ:01.07.2004 ರಿಂದ ಬಾಕಿ ಇರುವ ತೆರಿಗೆ ಪಾವತಿಸಿ ವಾಹನದ ಎಲ್ಲಾ ಾಖಲಾತಿಗಳನ್ನು ನೋಂದಣಿ ರದ್ದುಗೊಳಿಸುವ ಬಗ್ಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು.

ಈ ಬಗ್ಗೆ ವಾಹನ ಮಾಲೀಕರು ಉಪ ಸಾರಿಗೆ ಆಯುಕ್ತರು, ಬೆಂಗಳೂರು ವಿಭಾಗ, ರವರಲ್ಲಿ ಅಪೀಲು ಸಂಖ್ಯೆ:)/20(6 ಅನ್ನು ಸಲ್ಲಿಸಲಾಗಿ ಸದರಿಯವರು ತಮ್ಮ ಆದೇಶ ದಿನಾಂಕ:06.04.2006ರಲ್ಲಿ ಆದೇಶ ನೀಡಿ ವಾಹನ ಮಾಲೀಕರು ಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಎಲ್ಲವೂ ಸತ್ಯವಾಗಿದ್ದು, ವಾಹನವು ಸಂಪೂರ್ಣ ಸುಟ್ಟುಹೋಗಿದ್ದು ಇದರ ುಪಯೋಗ ಸಾಧ್ಯವಿಲ್ಲದ ಕಾರಣ ಇದರ ನೋಂದಣಿ ರದ್ದುಪಡಿಸುವಂತೆ ಕೋರಿರುವ ಹಿನ್ನೆಲೆಯಲ್ಲಿ ನೋಂದಣಿ ಾಧಿಕಾರವು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿ ಸದರಿ ಮನವಿ ಹಾಗೂ ನೋಟೀಸ್ ಅನ್ನು ರಿಮೇಂಡ್ ಮಾಡಿರುತ್ತಾರೆ. ಪೀಲ್‌ನೊಂದಿಗೆ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಲಾಗಿ ವಾಹನವು ದಿನಾಂಕ:20.04.2004ರಲ್ಲಿ ಮಾಗಡಿ ವಿಧಾನ ಭಾ ಕ್ಷೇತ್ರದ ಚುನಾವಣಾ ಸಮಯದಲ್ಲಿ ನಡೆದ ಗಲಭೆಯಲ್ಲಿ ಸುಟ್ಟು ಹೋಗಿರುವುದಾಗಿ ಈ ಬಗ್ಗೆ ಮಾಗಡಿ ಪೋಲಿಸ್ ಾಣೆಯಲ್ಲಿ ದೂರು ದಾಖಲಾಗಿದ್ದು, ಎಫ್.ಆರ್.ಐ. ನಂ.33/2004 ದಿನಾಂಕ:22.04.2004ರ ಪ್ರತಿಯನ್ನು ಸಲ್ಲಿಸಿರುತ್ತಾರೆ. ಾಗೂ ಈ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾದ ಪ್ರತಿ ಹಾಗೂ ಅಂದು ತೆಗೆಯಲಾದ ಫೋಟೋಗಳ ಪ್ರತಿಗಳನ್ನು ಸಹ ಲ್ಲಿಸಿರುತ್ತಾರೆ.

ಇವುಗಳನ್ನು ಪರಿಶೀಲಿಸಿ ದಿನಾಂಕ:06.11.2006ರಲ್ಲಿ ವಾಹನ ಮಾಲೀಕರು ಕರ್ನಾಟಕ ಸರ್ಕಾರದ ಅಧಿಸೂಚನೆ ಂಖ್ಯೆ: ಒಸಾಇ/170/ಟಿಎಂಎ/2003 ದಿನಾಂಕ:06.08.2003ರಂತೆ ಮೋಟಾರು ವಾಹನ ತೆರಿಗೆ ಕಾಯ್ದೆ 1987ರ ನಿಯಮ ಎ ೭ ಅನ್ವಯ ನಿಗದಿಪಡಿಸಿದ ಶುಲ್ಕದೊಂದಿಗೆ ನಮೂನೆ 30ರಲ್ಲಿ ವಾಹನದ ಅನುಪಯೋಗದ ಬಗ್ಗೆ ಮಾಹಿತಿಯನ್ನು ಈ ಛೇರಿಗೆ ಸಲ್ಲಿಸದೆ ಇರುವುದರಿಂದ ದಿನಾಂಕ:01.07.2004 ರಿಂದ ಸರ್ಕಾರಕ್ಕೆ ಬರಬೇಕಾದ ತೆರಿಗೆಯನ್ನು ಪಾವತಿಸುವಂತೆ ಂಬರಹ ನೀಡಲಾಗಿತ್ತು. ಈ ಬಗ್ಗೆ ವಾಹನ ಮಾಲೀಕರು ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ ಮತ್ತು ಗ್ರಾಮಾಂತರ) ಇವರಲ್ಲಿ ಅಪೀಲು ಸಂಖ್ಯೆ:13/ತೆರಿಗೆ 2006–07 ಸಲ್ಲಿಸಲಾಗಿದ್ದು, ಸದರಿಯವರ ಆದೇಶ ನಾಂಕ21.02.2007ರಲ್ಲಿ ಈ ರೀತಿ "The appeal is allowed and the impugned order of the Respondent ated 06.11.2006 is set aside" ಆದೇಶ ನೀಡಿರುತ್ತಾರೆ.

ಈ ಕಛೇರಿಯ ದಿನಾಂಕ:11.03.2009ರ ಪತ್ರಕ್ಕೆ ಮಾಗಡಿ ಪೋಲೀಸ್ ಠಾಣೆಯವರು ಉಲ್ಲೇಖಿತ (8)ರ ಪತ್ರದಲ್ಲಿ ಸರಿ ವಾಹನ ಸುಟ್ಟುಹೋಗಿರುವ ಬಗ್ಗೆ ಸಾಕ್ಷಿಗಾಗಿ ವಾಹನದ ಕೆಲವು ಭಾಗಗಳನ್ನು ನ್ಯಾಯಾಲಯದ ಮುಂದೆ ಾಜರುಪಡಿಸಲು ವಶಪಡಿಸಿಕೊಂಡಿರುವುದಾಗಿ ಹಾಗೂ ಈ ಪ್ರಕರಣದಲ್ಲಿ ಆರೋಪಿಗಳು ಪತ್ತೆಯಾಗದ ಕಾರಣ ್ಯಾಯಾಲಯಕ್ಕೆ "ಸಿ" ಅಂತಿಮ ವರದಿ ಸಲ್ಲಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

ಇದರಿಂದಾಗಿ ವಾಹನ ಮಾಲೀಕರಿಗೆ ವಾಹನದ ನೋಂದಣಿ ರದ್ದುಗೊಳಿಸುವ ಕುರಿತು ವಾಹನದ ಎಲ್ಲಾ ಖಲಾತಿಗಳನ್ನು ಈ ಕಛೇರಿಗೆ ಹಾಜರುಪಡಿಸಲು ದಿನಾಂಕ:02.06.2009ರ ಹಿಂಬರಹದಲ್ಲಿ ಸೂಚಿಸಲಾಗಿತ್ತು. ವಾಹನ ಾಲೀಕರು ದಿನಾಂಕ:22.06.2009ರಲ್ಲಿ ಈ ಕಛೇರಿಗೆ ಮನವಿ ಸಲ್ಲಿಸಿ ವಾಹನದ ಎಲ್ಲಾ ದಾಖಲಾತಿಗಳು ಮೇಲ್ಕಂಡ

ಘಟನೆಯಲ್ಲಿ ಕಳೆದು ಹೋಗಿರುವುದರಿಂದ ನಕಲು ನೋಂದಣಿ ಶುಲ್ಕ ಪಾವತಿಸಿ ನಕಲು ನೋಂದಣಿ ಕೋರಿ ಅರ್ಜಿ ಸಲ್ಲಿಸಿ ವಾಹನ ನೋಂದಣಿ ರದ್ದುಗೊಳಿಸುವಂತೆ ಕೋರಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ದಿನಾಂಕ:01.07.2004 ರಿಂದ 30.06.2009 ರವರೆಗೆ ತೆರಿಗೆ ವಿನಾಯಿತಿ ನೀಡಿ ವಾಹನದ ನೋಂದಣಿ ರದ್ದುಗೊಳಿಸುವ ಬಗ್ಗೆ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಪ್ರಾ.ಸಾ.ಅ./ಬೆಂ(ಉ)/ಕೆಎ-02-8868/09-10, ದಿನಾಂಕ:29ನೇ ಜೂನ್, 2009

ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ವಿಧಿ 16 ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ 1988ರ ವಿಧಿ 55(2)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರುದ್ರಾನಾಯಕ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ತೆರಿಗೆ ಪ್ರಾಧಿಕಾರಿ ಮತ್ತು ನೋಂದಣಿ ಪ್ರಾಧಿಕಾರಿ ಆದ ನಾನು, ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ, ಕ್ರಮವಾಗಿ ವಾಹನವು ದಹನವಾದ ದಿನದಿಂದ ಇದು ರಸ್ತೆಯ ಮೇಲೆ ಉಪಯೋಗಿಸಲು ಸಾಧ್ಯವಿಲ್ಲವೆಂದು ಪರಿಗಣಿಸಿ ಉಪ ಸಾರಿಗೆ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ ಮತ್ತು ಗ್ರಾಮಾಂತರ) ಇವರ ಆದೇಶವನ್ನು ಸಹ ಪರಿಗಣಿಸಿ ಮೋಟಾರು ವಾಹನ ಸಂಖ್ಯೆ: ಕೆಎ-02-8868 (Maxi Cab)ರ ವಾಹನಕ್ಕೆ ದಿನಾಂಕ:01.07.2004 ರಿಂದ 30.06.2009 ರವರೆಗೆ ಬಾಕಿ ಇರುವ ತೆರಿಗೆಯನ್ನು ಮನ್ನಾ ಮಾಡಿ, ಈ ವಾಹನದ ಮೇಲೆ ಇನ್ನೂ ಮುಂದೆ ಏನಾದರೂ ತೆರಿಗೆ, ಆಡಿಟ್, ಇಲಾಖಾ ಪ್ರಕರಣಗಳು ಬಾಕಿ ಇರುವುದು ಕಂಡು ಬಂದ್ದಲ್ಲಿ ವಾಹನದ ಮಾಲೀಕರೇ ಪಾವತಿಸಬೇಕೆಂಬ ನಿಬಂಧನೆಯೊಂದಿಗೆ ಸದರಿ ವಾಹನದ ನೋಂದಣಿಯನ್ನು ರದ್ದುಪಡಿಸಿರುತ್ತೇನೆ.

ವಾಹನದ ವಿವರಗಳು

1.	ಮೋಟಾರು ವಾಹನ ಸಂಖ್ಯೆ	KA-02-8868 (Maxi Cab)
2.	ವಾಹನದ ತಯಾರಕನ ಹೆಸರು	Bajaj Tempo Ltd.,
3.	ವಾಹನದ ಮಾದರಿ	Saloon
4.	ವಾಹನ ತಯಾರಿಕೆ ವರ್ಷ	1995
5.	ಚಾಸೀಸ್ ಸಂಖ್ಯೆ	TF 804649 M 94
6.	ಇಂಜಿನ್ ಸಂಖ್ಯೆ	616 969 113543
7.	ಅಶ್ವಶಕ್ತಿ	72 HP
8.	ಆಸನ ಸಾಮರ್ಥ್ಯ	12+1
9.	ಮಾಲೀಕರ ಹೆಸರು ಮತ್ತು ವಿಳಾಸ	ಶ್ರೀ ಎಸ್.ಕೆ. ಗೋಪಿನಾಥ್ ಬಿನ್ ಎಸ್. ಕೃಷ್ಣರಾಜು, ನಂ.3, 15ನೇ ಕ್ರಾಸ್, 1ನೇ ಮೈನ್, ಬಿ.ಕೆ.ನಗರ, ಯಶವಂತಪುರ, ಬೆಂಗಳೂರು-22.

ರುದ್ರಾ ನಾಯಕ್
ಪ್ರಾದೇಶಿಕ ಸಾರಿಗೆ ಅಧಿಕಾರಿ,
ಬೆಂಗಳೂರು (ಉತ್ತರ).

ಪಿ.ಆರ್.646

ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52

ಯುಬಿಸಿ-3/63/ಸಮಾಪನೆ/2009-10, ದಿನಾಂಕ:10ನೇ ಜುಲೈ, 2009

ವಿಷಯ: ದಿ. ಕಟಕೋಳ ಕೋ-ಆಪರೇಟಿವ್ ಬ್ಯಾಂಕ್ ಲಿ., ಕಟಕೋಳ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಕಾರ್ಯನಿರ್ವಾಹಕ ನಿರ್ದೇಶಕರು, ಭಾರತೀಯ ರಿಸರ್ವ್ ಬ್ಯಾಂಕ್, ಮುಂಬಯಿ ಇವರ ಆದೇಶ ಸಂಖ್ಯೆ: ಯುಬಿಡಿ, ನಂ.ಸಿಒ. ಬಿಎಸ್‌ಡಿ. ಎನ್‌ಎಸ್‌ಬಿ1. ಎಲ್‌ಸಿ/29/12.23..058/2008-09, ದಿನಾಂಕ:24.06.2009.

2) ಕಾರ್ಯನಿರ್ವಾಹಕ ನಿರ್ದೇಶಕರು, ಭಾರತೀಯ ರಿಸರ್ವ್ ಬ್ಯಾಂಕ್, ಮುಂಬಯಿ ಇವರ ಆದೇಶ ಸಂಖ್ಯೆ: ಯುಬಿಡಿ.ಸಿಒ.ಬಿಎಸ್‌ಡಿ. ಎನ್‌ಎಸ್‌ಬಿ 1.ಆರ್‌ಎಲ್‌ಸಿ/29/12.23..058/2008-09, ದಿನಾಂಕ:24.06.2009.

ಪ್ರಸ್ತಾವನೆ:

ದಿ. ಕಟಕೋಳ ಕೋ-ಆಪರೇಟಿವ್ ಬ್ಯಾಂಕ್ ಲಿ. ಕಟಕೋಳ, ರಾಮದುರ್ಗ ತಾಲ್ಲೂಕು ಬೆಳಗಾವಿ ಜಿಲ್ಲೆ ಇದು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಎಎಸಿಎಸ್)ರ ಕಲಂ 11(1), 22(3)(ಎ) ಮತ್ತು 22(3)(ಬಿ)ಗಳನ್ನು ಪಾಲಿಸಲು ಮತ್ತು ಠೇವಣಿದಾರರ ಠೇವಣಿಯನ್ನು ಹಿಂತಿರುಗಿಸಲು ವಿಫಲವಾಗಿದ್ದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದು ಹೀಗೆ ಮುಂದುವರಿದಲ್ಲಿ ಠೇವಣಿದಾರರ ಹಿತಾಸಕ್ತಿಗೆ ಧಕ್ಕೆ ಉಂಟಾಗುವುದರಿಂದ ಉಲ್ಲೇಖ (1)ರ ಆದೇಶದಲ್ಲಿ ಬ್ಯಾಂಕಿಂಗ್ ವ್ಯವಹಾರ ನಡೆಸಲು ನೀಡಿದ್ದ ಪರವಾನಿಗೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ರದ್ದುಗೊಳಿಸಿದೆ. ಉಲ್ಲೇಖ (2)ರ ಆದೇಶದಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 72ಎ ರಡಿ ಬ್ಯಾಂಕಿನ ಸಮಾಪನೆಗೆ ಆದೇಶಿಸುವಂತೆ ತಿಳಿಸಿರುವುದರ ಮೇರೆಗೆ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರಡಿಯಲ್ಲಿ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರಿಗೆ ದತ್ತವಾದ ಅಧಿಕಾರದನ್ವಯ ದಿ ಕಟಕೋಳ ಕೋ-ಆಪರೇಟಿವ್ ಬ್ಯಾಂಕ್ ಲಿ., ಕಟಕೋಳ ಇದನ್ನು ಸಮಾಪನೆಗೊಳಿಸಿ ಕಲಂ 73(1) ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೈಲಹೊಂಗಲ ಉಪವಿಭಾಗ ಇವರನ್ನು ಸಮಾಪನಾಧಿಕಾರಿಯನ್ನಾಗಿ ಹೆಚ್ಚುವರಿ ಪ್ರಭಾರದಲ್ಲಿ ನೇಮಿಸಲಾಗಿದೆ.

ಸಮಾಪನಾಧಿಕಾರಿಯವರು ಕೂಡಲೇ ಬ್ಯಾಂಕಿನ ಪ್ರಭಾರ ವಹಿಸಿಕೊಂಡು ಈ ಕಛೇರಿಗೆ ವರದಿ ಮಾಡುವುದು ಮತ್ತು ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಈ ಕಛೇರಿಯ ನಿರ್ದೇಶನ, ಸುತ್ತೋಲೆಗಳಿಗೆ ಅನುಸಾರವಾಗಿ ಬ್ಯಾಂಕಿನ ಆಸ್ತಿ-ಜವಾಬ್ದಾರಿಗಳ ವಿಲೇವಾರಿಗೆ ಕ್ರಮ ತೆಗೆದುಕೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ದಿನಾಂಕ:10.07.2009ರಂದು ಹೊರಡಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು,

ಪಿ.ಆರ್.650 ಕರ್ನಾಟಕ ರಾಜ್ಯ, ಬೆಂಗಳೂರು.

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ,
ಭದ್ರಾವತಿ ವಿಭಾಗ, ಭದ್ರಾವತಿ

ಅಧಿಸೂಚನೆ

ಸಂಖ್ಯೆ: ಎ3-ಸಿಓಎನ್-ಸಿಆರ್-10/2009-10, ದಿನಾಂಕ:17ನೇ ಜುಲೈ, 2009

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಅಪರಾಧ ಪ್ರಕರಣ ಸಂಬಂಧ ಕೆಳಕಂಡ ವಾಹನಗಳನ್ನು ತರೀಕೆರೆ ವಲಯದ ಲಿಂಗದಹಳ್ಳಿ ಶಾಖೆಯ ವನಪಾಲಕರು ಹಾಗೂ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್-71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

ಕ್ರ ಸಂ.	ಮೊಕದ್ದಮೆ ಸಂಖ್ಯೆ	ವಾಹನಗಳ ವಿವರ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1	ತರೀಕೆರೆ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ:39/ 2009-10, ದಿನಾಂಕ:08.07.2009	ಒಂದು ಸುಜುಕಿ ಸಮುರಾಯ್ ಬೈಕ್ ಸಂಖ್ಯೆ: ಕೆಎ-14-ಹೆಚ್-546 ಹಾಗೂ ಸಾಗುವಾನಿ ಜಾತಿಯ ಸೈಜು 1=0.047 ಎಂ3	7308M405210	7308F374049

ಈ ಮೇಲ್ಕಂಡ ವಾಹನದ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾಧ್ಯತೆಗಳನ್ನು ಈ ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಈ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡಲು ಉಪಯೋಗಿಸಿದಕ್ಕಾಗಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮುಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ಈ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಎಸ್. ವೆಂಕಟೇಸನ್

ಪಿ.ಆರ್.686 ಉಪ ಅರಣ್ಯ ಸಂರಕ್ಷಣಾಧಿಕಾರಿ,

ಭದ್ರಾವತಿ ವಿಭಾಗ, ಭದ್ರಾವತಿ.

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಬಳ್ಳಾರಿ

ಪ್ರಕಟಣೆ

ಸಂಖ್ಯೆ: ಜಿಸಕಅ/ಎಸ್-6/ಕಾ.ಪ.ತ/ಸಿಆರ್-/09-10, ದಿನಾಂಕ:17ನೇ ಜುಲೈ, 2009

ವಿಷಯ: 2009-10ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸುವುದರ ಕುರಿತು.

ಉಲ್ಲೇಖ:1)ಸರ್ಕಾರದ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ.ಎಸ್-681/ಎಸ್.ಡಬ್ಲ್ಯೂ-89, ಬೆಂಗಳೂರು ದಿನಾಂಕ 02.11.1990.

2) ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ.-421/ಪಕವಿ-95, ಬೆಂಗಳೂರು, ದಿನಾಂಕ:29.07.1997.

3) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸ.ಕ.ಇ/ಸಮನ್ವಯ. ಸಿಆರ್-14/97-98, ದಿನಾಂಕ:07.08.1997 ಮತ್ತು 14.10.1997.

4) ಸರ್ಕಾರದ ಆದೇಶ ಸಂಖ್ಯೆ: ಸಕ.ಇ-535/ಸಕನಿ-2000, ಬೆಂಗಳೂರು, ದಿನಾಂಕ:28.03.2001.

5) ಸರ್ಕಾರಿ ಆದೇಶ ಸಂಖ್ಯೆ: ಸಕಇ-349/ಪಕವಿ-05, ದಿನಾಂಕ:28.01.2006.

ಬಳ್ಳಾರಿ ಜಿಲ್ಲೆಯಲ್ಲಿರುವ ಪರಿಶಿಷ್ಟ ವರ್ಗಕ್ಕೆ ಸೇರಿರುವ ಕಾನೂನು ಪದವೀಧರರಿಗೆ 2009-10ನೇ ಸಾಲಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 4 ವರ್ಷಗಳ ತರಬೇತಿಯನ್ನು ನೀಡುವ ಸಲುವಾಗಿ ಅರ್ಹ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ತರಬೇತಿಯನ್ನು ಪಡೆಯಲು ಇಚ್ಛಿಸುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

1) ಅಭ್ಯರ್ಥಿಗಳು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.

2) ಬಳ್ಳಾರಿ ಜಿಲ್ಲೆಗೆ ಮಾತ್ರ ಸಂಬಂಧಿಸಿದ ಹಾಗೂ ವಕೀಲ ವೃತ್ತಿ ನಡೆಸಲು ಅರ್ಹತೆಯುಳ್ಳ ಕಾನೂನು ಪದವೀಧರರು ಮಾತ್ರ ಈ ತರಬೇತಿಗೆ ಅರ್ಹರು.

3) ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 2 ವರ್ಷದೊಳಗೆ ಕಾನೂನು ಪದವಿಯನ್ನು ಪಡೆದಿರಬೇಕು. (ಅರ್ಜಿಯೊಂದಿಗೆ ಕಾನೂನು ಪದವಿಯ 3 ವರ್ಷದ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.

4) ಅಭ್ಯರ್ಥಿಯ ವಯಸ್ಸು, ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದಂದು 35 ವರ್ಷಗಳನ್ನು ಮೀರಿರಬಾರದು. ಈ ಕುರಿತು ಅಧಿಕೃತ ಪ್ರಮಾಣ ಪತ್ರ (ಎಸ್.ಎಸ್.ಎಲ್.ಸಿ.) ಅಂಕಪಟ್ಟಿ ಪ್ರತಿ ಲಗತ್ತಿಸಬೇಕು.

5) ಈ ತರಬೇತಿಗೆ ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಅರ್ಜಿಗಳನ್ನು ದ್ವಿಪ್ರತಿಗಳಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಮತ್ತು ಜಾತಿ ಪ್ರಮಾಣ ಪತ್ರ, ಬಾರ್ ಕೌನ್ಸಿಲ್‌ನಲ್ಲಿ ನೊಂದಣಿ ಮಾಡಿದ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳೊಂದಿಗೆ ಸಲ್ಲಿಸಬೇಕು.

6) ಈಗಾಗಲೇ ಕಾನೂನು ವಿಷಯದಲ್ಲಿ ಯಾವುದಾದರೂ ತರಬೇತಿ ಪಡೆದಿರಬಾರದು.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು

1) ಈ ತರಬೇತಿಗೆ ಪ.ವರ್ಗದ 15 ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.

2) ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ನ್ಯಾಯಾಂಗ ಆಡಳಿತ ತರಬೇತಿಯನ್ನು ಸರ್ಕಾರಿ ವಕೀಲರು ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ 20 ವರ್ಷಗಳ ಅನುಭವ ಹೊಂದಿರುವ ಹಿರಿಯ ವಕೀಲರಲ್ಲಿ ನೀಡಲಾಗುವುದು. ಈ ವಿಷಯದ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.

3) ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹೆಯಾನ ರೂ.1,000/- (ರೂ. ಒಂದು ಸಾವಿರ ಮಾತ್ರ) 4 ವರ್ಷದವರೆಗೆ ಸ್ಟೈಫಂಡ್ ನೀಡಲಾಗುವುದು.

4) ಈ ತರಬೇತಿಗೆ ಅಭ್ಯರ್ಥಿಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

5) ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟುಹೋಗಬಾರದು (ಕೇಂದ್ರ/ರಾಜ್ಯ ಸರ್ಕಾರದ ಉದ್ಯೋಗ ದೊರೆತ ಅಭ್ಯರ್ಥಿಗಳಿಗೆ ಈ ನಿಬಂಧನೆ ಅನ್ವಯಿಸುವುದಿಲ್ಲ).

6) ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಮಾಹಿತಿ ದಾಖಲೆ ಒದಗಿಸಿದ್ದಲ್ಲಿ, ಅಂತಹವರನ್ನು ಕಾನೂನಿನ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು. ಹಾಗೂ ತರಬೇತಿಯನ್ನು ಮದ್ಯದಲ್ಲಿ ಬಿಟ್ಟುಹೋದಲ್ಲಿ, ಅಂತಹವರಿಗೆ ನೀಡಿದ ಸ್ಟೈಫಂಡ್ ಹಣಕ್ಕೆ ಶೇ.10 ರಷ್ಟು ಬಡ್ಡಿ ಸೇರಿಸಿ, ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ವಸೂಲಿ ಮಾಡಲಾಗುವುದು. ಈ ಬಗ್ಗೆ ಆಯ್ಕೆಯಾದ ಅಭ್ಯರ್ಥಿಗಳು ಕರಾರು ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ ಇವರಿಗೆ ಬರೆದುಕೊಡತಕ್ಕದ್ದು.

7) ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಈ ಕಛೇರಿಯಿಂದ ತಿಳಿಸಲಾಗುವುದು. ಹಾಗೂ ತರಬೇತಿ ಪಡೆಯಲು ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆ ಪತ್ರ ತಲುಪಿದ 15 ದಿನಗಳೊಳಗಾಗಿ ತಮ್ಮ ಒಪ್ಪಿಗೆ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ ಇವರಿಗೆ ಸಲ್ಲಿಸತಕ್ಕದ್ದು.

8) ಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು (ದ್ವಿ ಪ್ರತಿಗಳಲ್ಲಿ) ಕಾರ್ಯದರ್ಶಿಗಳು, ಜಿಲ್ಲಾ ಮಟ್ಟದ ನ್ಯಾಯಾಂಗ ತರಬೇತಿ ಆಯ್ಕೆ ಸಮಿತಿ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ ಇವರಿಗೆ ದಿನಾಂಕ:30.09.2009 ರಂದು ಸಾಯಂಕಾಲ 5.30 ಗಂಟೆಯೊಳಗೆ ಸಲ್ಲಿಸತಕ್ಕದ್ದು.

9) ಅಪೂರ್ಣ ಮಾಹಿತಿ ಸಲ್ಲಿಸಿದ ಹಾಗೂ ಅನರ್ಹ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇರುತ್ತದೆ.

ಸೂಚನೆ: ಅರ್ಜಿಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಬಳ್ಳಾರಿ ಹಾಗೂ ಸಂಬಂಧಪಟ್ಟ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಪಡೆಯತಕ್ಕದ್ದು.

ಎಂ.ವಿ. ಶ್ರೀನಿವಾಸುಲು

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ,
ಕಾನೂನು ಪದವೀಧರರ ನ್ಯಾಯಾಂಗ ಆಡಳಿತ ತರಬೇತಿ ಆಯ್ಕೆ ಸಮಿತಿ, ಬಳ್ಳಾರಿ.

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಬಳ್ಳಾರಿ

ಪ್ರಕಟಣೆ

ಸಂಖ್ಯೆ: ಜಿಸಕಅ/ಎಸ್-6/ಕಾ.ಪ.ತ/ಸಿಆರ್-/09-10/504, ದಿನಾಂಕ: ಜುಲೈ, 2009

ವಿಷಯ: 2009-10ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸುವುದರ ಕುರಿತು.

ಉಲ್ಲೇಖ:1)ಸರ್ಕಾರದ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ.ಎಸ್-681/ಎಸ್.ಡಬ್ಲ್ಯೂ-89, ಬೆಂಗಳೂರು ದಿನಾಂಕ: 02.11.1990.

2) ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ.-421/ಪಕವಿ-95, ಬೆಂಗಳೂರು, ದಿನಾಂಕ:29.07.1997.

3) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸ.ಕ.ಇ/ಸಮನ್ವಯ. 6/ ಸಿಆರ್-14/97-98, ದಿನಾಂಕ:07.08.1997 ಮತ್ತು 14.10.1997.

4) ಸರ್ಕಾರದ ಆದೇಶ ಸಂಖ್ಯೆ: ಸಕ.ಇ-535/ಸಕನಿ-2000, ಬೆಂಗಳೂರು, ದಿನಾಂಕ:28.03.2001.

5) ಸರ್ಕಾರಿ ಆದೇಶ ಸಂಖ್ಯೆ: ಸಕಇ-349/ಪಕವಿ-05, ದಿನಾಂಕ:28.01.2006.

ಬಳ್ಳಾರಿ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿಗೆ ಸೇರಿರುವ ಕಾನೂನು ಪದವೀಧರರಿಗೆ 2009-10ನೇ ಸಾಲಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 4 ವರ್ಷಗಳ ತರಬೇತಿಯನ್ನು ನೀಡುವ ಸಲುವಾಗಿ ಅರ್ಹ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ತರಬೇತಿಯನ್ನು ಪಡೆಯಲು ಇಚ್ಛಿಸುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

1) ಅಭ್ಯರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.

2) ಬಳ್ಳಾರಿ ಜಿಲ್ಲೆಗೆ ಮಾತ್ರ ಸಂಬಂಧಿಸಿದ ಹಾಗೂ ವಕೀಲ ವೃತ್ತಿ ನಡೆಸಲು ಅರ್ಹತೆಯುಳ್ಳ ಕಾನೂನು ಪದವೀಧರರು ಮಾತ್ರ ಈ ತರಬೇತಿಗೆ ಅರ್ಹರು.

3) ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 2 ವರ್ಷದೊಳಗೆ ಕಾನೂನು ಪದವಿಯನ್ನು ಪಡೆದಿರಬೇಕು. (ಅರ್ಜಿಯೊಂದಿಗೆ ಕಾನೂನು ಪದವಿಯ 3 ವರ್ಷದ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.

4) ಅಭ್ಯರ್ಥಿಯ ವಯಸ್ಸು, ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದಂದು 35 ವರ್ಷಗಳನ್ನು ಮೀರಿರಬಾರದು. ಈ ಕುರಿತು ಅಧಿಕೃತ ಪ್ರಮಾಣ ಪತ್ರ (ಎಸ್.ಎಸ್.ಎಲ್.ಸಿ.) ಅಂಕಪಟ್ಟಿ ಪ್ರತಿ ಲಗತ್ತಿಸಬೇಕು.

5) ಈ ತರಬೇತಿಗೆ ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಅರ್ಜಿಗಳನ್ನು ದ್ವಿಪ್ರತಿಗಳಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಮತ್ತು ಜಾತಿ ಪ್ರಮಾಣ ಪತ್ರ, ಬಾರ್ ಕೌನ್ಸಿಲ್‌ನಲ್ಲಿ ನೊಂದಣಿ ಮಾಡಿದ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳೊಂದಿಗೆ ಸಲ್ಲಿಸಬೇಕು.

6) ಈಗಾಗಲೇ ಕಾನೂನು ವಿಷಯದಲ್ಲಿ ಯಾವುದಾದರೂ ತರಬೇತಿ ಪಡೆದಿರಬಾರದು.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು

1) ಈ ತರಬೇತಿಗೆ ಪರಿಶಿಷ್ಟ ಜಾತಿಯ 15 ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.

2) ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ನ್ಯಾಯಾಂಗ ಆಡಳಿತ ತರಬೇತಿಯನ್ನು ಸರ್ಕಾರಿ ವಕೀಲರು ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ 20 ವರ್ಷಗಳ ಅನುಭವ ಹೊಂದಿರುವ ಹಿರಿಯ ವಕೀಲರಲ್ಲಿ ನೀಡಲಾಗುವುದು.

ಈ ವಿಷಯದ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.

3) ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹೆಯಾನ ರೂ.1,000/- (ರೂ. ಒಂದು ಸಾವಿರ ಮಾತ್ರ) 4 ವರ್ಷದವರೆಗೂ ಸ್ಟೈಫಂಡ್ ನೀಡಲಾಗುವುದು.

4) ಈ ತರಬೇತಿಗೆ ಅಭ್ಯರ್ಥಿಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

5) ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟುಹೋಗಬಾರದು (ಕೇಂದ್ರ/ರಾಜ್ಯ ಸರ್ಕಾರದಲ್ಲಿ ಉದ್ಯೋಗ ದೊರೆತ ಅಭ್ಯರ್ಥಿಗಳಿಗೆ ಈ ನಿಬಂಧನೆ ಅನ್ವಯಿಸುವುದಿಲ್ಲ).

6) ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಮಾಹಿತಿ ದಾಖಲೆ ಒದಗಿಸಿದ್ದಲ್ಲಿ, ಅಂತಹವರನ್ನು ಕಾನೂನಿನ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು. ಹಾಗೂ ತರಬೇತಿಯನ್ನು ಮದ್ಯದಲ್ಲಿ ಬಿಟ್ಟುಹೋದಲ್ಲಿ, ಅಂತಹವರಿಗೆ ನೀಡಿದ ಸ್ಟೈಫಂಡ್ ಹಣವನ್ನು ಶೇ.10 ರಷ್ಟು ಬಡ್ಡಿ ಸೇರಿಸಿ, ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ವಸೂಲಿ ಮಾಡಲಾಗುವುದು. ಈ ಬಗ್ಗೆ ಆಯ್ಕೆಯಾದ ಅಭ್ಯರ್ಥಿಗಳು ಕರಾರು ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ ಇವರಿಗೆ ಬರೆದುಕೊಡತಕ್ಕದ್ದು.

7) ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಈ ಕಛೇರಿಯಿಂದ ತಿಳಿಸಲಾಗುವುದು. ಹಾಗೂ ತರಬೇತಿ ಪಡೆಯಲು ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆ ಪತ್ರ ತಲುಪಿದ 15 ದಿನಗಳೊಳಗಾಗಿ ತಮ್ಮ ಒಪ್ಪಿಗೆ ಪತ್ರವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ ಇವರಿಗೆ ಸಲ್ಲಿಸತಕ್ಕದ್ದು.

8) ಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು (ದ್ವಿ ಪ್ರತಿಗಳಲ್ಲಿ) ಕಾರ್ಯದರ್ಶಿಗಳು, ಜಿಲ್ಲಾ ಮಟ್ಟದ ನ್ಯಾಯಾಂಗ ತರಬೇತಿ ಆಯ್ಕೆ ಸಮಿತಿ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ ಇವರಿಗೆ ದಿನಾಂಕ:30.09.2009 ರಂದು ಸಾಯಂಕಾಲ 5.30 ಗಂಟೆಯೊಳಗೆ ಸಲ್ಲಿಸತಕ್ಕದ್ದು.

9) ಅಪೂರ್ಣ ಮಾಹಿತಿ ಸಲ್ಲಿಸಿದ ಹಾಗೂ ಅನರ್ಹ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇರುತ್ತದೆ.

ಸೂಚನೆ: ಅರ್ಜಿಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಬಳ್ಳಾರಿ ಹಾಗೂ ಸಂಬಂಧಪಟ್ಟ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಪಡೆಯತಕ್ಕದ್ದು.

ಎಂ.ವಿ. ಶ್ರೀನಿವಾಸುಲು

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ,
ಕಾನೂನು ಪದವೀಧರರ ನ್ಯಾಯಾಂಗ ಆಡಳಿತ ತರಬೇತಿ ಆಯ್ಕೆ ಸಮಿತಿ, ಬಳ್ಳಾರಿ.

ಪ್ರಕಟಣೆ

ಸಮಾಜ ಕಲ್ಯಾಣ ಇಲಾಖಾವತಿಯಿಂದ 2009-10ನೇ ಸಾಲಿಗೆ ಪರಿಶಿಷ್ಟಜಾತಿ: ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ 4 ವರ್ಷದ ಕಾನೂನು ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಮಾಹಿತಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ, ಎಲ್ಲಾ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಂದ, ನ್ಯಾಯಾಲಯದ ಬಾರ್ ಅಸೋಸಿಯೇಷನ್‌ಗಳಿಂದ ಪಡೆಯಬಹುದಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:30.09.2009 ರಂದು ಸಾಯಂಕಾಲ 5-00 ಗಂಟೆ.

ಎಂ.ವಿ. ಶ್ರೀನಿವಾಸುಲು

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ,
ಕಾನೂನು ಪದವೀಧರರ ನ್ಯಾಯಾಂಗ ಆಡಳಿತ ತರಬೇತಿ ಆಯ್ಕೆ ಸಮಿತಿ, ಬಳ್ಳಾರಿ.

ಪ್ರಕಟಣೆ

ಸಮಾಜ ಕಲ್ಯಾಣ ಇಲಾಖಾವತಿಯಿಂದ 2009-10ನೇ ಸಾಲಿಗೆ ಪರಿಶಿಷ್ಟಜಾತಿ: ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ 4 ವರ್ಷದ ಕಾನೂನು ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಮಾಹಿತಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ, ಎಲ್ಲಾ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಂದ, ನ್ಯಾಯಾಲಯದ ಬಾರ್ ಅಸೋಸಿಯೇಷನ್‌ಗಳಿಂದ ಪಡೆಯಬಹುದಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:30.09.2009 ರಂದು ಸಾಯಂಕಾಲ 5-00 ಗಂಟೆ.

ಎಂ.ವಿ. ಶ್ರೀನಿವಾಸುಲು

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ,
ಕಾನೂನು ಪದವೀಧರರ ನ್ಯಾಯಾಂಗ ಆಡಳಿತ ತರಬೇತಿ ಆಯ್ಕೆ ಸಮಿತಿ, ಬಳ್ಳಾರಿ.

ಪಿ.ಆರ್.687

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ

ಸಂ : ಎಲ್.ಎನ್.ಡಿ.(ಎನ್):ಸಿಆರ್ 326/06-07, ಬೆಂಗಳೂರು, ದಿನಾಂಕ:17ನೇ ಜೂನ್ 2008

ವಿಷಯ :- ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿ ಹಳ್ಳಿ ಗ್ರಾಮದ ಸರ್ವೆ ನಂ. 25 ರಲ್ಲಿನ 6-08 ಎಕರೆ : ಗುಂಟೆ ಜಮೀನನ್ನು ಪೀಣ್ಯ ಪ್ಲಾಂಟೇಷನ್, ಸಿದ್ಧಾರ್ಥನಗರ ವಸತಿ ಹೀನರಿಗೆ ನಿವೇಶನ ಮಂಜೂರಾತಿ ಬಗ್ಗೆ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಹಸ್ತಾಂತರ ಮಾಡುವ ಕುರಿತು.

ಉಲ್ಲೇಖ :- 1. ಸರ್ಕಾರದ ಪತ್ರದ ಸಂಖ್ಯೆ. ಆರ್‌ಡಿ 20 ಎಲ್.ಜಿ.ಬಿ. 2007 ದಿನಾಂಕ: 22-04-2008.

2. ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರ ಪತ್ರದ ಸಂಖ್ಯೆ ಎಲ್‌ಎನ್‌ಡಿ.ಸಿಆರ್.325/06-07, ದಿ: 5-2-2007.

ಬೆಂಗಳೂರು ಉತ್ತರ ತಾಲ್ಲೂಕು, ಪೀಣ್ಯ ಪ್ಲಾಂಟೇಷನ್ ಸರ್ವೆ ನಂ. 2 ರಲ್ಲಿನ ಜಮೀನಿನಲ್ಲಿ ವಾಸಿಸುತ್ತಿದ್ದ ಕೊಳಚೆ ನಿವಾಸಿಗಳನ್ನು ವಾಯು ಸೇನಾ ಅಧಿಕಾರಿಗಳು ತೆರವುಗೊಳಿಸಿದ್ದು, ತೆರವುಗೊಳಿಸಿದ ಕೊಳಚೆ ನಿವಾಸಿಗಳಿಗೆ ಹಾಗೂ ಹಾಲಿ ವಾಸಿಸುತ್ತಿರುವ ಕೊಳಚೆ ನಿವಾಸಿಗಳಿಗೆ ನಿವೇಶನ ಮತ್ತು ಮನೆ ನಿರ್ಮಿಸುವ ಸಲುವಾಗಿ ಉಲ್ಲೇಖ (1) ರಲ್ಲಿನ ಸರ್ಕಾರದ ಪತ್ರ ಸಂಖ್ಯೆ ಆರ್‌ಡಿ 20 ಎಲ್‌ಜಿಬಿ 2007, ದಿನಾಂಕ:22-04-2008ರ ಆದೇಶದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ. 25 ರಲ್ಲಿನ 6-08 ಎಕರೆ:ಗುಂಟೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1966 ನಿಯಮ 97(4)ರ ಅನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 71 ರನ್ವಯ ಕಾಯ್ದಿರಿಸಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಹಸ್ತಾಂತರಿಸಲು ಸರ್ಕಾರ ಉಲ್ಲೇಖ (1)ರಲ್ಲಿ ಅನುಮತಿ ನೀಡಿರುತ್ತದೆ.

ಉಲ್ಲೇಖ(1)ರ ಸರ್ಕಾರದ ಪೂರ್ವಾನುಮೋದನೆಯಂತೆ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ. 25 ರಲ್ಲಿನ 6-08 ಎಕರೆ:ಗುಂಟೆ ಜಮೀನನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1966ರ ನಿಯಮ 97(4)ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಹಸ್ತಾಂತರಿಸಲು ಆದೇಶವನ್ನು ನೀಡಲಾಗಿದೆ.

ಷರತ್ತುಗಳು

1. ಈ ಜಮೀನಿನ ಹಸ್ತಾಂತರಿಕೆಯು 1966 ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರುತ್ತದೆ.
2. ಹಸ್ತಾಂತರಿಸಲ್ಪಟ್ಟ ಜಮೀನನ್ನು ನಿಗದಿತ ಉದ್ದೇಶಕ್ಕೆ 2 ವರ್ಷದ ಒಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು.
3. ಈ ಭೂಮಿಯಲ್ಲಿ ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಏನನ್ನೂ ಮಾಡತಕ್ಕದ್ದಲ್ಲ.
4. ಸಂಸ್ಥೆಗೆ ಹಸ್ತಾಂತರಿಸಿದ ಭೂಮಿಯನ್ನು ಬೇರೆ ಯಾರಿಗೂ ಗುತ್ತಿಗೆ ಕೊಡತಕ್ಕದ್ದಲ್ಲ. ಅಥವಾ ಪರಭಾರೆ ಮಾಡತಕ್ಕದ್ದಲ್ಲ. ಆದರೆ ಈ ಜಮೀನನ್ನು ಯಾವುದೇ ಬ್ಯಾಂಕ್/ಸಹಕಾರ ಸಂಘಗಳಿಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸಾಲ ಪಡೆಯಲು ಆಧಾರ ಮಾಡಲು ಅನುಮತಿ ನೀಡಲಾಗಿದೆ. ಆದರೆ ಸಾಲ ತೀರುವಳಿಗಾಗಿ ಈ ಜಮೀನನ್ನು ಬ್ಯಾಂಕ್/ಸಂಸ್ಥೆ ಮತ್ತು ಪ್ರಾಧಿಕಾರ ಮುಟ್ಟುಗೋಲು ಹಾಕಿಕೊಳ್ಳಲು ಹಕ್ಕು ಇರುವುದಿಲ್ಲ.
5. ಯಾವ ಉದ್ದೇಶಕ್ಕಾಗಿ ಹಸ್ತಾಂತರ ಮಾಡಲಾಗಿದೆಯೋ ಅದರ ಹೊರತು ಇತರೇ ಯಾವುದೇ ಉದ್ದೇಶಕ್ಕೆ ಈ ಜಮೀನನ್ನು ಉಪಯೋಗಿಸತಕ್ಕದ್ದಲ್ಲ.
6. ಸಂಸ್ಥೆಯು ನಿಗದಿತ ಮುದ್ರಾಂಕ ಶುಲ್ಕ ಮತ್ತು ನೊಂದಣಿ ಶುಲ್ಕ ಇತ್ಯಾದಿಗಳನ್ನು ಸರ್ಕಾರಕ್ಕೆ ಪಾವತಿಸಿ ಸಂಬಂಧಪಟ್ಟ ಉಪನೊಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿಯನ್ನು ಮಾಡಿಸಿಕೊಳ್ಳತಕ್ಕದ್ದು.
7. ಈ ಹಸ್ತಾಂತರಿಕೆಯು ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ, ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
8. ಈ ಸರ್ಕಾರಿ ಭೂಮಿ ಅಥವಾ ಭೂಮಿಯ ಒಂದು ಭಾಗವು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದ್ದರೆ ಮೂರು ತಿಂಗಳ ನೋಟೀಸನ್ನು ಕೊಟ್ಟು ತರುವಾಯ ಹಿಂತೆಗೆದುಕೊಳ್ಳಲಾಗುವುದು. ಈ ರೀತಿ ಸರ್ಕಾರದ ವಶಕ್ಕೆ ಪಡೆದ ಜಮೀನಿನಲ್ಲಿ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಾಗುವುದಿಲ್ಲ.
9. ಸದರಿ ಜಮೀನಿನಲ್ಲಿ ಅಭಿವೃದ್ಧಿ ಕೆಲಸ ಇತ್ಯಾದಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಕಾನೂನು ರೀತ್ಯಾ ಪೂರ್ವಾನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸಬೇಕು.

10. ಶಾಸನಬದ್ಧ ಕಾಯ್ದೆಗಳ ಕಟ್ಟು ಪಾಡುಗಳನ್ನು ಪಾಲಿಸದೇ ಇದ್ದಲ್ಲಿ ಅಥವಾ ಮೇಲ್ಕಂಡ ಯಾವುದೇ ಷರತ್ತುಗಳ ವಿರುದ್ಧವಾಗಿ ನಡೆದಲ್ಲಿ ಜಮೀನಿನ ಮಂಜೂರಾತಿಯನ್ನು ವಜಾ ಮಾಡಲಾಗುವುದು.
11. ಪ್ರಶ್ನಿತ ಜಮೀನಿನಲ್ಲಿ ಸಿಗುವ ಬೆಲೆ ಬಾಳುವ ನಿಧಿ, ನಿಕ್ಷೇಪ ಇತ್ಯಾದಿಗಳನ್ನು ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ.
12. ಸದರಿ ಸಂಸ್ಥೆಗೆ ಈ ಜಮೀನು ಅವಶ್ಯಕವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
13. ಆರ್ಜಿತ ಸಂಸ್ಥೆಯು ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1966ರ ನಿಯಮ 97(4)ರಡಿಯಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಕರಾರುಪತ್ರವನ್ನು ಬರೆದುಕೊಡತಕ್ಕದ್ದು.
14. ಹಸ್ತಾಂತರಿಸಲ್ಪಟ್ಟ ಜಮೀನಿನಲ್ಲಿ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ನಿವೇಶನ ಮತ್ತು ಮನೆಗಳನ್ನು ಹಂಚಿಕೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು, ಹೆಚ್ಚುವರಿಯಾಗಿ ಉಳಿಯುವ ಜಮೀನನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

ಮೇಲ್ಕಂಡ ಯಾವುದೇ ಷರತ್ತು ಉಲ್ಲಂಘನೆಯಾದಲ್ಲಿ, ಈ ಭೂ ಹಸ್ತಾಂತರಿಕೆಯು ತನಗೆ ತಾನಾಗಿ ರದ್ದುಗೊಳ್ಳುತ್ತದೆ ಮತ್ತು ಆರ್ಜಿತ ಸಂಸ್ಥೆಗೆ ಯಾವುದೇ ತರಹದ ನಷ್ಟ ಉಂಟಾದಲ್ಲಿ ಸರ್ಕಾರವು ಇದಕ್ಕೆ ಜವಾಬ್ದಾರಿಯಾಗುವುದಿಲ್ಲ.

ಪಿ.ಆರ್. ನಂ. 692

ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು

ಉಡುಪಿ ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ, ಉಡುಪಿ

ಜ್ಞಾಪನ

ನಂ : ಎ2(ಎ1)/54/ಶಿಸ್ತು.ಅ.ಗೈ.ಹಾ.-1/2004-05, ದಿನಾಂಕ:15ನೇ ಸೆಪ್ಟೆಂಬರ್, 2008

ವಿಷಯ :- ಶ್ರೀಮತಿ ಮಂಗಳಾ ನಾಯ್ಕ, ಸ.ಶಿ., ಸ.ಹಿ.ಪ್ರಾ.ಶಾಲೆ, ಶೀರೂರು, ಬೈಂದೂರು ವಲಯ, ಉಡುಪಿ ಜಿಲ್ಲೆ ಇವರು ದಿನಾಂಕ: 25-06-2003ರಿಂದ ಸತತವಾಗಿ ಸೇವೆಗೆ ಅನಧಿಕೃತ ಗೈರು ಹಾಜರಾಗಿರುವುದರಿಂದ ಅವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವ ಕುರಿತು.

ಉಲ್ಲೇಖ :- 1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೈಂದೂರು ವಲಯ ಇವರ ಪತ್ರ ಸಂ. ಇ2:ಅನ:ಗೈ.ಹಾ:ಪ್ರಾ.ಶಾ-01/2004-05 ದಿನಾಂಕ: 06-11-2004, 28-12-2005, 26-09-2007 ಮತ್ತು 20-02-2008.

2. ಈ ಕಛೇರಿಯಿಂದ ಕಳುಹಿಸಲಾದ ನೋಟೀಸು ದಿನಾಂಕ: 01-01-2005 ಮತ್ತು 31-03-2008.

ಪ್ರಸ್ತಾವನೆ :

ಶ್ರೀಮತಿ ಮಂಗಳಾ ನಾಯ್ಕ್, ಸ.ಶಿ., ಸ.ಹಿ.ಪ್ರಾ.ಶಾಲೆ, ಶಿರೂರು ಇವರು ದಿನಾಂಕ: 04-02-1977 ರಲ್ಲಿ ಶಿಕ್ಷಕಿಯಾಗಿ ಕರ್ತವ್ಯಕ್ಕೆ ಸೇರ್ಪಡೆಗೊಂಡಿದ್ದು, ದಿನಾಂಕ: 25-06-2003ರಿಂದ ಈ ವರೆಗೆ ಅನಧಿಕೃತ ಗೈರು ಹಾಜರಾಗಿರುತ್ತಾರೆ. 4 ತಿಂಗಳಿಗೂ ಮೇಲ್ಪಟ್ಟು ಸೇವೆಗೆ ಗೈರು ಹಾಜರಾದ ಈ ಶಿಕ್ಷಕಿಯು ಕೂಡಲೇ ಹಾಜರಾಗಿ ವಿವರಣೆ ನೀಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೈಂದೂರು ವಲಯ ಇವರು ದಿನಾಂಕ: 25-11-2003, 24-12-2003, 02-02-2004, 26-06-2004 ಮತ್ತು 14-08-2004ರಲ್ಲಿ ನೋಟೀಸು ನೀಡಿದ್ದರೂ ಅದಕ್ಕೆ ಸದರಿಯವರು ಯಾವುದೇ ಉತ್ತರ ನೀಡಿರುವುದಿಲ್ಲ. ಹಾಗೂ ಸೇವೆಗೆ ಹಾಜರಾಗಿರುವುದಿಲ್ಲ. ಬಳಿಕ ದಿನಾಂಕ: 01-01-2005 ಮತ್ತು 31-03-2008ರಂದು ಉಪನಿರ್ದೇಶಕರ ಕಛೇರಿಯಿಂದ ನೀಡಲಾದ ಜ್ಞಾಪನಕ್ಕೂ ಸದರಿಯವರಿಂದ ಉತ್ತರ ಬಂದಿರುವುದಿಲ್ಲ. ಆನಂತರ ಸದರಿ ನೋಟೀಸನ್ನು ದಿನಾಂಕ: 27-07-2008ರ ಉದಯವಾಣಿ ದಿನ ಪತ್ರಿಕೆಯಲ್ಲಿ ಪ್ರಕಟಿಸಿ, ಒಂದು ವಾರದೊಳಗೆ ಸದರಿಯವರು ಈ ಕಛೇರಿಯಲ್ಲಿ ಹಾಜರಾಗಿ ಅನಧಿಕೃತ ಗೈರು ಹಾಜರಿ ಬಗ್ಗೆ ವಿವರಣೆ ನೀಡುವಂತೆ ತಿಳಿಸಿದ್ದರೂ ಈವರೆಗೂ ಹಾಜರಾಗಿರುವುದಿಲ್ಲ ಹಾಗೂ ವಿವರಣೆ ನೀಡಿರುವುದಿಲ್ಲ. ಇದರಿಂದ ಇವರಿಗೆ ಸರಕಾರಿ ಕೆಲಸದಲ್ಲಿ ಮುಂದುವರಿಯಲು ಆಸಕ್ತಿ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಇವರ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 8 ಉಪನಿಯಮ viii ರನ್ವಯ ಸರಕಾರಿ ಸೇವೆಯಿಂದ ವಜಾ ಮಾಡಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ

ಶ್ರೀಮತಿ ಮಂಗಳಾ ನಾಯ್ಕ್, ಸಹ ಶಿಕ್ಷಕಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶಿರೂರು, ಬೈಂದೂರು ವಲಯ, ಉಡುಪಿ ಜಿಲ್ಲೆ ಇವರು ದಿನಾಂಕ: 25-06-2003ರಿಂದ ಸತತವಾಗಿ ಸರಕಾರಿ ಸೇವೆಗೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಸದರಿಯವರಿಗೆ ಕಾಲಕಾಲಕ್ಕೆ ನೀಡಿದ ನೋಟೀಸು ಹಾಗೂ ದಿನಾಂಕ: 27-07-2008ರ ಪತ್ರಿಕಾ ನೋಟೀಸಿಗೂ ಸಹ ಉತ್ತರ ಸಲ್ಲಿಸದೇ ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ ನಡಾವಳಿಯ ನಿಯಮ ಉಲ್ಲಂಘಿಸಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಕೆ. ಆನಂದ, ಶಿಸ್ತು ಪ್ರಾಧಿಕಾರಿಗಳು/ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ ಆದ ನಾನು ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ

ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 8ರ ಉಪನಿಯಮ viii ರನ್ವಯ ಶ್ರೀಮತಿ ಮಂಗಳಾ ನಾಯ್ಕ್, ಸಹ ಶಿಕ್ಷಕಿ, ಸ.ಹಿ.ಪ್ರಾ.ಶಾಲೆ, ಶಿರೂರು, ಬೈಂದೂರು ವಲಯ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿದ ವಜಾ ಮಾಡಿ ಆದೇಶಿಸಲಾಗಿದೆ.

ಕೆ. ಆನಂದ
ಉಪನಿರ್ದೇಶಕರು, (ಆಡಳಿತ) ಹಾಗೂ ಶಿಸ್ತು ಪ್ರಾಧಿಕಾರಿ
ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ

ಪಿ.ಆರ್. ನಂ. 1074

ಕರ್ನಾಟಕ ಲೋಕಸೇವಾ ಆಯೋಗ

ಕಾರ್ಯದರ್ಶಿ ಹಾಗೂ ನಿಯಂತ್ರಕರು (ಪ್ರ), ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ

ವಿಷಯ :- 2007ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಲ್ಲಿ ಶ್ರೀಯುತರಾದ ಶ್ರೀ ಅಬ್ದುಲ್ ಲತೀಫ್, ನೋಂದಣಿ ಸಂಖ್ಯೆ:84313 ಶ್ರೀ ಲೋಕನಾಥ್ ಬಿ.ವಿ.ಎಸ್. ನೋಂದಣಿ ಸಂಖ್ಯೆ: 84707 ಮತ್ತು ಶ್ರೀ ಗೋವಿಂದ ರಾಜು .ಟಿ ನೋಂದಣಿ ಸಂಖ್ಯೆ: 84613 ಇವರುಗಳು ಎಸಗಿದ ದುರಾಚಾರ ಪ್ರಕರಣದ ದಂಡನೆ ವಿಧಿಸುವ ಆದೇಶ.

ಓದಲಾಗಿದೆ :- (1) ಅಬ್ದುಲ್ ಲತೀಫ್ ನೋಂದಣಿ ಸಂಖ್ಯೆ: 84313 ಲೋಕನಾಥ್ ಬಿ.ವಿ.ಎಸ್. ನೋಂದಣಿ ಸಂಖ್ಯೆ: 84707 ಗೋವಿಂದರಾಜು .ಟಿ ನೋಂದಣಿ ಸಂಖ್ಯೆ: 84613 ಶಿವಮೊಗ್ಗ ಕೇಂದ್ರ ಅರ್ಜಿ ಸಲ್ಲಿಸಿದ ದಿನಾಂಕಗಳು 28-08-2007 ಮತ್ತು 30-7-2007.

(2) ನೋಟೀಸ್ ಸಂಖ್ಯೆ: ಆರ್‌ಹೆಚ್‌ಎಸ್ 238/2007-08 ಪಿಎಸ್‌ಸಿ ದಿನಾಂಕ: 31-01-2008.

(3) ಶ್ರೀಯುತರ ಸಮಜಾಯಿಷಿ ದಿನಾಂಕಗಳು 12-02-2008.

ಪ್ರಸ್ತಾವನೆ :

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 26-11-2007ರಂದು ನಡೆಸಿದ 2007ನೇ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯಲ್ಲಿ ಕನ್ನಡ ಭಾಷಾ ವಿಷಯದ ಪತ್ರಿಕೆ-1ರ ಪರೀಕ್ಷೆಯನ್ನು ಬರೆಯುವ ಸಂದರ್ಭದಲ್ಲಿ ಉತ್ತರಪತ್ರಿಕೆಗಳನ್ನು ಬದಲಾಯಿಸಿಕೊಂಡು ಬರೆದಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಉಲ್ಲೇಖ(2)ರ ದಿನಾಂಕ: 31-01-2008ರಲ್ಲಿ ಮೇಲ್ಕಂಡ ಮೂರು ಅಭ್ಯರ್ಥಿಗಳಿಗೆ ಸಮಜಾಯಿಷಿಯನ್ನು ಕೇಳಲಾಗಿತ್ತು.

(1) ಶ್ರೀ ಅಬ್ದುಲ್ ಲತೀಫ್, ಅರಣ್ಯ ರಕ್ಷಕ, ಆರ್‌ಎಫ್‌ಓ ಕಛೇರಿ, ಆನಂದಪುರ ವಲಯ, ಚೋರಡಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ನೋಂದಣಿ ಸಂಖ್ಯೆ: 84313 (2) ಲೋಕನಾಥ್ ಬಿ.ವಿ.ಎಸ್. ಅರಣ್ಯ ರಕ್ಷಕ, ಆರ್‌ಎಫ್‌ಓ ಕಛೇರಿ, ಸಾಗರ ವಲಯ, ಸಾಗರ, ಶಿವಮೊಗ್ಗ ಜಿಲ್ಲೆ, ನೋಂದಣಿ 847070 (3) ಗೋವಿಂದರಾಜು ಟಿ. ಅರಣ್ಯ ರಕ್ಷಕ ಆರ್‌ಎಫ್‌ಓ ಕಛೇರಿ, ಅನಂದಪುರಂ ವಲಯ, ಚೋರಡಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ನೋಂದಣಿ ಸಂಖ್ಯೆ: 84613 ಉಲ್ಲೇಖ (3)ರಲ್ಲಿನ ಸಮಜಾಯಿಷಿಯಲ್ಲಿ ಆರೋಪಗಳನ್ನು ಒಪ್ಪಿಕೊಂಡಿರುವುದರಿಂದ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಓದಲಾದ ದಾಖಲೆ ಸಾಕ್ಷ್ಯ ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ದಿನಾಂಕ: 14-07-1993ರ ಅಧಿಕೃತ ಜ್ಞಾಪನ ಸಂಖ್ಯೆ: ಆಡಳಿತ:398/93-94/ಪಿಎಸ್‌ಸಿ ಅನ್ವಯ ಈ ಕೆಳಕಂಡ ಆದೇಶವನ್ನು ಮಾಡಿದೆ.

ಆದೇಶ ಸಂಖ್ಯೆ: ಇಪ(1)340/2007-08/ಪಿಎಸ್‌ಸಿ, ಬೆಂಗಳೂರು, ದಿನಾಂಕ 26ನೇ ಮೇ, 2008.

1965ರ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆಗಳ ನಿರ್ವಹಣೆ) ನಿಯಮಾವಳಿ ನಿಯಮ 4 ಹಾಗೂ ತತ್ಸಂಬಂಧದಲ್ಲಿ ಹೊರಡಿಸಲಾಗಿರುವ ಆಯೋಗದ ಅಧಿಕೃತ ಜ್ಞಾಪನಪತ್ರ ಸಂಖ್ಯೆ ಆಡಳಿತ:398/93-94 ಪಿಎಸ್‌ಸಿ ದಿನಾಂಕ: 14-07-1993ರ ಅಧಿಸೂಚನೆಯಂತೆ ಸದರಿ ಇಲಾಖಾ ಪರೀಕ್ಷೆಗಳಿಗೆ ಅಭ್ಯರ್ಥಿಗಳಾದ (1) ಶ್ರೀ ಅಬ್ದುಲ್ ಲತೀಫ್, ಅರಣ್ಯ ರಕ್ಷಕ, ಆರ್‌ಎಫ್‌ಓ ಕಛೇರಿ, ಆನಂದಪುರ ವಲಯ ಚೋರಡಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ನೋಂದಣಿ ಸಂಖ್ಯೆ: 84313 (2) ಲೋಕನಾಥ್ ಬಿ.ವಿ.ಎಸ್. ಅರಣ್ಯ ರಕ್ಷಕ, ಆರ್‌ಎಫ್‌ಓ ಕಛೇರಿ, ಸಾಗರ ವಲಯ, ಸಾಗರ ಶಿವಮೊಗ್ಗ ಜಿಲ್ಲೆ, ನೋಂದಣಿ 847070 (3) ಗೋವಿಂದರಾಜು ಟಿ. ಅರಣ್ಯ ರಕ್ಷಕ ಆರ್‌ಎಫ್‌ಓ ಕಛೇರಿ, ಆನಂದಪುರಂ ವಲಯ ಚೋರಡಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ನೋಂದಣಿ ಸಂಖ್ಯೆ: 84613 ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದರಿಂದ ಪ್ರಸಕ್ತ 2007ನೇ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯ ಅಭ್ಯರ್ಥಿತನವನ್ನು ರದ್ದುಪಡಿಸಿದೆ ಹಾಗೂ ಮುಂದಿನ 2008ರ ಪ್ರಥಮ ಮತ್ತು ದ್ವಿತೀಯ ಹಾಗೂ 2009ರ ಪ್ರಥಮ ಮತ್ತು ದ್ವಿತೀಯ ಒಟ್ಟು ನಾಲ್ಕು ಅಧಿವೇಶನಗಳ ಇಲಾಖಾ ಪರೀಕ್ಷೆಗಳಿಗೆ ಡಿಬಾರ್ ಮಾಡಲಾಗಿದೆ.

ಆಯೋಗದ ಆದೇಶದ ಮೇರೆಗೆ
ಹೆಚ್.ಬಿ. ಚನ್ನರಾಜು
ಕಾರ್ಯದರ್ಶಿ ಹಾಗೂ ನಿಯಂತ್ರಕರು (ಪ್ರ)
ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ

ಪಿ.ಆರ್. ನಂ. 614

ಕೃಷಿ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಇವರ ನಡವಳಿಗಳು

ವಿಷಯ :- ಶ್ರೀ ಕೆ.ಎಂ. ಹರೀಶ, ದ್ವಿತೀಯ ದರ್ಜೆ ಸಹಾಯಕ ಇವರ ಕರ್ತವ್ಯ ಚ್ಯುತಿ ಬಗ್ಗೆ.

ಉಲ್ಲೇಖ :-

(1) ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಇವರ ಪತ್ರ ಸಂಖ್ಯೆ: ಜಕೃನಿ/ಚಾ.ನಗರ/ಸಿಬ್ಬಂದಿ/ಕೆಎಂ.ಹ/ದ್ವಿದಸ/ಗೈಹಾ/03–04, ದಿನಾಂಕ:15–01–2005

(2) ಇಲಾಖಾ ಆದೇಶ ಸಂಖ್ಯೆ : ಸಿಬ್ಬಂದಿ–1/ವಿಚಾರಣೆ–4/20/ಚಾ.ನಗರ/04–05, ದಿನಾಂಕ 15–04–2005.

(3) ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಇವರ ಪತ್ರ ಸಂಖ್ಯೆ : ಸಿಬ್ಬಂದಿ/ಕೆಎಂಹ/ದ್ವಿದಸ/ಗೈಹಾ/04–05, ದಿನಾಂಕ: 5–5–2005.

(4) ಇಲಾಖಾ ಆದೇಶ ಸಂಖ್ಯೆ: ಸಿಬ್ಬಂದಿ–1/ವಿಚಾರಣೆ–4/20/ಚಾ.ನಗರ/04–05, ದಿನಾಂಕ 22/26–8–2005.

(5) ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಇವರ ಪತ್ರ ಸಂಖ್ಯೆ: ಸಿಬ್ಬಂದಿ/ಕೆಎಂಹ/ದ್ವಿದಸ/ಗೈಹಾ/04–05/05–06, ದಿನಾಂಕ: 5/8–9–2005.

(6) ಶ್ರೀ ಕೆ.ಎಂ. ಹರೀಶ, ದ್ವಿತೀಯ ದರ್ಜೆ ಸಹಾಯಕ ಇವರ ಮನವಿ ದಿನಾಂಕ 7–11–2005.

(7) ಇಲಾಖಾ ಆದೇಶ ಸಂಖ್ಯೆ : ಸಿಬ್ಬಂದಿ–1/ವಿಚಾರಣೆ–4/20/ಚಾ.ನಗರ/04–05, ದಿನಾಂಕ 13–1–2006.

(8) ಇಲಾಖಾ ಆದೇಶ ಸಂಖ್ಯೆ: ಸಿಬ್ಬಂದಿ–1/ವಿಚಾರಣೆ–4/20/ಚಾ.ನಗರ/03–04, ದಿನಾಂಕ 13–7–2007.

(9) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ: 27–12–2007.

(10) 2ನೇ ಕಾರಣ ಕೇಳುವ ಸೂಚನಾ ಪತ್ರ ವಿಚಾರಣಾ ವರದಿಯೊಂದಿಗೆ ದಿನಾಂಕ: 6/12–2–2008.

(11) ಶ್ರೀ ಕೆ.ಎಂ. ಹರೀಶ, ದ್ವಿತೀಯ ದರ್ಜೆ ಸಹಾಯಕ ಇವರ ಹೇಳಿಕೆ ದಿನಾಂಕ: 4–3–2008

(12) ಸರ್ಕಾರದ ಪತ್ರ ಸಂಖ್ಯೆ : ಕೃತೋಇ 100 ಕೃವಸೆ 2008, ದಿನಾಂಕ: 21–6–2008.

(13) ಪರಿವೀಕ್ಷಣಾ ನಿಯಮ – ಡಿಪಿಎಆರ್ 57 ಎಸ್‌ಆರ್‌ಆರ್ 75, ದಿನಾಂಕ: 25–6–1977

ಪ್ರಸ್ತಾವನೆ :

ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಇವರು ಓದಲಾದ ಕ್ರ.ಸಂ. (1) ರ ಪತ್ರದಲ್ಲಿ ಅವರ ಕಛೇರಿಯ ದ್ವಿತೀಯ ದರ್ಜೆ ಸಹಾಯಕರಾದ ಶ್ರೀ ಕೆ.ಎಂ. ಹರೀಶ್ ಇವರು ದಿನಾಂಕ: 4–10–2001 ರಿಂದ 21–12–2004 ರವರೆಗೆ ವಿವಿಧ ಅವಧಿಗಳಲ್ಲಿ ಒಟ್ಟು 741 ದಿವಸಗಳ ಕಾಲ ಅನಧಿಕೃತ ಗೈರು ಹಾಜರಾಗಿರುವುದು ಅಲ್ಲದೇ ಪ್ರಸ್ತುತ ಸಹ ಅನಧಿಕೃತ ಗೈರು ಹಾಜರಿ ಮುಂದುವರಿಸಿರುವುದಾಗಿ ವರದಿ ಮಾಡಿರುತ್ತಾರೆ. ಈ ಬಗ್ಗೆ ಅವರು ನೀಡಿದ ಜ್ಞಾಪನಾ ಪತ್ರಗಳಿಗೂ ಸ್ಪಂದಿಸದೇ ನೌಕರರು ಬೇಜವಾಬ್ದಾರಿಯಿಂದ ವರ್ತಿಸಿರುವುದಾಗಿ ವರದಿ ನೀಡಿರುತ್ತಾರೆ. ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಇವರ ವರದಿಯ ಪರಿಶೀಲನೆಯಿಂದ ಶ್ರೀ ಕೆ.ಎಂ. ಹರೀಶ, ದ್ವಿತೀಯ ದರ್ಜೆ ಸಹಾಯಕ ಇವರ ಅನಧಿಕೃತ ಗೈರು ಹಾಜರಿಯು ಮೇಲ್ನೋಟಕ್ಕೆ ಕಂಡು ಬಂದುದರಿಂದ, ಸದರಿಯವರ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ಓದಲಾದ ಕ್ರ.ಸಂ. (2) ರ ಇಲಾಖಾ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ. ಓದಲಾದ ಕ್ರ.ಸಂ. (3) ರ ಪತ್ರದಲ್ಲಿ ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಇವರು ಅಮಾನತ್ತು ಆದೇಶವನ್ನು ನೌಕರರಿಗೆ ಜಾರಿ ಮಾಡಿ ಅವರಿಂದ ದಿನಾಂಕ ಸಹಿತ ಸ್ವೀಕೃತಿಯನ್ನು ಪಡೆದು ಇಲಾಖೆಗೆ ಸಲ್ಲಿಸಿರುತ್ತಾರೆ. ಓದಲಾದ ಕ್ರ.ಸಂ. (4)ರ ಇಲಾಖಾ ಪತ್ರದಲ್ಲಿ ಸದರಿಯವರ ಆರೋಪಗಳ ಬಗ್ಗೆ ಸಿಸಿಎ ನಿಯಮ 11 ರಡಿಯಲ್ಲಿ ದೋಷಾರೋಪಣೆ ಪಟ್ಟಿ ಅನುಬಂಧ–1 ರಿಂದ 4 ನ್ನು ಜಾರಿ ಮಾಡಲಾಗಿತ್ತು. ಓದಲಾದ ಕ್ರ.ಸಂ. (5) ರಲ್ಲಿ ನೌಕರರಿಗೆ ದೋಷಾರೋಪಣೆ ಪಟ್ಟಿಯನ್ನು ಜಾರಿ ಮಾಡಿದ ಬಗ್ಗೆ ಸ್ವೀಕೃತಿಯನ್ನು ಸಲ್ಲಿಸಿರುತ್ತಾರೆ. ಓದಲಾದ ಕ್ರ.ಸಂ. (6) ರಲ್ಲಿನ ಮನವಿಯಲ್ಲಿ ಅವರ ಕುಟುಂಬದ ಆರ್ಥಿಕ ಸಮಸ್ಯೆಗಳಿಂದಾಗಿ ಹಾಗೂ ಅನಾರೋಗ್ಯದ ಕಾರಣ ನೀಡಿರುತ್ತಾರೆ. ಹಾಗೂ ದ್ವಿತೀಯ ದರ್ಜೆ ಸಹಾಯಕ ಹುದ್ದೆಯ ಬದಲಾಗಿ 'ಡಿ' ದರ್ಜೆ ಹುದ್ದೆಗೆ ನೇಮಕಾತಿ ಮಾಡಲು ಕೋರಿರುತ್ತಾರೆ. ಆದಷ್ಟು ಶೀಘ್ರವಾಗಿ ಮರುನೇಮಕಾತಿ ಮಾಡಿಕೊಡುವಂತೆ ಕೋರಿರುತ್ತಾರೆ. ಓದಲಾದ ಕ್ರ.ಸಂ. (7) ರ ಇಲಾಖಾ ಆದೇಶದಲ್ಲಿ ಶ್ರೀಯುತರ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿ ಇಟ್ಟು ವಿಖಂಡನೆಗೊಳಿಸಿ ಸಹಾಯಕ ಕೃಷಿ ನಿರ್ದೇಶಕರು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ ಕಛೇರಿಯಲ್ಲಿನ ದ್ವಿತೀಯ ದರ್ಜೆ ಸಹಾಯಕರ ಖಾಲಿ ಹುದ್ದೆಗೆ ಪುನರ್ ನೇಮಕ ಮಾಡಿ ಆದೇಶಿಸಲಾಗಿತ್ತು. ನೌಕರರು ಸಲ್ಲಿಸಿರುವ ಹೇಳಿಕೆ ಬಗ್ಗೆ ನೌಕರರ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ತಿಳಿಯಲು ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ಓದಲಾದ ಕ್ರ.ಸಂ. (8) ರಲ್ಲಿ ನೇಮಿಸಲಾಗಿತ್ತು. ಸದರಿ ವಿಚಾರಣಾಧಿಕಾರಿಗಳು ನಿಯಮಾನುಸಾರ ವಿಚಾರಣೆ ಕೈಗೊಂಡು ಓದಲಾದ ಕ್ರ.ಸಂ. (9) ರಲ್ಲಿ ಇಲಾಖೆಗೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ವಿಚಾರಣಾ ವರದಿಯಲ್ಲಿ ಸದರಿ ನೌಕರರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿದೆ ಎಂದು ನಿರ್ಣಯಿಸಲಾಗಿದೆ. ಓದಲಾದ ಕ್ರ. ಸಂ.(10) ರಲ್ಲಿ ವಿಚಾರಣಾ ವರದಿಯೊಂದಿಗೆ 2ನೇ ಕಾರಣ ಕೇಳುವ ಸೂಚನಾ ಪತ್ರ ಜಾರಿ ಮಾಡಲಾಗಿತ್ತು. ಇದನ್ನು ಸ್ವೀಕರಿಸಿ ನೌಕರರು ಓದಲಾದ ಕ್ರ.ಸಂ. (11) ರಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಈ ಹೇಳಿಕೆಯಲ್ಲಿ ಪರಿಗಣಿಸಬಹುದಾದ ಯಾವುದೇ ಅಂಶಗಳು ಕಂಡು ಬರುವುದಿಲ್ಲ.

ಓದಲಾದ ಕ್ರಮ ಸಂಖ್ಯೆ (12) ರಲ್ಲಿ ಪ್ರಕರಣವನ್ನು ಇತ್ಯರ್ಥಗೊಳಿಸಲು ಸರ್ಕಾರದಿಂದ ಇಲಾಖೆಗೆ ನಿರ್ದೇಶಿತವಾಗಿದೆ. ಅದರಂತೆ ವಿಚಾರಣಾ ವರದಿಯಲ್ಲಿ ಆರೋಪ ಸಾಬೀತಾಗಿರುವುದರಿಂದ ಹಾಗೂ ಓದಲಾದ ಕ್ರಮ ಸಂಖ್ಯೆ (13) ರಲ್ಲಿನ ಸರ್ಕಾರದ ಆದೇಶದನ್ವಯ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ ಸಿಬ್ಬಂದಿ-1/ವಿಚಾರಣೆ-4/20/ಚಾ.ನಗರ/03-04, ದಿನಾಂಕ: 19-11-2008.

ಈ ಕೆಳಗೆ ಸಹಿ ಮಾಡಿರುವ ಡಾ: ಎ.ರಾಜಣ್ಣ, ಕೃಷಿ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿ, ಬೆಂಗಳೂರು ಆದ ನಾನು ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಕೆ.ಎಂ. ಹರೀಶ, ದ್ವಿತೀಯ ದರ್ಜೆ ಸಹಾಯಕ, ಹಾಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಯಳಂದೂರು ಇವರ ವಿರುದ್ಧದ ಆರೋಪವು ವಿಚಾರಣಾ ವರದಿಯಲ್ಲಿ ಸಾಬೀತಾಗಿರುವುದರಿಂದ ಇವರನ್ನು "ದೋಷಿ" ಎಂದು ನಿರ್ಣಯಿಸಿದ್ದು, ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ನಿಯಮ 8 (viii) ರಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತೇನೆ.

ಸದರಿಯವರ ಅನಧಿಕೃತ ಗೈರು ಹಾಜರಿಯನ್ನು ಅನಧಿಕೃತ ಗೈರು ಹಾಜರಿ ಎಂದು ಪರಿಗಣಿಸಿ ನಿಲಂಬನಾ ಅವಧಿಯನ್ನು ನಿಲಂಬನಾ ಅವಧಿ ಎಂದೇ ಪರಿಗಣಿಸಿ ಆದೇಶಿಸಿರುತ್ತೇನೆ.

ಡಾ: ಎ. ರಾಜಣ್ಣ

ಪಿ.ಆರ್. ನಂ. 1395 ಕೃಷಿ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು

ಅಧಿಕಾರಿಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ : ಡಿ.ಟಿ.ಸಿಆರ್. 20/2007-08, ದಿನಾಂಕ : 22ನೇ ಆಗಸ್ಟ್, 2008

ಅಬಕಾರಿ ಉಪ ನಿರೀಕ್ಷಕರು ನಂ. 2, ಜಾ. ಮತ್ತು ತ. ತರೀಕೆರೆ ತಾಲ್ಲೂಕು ಇವರ ಪ್ರ.ವ.ವ.4/07-08, ದಿ: 18-07-2007

ಉಪಸ್ಥಿತರು: ಕೆ.ಸಿ. ಹರಿದಾಸ್, ಅಧಿಕಾರಿಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಫಿರ್ಯಾದುದಾರರು	**ಆಪಾದಿತರು**
ಅಬಕಾರಿ ಉಪ ನಿರೀಕ್ಷಕರು ನಂ.2	ಎ: 1 ಗುರುಮೂರ್ತಿ ಬಿನ್ ದೇವೇಗೌಡ
ಜಾರಿ ಮತ್ತು ತನಿಖೆ	ಎ: 2 ದೇವೇಂದ್ರ ನಾಯ್ಕ್ ಬಿನ್ ಲಚ್ಚಾನಾಯ್ಕ್
ತರೀಕೆರೆ ತಾಲ್ಲೂಕು	

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 18-07-2007 ರಂದು ರಾತ್ರಿ 11:30 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ತರೀಕೆರೆ ತಾಲ್ಲೂಕು ಇವರು ಸಿಬ್ಬಂದಿಯೊಂದಿಗೆ ಬಂದ ಖಚಿತ ವರ್ತಮಾನದ ಮೇರೆಗೆ ತರೀಕೆರೆ ತಾಲ್ಲೂಕು ಲಕ್ಕವಳ್ಳಿ ಹೋಬಳಿ ಸಿದ್ದಿಪುರ ಗ್ರಾಮದ ರಸ್ತೆಯಲ್ಲಿ ರಾತ್ರಿ ಗಸ್ತು ಕಾರ್ಯದಲ್ಲಿದ್ದಾಗ ವಾಹನ ಸಂಖ್ಯೆ: ಕೆ.ಎ. 18 ಇ.8777ರ ಕವಾಸಕಿ ಬಜಾಜ್ ಬೈಕ್‌ನಲ್ಲಿ ಗುರುಮೂರ್ತಿ ಬಿನ್ ದೇವೇಗೌಡ ಮತ್ತು ದೇವೇಂದ್ರ ನಾಯ್ಕ್ ಬಿನ್ ಲಚ್ಚಾನಾಯ್ಕ್, ಕರಕುಚ್ಚಿ ಗ್ರಾಮ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು ಇವರುಗಳು ಅಕ್ರಮವಾಗಿ ಒಂದು ಬಿಳಿಯ ಪ್ಲಾಸ್ಟಿಕ್ ಚೀಲದಲ್ಲಿ 180 ಮಿಲಿಯ 60 ಸೀಸೆ ವಿಂಡ್ಸರ್ ಡಿಲಕ್ಸ್ ವಿಸ್ಕಿ ಎಂದು ಲೇಬಲ್ ಇರುವ ಒಟ್ಟು 10.800 ಲೀಟರ್ ನಕಲಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದುದು ಪತ್ತೆಯಾದ್ದರಿಂದ ಮಹಜರ್‌ನಡಿಯಲ್ಲಿ ಸದರಿ ಮದ್ಯವನ್ನು ಬೈಕ್‌ನೊಂದಿಗೆ ಸರ್ಕಾರದ ವಶಕ್ಕೆ ಅಮಾನತ್ತುಪಡಿಸಿಕೊಂಡು ಆರೋಪಿಗಳನ್ನು ದಸ್ತಗಿರಿಗೊಳಿಸಿ ಪ್ರ.ವ.ವ. ನಂ: 4/2007-08 ರಲ್ಲಿ ಮೊಕದ್ದಮೆ ದಾಖಲು ಮಾಡಿ ಪ್ರಥಮ ಮಾಹಿತಿ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ಈ ಪ್ರಾಧಿಕಾರಕ್ಕೆ ಸಲ್ಲಿಸಿ ತನಿಖೆಯನ್ನು ಮುಂದುವರೆಸಿರುತ್ತಾರೆ.

ವಶಪಡಿಸಿಕೊಂಡ ವಾಹನ ಹಾಗೂ ಮದ್ಯಕ್ಕೆ ಸಂಬಂಧಿಸಿದಂತೆ ಈ ಪ್ರಾಧಿಕಾರವು ಮುಟ್ಟುಗೋಲಿನ ನಡವಳಿಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ಪ್ರಾರಂಭಿಸಿ ಆಪಾದಿತರಿಗೆ / ವಾಹನದ ಮಾಲೀಕರಿಗೆ ಕಲಂ 43 (ಬಿ) ಅಡಿಯಲ್ಲಿ ನೋಟಿಸ್ ಜಾರಿ ಮಾಡಲು ಕ್ರಮ ಕೈಗೊಂಡು ವಾಹನದ ಮಾಲೀಕತ್ವದ ಹಾಗೂ ಮೌಲ್ಯದ ವಿವರಗಳನ್ನು ನೀಡುವಂತೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಮುಟ್ಟುಗೋಲಿನ ನಡವಳಿಗಳನ್ನು ಮುಂದುವರೆಸಲಾಗಿತ್ತು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ನೀಡಿರುವ 'ಬಿ' ವರದಿಯ ಪ್ರಕಾರ ಶ್ರೀ ಟಿ.ಎಸ್. ಶಿವಮೂರ್ತಿ ಬಿನ್ ಟಿ.ಸಿ. ಸುಬ್ಬರಾಯಪ್ಪ ಪಂಚಕಲ್ಲಯ್ಯ ಸ್ಟ್ರೀಟ್, ತರೀಕೆರೆ. ಇವರು ವಾಹನದ ಮಾಲೀಕರೆಂದು ತಿಳಿದು ಬಂದಿರುತ್ತದೆ.

ವಾಹನದ ಮಾಲೀಕರಿಗೆ ಕಲಂ 43 (ಬಿ) ಅಡಿಯಲ್ಲಿ ನೋಂದಾಯಿತ ಅಂಚೆ ಮೂಲಕ ನೀಡಲಾದ ನೋಟಿಸ್ ದಿನಾಂಕ: 19–07–2008 ರಂದು ಜಾರಿಯಾದ ಬಗ್ಗೆ ಸ್ವೀಕೃತಿ ಈ ಪ್ರಾಧಿಕಾರಕ್ಕೆ ಮರಳಿ ಬಂದಿದ್ದು, ಮುಂದುವರೆದು ವಾಹನದ ಮಾಲೀಕರು ಮತ್ತು ಆರೋಪಿಗಳಿಗೆ ನೋಟಿಸ್‌ನ್ನು ತನಿಖಾಧಿಕಾರಿಗಳ ಮುಖಾಂತರ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು.

ದಿನಾಂಕ: 02–08–2008 ರಂದು ವಾಹನದ ಮಾಲೀಕರಾದ ಶ್ರೀ ಟಿ.ಎಸ್. ಶಿವಮೂರ್ತಿ ಬಿನ್ ಟಿ.ಸಿ. ಸುಬ್ಬರಾಯಪ್ಪ ಪಂಚಕಲ್ಲಯ್ಯ ಸ್ಟ್ರೀಟ್, ತರೀಕೆರೆ ಎಂದು ಇವರು ಅಬಕಾರಿ ನಿರೀಕ್ಷಕರು, ತರೀಕೆರೆ ವಲಯ ಇವರ ಮುಖಾಂತರ ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ತಮ್ಮ ಅಭ್ಯಂತರವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸ.ಅ.ನಿ. ರವರ ವಾದವನ್ನು ಆಲಿಸಿದ್ದು, ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತಮ್ಮ ವಾದ ಮಂಡಿಸಿರುತ್ತಾರೆ.

ಮೊಕದ್ದಮೆಯು ದಾಖಲಾಗಿ 1 ವರ್ಷ ಕಳೆದಿದ್ದು ವಾಹನದ ಮಾಲೀಕರು ವಾಹನವನ್ನು ಈ ಕೃತ್ಯಕ್ಕೆ ಬಳಸಿಲ್ಲ ಎಂಬುದನ್ನು ಸಾಕ್ಷ್ಯಾಧಾರಗಳ ಮುಖಾಂತರ ಸಾಬೀತುಪಡಿಸದೇ ಇರುವುದರಿಂದ ಮತ್ತು ವಾಹನದ ಮಾಲೀಕರು ಅರ್ಜಿ ಸಲ್ಲಿಸಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ತಮ್ಮ ಅಭ್ಯಂತರವಿರುವುದಿಲ್ಲವೆಂದು ತಿಳಿಸಿರುವ ಅಂಶದಿಂದ ವಾಹನದ ಮಾಲೀಕರಿಗೆ ಗೊತ್ತಿದ್ದೇ ಈ ಕೃತ್ಯವನ್ನು ಎಸಗಿರುವ ಅಂಶವು ಸ.ಅ.ನಿ. ವಾದದಿಂದ ಮೇಲ್ನೋಟಕ್ಕೆ ಸಾಬೀತಾಗುವುದರಿಂದ ಅಲ್ಲದೇ ವಾಹನದ ಮಾಲೀಕರಿಗೆ ಸಾಕಷ್ಟು ಸಮಯಾವಕಾಶ ನೀಡಿದಾಗಲೂ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನದ ಮೇಲೆ ಹಕ್ಕು ಸಾಧಿಸದೇ ಇರುವುದರಿಂದ ಅಲ್ಲದೇ ಜಪ್ತಾಗಿರುವ ವಾಹನವು ಇಲಾಖಾ ವಶದಲ್ಲಿಯೇ ಇದ್ದು, ತಟಸ್ಥ ಸ್ಥಿತಿಯಲ್ಲಿ ಹಾಗೆಯೇ ಬಿಟ್ಟಲ್ಲಿ ಪ್ರಕೃತಿಯ ವೈಪರೀತ್ಯಗಳಿಗನುಗುಣವಾಗಿ ಹಾಳಾಗಿ ಸರ್ಕಾರದ ರಾಜಸ್ವಕ್ಕೆ ಧಕ್ಕೆ ಉಂಟಾಗುವ ಸಂಭವವಿರುವುದರಿಂದ ಹಾಗೂ ಮೊಕದ್ದಮೆಯ ಶೀಘ್ರ ವಿಲೇವಾರಿ ದೃಷ್ಟಿಯಿಂದ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ) ಅಡಿಯಲ್ಲಿ ವಶಪಡಿಸಿಕೊಂಡ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ಪ್ರಾಧಿಕಾರಕ್ಕೆ ಮನವರಿಕೆಯಾಗಿರುವುದರಿಂದ ಈ ಕೆಳಕಂಡ ಆದೇಶ.

'ಆದೇಶ'

ಕೆ.ಸಿ. ಹರಿದಾಸ್, ಅಧಿಕಾರಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಆದ ನಾನು ಅಬಕಾರಿ ಉಪ ನಿರೀಕ್ಷಕರು ನಂ. 2 ಜಾ. ಮತ್ತು ತ. ತರೀಕೆರೆ ತಾಲ್ಲೂಕು ಇವರ ಮೊಕದ್ದಮೆ ನಂ. 4/2007–08, ದಿನಾಂಕ: 18–07–2007 ರಲ್ಲಿ ಜಪ್ತುಪಡಿಸಿದ ವಾಹನ ಸಂಖ್ಯೆ: ಕೆ.ಎ. 18 ಇ:8777 ಬಜಾಜ್ ಕವಾಸಕಿ ಮೋಟಾರ್ ಬೈಕ್‌ನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 43 (ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 22ನೇ ಆಗಸ್ಟ್ 2008 ರಂದು ಬೆರಳಚ್ಚುಗಾರರಿಗೆ ಉಖ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚಿಸಿದ ನಂತರ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಯಲ್ಲಿ ಬರುತ್ತದೆ.

ಅಧಿಕಾರಿಯುತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

ಸಂಖ್ಯೆ : ಡಿ.ಟಿ.ಸಿಆರ್. ನಂ.68/2006-07, ದಿನಾಂಕ : 22ನೇ ಆಗಸ್ಟ್, 2008

ಆರಕ್ಷಕ ಉಪ ನಿರೀಕ್ಷಕರು, ಕಳಸ ಪೊಲೀಸ್ ಠಾಣಾ ಮೊಕದ್ದಮೆ ನಂ. 36/2006, ದಿನಾಂಕ: 3-4-2006

ಉಪಸ್ಥಿತರು: ಕೆ.ಸಿ. ಹರಿದಾಸ್, ಅಧಿಕಾರಿಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಫಿರ್ಯಾದುದಾರರು	ಆಪಾದಿತರು
ಆರಕ್ಷಕ ಉಪ ನಿರೀಕ್ಷಕರು	ಎ: 1 ಎಂ.ಆರ್. ಸುರೇಶ್, ಮರಸಣಿಗೆ
ಕಳಸ ಪೊಲೀಸ್ ಠಾಣೆ	ಎ: 2 ತನಿಖೆಯಲ್ಲಿ ತಿಳಿಯಬೇಕಾಗಿದೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 03–04–2006 ರಂದು ಬೆಳಿಗ್ಗೆ 10:30 ಗಂಟೆಗೆ ಆರಕ್ಷಕ ಉಪ ನಿರೀಕ್ಷಕರು, ಕಳಸ ಪೊಲೀಸ್ ಠಾಣೆಯ ಸಿಬ್ಬಂದಿಯವರು ಮೂಡಿಗೆರೆ ತಾಲ್ಲೂಕು ಬಾಳೆಖಾನ್ ಗ್ರಾಮ ಭೇಟಿಗಾಗಿ ಹೋಗುತ್ತಿದ್ದಾಗ ಬಂದ ಖಚಿತ ವರ್ತಮಾನದ ಮೇರೆಗೆ ಮೂಡಿಗೆರೆ ತಾಲ್ಲೂಕು ಕಳಸ ಹೋಬಳಿ, ಕಳಸ ಎಸ್ಟೇಟ್ ಕೆರೆಮನೆ ಕಚ್ಚಿನಹತ್ಲು ರಸ್ತೆಯಲ್ಲಿ ಎಂ.ಆರ್. ಸುರೇಶ್‌ರವರ ಬಾಳೆಖಾನ್ ಕಾಫಿ ತೋಟದಲ್ಲಿರುವ ಉಗ್ರಾಣದ ಮನೆಯ ಹತ್ತಿರ 2 ಜನ ಆಸಾಮಿಗಳು ಭಗನೆ ಸೇಂದಿ ಮಾರಾಟ ಮಾಡುತ್ತಿದ್ದು ನಮ್ಮಗಳ ನೋಡಿದವರು ಓಡಿ ಹೋಗಿರುತ್ತಾರೆ. ಈ ಸಂಬಂಧವಾಗಿ ಸ್ಥಳದಲ್ಲಿದ್ದ ವಾಹನ ಸಂಖ್ಯೆ: ಸಿ.ಟಿ.ಕ್ಯೂ: 3136ರ ಯಮಹ ಆರ್.ಎಕ್ಸ್. 100 ಮೋಟಾರ್ ಸೈಕಲ್‌ನ ಪಕ್ಕದಲ್ಲಿದ್ದ ತಿಳಿ ಹಳದಿ ಬಣ್ಣದ ಪ್ಲಾಸ್ಟಿಕ್ ಕೊಡದಲ್ಲಿ 6 ಲೀಟರ್‌ಗಳಷ್ಟು ಭಗನೆ ಸೇಂದಿ, 20 ಲೀಟರ್ ಸಾಮರ್ಥ್ಯದ ಬಿಳಿ ಪ್ಲಾಸ್ಟಿಕ್ ಕ್ಯಾನ್ ಮತ್ತು ಅಳತೆ ಮಾಡಲು ಮದ್ಯ ಬೀಯರ್ ಬಾಟಲಿಗಳು ಇದ್ದು ಓಡಿ ಹೋದ ಆಸಾಮಿಯ

ಹೆಸರು ಎಂ.ಆರ್. ಸುರೇಶ್ ಎಂಬುದಾಗಿ ತಿಳಿದು ಬಂದಿದ್ದು ಇನ್ನೊಬ್ಬ ಆಸಾಮಿಯ ಹೆಸರು ವಿಳಾಸ ತಿಳಿಯಬೇಕಾಗಿದ್ದು, ಮೇಲ್ಕಾಣಿಸಿರುವ ವಸ್ತುಗಳನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಕರೆತಂದ ನಂತರ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಆರಕ್ಷಕ ಉಪ ನಿರೀಕ್ಷಕರು, ಕಳಸ ಪೊಲೀಸ್ ಠಾಣೆ ಮೂಡಿಗೆರೆ ತಾಲ್ಲೂಕು ಇವರು ಠಾಣಾ ಅಪರಾಧ ಸಂಖ್ಯೆ: 36/2006, ದಿನಾಂಕ: 03-04-2006 ರಂದು ಮೊಕದ್ದಮೆ ದಾಖಲು ಮಾಡಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿ ತನಿಖೆಯನ್ನು ಮುಂದುವರೆಸಿ ಪ್ರಕರಣದಲ್ಲಿ ಜಪ್ತುಪಡಿಸಿದ ಸ್ವತ್ತುಗಳನ್ನು ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಮೂಡಿಗೆರೆ ತಾಲ್ಲೂಕು ಇವರಿಗೆ ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ವಾಹನ ಹಾಗೂ ಮದ್ಯಕ್ಕೆ ಸಂಬಂಧಿಸಿದಂತೆ ಈ ಪ್ರಾಧಿಕಾರವು ಮುಟ್ಟುಗೋಲಿನ ನಡವಳಿಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ಪ್ರಾರಂಭಿಸಿ ಆಪಾದಿತರಿಗೆ / ವಾಹನದ ಮಾಲೀಕರಿಗೆ ಕಲಂ 43 (ಬಿ) ಅಡಿಯಲ್ಲಿ ನೋಟಿಸ್ ಜಾರಿ ಮಾಡಲು ಕ್ರಮ ಕೈಗೊಂಡು ವಾಹನದ ಮಾಲೀಕತ್ವದ ಹಾಗೂ ಮೌಲ್ಯದ ವಿವರಗಳನ್ನು ನೀಡುವಂತೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಮುಟ್ಟುಗೋಲಿನ ನಡವಳಿಗಳನ್ನು ಮುಂದುವರೆಸಲಾಗಿತ್ತು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿವಮೊಗ್ಗ ಇವರು ದಿನಾಂಕ: 02-06-2008 ರಂದು ನೀಡಿರುವ 'ಬಿ' ವರದಿಯ ಪ್ರಕಾರ ಶ್ರೀ ರಜನೀಶ .ಕೆ ಜಾನ್ ಇಂಪಿರಿಯಲ್ ಟಯರ್ಸ್ ಬಿ.ಹೆಚ್. ರೋಡ್, ಭದ್ರಾವತಿ ಇವರು ವಾಹನದ ಮಾಲೀಕರೆಂದು ತಿಳಿದುಬಂದಿರುತ್ತದೆ.

ವಾಹನದ ಮಾಲೀಕರಿಗೆ ದಿನಾಂಕ: 18-06-2008 ರಂದು ಕಲಂ 43 (ಬಿ) ಅಡಿಯಲ್ಲಿ ನೋಟಿಸ್‌ನ್ನು ನೋಂದಾಯಿತ ಅಂಚೆ ಮೂಲಕ ಜಾರಿ ಮಾಡಲು ಕ್ರಮ ಕೈಗೊಂಡಿದ್ದು, ನೋಟಿಸ್ ಈ ಪ್ರಾಧಿಕಾರಕ್ಕೆ "No such address" ಎಂಬ ಷರಾದೊಂದಿಗೆ ಮರಳಿ ಬಂದಿರುತ್ತದೆ. ಮುಂದುವರೆದು ನೋಟಿಸ್‌ನ್ನು ತನಿಖಾಧಿಕಾರಿಗಳ ಮುಖಾಂತರ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿ ದಿನಾಂಕ: 30-06-2008 ರಂದು ವಾಹನದ ಮಾಲೀಕರಿಗೆ ಜಾರಿಗೊಳಿಸಿ ಸ್ವೀಕೃತಿ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸ.ಅ.ನಿ. ರವರ ವಾದವನ್ನು ಆಲಿಸಿದ್ದು, ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತಮ್ಮ ವಾದ ಮಂಡಿಸಿರುತ್ತಾರೆ.

ಮೊಕದ್ದಮೆಯು ದಾಖಲಾಗಿ 2 ವರ್ಷ 4 ತಿಂಗಳುಗಳು ಕಳೆದಿದ್ದು ವಾಹನದ ಮಾಲೀಕರು ವಾಹವನ್ನು ಈ ಕೃತ್ಯಕ್ಕೆ ಬಳಸಿಲ್ಲ ಎಂಬುದನ್ನು ಸಾಕ್ಷ್ಯಾಧಾರಗಳ ಮುಖಾಂತರ ಪ್ರಾಧಿಕಾರದ ಮುಂದೆ ಇದುವರೆವಿಗೂ ತಾವಾಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರವಾಗಲಿ ಹಾಜರಾಗಿ ಸಾಬೀತುಪಡಿಸದೇ ಇರುವುದರಿಂದ ಹಾಗೂ ವಾಹನದ ಮಾಲೀಕರಿಗೆ ಗೊತ್ತಿದ್ದೆ ಈ ಕೃತ್ಯ ನಡೆದಿರುವುದರಿಂದಲೇ ವಾಹನದ ಮಾಲೀಕರಿಗೆ ಕಲಂ 43 (ಬಿ) ನೋಟೀಸ್‌ಗೆ ಸಮಜಾಯಿಷಿ ನೀಡಲು ಸಾಕಷ್ಟು ಸಮಯಾವಕಾಶ ನೀಡಿದಾಗಲೂ ವಾಹನದ ಬಗ್ಗೆ ಯಾವುದೇ ಆಸಕ್ತಿ ತೋರಿಸದೇ ಇರುವ ಅಂಶವು ಸ.ಅ.ನಿ. ವಾದದಿಂದ ಮೇಲ್ನೋಟಕ್ಕೆ ಸಾಬೀತಾಗುವುದರಿಂದ ಅಲ್ಲದೇ ವಾಹನದ ಮಾಲೀಕರಿಗೆ ಸಾಕಷ್ಟು ಸಮಯಾವಕಾಶ ನೀಡಿದಾಗಲೂ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನದ ಮೇಲೆ ಹಕ್ಕು ಸಾಧಿಸದೇ ಇರುವುದರಿಂದ ಅಲ್ಲದೆ ಜಪ್ತಾಗಿರುವ ವಾಹನವು ಇಲಾಖಾ ವಶದಲ್ಲಿಯೇ ಇದ್ದು, ತಟಸ್ಥ ಸ್ಥಿತಿಯಲ್ಲಿ ಹಾಗೆಯೇ ಬಿಟ್ಟಲ್ಲಿ ಪ್ರಕೃತಿಯ ವೈಪರೀತ್ಯಗಳಿಗನುಗುಣವಾಗಿ ಹಾಳಾಗಿ ಸರ್ಕಾರದ ರಾಜಸ್ವಕ್ಕೆ ಧಕ್ಕೆ ಉಂಟಾಗುವ ಸಂಭವವಿರುವುದರಿಂದ ಹಾಗೂ ಮೊಕದ್ದಮೆಯ ಶೀಘ್ರ ವಿಲೇವಾರಿ ದೃಷ್ಟಿಯಿಂದ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ) ಅಡಿಯಲ್ಲಿ ವಶಪಡಿಸಿಕೊಂಡ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ಪ್ರಾಧಿಕಾರಕ್ಕೆ ಮನವರಿಕೆಯಾಗಿರುವುದರಿಂದ ಈ ಕೆಳಕಂಡ ಆದೇಶ

"ಆದೇಶ"

ಕೆ.ಸಿ. ಹರಿದಾಸ್, ಅಧಿಕಾರಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಆದ ನಾನು ಆರಕ್ಷಕ ಉಪ ನಿರೀಕ್ಷಕರು ಕಳಸ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 36/2006 ದಿನಾಂಕ: 03-04-2006 ರಲ್ಲಿ ಜಪ್ತುಪಡಿಸಿದ ವಾಹನ ಸಂಖ್ಯೆ: ಸಿ.ಟಿ.ಕ್ಯೂ. 3136ರ ಯಮಹ ಆರ್‌ಎಕ್ಸ್ 100 ಮೋಟಾರ್ ಬೈಕ್‌ನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 43 (ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 22ನೇ ಆಗಸ್ಟ್ 2008 ರಂದು ಬೆರಳಚ್ಚುಗಾರರಿಗೆ ಉಖ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚಿಸಿದ ನಂತರ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಯಲ್ಲಿ ಬರುತ್ತದೆ.

ಅಧಿಕಾರಿಯುತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

ಅಧಿಕಾರಿಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ : ಡಿ.ಟಿ.ಸಿಆರ್. ನಂ.51/2007-08, ದಿನಾಂಕ : 22ನೇ ಆಗಸ್ಟ್, 2008

ಇ ಅಂಡ್ ಐ/ಟಿಕೆಆರ್/ಟಿಕ್ಯೂ/ಎಸ್ಐಇ:2/ಪ್ರ.ವ.ವ. ನಂ. 7/2007-08, ದಿನಾಂಕ: 16-08-2007

ಉಪಸ್ಥಿತರು: ಕೆ.ಸಿ. ಪರಿದಾಸ್, ಅಧಿಕಾರಿಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಫಿರ್ಯಾದುದಾರರು	ಆಪಾದಿತರು
ಅಬಕಾರಿ ಉಪ ನಿರೀಕ್ಷಕರು ಜಾರಿ ಮತ್ತು ತನಿಖೆ ತರೀಕೆರೆ ತಾಲ್ಲೂಕು	ಎ: 1 ಮಣಿ ಮುರುಗನ್ ಬಿನ್ ಕಣ್ಣಪ್ಪ, ತಮಿಳು ಜನಾಂಗ, ಸಿದ್ದಿಪುರ ಗ್ರಾಮ ಕರಕುಚ್ಚಿ ಅಂಚೆ, ತರೀಕೆರೆ ತಾಲ್ಲೂಕು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 16-08-2007 ರಂದು ಮಧ್ಯಾಹ್ನ ಸುಮಾರು 1:15 ಗಂಟೆಯ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು ತಮ್ಮ ಸಿಬ್ಬಂದಿಯೊಂದಿಗೆ ಎಂ.ಸಿ. ಹಳ್ಳಿ - ಹುರುಳಿಬಾರೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ದೊರೆತ ಖಚಿತ ವರ್ತಮಾನದ ಮೇರೆಗೆ ಪಂಚಾಯ್ತಿದಾರರೊಂದಿಗೆ ಗಸ್ತು ಮಾಡುತ್ತಿದ್ದಾಗ ಒಬ್ಬ ಆಸಾಮಿಯು ಒಂದು ಟಿ.ವಿ.ಎಸ್.-50 ವಾಹನ ಸಂಖ್ಯೆ: ಕೆ.ಎ. 14-ಹೆಚ್:1961 ಮೋಟಾರ್ ಸೈಕಲ್‌ನಲ್ಲಿ ಬರುತ್ತಿರುವುದನ್ನು ಕಂಡು, ತಡೆದು ನಿಲ್ಲಿಸಿ ಪರಿಶೀಲಿಸಿದಾಗ ಒಂದು ವಿಮಲ್ ಗುಟ್ಕಾ ಚೀಲದಲ್ಲಿ 180 ಮಿಲಿಯ 20 ಸೀಸೆ ಸೂಪರ್ ಜಾಕ್ ವಿಸ್ಕಿ ಹಾಗೂ 180 ಮಿಲಿಯ 10 ಸೀಸೆ ಕ್ಯಾಪ್ಟನ್ ಮಾರ್ಟಿನ್ ವಿಸ್ಕಿ ಇರುವುದು ಕಂಡು ಬಂದಿದ್ದು, ಇವುಗಳ ಸಾಗಾಣಿಕೆ ಬಗ್ಗೆ ವಾಹನ ಚಾಲನೆ ಮಾಡುತ್ತಿದ್ದ ವ್ಯಕ್ತಿ ಮಣಿಮುರುಗನ್ ಬಿನ್ ಕಣ್ಣಪ್ಪ, 25 ವರ್ಷ, ತಮಿಳು ಜನಾಂಗ, ಅಂಗಡಿ ವ್ಯಾಪಾರ ಕೆಲಸ ಸಿದ್ದಿಪುರ ಗ್ರಾಮ ವಾಸ, ಕರಕುಚ್ಚಿ ಗ್ರಾಮ, ತರೀಕೆರೆ ತಾಲ್ಲೂಕು ಇವರು ಯಾವುದೇ ರಹದಾರಿ ಹಾಜರುಪಡಿಸದೇ ಇದ್ದುದರಿಂದ ಅಕ್ರಮವಾದುದೆಂದು ದೃಢಪಡಿಸಿಕೊಂಡು ದೊರೆತ ಮದ್ಯವನ್ನು ವಾಹನದೊಂದಿಗೆ ಸರ್ಕಾರದ ವಶಕ್ಕೆ ಅಮಾನತ್ತುಪಡಿಸಿಕೊಂಡು ಆರೋಪಿಯನ್ನು ದಸ್ತಗಿರಿಗೊಳಿಸಿ, ಆರೋಪಿ ವಿರುದ್ಧ ಪ್ರ.ವ.ವ. ನಂ.2/2007-08ರಲ್ಲಿ ಮೊಕದ್ದಮೆಯನ್ನು ದಾಖಲಿಸಿ, ಪ್ರ.ವ.ವ.ನ್ನು ಘನ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೂ ಸಲ್ಲಿಸಿ, ತನಿಖೆಯನ್ನು ಮುಂದುವರೆಸಿರುತ್ತಾರೆ.

ವಶಪಡಿಸಿಕೊಂಡ ವಾಹನ ಹಾಗೂ ಮದ್ಯಕ್ಕೆ ಸಂಬಂಧಿಸಿದಂತೆ ಈ ಪ್ರಾಧಿಕಾರವು ಮುಟ್ಟುಗೋಲಿನ ನಡವಳಿಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ಪ್ರಾರಂಭಿಸಿ ಆಪಾದಿತರಿಗೆ / ವಾಹನದ ಮಾಲೀಕರಿಗೆ ಕಲಂ 43 (ಬಿ) ಅಡಿಯಲ್ಲಿ ನೋಟಿಸ್ ಜಾರಿ ಮಾಡಲು ಕ್ರಮ ಕೈಗೊಂಡು ವಾಹನದ ಮಾಲೀಕತ್ವದ ಹಾಗೂ ಮೌಲ್ಯದ ವಿವರಗಳನ್ನು ನೀಡುವಂತೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಮುಟ್ಟುಗೋಲಿನ ನಡವಳಿಗಳನ್ನು ಮುಂದುವರೆಸಲಾಗಿತ್ತು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರು ನೀಡಿರುವ 'ಬಿ' ವರದಿಯ ಪ್ರಕಾರ ಶ್ರೀ ನಾರಾಯಣ ಪಿ. ಶೇಟ್ ಬಿನ್ ಗುರು ಶೇಟ್, ಹೆಚ್. ಸಿದ್ದಯ್ಯ ರೋಡ್, ಶಿವಮೊಗ್ಗ ಇವರು ವಾಹನದ ಮಾಲೀಕರೆಂದು ತಿಳಿದುಬಂದಿರುತ್ತದೆ.

ವಾಹನದ ಮಾಲೀಕರಿಗೆ ಕಲಂ 43 (ಬಿ) ಅಡಿಯಲ್ಲಿ ನೋಂದಾಯಿತ ಅಂಚೆ ಮೂಲಕ ನೀಡಲಾದ ನೋಟೀಸ್ ಜಾರಿಯಾಗದೇ ಈ ಪ್ರಾಧಿಕಾರಕ್ಕೆ ಮರಳಿ ಬಂದಿದ್ದು, ಮುಂದುವರೆದು ವಾಹನದ ಮಾಲೀಕರಿಗೆ ನೋಟಿಸ್‌ನ್ನು ತನಿಖಾಧಿಕಾರಿಗಳ ಮುಖಾಂತರ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿ, ವಾಸ ಸ್ಥಳ ತಿಳಿದು ಬಂದಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ.ಅ.ನಿ. ರವರ ವಾದವನ್ನು ಆಲಿಸಿದ್ದು, ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತಮ್ಮ ವಾದ ಮಂಡಿಸಿರುತ್ತಾರೆ.

ಮೊಕದ್ದಮೆಯು ದಾಖಲಾಗಿ 1 ವರ್ಷ ಕಳೆದಿದ್ದು ವಾಹನದ ಮಾಲೀಕರು ವಾಹನವನ್ನು ಈ ಕೃತ್ಯಕ್ಕೆ ಬಳಸಿಲ್ಲ ಎಂಬುದನ್ನು ಸಾಕ್ಷ್ಯಾಧಾರಗಳ ಮುಖಾಂತರ ಪ್ರಾಧಿಕಾರದ ಮುಂದೆ ಇದುವರೆವಿಗೂ ತಾವಾಗಲೀ ಅಥವಾ ತಮ್ಮ ನ್ಯಾಯಾವಾದಿಗಳ ಮುಖಾಂತರವಾಗಲಿ ಹಾಜರಾಗಿ ಸಾಬೀತುಪಡಿಸದೇ ಇರುವುದರಿಂದ ಹಾಗೂ ವಾಹನದ ಮಾಲೀಕರಿಗೆ ಗೊತ್ತಿದ್ದೆ ಈ ಕೃತ್ಯ ನಡೆದಿರುವುದರಿಂದಲೇ ವಾಹನದ ಮಾಲೀಕರು ವಾಹನದ ಬಗ್ಗೆ ಯಾವುದೇ ಆಸಕ್ತಿ ತೋರಿಸದೆ ಇರುವ ಅಂಶವು ಸ.ಅ.ನಿ. ವಾದದಿಂದ ಮೇಲ್ನೋಟಕ್ಕೆ ಸಾಬೀತಾಗುವುದರಿಂದ ಅಲ್ಲದೇ ವಾಹನದ ಮಾಲೀಕರಿಗೆ ಸಾಕಷ್ಟು ಸಮಯಾವಕಾಶ ನೀಡಿದಾಗಲೂ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನದ ಮೇಲೆ ಹಕ್ಕು ಸಾಧಿಸದೇ ಇರುವುದರಿಂದ ಅಲ್ಲದೆ ಜಪ್ತಾಗಿರುವ ವಾಹನವು ಇಲಾಖಾ ವಶದಲ್ಲಿಯೇ ಇದ್ದು, ತಟಸ್ಥ ಸ್ಥಿತಿಯಲ್ಲಿ ಹಾಗೆಯೇ ಬಿಟ್ಟಲ್ಲಿ ಪ್ರಕೃತಿಯ ವೈಪರೀತ್ಯಗಳಿಗನುಗುಣವಾಗಿ ಹಾಳಾಗಿ ಸರ್ಕಾರದ ರಾಜಸ್ವಕ್ಕೆ ಧಕ್ಕೆ ಉಂಟಾಗುವ ಸಂಭವವಿರುವುದರಿಂದ ಹಾಗೂ ಮೊಕದ್ದಮೆಯ ಶೀಘ್ರ ವಿಲೇವಾರಿ ದೃಷ್ಟಿಯಿಂದ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ) ಅಡಿಯಲ್ಲಿ ವಶಪಡಿಸಿಕೊಂಡ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ಪ್ರಾಧಿಕಾರಕ್ಕೆ ಮನವರಿಕೆಯಾಗಿರುವುದರಿಂದ ಈ ಕೆಳಕಂಡ ಆದೇಶ.

'ಆದೇಶ'

ಕೆ.ಸಿ. ಹರಿದಾಸ್, ಅಧಿಕಾರಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಆದ ನಾನು ಅಬಕಾರಿ ಸಬ್ ಇನ್ಸ್‌ಪೆಕ್ಟರ್ ನಂ. 2, ಇ ಅಂಡ್ ಐ ತರೀಕೆರೆ ಇವರ ಪ್ರ.ವ.ವ. ನಂ. 7/2007-08, ದಿನಾಂಕ : 16-08-2007 ರಲ್ಲಿ

ವಶಪಡಿಸಿಕೊಂಡ ವಾಹನ ಸಂಖ್ಯೆ : ಕೆ.ಎ. 14 – ಹೆಚ್ : 1961 ರ ಟಿ.ವಿ.ಎಸ್. 50 ಮೋಟಾರ್ ಸೈಕಲ್ ಅನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 43 (ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 22ನೇ ಆಗಸ್ಟ್ 2008 ರಂದು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚಿಸಿದ ನಂತರ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಯಲ್ಲಿ ಬರುತ್ತದೆ.

ಅಧಿಕಾರಿಯುತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

ಪಿಆರ್.1043

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಪಂಚಾಯತ್ ಇಂಜಿನೀಯರಿಂಗ್ ಉಪ–ವಿಭಾಗ, ಹಿರೇಕೆರೂರ
ಸಂ : ಸಕಾನಿಇಂ/ಪಂರಾಇ/ಮಾಹಾ/2007–08, ದಿನಾಂಕ, 7ನೇ ಫೆಬ್ರವರಿ, 2008

2005ರ ಮಾಹಿತಿ ಹಕ್ಕು ಅದಿನಿಯಮ (2005ರ ಕೇಂದ್ರ ಕಾಯ್ದೆ 22) ರ ಅಡಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರ ಕಛೇರಿಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸಿ ಸದರೀ ಅಧಿನಿಯಮದ ಸೆಕ್ಷನ್–5(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಅಧಿಕಾರಿಗಳನ್ನು "ಸಾರ್ವಜನಿಕ ಮಾಹಿತಿ ಅಧಿಕಾರಿ" ಮತ್ತು ಸೆಕ್ಷನ್ 5 (2) ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸೆಕ್ಷನ್–19(1)ರಡಿಯಲ್ಲಿ "ಮೇಲ್ಮನವಿ ಪ್ರಾಧಿಕಾರ" ಎಂದು ನೇಮಕ ಮಾಡಲಾಗಿದೆ.

ಕ್ರ. ಸಂ.	ಕಛೇರಿ ಮತ್ತು ಪೂರ್ಣ ವಿಳಾಸ	ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1)	ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಸೆಕ್ಷನ್ 5 (2)	ಮೇಲ್ಮನವಿ ಪ್ರಾಧಿಕಾರ ಸೆಕ್ಷನ್ 19 (1)
1	ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರ	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರ	ಕಿರಿಯ ಇಂಜಿನೀಯರ್ (ಸೇವೆಯಲ್ಲಿ ಹಿರಿಯರು) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರ	ಕಾರ್ಯ ನಿರ್ವಾಹಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ

ವಿ.ಕೆ. ಟಿಕಾರೆ
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್
ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರ

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಭಾರತ ಸರ್ಕಾರ)
ಕರ್ನಾಟಕ ಸರ್ಕಾರ
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರ

ಕೈಪಿಡಿ 1 : ಸಂಸ್ಥೆಯ ವಿವರಗಳು ಮತ್ತು ಕರ್ತವ್ಯ ಮತ್ತು ವಿಧಿಗಳು

ಕರ್ನಾಟಕ ರಾಜ್ಯದಲ್ಲಿನ ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ ವ್ಯಾಪ್ತಿಯ ರಸ್ತೆಗಳ ನಿರ್ಮಾಣ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳನ್ನು ಮತ್ತು ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಸರ್ಕಾರಿ ಕಛೇರಿ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ ಕೆಲಸಗಳನ್ನು ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಿರ್ವಹಿಸುವ ದೃಷ್ಠಿಯಿಂದ 01/07/1987 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಉಪ–ವಿಭಾಗ ಭೌಗೋಳಿಕ ವಿಸ್ತೀರ್ಣವು ಚದರ ಕಿ.ಮೀ. ಇರುತ್ತದೆ ಮತ್ತು 2001 ರ ಜನಗಣತಿಯ ಪ್ರಕಾರ 196482 ಜನಸಂಖ್ಯೆ ಇರುತ್ತದೆ. ಈ ಉಪ–ವಿಭಾಗವು ಕಾರ್ಯನಿರ್ವಾಹಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ ಅಧೀಕ್ಷಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ ಧಾರವಾಡ ವೃತ್ತ, ಧಾರವಾಡ ಹಾಗೂ ಮುಖ್ಯ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ ಬೆಂಗಳೂರು ಇವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿದೆ. ಈ ಉಪ–ವಿಭಾಗದಡಿಯಲ್ಲಿ

2007–08 ರ ಪ್ರಕಾರ ರಸ್ತೆ ಮತ್ತು ಸೇತುವೆ ಮತ್ತು ಕಟ್ಟಡಗಳ ವಿವರ ಹಾಗೂ ಕುಡಿಯುವ ನೀರಿನ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಅ) ರಸ್ತೆ

1) ಗ್ರಾಮೀಣ ರಸ್ತೆಗಳು ಕಿ.ಮೀ. 372.40

ಬ) ಸೇತುವೆಗಳು

1) ಸಣ್ಣ ಸೇತುವೆಗಳು 300

2) ಅಡ್ಡ ಮೋರಿಗಳು 700

ಕ) ಕಟ್ಟಡಗಳು

1) ಮುಖ್ಯ ಕಟ್ಟಡಗಳು 13

2) ಸಣ್ಣ ಕಟ್ಟಡಗಳು –

ಡ) ಕುಡಿಯುವ ನೀರು

1) ನೀರು ಸರಬರಾಜು ಯೋಜನೆಗಳು ನಂ. 101

2) ಕಿರುನೀರು ಸರಬರಾಜು ಯೋಜನೆಗಳು ನಂ. 145

3) ಕೈಪಂಪು ಕೊಳವೆ ಬಾವಿಗಳು ನಂ. 374

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಇವರು ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ 4 ಶಾಖೆಗಳು ಕಾರ್ಯನಿರ್ವಹಿಸುತ್ತವೆ.

1) ತಾಂತ್ರಿಕ ಶಾಖೆ

2) ಆಡಳಿತ ಶಾಖೆ

3) ಲೆಕ್ಕ ಶಾಖೆ

4) ಉಗ್ರಾಣ ಶಾಖೆ

1) ತಾಂತ್ರಿಕ ಶಾಖೆ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಈ ಉಪವಿಭಾಗ ಕಾರ್ಯಾಲಯ ತಾಂತ್ರಿಕ ವಿಷಯಗಳಿಗೆ ಸಂಬಂಧಪಟ್ಟ ಎಲ್ಲ ಕಾರ್ಯಗಳ ಕಾರ್ಯಭಾರವನ್ನು ಹೊಂದಿದ್ದು ಇವರ ಸಹಾಯಕ್ಕಾಗಿ ಸ.ಇಂ–02 ಕಿ.ಇಂ–05 ಅದರಲ್ಲಿ ಸ.ಇಂ. ಹುದ್ದೆ ಖಾಲಿ ಇರುತ್ತದೆ ಕೆಲಸ ನಿರೀಕ್ಷಕರು 05 ಕಾರ್ಯನಿರ್ವಹಿಸುತ್ತಾರೆ.

1) ಉದ್ದೇಶಿಸುವ ರಸ್ತೆ ಸೇತುವೆ ಮತ್ತು ಕಟ್ಟಡ ಕಾಮಗಾರಿಗಳ ನಿರ್ಮಾಣ ಹಾಗೂ ನಿರ್ವಹಣೆ ಹಾಗೂ ಪರಿವೀಕ್ಷಣೆ ಹಾಗೂ ತಾಂತ್ರಿಕವಾಗಿ ಪರಿಶೀಲಿಸುವುದು.

2) ಅಂದಾಜು ಪಟ್ಟಿ ಹಾಗೂ ವಿನ್ಯಾಸಗಳನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ಹಾಗೂ ತಾಂತ್ರಿಕ ಮಂಜೂರಾತಿಗಾಗಿ ವಿಭಾಗ ಕಛೇರಿಗೆ ಸಲ್ಲಿಸುವುದು.

3) ಯೋಜನೆಗಳ ಅನುಷ್ಠಾನದ ಪ್ರಗತಿ ಪತ್ರಿಕೆಗಳನ್ನು ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸುವುದು.

4) ಎಂ.ಎಂ.ಆರ್ ಮತ್ತು ಕೆ.ಡಿ.ಪಿ. ಸಭೆಗಳಿಗೆ ಪ್ರಗತಿ ವರದಿ ತಯಾರಿಸುವುದು.

5) ಕಾಮಗಾರಿಗಳ ಕಾರ್ಯಕ್ರಮ ಪಟ್ಟಿ ತಯಾರಿಸುವುದು ಹಾಗೂ ಅನುಮೋದನೆ ಪಡೆಯುವುದು.

6) ತಾಲ್ಲೂಕು ಮಟ್ಟದ ಕೆ.ಡಿ.ಪಿ. ಸಭೆಗೆ ಪ್ರಗತಿ ವರದಿ ತಯಾರಿಸಿ ಹಾಗೂ ಹಾಜರಾಗುವುದು.

7) ಯೋಜನೆಗಳ ನಿರ್ಮಾಣದ ಪಾವತಿಗಳನ್ನು ನಮೂದಿಸಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸುವುದು.

2) ಆಡಳಿತ ಶಾಖೆ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪ ವಿಭಾಗ, ಹಿರೇಕೆರೂರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳು ಒಟ್ಟು 27 ಹಾಗೂ ಹೆಚ್ಚುವರಿ ಸೂಪರ್‌ನ್ಯೂಮರರಿ ಹುದ್ದೆಗಳು 2 ಒಟ್ಟು 29 ಹುದ್ದೆಗಳು ಇದ್ದು, ಅವುಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ 27 ಹಾಗೂ ಹೆಚ್ಚುವರಿ ಹುದ್ದೆಗಳಲ್ಲಿ 2 ಒಟ್ಟು 29 ಜನ ಸಿಬ್ಬಂದಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಖ್ಯೆಗಳ ಪೈಕಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ವರ್ಗ ಎ–1 ಸಿ–14 ಮತ್ತು ಡಿ–3 ಮಂಜೂರಾದ ಹುದ್ದೆಗಳಲ್ಲಿದ್ದರೆ ಹೆಚ್ಚುವರಿ ಹಾಗೂ ಸೂಪರ್‌ನ್ಯೂಮರರಿ ಹುದ್ದೆಯಲ್ಲಿ ಸಿ–2 ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆಡಳಿತ ಶಾಖೆಯಲ್ಲಿ ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದು ಇವರಲ್ಲಿ ಒಬ್ಬರು ಆಡಳಿತಕ್ಕೆ ಸಂಬಂಧಪಟ್ಟಂತೆ ನೌಕರರ ಸೇವಾ ವಿವರಗಳು ಹಾಗೂ ಸಿಬ್ಬಂದಿ ವೇತನಬಿಲ್ಲು, ವಿದ್ಯುತ್‌ಚ್ಛಕ್ತಿ ಮತ್ತು ದೂರವಾಣಿ ಬಿಲ್ಲು ಹಾಗೂ ಸದರಿ ನೌಕರರ ರಜೆ ಇತ್ಯಾದಿಗಳು ನಿರ್ವಹಣೆ ಮತ್ತು ಸಿಬ್ಬಂದಿಗೆ ಸಂಬಂಧಪಟ್ಟ ನಿಯತಕಾಲಿಕೆಗಳನ್ನು ಸಲ್ಲಿಸುವ ಕಾರ್ಯಗಳನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಇವರ ಆದೇಶಗಳ ಮೇರೆಗೆ ಕಾರ್ಯನಿರ್ವಹಿಸುತ್ತಾರೆ. ಈ ಆಡಳಿತ ಶಾಖೆಯಲ್ಲಿ ನಿರ್ವಹಿಸುವ ಸಂಕ್ಷಿಪ್ತ ಕೆಲಸಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

1. ಆಡಳಿತ ಶಾಖೆಯ ಆಡಳಿತಕ್ಕೆ ಸಂಬಂಧಪಟ್ಟಂತೆ ನೌಕರರ ಸೇವಾ ವಿವರಗಳು ಹಾಗೂ ಬಡ್ತಿಗಳು ಮತ್ತು ನಿವೃತ್ತಿ, ಪಿಂಚಣಿ ರಜೆ ವಗೈರೆಗಳಿಗೆ ದಾಖಲೆಗಳನ್ನು ಸಲ್ಲಿಸುವುದು, ಮತ್ತು ನಿರ್ವಹಿಸುವುದು.

2. ಸಿಬ್ಬಂದಿ ವರ್ಗದ ವೇತನ ಬಿಲ್ಲುಗಳನ್ನು ಹಾಗೂ ಸಾದಿಲ್ವಾರು ಬಿಲ್ಲುಗಳನ್ನು ಸಿದ್ಧಪಡಿಸುವುದು ಮತ್ತು ಸಂಬಂಧ ಪಟ್ಟಂತೆ ಅನುದಾನ ವಗ್ಯೆರೆಗಳನ್ನು ಬಿಲ್ಲುಗಳಿಗೆ ಸಕ್ಷಮ ಅಧಿಕಾರಿಗೆ ಅನುಮೋದನೆ ಪಡೆದ ನಂತರವೇ ನಗದೀಕರಣಕ್ಕೆ ಸಲ್ಲಿಸುವುದು.
3. ನೌಕರರ ವಾರ್ಷಿಕ ವರದಿಗಳಾದ ಆಸ್ತಿ ಮತ್ತು ಹೊಣೆಗಾರಿಕೆ ಹಾಗೂ ಕಾರ್ಯನಿರ್ವಹಣಾ ವರದಿಗಳನ್ನು ನೌಕರರಿಂದ ಪಡೆದು ಮೇಲಾಧಿಕಾರಿಗಳ ಅವಗಾಹನೆಗೆಗಾಗಿ ಸಲ್ಲಿಸುವುದು.
4. ಆಡಳಿತಕ್ಕೆ ಸಂಬಂಧಿಸಿದಂತೆ ಉಪವಿಭಾಗದ ಆಯವ್ಯಯ ಅಂದಾಜು ಪಟ್ಟಿಯ ವಿವರಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಸಿದ್ಧಪಡಿಸುವುದು. ಹಾಗೂ ರವಾನೆ ಮತ್ತು ಸ್ವೀಕೃತಿ ಹಾಗೂ ಅಂಚೆ ಚೀಟಿ ದಾಸ್ತಾನು ನಿರ್ವಹಣೆ ನಿರ್ವಹಿಸುತ್ತಾರೆ.

3) ಲೆಕ್ಕ ಪತ್ರ ಶಾಖೆ :- ಈ ಶಾಖೆಯಲ್ಲಿ ಒಬ್ಬ ಪ್ರಥಮ ದರ್ಜೆ ಸಹಾಯಕರು ಕೆಲಸ ನಿರ್ವಹಿಸುತ್ತಾರೆ. ಉಪವಿಭಾಗಕ್ಕೆ ಸಂಬಂಧ ಪಟ್ಟಂತೆ ಕಾಮಗಾರಿಗಳ ನಗದು ಪುಸ್ತಕಗಳ ನಿರ್ವಹಣೆ, ಬಾಕಿ ಬಿಲ್ಲುಗಳ ಪರಿಶೀಲನೆಯೊಂದಿಗೆ ವಿಭಾಗ ಕಛೇರಿಗೆ ಸಲ್ಲಿಸುವುದು. ಹಣ ಭರವಸೆ ಮತ್ತು ಬೇಡಿಕೆ ಪತ್ರ ಸಲ್ಲಿಸುವುದು, ಇದಲ್ಲದೇ ಲೆಕ್ಕ ಪತ್ರ ಶಾಖೆಗೆ ಸಂಬಂಧಿಸಿದ ಎಲ್ಲ ಪತ್ರ ವ್ಯವಹಾರಗಳನ್ನು ನಿರ್ವಹಿಸುವುದು.

4) ಉಗ್ರಾಣ ಶಾಖೆ :- ಈ ಶಾಖೆಯಲ್ಲಿ ಒಬ್ಬ ದ್ವಿತೀಯ ದರ್ಜೆ ಸಹಾಯಕರು ಕೆಲಸ ನಿರ್ವಹಿಸುತ್ತಿದ್ದಾರೆ. ದಾಸ್ತಾನು ಸಾಮಗ್ರಿಗಳ ಹಾಗೂ ಯಂತ್ರೋಪಕರಣ ಸಾಮಗ್ರಿಗಳು ಹಾಗೂ ಸ್ಥಿರ ಸಾಮಗ್ರಿಗಳ ಪತ್ರ ವ್ಯವಹಾರ ಹಾಗೂ ಅವಶ್ಯವಿದ್ದಲ್ಲಿ ವಿಭಾಗ ಕಛೇರಿಗೆ ಬೇಡಿಕೆ ಪತ್ರ ಸಲ್ಲಿಸುವುದು. ಕಛೇರಿಗೆ ಅವಶ್ಯವಿರುವ ಲೇಖನಿ ಸಾಮಗ್ರಿಗಳನ್ನು ಖರೀದಿಸುವುದು. ನಿರುಪಯುಕ್ತ ಸಾಮಗ್ರಿಗಳ ಬಗ್ಗೆ ಸರ್ವೆ ವರದಿಗಳನ್ನು ಸಲ್ಲಿಸುವುದು ಉಗ್ರಾಣಕ್ಕೆ ಸಂಬಂಧ ಪಟ್ಟ ಲೆಕ್ಕ ಪತ್ರ ಮಾಹಿತಿಗಳನ್ನು ವಿಭಾಗ ಕಛೇರಿಗೆ ಸಲ್ಲಿಸುವುದು.

ಕೈಪಿಡಿ :- 2) ಸಂಸ್ಥೆಯ ಅಧಿಕಾರ ಮತ್ತು ಸಿಬ್ಬಂದಿ ವರ್ಗದ ಅಧಿಕಾರ ಮತ್ತು ವಿಧಿಗಳ ವಿವರ.

ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರರ ಕಾರ್ಯಭಾರ ಈ ಕೆಳಗಿನಂತಿವೆ.

1. ಕಾಮಗಾರಿಗಳ ಅಳತೆಗಳನ್ನು ಪರಿಶೀಲನೆ ಮಾಡುವುದು.
2. ಮೇಲಾಧಿಕಾರಿಗಳ ತಪಾಸಣೆಯ ಟಿಪ್ಪಣಿಗಳಿಗೆ ಅನುಸರಣಾ ವರದಿ ಸಲ್ಲಿಸುವುದು.
3. ಉಪವಿಭಾಗದ ಸಿಬ್ಬಂದಿ ವಿಷಯ, ಲೆಕ್ಕ ಪತ್ರ ವಿಷಯ, ತಾಂತ್ರಿಕ ವಿಷಯ ಹಾಗೂ ಉಗ್ರಾಣ ವಿಷಯಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಿರ್ವಹಿಸುವಲ್ಲಿ ಜವಾಬ್ದಾರರಾಗಿರುತ್ತಾರೆ.
4. ಉಪವಿಭಾಗದಲ್ಲಿ ಸಹಾಯಕ ಇಂಜಿನೀಯರರು, ಕಿರಿಯ ಇಂಜಿನೀಯರರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಹಾಗೂ ಕೆಲಸ ತಪಾಸಿಗರು ಉಪವಿಭಾಗದ ಕೆಲಸಗಳನ್ನು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುವಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರಿಗೆ ಸಹಾಯಕರಾಗಿರುತ್ತಾರೆ.
5. ಮೇಲಾಧಿಕಾರಿಗಳಿಗೆ ನಿಗದಿತ ದಿನಾಂಕದೊಳಗೆ ಎಲ್ಲಾ ಮಾಹಿತಿಗಳನ್ನು ಸಲ್ಲಿಸುವುದು.
6. ಕಾಮಗಾರಿಗಳ ಅಂದಾಜು ಪತ್ರಿಕೆ, ಕಾಮಗಾರಿಯ ಲೈನ್‌ಔಟ್ ಕುರಿತು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಕ್ರಮ ತೆಗೆದುಕೊಳ್ಳಬೇಕು.
7. ಕಾಮಗಾರಿ ನಗದು ಪುಸ್ತಕ, ಸಾಮಾನ್ಯ ನಗದು ಪುಸ್ತಕ, ಉಗ್ರಾಣ ಲೆಕ್ಕ ಪತ್ರ, ಎಂ.ಎ.ಎಸ್., ಆರ್.ಎಂ.ಆರ್, ವಾಹನಗಳ ಲಾಗ್‌ಬುಕ್, ದಿನಚರಿಗಳ ನಿರ್ವಹಣೆಗೆ ಕ್ರಮ ಕೈಗೊಳ್ಳುವುದು.
8. ಮೇಲಾಧಿಕಾರಿಗಳ ಸಭೆಗೆ ಹಾಜರಾಗುವುದು.

ಕೈಪಿಡಿ :- 3) ನಿರ್ಣಯ ತೆಗೆದುಕೊಳ್ಳುವಲ್ಲಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಪರಿವೀಕ್ಷಣೆ ಮತ್ತು ಜವಾಬ್ದಾರಿ ವಿವರಗಳು

ಇಲಾಖೆಯು ಕಾಮಗಾರಿಗೆ ಸಂಬಂಧಪಟ್ಟ ನಿರ್ಣಯ ತೆಗೆದುಕೊಳ್ಳುವಲ್ಲಿ, ಈ ಕೆಳಗೆ ನಮೂದಿಸಿದ ಕಾಯ್ದೆ ಕಾನೂನುಗಳನ್ನು ಅನುಸರಿಸಲಾಗುವುದು.

- ಲೋಕೋಪಯೋಗಿ ಇಲಾಖೆಯ ಸಂಹಿತೆ ಭಾಗ-1 ಮತ್ತು ಭಾಗ-2
- ಕರ್ನಾಟಕ ಪಾರದರ್ಶಕ ನಿಯಮ
- ಲೋಕೋಪಯೋಗಿ ಲೆಕ್ಕ ಸಂಹಿತೆ ಭಾಗ-1 ಮತ್ತು ಭಾಗ-2
- ಭೂ ಸ್ವಾಧೀನ ಕಾಯ್ದೆ.
- ಉಗ್ರಾಣ ಕೈಪಿಡಿ
- ಮಧ್ಯಸ್ಥಿಕೆ ಕಾಯ್ದೆ
- ಕರ್ನಾಟಕ ಲಿಟಿಗೇಶನ್ ಕಾಯ್ದೆ

ಆಡಳಿತವನ್ನು ನಿರ್ವಹಿಸಲು

- ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು
- ಕರ್ನಾಟಕ ಆರ್ಥಿಕ ಸಂಹಿತೆ
- ಕರ್ನಾಟಕ ಖಜಾನೆ ಸಂಹಿತೆ
- ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು.
- ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ.) ನಿಯಮಗಳು
- ಕರ್ನಾಟಕ ನಾಗರೀಕ ಸೇವಾ (ಪ್ರೊಬೇಶನರಿ) ನಿಯಮಗಳು

ಈ ಇಲಾಖೆಯಲ್ಲಿ ನಿರ್ವಹಿಸಲ್ಪಡುವ ಎಲ್ಲಾ ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕ ನಿಯಮದ ಅನುಸಾರ ಟೆಂಡರ್ ಕರೆದು ಗುತ್ತಿಗೆದಾರರಿಗೆ ಕೊಡಲಾಗುತ್ತದೆ. ಗುತ್ತಿಗೆದಾರರನ್ನು ನಿಗದಿಪಡಿಸಿದ ನಂತರ ಅವರಿಗೆ ಕಾರ್ಯಾದೇಶ ನೀಡಲಾಗುತ್ತದೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು, ಗುತ್ತಿಗೆದಾರರಿಗೆ ಕೆಲಸದ ಸ್ಥಳವನ್ನು ಹಸ್ತಾಂತರಿಸಿ ಕೆಲಸವನ್ನು ಅನುಷ್ಠಾನಗೊಳಿಸಲು ಲೈನ್‌ಔಟ್ ನೀಡಿ ಕೆಲಸ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳುತ್ತಾರೆ. ಸಂಬಂಧಿಸಿದ ಸಹಾಯಕ/ಕಿರಿಯ ಇಂಜಿನೀಯರರು, ಪ್ರತಿ ನಿತ್ಯ ಕೆಲಸದ ಸ್ಥಳಕ್ಕೆ ಹೋಗಿ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಕೆಲಸದ ಸ್ಥಳಕ್ಕೆ ಮೇಲಿಂದ ಮೇಲೆ ಭೇಟಿ ನೀಡಿ ಕೆಲಸವನ್ನು ಪರಿವೀಕ್ಷಿಸುತ್ತಾರೆ. ಹಾಗೆಯೇ, ಕಾರ್ಯನಿರ್ವಾಹಕ ಇಂಜಿನೀಯರರು, ಅಧೀಕ್ಷಕ ಇಂಜಿನೀಯರರು ಹಾಗೂ ಮುಖ್ಯ ಇಂಜಿನೀಯರರು ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಲು ಕಾರ್ಯನಿರ್ವಾಹಕ ಇಂಜಿನೀಯರರು, ಅಧೀಕ್ಷಕ ಇಂಜಿನೀಯರರು ಹಾಗೂ ಮುಖ್ಯ ಇಂಜಿನೀಯರರ ಮಟ್ಟದಲ್ಲಿ ಸಭೆ ನಡೆಸಲಾಗುತ್ತದೆ.

ಅಕೌಂಟೆಬಿಲಿಟಿ ಬಗ್ಗೆ ಮಹಾಲೇಖಪಾಲಕರು, 2 ವರ್ಷಕ್ಕೊಮ್ಮೆ ಸಂಬಂಧಿತ ಉಪವಿಭಾಗ ಕಛೇರಿಗಳ ಪರಿವೀಕ್ಷಣೆ ಮಾಡುತ್ತಾರೆ. ಅಲ್ಲದೆ ಮುಖ್ಯ ಇಂಜಿನೀಯರ್‌ರವರ ಕಛೇರಿ, ಅಧೀಕ್ಷಕ ಇಂಜಿನೀಯರರ ಕಛೇರಿ, ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿಯಿಂದಲೂ ಉಪವಿಭಾಗಗಳ ತಪಾಸಣೆ ನಡೆಯುತ್ತದೆ. ಕಳಪೆ ಕಾಮಗಾರಿಯ ಬಗ್ಗೆ ಏನಾದರೂ ಅರ್ಜಿ ಬಂದಲ್ಲಿ ಮಾನ್ಯ ಲೋಕಾಯುಕ್ತರು ಕೂಡ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಿ ಏನಾದರೂ ಕಳಪೆ ಕಾಮಗಾರಿ ಇದ್ದಲ್ಲಿ ಸೂಕ್ತ ಕ್ರಮಕ್ಕೆ ಶಿಫಾರಸ್ಸು ಮಾಡುತ್ತಾರೆ.

ಕೈಪಿಡಿ :- 4) ಕರ್ತವ್ಯಗಳ ನಿರ್ವಹಣೆಯಲ್ಲಿ ಪಾಲಿಸಬೇಕಾದ ಸೂತ್ರಗಳು

ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ.
ಸರ್ಕಾರಿ ಆದೇಶ ಸಂಖ್ಯೆ : ಪಿಡಬ್ಲ್ಯೂ-1 ಎಫ್.ಸಿ.ಆರ್-93 ಬೆಂಗಳೂರು ದಿನಾಂಕ : 15-12-1994
ಸಾಮಾನ್ಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ
ಸರ್ಕಾರಿ ಆದೇಶ ಸಂಖ್ಯೆ : ಎಫ್.ಡಿ-1 ಟಿಎಫ್‌ಪಿ-2001, ಬೆಂಗಳೂರು ದಿನಾಂಕ : 02-02-2001
ಲೋಕೋಪಯೋಗಿ ಇಲಾಖೆ ಸಂಹಿತೆ
ಲೋಕೋಪಯೋಗಿ ಲೆಕ್ಕ ಸಂಹಿತೆ

ಕೈಪಿಡಿ :- 5) ಇಲಾಖೆಯ ಅಧೀನದಲ್ಲಿರುವ ಮತ್ತು ಸಿಬ್ಬಂದಿ ಉಪಯೋಗಿಸುತ್ತಿರುವ ನಿಯಮಗಳು, ವಿನಿಯಮಗಳು, ಸೂಚನೆಗಳು, ದಾಖಲೆಗಳು, ಕೈಪಿಡಿಗಳ ವಿವರ.

ಕಛೇರಿ ಕೈಪಿಡಿ ನಿಯಮಗಳು, ವಿನಿಯಮಗಳು ಮತ್ತು ಸೂಚನೆಗಳು
ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು
ಕರ್ನಾಟಕ ಆರ್ಥಿಕ ಸಂಹಿತೆ
ಕರ್ನಾಟಕ ಖಜಾನೆ ಸಂಹಿತೆ
ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ.) ನಿಯಮಗಳು
ಲೋಕೋಪಯೋಗಿ ಇಲಾಖೆ ಸಂಹಿತೆ ಭಾಗ-1 ಮತ್ತು ಭಾಗ-2
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ-2000
ಲೋಕೋಪಯೋಗಿ ಲೆಕ್ಕ ಸಂಹಿತೆ ಭಾಗ-1 ಮತ್ತು ಭಾಗ-2
ಭೂ ಸ್ವಾಧೀನ ಕಾಯ್ದೆ
ಉಗ್ರಾಣ ಕೈಪಿಡಿ
ಕರ್ನಾಟಕ ನೀರಾವರಿ ಕಾಯ್ದೆ
ಆಯ್. ಎಸ್. ಕೋಡ್ಸ್
ಸಾದಿಲ್ವಾರು ವೆಚ್ಚದ ಕೈಪಿಡಿ
ಚಾಲ್ತಿ ದರ ಪಟ್ಟಿ
ಬಜೆಟ್ ಕೈಪಿಡಿ
ಹೆದ್ದಾರಿ ಕಾಯ್ದೆ – 1964 ನಿಯಮಗಳು

ಕೈಪಿಡಿ :- 6) ಇಲಾಖೆಯ ಅಧೀನದಲ್ಲಿರುವ ವರ್ಗೀಕರಣದ ತಃಖ್ತೆ

ತಾಂತ್ರಿಕ ಶಾಖೆ :

1. ಕಾರ್ಯನಿರ್ವಾಹಕ ಇಂಜಿನೀಯರವರ, ಅಧೀಕ್ಷಕ ಇಂಜಿನೀಯರರ ಮತ್ತು ಮುಖ್ಯ ಇಂಜಿನೀಯರ್‌ರವರ ಮಟ್ಟದಲ್ಲಿ ಮಂಜೂರಾದ ಅಂದಾಜು ಪತ್ರಿಕೆಗಳು ಅದಕ್ಕೆ ಸಂಬಂಧಪಟ್ಟ ಕಡತಗಳು.
2. ಪ್ರಗತಿಯ ವರದಿಗಳು.
3. ಆಯವ್ಯಯಕ್ಕೆ ಸಂಬಂಧಪಟ್ಟ ಆಯವ್ಯಯ ಪ್ರಸ್ತಾವನೆ ಮತ್ತು ಆಯವ್ಯಯ ಪಟ್ಟಿ.
4. ಭಾರಿ ಹಾಗೂ ಸಣ್ಣ ಅಂದಾಜುಗಳ ಮಂಜೂರಾತಿ ವಹಿ.
5. ಪಿ.ಡಬ್ಲ್ಯೂ.ಡಿ. ವಶದಲ್ಲಿರುವ ಸೇತುವೆ ಮತ್ತು ಕಲ್ವರ್ಟ್‌ಗಳ ವಹಿ.
6. ದರಸೂಚಿ
7. ಆಯವ್ಯಯ ಕಾಮಗಾರಿಗಳ ವಹಿ
8. ಮೇಲಾಧಿಕಾರಿಗಳಿಂದ ಮಂಜೂರಾದ ಅಂದಾಜು ಪಟ್ಟಿ
9. ಹೆಚ್ಚುವರಿ ಐಟಂ ದರ ಪಟ್ಟಿಯ ವಹಿ
10. ತುಂಡುಗುತ್ತಿಗೆ ಕರಾರು ಪತ್ರ ವಹಿ
11. ಸೇತುವೆಗಳ ವಹಿ
12. ಕಟ್ಟಡಗಳ ವಹಿ

ದಾಖಲೆಗಳು : ಆಡಳಿತ ಶಾಖೆ ಉಪವಿಭಾಗ ಕಛೇರಿಯ ತಪಾಸಣೆಗೆ ಅಗತ್ಯವಿರುವ ವಹಿಗಳು ಮತ್ತು ದಾಖಲಾತಿಗಳ ಪಟ್ಟಿ

1. ಹಾಜರಾತಿ ವಹಿ
2. ಪತ್ರಾಂಕಿತವಲ್ಲದ ಅಧಿಕಾರಿಗಳ ಸಾಂದರ್ಭಿಕ ರಜೆ ವಹಿ
3. ಸಂಘಟನಾ ಫಲಕ
4. ಮಂಜೂರಾತಿ ಹಾಗೂ ಖಾಲಿ ಹುದ್ದೆಗಳ ತಃಖ್ತೆ
5. ಕೆಲಸ ವಿತರಣೆಯ ತಃಖ್ತೆ
6. ವೇತನ ಬಡ್ತಿ ಮಂಜೂರಾತಿಯ ವಹಿ.
7. ಇನ್‌ಕಂಬನ್ಸಿ ವಹಿ
8. ರಹಸ್ಯ ವರದಿಗಳ ವಹಿ
9. ಆಸ್ತಿ ಹಾಗೂ ಹೊಣೆಗಾರಿಕೆ ಪಟ್ಟಿಗಳ ವಹಿ
10. ನಿವೃತ್ತಿ ವೇತನ ಪ್ರಕರಣಗಳ ಕುರಿತು ನಿಗಾ ವಹಿ
11. ಸೇವಾ ಪುಸ್ತಕಗಳ ನಿಗಾ ವಹಿ
12. ಇಲಾಖಾ ಪರೀಕ್ಷೆಗಳ ನಿಗಾ ವಹಿ
13. ಪರಿವೀಕ್ಷಣಾ ಟಿಪ್ಪಣಿ ಪುಸ್ತಕ
14. ವಿಧಾನ ಸಭೆ, ವಿಧಾನ ಪರಿಷತ್ ಪ್ರಶ್ನೆಗಳ ವಹಿ
15. ಸ್ಟ್ಯಾಂಪು ವಹಿ
16. ಸಾಮಾನ್ಯ ಸ್ವೀಕೃತಿ ವಹಿ
17. ರವಾನೆ ವಹಿ
18. ಕಛೇರಿಯ ಆದೇಶ ಪುಸ್ತಕ
19. ಸಾಮಾನ್ಯ ನಗದು ಪುಸ್ತಕ
20. ವೇತನ ಬಟವಾಡೆ ವಹಿ
21. ಪ್ರಯಾಣ ಭತ್ಯೆ ಬಟವಾಡೆ ವಹಿ
22. ಸಾದಿಲ್ವಾರು ವೆಚ್ಚ ವಹಿ

ಲೆಕ್ಕ ಶಾಖೆ:

1. ನಗದು ಪುಸ್ತಕ
2. ಚೆಕ್ ಮೆಮೋ ಪುಸ್ತಕ
3. ರೆಮಿಟನ್ಸ್ ರಿಜಿಸ್ಟರ್
4. ಎಸ್.ಬಿ.ಆರ್.
5. ಚೆಕ್ ಹಾಗೂ ಸ್ವೀಕೃತಿ ರಿಜಿಸ್ಟರ್

ಉಗ್ರಾಣ ಶಾಖೆ :

1. ದಾಸ್ತಾನು ಸ್ವೀಕೃತಿ ವಹಿ
2. ದಾಸ್ತಾನು ವಿತರಣಾ ವಹಿ
3. ಅರ್ಧವಾರ್ಷಿಕ ನಿಯತಕಾಲಿಕ ವಹಿ
4. ಖಾಲಿ ಸಾಮಗ್ರಿಗಳ ವಹಿ
5. ಖಾಲಿ ಅಳತೆ ಪುಸ್ತಕಗಳ ವಹಿ
6. ಕಛೇರಿ ಪೀಠೋಕರಣಗಳ ವಹಿ
7. ಲೇಖನ ಸಾಮಗ್ರಿಗಳ ವಹಿ
8. ಯಂತ್ರೋಪಕರಣಗಳ ವಹಿ
9. ಅಳತೆ ಪುಸ್ತಕಗಳ ಅರ್ಧವಾರ್ಷಿಕ ನಿಯತಕಾಲಿಕ

ಕೈಪಿಡಿ :- 7) ಇಲಾಖೆಯಲ್ಲಿ ನೀತಿ ನಿಯಮಗಳನ್ನು ಅಥವಾ ಆಡಳಿತವನ್ನು ನಡೆಸುವಲ್ಲಿ ಪಡೆಯುವ ಸಲಹಾ ಸೂತ್ರಗಳ ಅಥವಾ ಸಾರ್ವಜನಿಕ ಸದಸ್ಯರುಗಳಿಂದ ಸಲಹೆ ಪಡೆಯುವ ಬಗ್ಗೆ ಇರುವ ವ್ಯವಸ್ಥೆ ಮತ್ತು ವಿವರ.

ಏನೂ ಇರುವುದಿಲ್ಲ.

ಕೈಪಿಡಿ :- 8) ಇಲಾಖೆಯಲಿ ನಿಗಮ/ಪರಿಷತ್ತು/ಸಮಿತಿ ಮತ್ತು ಇತರ ಸಂಸ್ಥೆಗಳ ವಿವರ ಮತ್ತು ಅದರ ಉದ್ದೇಶ ಮತ್ತು ಈ ಸಂಸ್ಥೆಗಳ ಸಭೆಗಳು ಮತ್ತು ಸಭೆಯ ನಡುವಳಿಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ.

ಏನೂ ಇರುವುದಿಲ್ಲ.

ಕೈಪಿಡಿ :- 9) ಇಲಾಖೆಯ ಅಧಿಕಾರ ಮತ್ತು ಸಿಬ್ಬಂದಿ ವರ್ಗದ ನಿರ್ದೇಶಿಕೆ.

ಈ ಇಲಾಖೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಇವರ ಅಧಿಕಾರದ ಬಗ್ಗೆ ಕೈಪಿಡಿ 2 ರಲ್ಲಿ ಈಗಾಗಲೇ ನಮೂದಿಸಲಾಗಿದೆ.

ಸಿಬ್ಬಂದಿ ವರ್ಗದ ನಿರ್ದೇಶಿಕೆ (ಸಂಘಟನಾ ನಕ್ಷೆ) ಈ ಕೆಳಗಿನಂತಿದೆ.

ಕ್ರ. ಸಂ.	ಹುದ್ದೆ	ಹೆಸರು
1.	ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ – 1	ಶ್ರೀ ವ್ಹಿ.ಕೆ. ಟಿಕಾರೆ
2.	ಸಹಾಯಕ ಇಂಜಿನೀಯರ್ – 2	1) ಖಾಲಿ 2) ಖಾಲಿ
3.	ಕಿರಿಯ ಇಂಜಿನೀಯರ್ – 3	1) ಶ್ರೀ ವ್ಹಿ.ಎಸ್. ಪವಾರ 2) ಶ್ರೀ ಎಂ.ಜಿ. ಕಮ್ಮಾರ 3) ಶ್ರೀ ನಾಗರಾಜ 4) ಶ್ರೀ ಮನೋಹರ ಹಾದಿಮನಿ 5) ಖಾಲಿ
4.	ಪ್ರಥಮ ದರ್ಜೆ ಸಹಾಯಕರು – 1	1) ಶ್ರೀ ಎಸ್.ಎಂ. ಹಂಚಿನಾಳ
5.	ದ್ವಿತೀಯ ದರ್ಜೆ ಸಹಾಯಕರು – 2	1) ಶ್ರೀ ಎಂ.ಬಿ. ನಿರಂಜನಸ್ವಾಮಿ 2) ಶ್ರೀ ಪಿ.ಎಸ್. ಹೊಸಮಠ
6.	ಕೆಲಸ ತಪಾಸಿಗರು – 5	1) ಶ್ರೀ ಬಿ.ಆರ್. ಉಜ್ಜಪ್ಪಳವರ 2) ಶ್ರೀ ಜಿ.ಎಂ. ಮಡಿವಾಳರ 3) ಶ್ರೀ ಎಸ್.ಎನ್. ಮಾಳಾಪೂರ 4) ಶ್ರೀ ಬಿ.ಐ. ಚಪ್ಪರದಹಳ್ಳಿ 5) ಶ್ರೀ ವ್ಹಿ.ಪಿ. ಮಾಳದಕರ
7.	ವಾಹನ ಚಾಲಕರು – 3	1) ಶ್ರೀ ಎಂ.ಆರ್. ನದಾಫ್ 2) ಶ್ರೀ ಹೆಚ್.ಪಿ. ಭಜಂತ್ರಿ 3) ಖಾಲಿ
8.	ಜವಾನರು – 2	1) ಶ್ರೀ ಜಿ. ವ್ಹಾಯ್. ಉಪ್ಪಾರ 2) ಖಾಲಿ
9.	ಚೌಕೀದಾರರು – 3	1) ಶ್ರೀ ಎಸ್.ಪಿ. ಮೂಲಿಮನಿ 2) ಶ್ರೀ ಎಸ್.ಬಿ. ಮುತಗಿ 3) ಖಾಲಿ
10.	ಖಲಾಸಿ – 4	1) ಖಾಲಿ 2) ಖಾಲಿ

		3) ಖಾಲಿ 4) ಖಾಲಿ
ಸೂಪರ್‌ನ್ಯೂಮರರಿ ಹುದ್ದೆಗಳು		
1.	ಅಕ್ಷರಸ್ಥ ಸಹಾಯಕ	1) ಶ್ರೀ ಆರ್.ಡಿ. ಶೀತಿಕೊಂಡ 2) ಶ್ರೀ ಎಂ.ಎಂ. ದ್ಯಾವಣ್ಣನವರ

ಕೈಪಿಡಿ :- 10) ಇಲಾಖೆಯ ಅಧಿಕಾರ ಮತ್ತು ಸಿಬ್ಬಂದಿ ವರ್ಗದವರ ತಿಂಗಳ/ಪ್ರತಿಫಲ ಮತ್ತು ಅದನ್ನು ನೀಡುವ ಸೂತ್ರಗಳು

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿಯಲ್ಲಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನವನ್ನು ಕರ್ನಾಟಕ ಸರ್ಕಾರದ ಸಂಚಿತ ನಿಧಿಯಿಂದ ಪಾವತಿಸಲಾಗುತ್ತಿದೆ.

ಕ್ರ. ಸಂ.	ಹುದ್ದೆ	ಹೆಸರು	ವೇತನ ಶ್ರೇಣಿ	ಮೂಲ ವೇತನ
1.	ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ – 1	ಶ್ರೀ ವ್ಹಿ.ಕೆ. ಟಿಕಾರೆ	14050–25050	25050.00 ಪಿಪಿ 600.00
2.	ಸಹಾಯಕ ಇಂಜಿನೀಯರ್ – 2	1) ಖಾಲಿ 2) ಖಾಲಿ	11400–21600 11400–21600	– –
3.	ಕಿರಿಯ ಇಂಜಿನೀಯರ್ – 5	1) ಶ್ರೀ ವ್ಹಿ.ಎಸ್.ಪವಾರ 2) ಶ್ರೀ ಎಂ.ಜಿ. ಕಮ್ಮಾರ 3) ಶ್ರೀ ನಾಗರಾಜ 4) ಶ್ರೀ ಮನೋಹರ. ಹಾದಿಮನಿ 5) ಖಾಲಿ	8825–16000	15600.00 11700.00 9500.00 8825.00
4.	ಪ್ರಥಮ ದರ್ಜೆ ಸಹಾಯಕರು – 1	1) ಶ್ರೀ ಎಸ್.ಎಂ. ಹಂಚಿನಾಳ	7275–13350	7275.00
5.	ದ್ವಿತೀಯ ದರ್ಜೆ ಸಹಾಯಕರು – 2	1) ಶ್ರೀ ಎಂ.ಬಿ. ನಿರಂಜನಸ್ವಾಮಿ 2) ಶ್ರೀ ಪಿ.ಎಸ್. ಹೊಸಮಠ	5800–10500 5800–10500	8000.00 7450.00
6.	ಕೆಲಸ ತಪಾಸಿಗರು – 5	1) ಶ್ರೀ ಬಿ.ಆರ್. ಉಜ್ಜಪ್ಪಳವರ 2) ಶ್ರೀ ಜಿ.ಎಂ. ಮಡಿವಾಳರ 3) ಶ್ರೀ ಎಸ್.ಎನ್. ಮಾಳಾಪೂರ 4) ಶ್ರೀ ಬಿ.ಐ. ಚಪ್ಪರದಹಳ್ಳಿ 5) ಶ್ರೀ ವ್ಹಿ.ಪಿ. ಮಾಳದಕರ	5800–10500 5800–10500 5800–10500 5800–10500 5800–10500	10500.00 8825.00 8825.00 8825.00 8825.00
7.	ವಾಹನ ಚಾಲಕರು – 3	1) ಶ್ರೀ ಎಂ.ಆರ್. ನದಾಫ್ 2) ಶ್ರೀ ಹೆಚ್.ಪಿ. ಭಜಂತ್ರಿ 3) ಖಾಲಿ	5800–10500 5800–10500 –	8825.00 6250.00 –
8.	ಜವಾನರು – 2	1) ಶ್ರೀ ಜಿ.ವ್ಹಾಯ್. ಉಪ್ಪಾರ 2) ಖಾಲಿ	4800–7275 4800–7275	5900.00 –
9.	ಚೌಕೀದಾರರು – 3	1) ಶ್ರೀ ಎಸ್.ಪಿ. ಮೂಲಿಮನಿ 2) ಶ್ರೀ ಎಸ್.ಬಿ. ಮುತಗಿ 3) ಖಾಲಿ	4800–7275 4800–7275 4800–7275	5800.00 5900.00 –
10.	ಖಲಾಸಿ – 4	1) ಖಾಲಿ 2) ಖಾಲಿ 3) ಖಾಲಿ 4) ಖಾಲಿ	4800–7275 4800–7275 4800–7275 4800–7275	– – – –
ಸೂಪರ್‌ನ್ಯೂಮರರಿ ಹುದ್ದೆಗಳು				
1	ಅಕ್ಷರಸ್ಥ ಸಹಾಯಕ	1) ಶ್ರೀ ಆರ್.ಡಿ. ಶೀತಿಕೊಂಡ 2) ಶ್ರೀ ಎಂ.ಎಂ. ದ್ಯಾವಣ್ಣನವರ	5800–10500 5800–10500	8600.00 7450.00

ಕೈಪಿಡಿ :- 11)

ಇಲಾಖೆಯಲ್ಲಿ ಸಹಾಯಧನ ನೀಡುವ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಮತ್ತು ಫಲಾನುಭವಿಗಳ ವಿವರಗಳು.

ಸಹಾಯಧನ ನೀಡುವ ಕಾರ್ಯಕ್ರಮಗಳು ಇಲ್ಲ.

ಕೈಪಿಡಿ :- 12)

ಇಲಾಖೆಯಲ್ಲಿ ನೀಡುತ್ತಿರುವ ಪರ್ಮಿಟ್ ಅಥವಾ ಅಧಿಕಾರ ಪತ್ರಗಳ ವಿವರ ಮತ್ತು ರಿಯಾಯಿತಿ ಪಡೆಯುವವರ ವಿವರ

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಪಂಚಾಯತ್ ರಾಜ್, ಇಂಜಿನೀಯರಿಂಗ್, ಹಿರೇಕೆರೂರು ಉಪವಿಭಾಗದ ವ್ಯಾಪ್ತಿಯಲ್ಲಿ ಯಾವುದೇ ಪರ್ಮಿಟ್ ಅಥವಾ ಅಧಿಕಾರ ಪತ್ರಗಳನ್ನು ನೀಡುತ್ತಿಲ್ಲ.

ಕೈಪಿಡಿ :- 13)

ಇಲಾಖೆಯಲ್ಲಿ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ನೀಡಿರುವ ಬಗ್ಗೆ ವಿವರ

ಇಲಾಖೆಯಲ್ಲಿ ವೆಬ್‌ಸೈಟ್ ಯಾವುದೂ ಇಲ್ಲ.

ಕೈಪಿಡಿ :- 14)

ಇಲಾಖೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಲಭ್ಯವಿರುವ ಸವಲತ್ತುಗಳು ಹಾಗೂ ಗ್ರಂಥಾಲಯ ಅಥವಾ ವಾಚನಾಲಯಗಳು ಇದ್ದಲ್ಲಿ ಅದರ ವಿವರ

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಪಂಚಾಯತ್ ರಾಜ್, ಇಂಜಿನೀಯರಿಂಗ್, ಹಿರೇಕೆರೂರು, ಇವರ ವ್ಯಾಪ್ತಿಯಲ್ಲಿ ಲಭ್ಯವಿರುವ ಸವಲತ್ತುಗಳನ್ನು ಪಡೆಯಲು ಶ್ರೀ ವ್ಹಿ.ಕೆ. ಟಿಕಾರೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಇವರಿಗೆ ಅರ್ಜಿ ನೀಡುವುದು ಅಥವಾ ಸಂಪರ್ಕಿಸುವುದು.

ಕಛೇರಿಯ ಸಮಯದ ವೇಳೆಯಲ್ಲಿ ಮೇಲ್ಕಂಡ ಅಧಿಕಾರಿಗಳ ದೂರವಾಣಿ ಸಂಖ್ಯೆ : 08376-282229

ಸಾರ್ವಜನಿಕರಿಗೆ ಬಳಕೆಗೆ ವಾಚನಾಲಯ ಲಭ್ಯವಿರುವುದಿಲ್ಲ.

ಕೈಪಿಡಿ :- 15)

ಇಲಾಖೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ವಿವರಗಳು, ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಪಂಚಾಯತ್ ರಾಜ್, ಇಂಜಿನೀಯರಿಂಗ್, ಹಿರೇಕೆರೂರು, ಇವರ ವ್ಯಾಪ್ತಿಯಲ್ಲಿ ಲಭ್ಯವಿರುವ ಸವಲತ್ತುಗಳನ್ನು ಪಡೆಯಲು ಸವಲತ್ತುಗಳನ್ನು ಪಡೆಯಲು ಶ್ರೀ ವ್ಹಿ.ಕೆ. ಟಿಕಾರೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಇವರಿಗೆ ಅರ್ಜಿ ನೀಡುವುದು ಅಥವಾ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಕೈಪಿಡಿ :- 16)

ಇತರೆ ವಿವರಗಳು

ಏನೂ ಇರುವುದಿಲ್ಲ.

ಮಾಹಿತಿಯನ್ನು ನಿಯಮದಡಿ ಪರಿಶೀಲಿಸಿ ವರದಿಯನ್ನು ತಯಾರಿಸಿ ಸಲ್ಲಿಸಲಾಗಿದೆ.

ವ್ಹಿ.ಕೆ. ಟಿಕಾರೆ
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್
ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು

ತಾಲೂಕು : ಹಿರೇಕೆರೂರ

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಬಿಡುಗಡೆ ಮಾಡಿದ ಅನುದಾನ
1	2	3
1	2007-08ನೇ ಸಾಲಿನ ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ಕಾಮಗಾರಿಗಳ ಕ್ರಿಯಾ ಯೋಜನೆ (ರೂ.89.00) 4215-01-102-9-01 State	14.790
2	2007-08ನೇ ಸಾಲಿನ ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ಕಾಮಗಾರಿಗಳ ಕ್ರಿಯಾ ಯೋಜನೆ (ರೂ.51.00) (ರಾಜ್ಯ ವಲಯ)	7.880
	2007-08ನೇ ಸಾಲಿನ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಅನುಬಂಧ ಇ ಭಾಗ-1 NRWS (ರೂ.296.83 ಲಕ್ಷಗಳು)	-
3	4215-01-102-9-01-132 (NRWS) ರಾಜ್ಯ ವಲಯ Slipped Back Habitations ನಲ್ಲಿ ನೀರು ಸರಬರಾಜು ಯೋಜನೆ ಪುನಶ್ಚೇತನ	5.000
4	4215-01-102-9-01-132 (NRWS) ರಾಜ್ಯ ವಲಯ Slipped Back Habitations ನಲ್ಲಿ ನೀರು ಸರಬರಾಜು ಯೋಜನೆ ಪುನಶ್ಚೇತನ	15.300

5	4215-01-102-9-01-132 (NRWS) ರಾಜ್ಯ ವಲಯ Slipped Back Habitations ಕಿರು ನೀರು ಸರಬರಾಜು ಯೋಜನೆ ಪುನಶ್ಚೇತನ	4.750
6	4215-01-102-9-01-132 (NRWS) ರಾಜ್ಯ ವಲಯ Slipped Back Habitations ನಲ್ಲಿ ಕಿರು ನೀರು ಸರಬರಾಜು ಯೋಜನೆ ಪುನಶ್ಚೇತನ	5.000
7	4215-01-102-9-01-132 (NRWS) ರಾಜ್ಯ ವಲಯ Slipped Back Habitations ನಲ್ಲಿ ಕಿರು ನೀರು ಸರಬರಾಜು ಯೋಜನೆ ಅಭಿವೃದ್ಧಿ	20.000
	2007-08ನೇ ಸಾಲಿನ ಗ್ರಾಮೀಣ ನೀರು ಸರಬರಾಜು ಯೋಜನೆಗಳು ಅನುಬಂಧ ಇ ARWSP (ರೂ.559.05 ಲಕ್ಷಗಳು)	-
8	44215-01-102-9-04-132 (ARWSP) ಕೇಂದ್ರ ವಲಯ CAP-99 Habitationsನಲ್ಲಿ ನೀರು ಸರಬರಾಜು ಯೋಜನೆ ಅಭಿವೃದ್ಧಿ	9.500
9	2007-08ನೇ ಸಾಲಿನಲ್ಲಿ ರಾಜ್ಯವಲಯದ ಎಂ.ಎನ್.ಪಿ. ಅಡಿ ಕುಡಿಯುವ ನೀರಿನ ಯೋಜನೆಗಳ ನಿರಂತರತೆಗಾಗಿ ಅಂತರ್ಜಲ ಮರು ಪೂರಣ ಕಾಮಗಾರಿಗಳ ಕ್ರಿಯಾ ಯೋಜನೆ ರೂ. 28.00 ಲಕ್ಷಗಳು.	4.000
10	2007-08ನೇ ಸಾಲಿನ ನೀರು ಸರಬರಾಜು ಯೋಜನೆ ಕಾಮಗಾರಿಗಳ ಕ್ರಿಯಾ ಯೋಜನೆ (ರಾಜ್ಯ ವಲಯ) MNP (ರೂ. 171.002 ಲಕ್ಷಗಳು)	51.010
11	2007-08ನೇ ಸಾಲಿನ ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಕಾಮಗಾರಿಗಳ ಕ್ರಿಯಾ ಯೋಜನೆ (ರೂ.519.970 ಲಕ್ಷ)	66.490
12	2007-08ನೇ ಸಾಲಿನ ಗ್ರಾಮೀಣ ಸಂಪರ್ಕದಡಿ ರಸ್ತೆಗಳ ನಿರ್ಮಾಣದ ಕ್ರಿಯಾ ಯೋಜನೆ 5054-04-337-7-01-132 (ರೂ. 51.830 ಲಕ್ಷ)	6.310
13	2007-08ನೇ ಸಾಲಿನ ರಸ್ತೆ ಮತ್ತು ಸೇತುವೆ ವಿಭಾಗದ ಸೇತುವೆ ಮತ್ತು ಮೋರಿಗಳ ನಿರ್ಮಾಣ ಕ್ರಿಯಾ ಯೋಜನೆ. 5054-04-337-7-02-132	0.220
14	2007-08ನೇ ಸಾಲಿನ 12ನೇ ಹಣಕಾಸು ಯೋಜನೆ ರಸ್ತೆ ಅಭಿವೃದ್ಧಿ ಯೋಜನೆ ಕಾಮಗಾರಿಗಳ ಕ್ರಿಯಾ ಯೋಜನೆ (ರೂ.664.770 ಲಕ್ಷ)	85.130
15	2007-08ನೇ ಸಾಲಿನ 12ನೇ ಹಣಕಾಸು ಯೋಜನೆಯ ಕಾಮಗಾರಿಗಳ ಕ್ರಿಯಾ ಯೋಜನೆ (ರೂ. 69.17 ಲಕ್ಷಗಳು)	10.520
16	2007-08ನೇ ಸಾಲಿನ 12ನೇ ಹಣಕಾಸು ಅನುದಾನದ ಕಟ್ಟಡಗಳ ವಿಶೇಷ ದುರಸ್ತಿ ಹಾಗೂ ಸಾಮಾನ್ಯ ದುರಸ್ತಿ ಕಾಮಗಾರಿಗಳ ಕ್ರಿಯಾ ಯೋಜನೆ (ರೂ. 236.64 ಲಕ್ಷಗಳು)	30.000
17	RIDF Nabard – XII 2007-08	0.000
18	2205-02-800-1-05-10 ಪ್ರೌಢ ಶಾಲೆಗಳ ಕಟ್ಟಡ ನಿರ್ಮಾಣ ಸುಧಾರಣೆ NABARD (416.00 ಲಕ್ಷ) 2007-08	100.00
19.	2210-03-101-1-73 ಲೆಕ್ಕ ಶೀರ್ಷಿಕೆ ಆರೋಗ್ಯ ಕಟ್ಟಡಗಳ ನಿರ್ವಹಣೆ 2007-08	1.900
20	2225-01-277-0-02 ಸಮಾಜ ಕಲ್ಯಾಣ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಹಾಸ್ಟೆಲ್ ಕಟ್ಟಡ ನಿರ್ಮಾಣ 2007-08	5.500
21	2225-01-277-0-6 ವಸತಿ ಗೃಹಗಳ ಪ್ರಾರಂಭ ಹಾಗೂ ಸುಧಾರಣೆ 2007-08	2.000
22	2403-00-101-0-61 ಪಶುಪಾಲನೆ ಮತ್ತು ಪಶುವೈದ್ಯ ಸೇವೆ 2007-08	1.500
23	ಆರ್.ಐ.ಡಿ.ಎಫ್ ನಬಾರ್ಡ್-11 ಯೋಜನೆಯಡಿ ಚೆಕ್ಕ ಡ್ಯಾಂ ನಿರ್ಮಾಣ 2007-08	0.000
24	2007-08ನೇ ಸಾಲಿನ ಸಾಮರ್ಥ ಸೌಧ	21.000
25	ಸುವರ್ಣ ಗ್ರಾಮೋದಯ ಯೋಜನೆಯ ಕಾಮಗಾರಿಗಳು 2007-08	467.050
26	2006-07ನೇ ಸಾಲಿನ ಸುವರ್ಣ ಜಲ/ಮಳೆ ನೀರು ಕೊಯ್ಲು ಕಾರ್ಯಕ್ರಮದನ್ವಯ ಗ್ರಾಮೀಣ ಶಾಲೆಗಳಿಗೆ ಮಳೆ ನೀರು ಸಂಗ್ರಹಣೆ ಮಾಡಲು ನೀರು ಪೂರೈಕೆ	8.710
27	2007-08ನೇ ಸಾಲಿನ ಎಂ.ಎ.ಡಿ.ಬಿ. ಕಾಮಗಾರಿಗಳು	25.000
28	2007-08ನೇ ಸಾಲಿನ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿ ಕಾಮಗಾರಿಗಳ ಕ್ರಿಯಾ ಯೋಜನೆ	53.000
29	2007-08ನೇ ಸಾಲಿನ ಬರ ಪರಿಹಾರ ಯೋಜನೆ ಕಾಮಗಾರಿಗಳು	44.150

30	2007-08ನೇ ಸಾಲಿನ ಬರ ಪರಿಹಾರ ಯೋಜನೆಯಡಿ ಕುಡಿಯುವ ನೀರಿನ ಕಾಮಗಾರಿಗಳ ಕ್ರಿಯಾ ಯೋಜನೆ (ರೂ. 22.00 ಲಕ್ಷಗಳು)	10.070
31	2007-08ನೇ ಸಾಲಿನ ಬರ ಪರಿಹಾರ ಯೋಜನೆಯಡಿ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳ ಕ್ರಿಯಾ ಯೋಜನೆ (ರೂ. 12.43 ಲಕ್ಷಗಳು)	5.110
32	2007-08ನೇ ಸಾಲಿನ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (SGRY)ಯ ಶೇ. 20.00ರ ಕಾಮಗಾರಿಗಳ ಕ್ರಿಯಾ ಯೋಜನೆ (ರೂ. 137.714 ಲಕ್ಷಗಳು)	23.717

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್
ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ,
ಹಿರೇಕೆರೂರ

ಪಿ.ಆರ್. ನಂ. 317

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ. ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ. : ಎಸ್.ಡಿ.ಕೆ/251/ಡಿಟಿಸಿಆರ್/2006-07, ದಿನಾಂಕ : 15ನೇ ಜುಲೈ, 2008

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್ ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು

ಫಿರ್ಯಾದುದಾರರು

ಪೊಲೀಸ್ ಉಪ ನಿರೀಕ್ಷಕರು
ಉಳ್ಳಾಲ ಪೊಲೀಸ್ ಠಾಣೆ
ಉಳ್ಳಾಲ

ಆರೋಪಿಗಳು

1) ಶೈನಿ, ಬಿನ್ ದಿ: ವಿನೋದ್, ವಾಸ : ಚುರುಪಟ್ಟಿ ಹೌಸ್, ಮತ್ತಿಲಕಮ್ ಅಂಚೆ, ತ್ರಿಶೂರ್, ಕೇರಳ ರಾಜ್ಯ
2) ರಘುನಾಥ್, ಬಿನ್ ಉಣ್ಣಿಕೃಷ್ಣನ್, ವಾಸ : ಪೊಟ್ಟನಾಡೆ ಹೌಸ್, ತೈಕುಟ್ಟುಶೆಂ ಅಂಚೆ, ಚೆರುಪೆರಿ, ತ್ರಿಶೂರ್, ಕೇರಳ ರಾಜ್ಯ
3) ಏಕನಾಥ ಅಲಿಯಾಸ್ ಏಕು, ಬಿನ್ ದಿ. ಭವಾನಿಶಂಕರ, ವಾಸ : ತೊಕ್ಕೊಟ್ಟು ಓವರ್ ಬ್ರಿಡ್ಜ್‌ನ ಬಳಿ, ತೊಕ್ಕೊಟ್ಟು (ಪರಾರಿಯಾಗಿರುತ್ತಾರೆ.)

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರು ತಮ್ಮ ಸಿಬ್ಬಂದಿಯವರೊಂದಿಗೆ ದಿ: 13.12.2006 ರಂದು ಬೆಳಿಗ್ಗೆ 11:00 ಗಂಟೆ ಸಮಯದಲ್ಲಿ ಮಂಗಳೂರು ತಾಲ್ಲೂಕು ಪೆರ್ಮನ್ನೂರು ಗ್ರಾಮದ ನಾಗನಕಟ್ಟೆ ಬಳಿ ತೊಕ್ಕೊಟ್ಟು ಎಂಬಲ್ಲಿ ವಾಹನ ತಪಾಸಣೆ ಮಾಡುತ್ತಿದ್ದ ಸಂದರ್ಭದಲ್ಲಿ ಲಾರಿ ನೋಂದಣಿ ಸಂಖ್ಯೆ ಕೆ.ಎಲ್.-11-4169ನ್ನು ತಪಾಸಣೆಗೆಂದು ನಿಲ್ಲಿಸಲು ಸೂಚನೆ ನೀಡಿದಾಗ ವಾಹನ ಚಾಲಕ ಲಾರಿಯನ್ನು ನಿಲ್ಲಿಸದೇ ಸ್ವಲ್ಪ ಮುಂದೆ ಹೋಗಿ ನಿಲ್ಲಿಸಿ ಸದ್ರಿ ಲಾರಿಯಿಂದ 3 ಜನರು ಇಳಿದು ಓಡಲು ಪ್ರಯತ್ನಿಸಿದ್ದು, ಸಿಬ್ಬಂದಿಯವರು ಬೆನ್ನಟ್ಟಿ ಶೈನಿ ಮತ್ತು ರಘುನಾಥರವರನ್ನು ಹಿಡಿದು ವಿಚಾರಿಸಿದಾಗ ಸದ್ರಿ ಲಾರಿಯಲ್ಲಿ ತಲಾ 35 ಲೀಟರ್ ಸ್ಪಿರಿಟ್ ತುಂಬಿದ 22 ಬಿಳಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿ 770 ಲೀಟರ್ ಮದ್ಯಸಾರವನ್ನು ಹೊಂದಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಸಾಗಾಟ ಮಾಡಿರುವುದು ಎಂದು ತಿಳಿಸಿರುತ್ತಾರೆ. ಇದು ಕರ್ನಾಟಕ ಅಬಕಾರಿ ಕಾಯಿದೆ 13(1), 32, 34 ಮತ್ತು 43ಎ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ ತಕ್ಷೀರು ನಡೆದ ಸ್ಥಳದಲ್ಲಿ ಪತ್ತೆಯಾದ ಆರೋಪಿಗಳ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ 1) ಶೈನಿ, ಬಿನ್ ದಿ: ವಿನೋದ್, ವಾಸ ಚುರುಪಟ್ಟಿ ಹೌಸ್, ಮತ್ತಿಲಕಮ್ ಅಂಚೆ, ತ್ರಿಶೂರ್, ಕೇರಳ ರಾಜ್ಯ 2) ರಘುನಾಥ್, ಬಿನ್ ಉಣ್ಣಿಕೃಷ್ಣನ್, ವಾಸ : ಪೊಟ್ಟನಾಡೆ ಹೌಸ್, ತೈಕುಟ್ಟುಶೆಂ ಅಂಚೆ, ಚೆರುಪೆರಿ, ತ್ರಿಶೂರ್, ಕೇರಳ ರಾಜ್ಯ ಮತ್ತು ಪರಾರಿಯಾದ ವ್ಯಕ್ತಿ ಏಕನಾಥ ಅಲಿಯಾಸ್ ಏಕು, ಬಿನ್ ದಿ. ಭವಾನಿಶಂಕರ, ವಾಸ : ತೊಕ್ಕೊಟ್ಟು ಓವರ್ ಬ್ರಿಡ್ಜ್‌ನ ಬಳಿ, ತೊಕ್ಕೊಟ್ಟು ಎಂದು ತಿಳಿಸಿದ್ದು, ಕ್ರ.ಸಂ. 1 ಮತ್ತು 2 ರಲ್ಲಿರುವ ಆರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ, ಪಂಚರ ಸಮಕ್ಷಮ ಸದರಿ ಸೊತ್ತುಗಳನ್ನು ಜಪ್ತು ಮಾಡಿ ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ 364/2006, ದಿನಾಂಕ : 13.12.2006 ರಂತೆ ಪ್ರಕರಣವನ್ನು ನೋಂದಾಯಿಸಿ ಪ್ರಥಮ ಮಾಹಿತಿ ವರದಿ, ಮಹಜರು ಪ್ರತಿ ಹಾಗೂ ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಕಡತದೊಂದಿಗೆ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ ಮಂಗಳೂರು ದಕ್ಷಿಣ ಇವರಿಗೆ ಈ ಪ್ರಾಧಿಕಾರದ ಆದೇಶದ ಮೇರೆಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತಾರೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು (1) ಜಾರಿ ಮತ್ತು ತನಿಖೆ, ಮಂಗಳೂರು ದಕ್ಷಿಣ, ಮಂಗಳೂರು ಇವರು ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯಸಾರದಿಂದ 22 ಪ್ಲಾಸ್ಟಿಕ್ ಕ್ಯಾನುಗಳಿಂದ ತಲಾ 750 ಎಂ.ಎಲ್. ನ ಒಟ್ಟು 22 ಬಾಟಲುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದ್ರಿ ಮಾದರಿಗಳನ್ನು ವಿಶ್ಲೇಷಿಸಿದ ಮುಖ್ಯ ರಾಸಾಯನಿಕ ತಜ್ಞ ಮತ್ತು ಕರ್ನಾಟಕ ಸರ್ಕಾರದ ಪದನಿಮಿತ್ತ, ಬೆಂಗಳೂರುರವರ ಪತ್ರ ಸಂ: 1006/2007 ದಿ: 24.3.2007ರ ವರದಿಯಲ್ಲಿ ಮದ್ಯಸಾರದ ಪ್ರಮಾಣ 66.1 ಡಿಗ್ರಿ ರಿಂದ 66.4 ಡಿಗ್ರಿ ಒ. ಪಿ. ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ತನಿಖಾಧಿಕಾರಿಯವರು ಜಪ್ತುಪಡಿಸಿಕೊಂಡ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ದಿ: 3.4.2007 ರಂದು ನೀಡಿದ ವರದಿಯನ್ನು ಆಧರಿಸಿ, ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ. ಕ.ಜಿಲ್ಲೆ ಮಂಗಳೂರು ಇವರ ಆದೇಶ ಸಂ:

ಇಐಬಿ/ಡಿಟಿಸಿಆರ್/251/2006-07 ದಿ: 10-4-2007ರಲ್ಲಿ ಜಪ್ತು ಪಡಿಸಿಕೊಂಡಿರುವ 770 ಲೀ ಮದ್ಯಸಾರವನ್ನು (ವಾವರಿಗಳನ್ನು ಹೊರತುಪಡಿಸಿ) ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ, ಮಂಗಳೂರು ಇವರ ಸಮಕ್ಷಮ ದಿ: 31-3-2008 ರಂದು ಮಹಜರು ಜರುಗಿಸಿ ನಾಶಪಡಿಸಲಾಗಿದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಲಾರಿ ಸಂ. ಕೆ.ಎಲ್-1-4169ರ ಆರ್.ಸಿ. ಮಾಲೀಕರ ಹೆಸರು ಮತ್ತು ವಿಳಾಸವನ್ನು ನೀಡುವ ಬಗ್ಗೆ ಸಂಬಂಧಪಟ್ಟ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ತಿರುವನಂತಪುರಂ, ಕೇರಳ ರಾಜ್ಯ ಇವರಿಗೆ ಈ ಪ್ರಾಧಿಕಾರದಿಂದ ದಿ: 10-4-2007, 2.8.2007 ರಂದು ಪತ್ರ ಬರೆಯಲಾಗಿದ್ದು, ಸದರಿ ಪತ್ರವು ಜ್ಯಾರಿಯಾದ ಬಗ್ಗೆ ಸ್ವೀಕೃತಿ ಪತ್ರ ಈ ಕಛೇರಿಗೆ ಬಂದಿರುತ್ತದೆ. ತದನಂತರದಲ್ಲಿ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ತಿರುವನಂತಪುರಂ, ಕೇರಳ ರಾಜ್ಯದವರು ದಿ: 18.9.2007ರ ಪತ್ರದಲ್ಲಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಲಾರಿ ಸಂ. ಕೆ.ಎಲ್.-1-4169ರ ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ತಿರುವನಂತಪುರಂ, ಕೇರಳ ರಾಜ್ಯ ಇವರು ಸಲ್ಲಿಸಿದ್ದ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ವಾಹನ ಲಾರಿ ಸಂ. ಕೆ.ಎಲ್.-1-4169 ವಾಹನವು ಬಜಾಜ್ ಆಟೋ ಲಿಮಿಟೆಡ್ ತ್ರಿಚಕ್ರ ವಾಹನವಾಗಿದ್ದು, ಇದರ ಚಾಸೀಸ್ ನಂ. ಡಬ್ಲ್ಯೂ24ಸಿಓ35336 ಮತ್ತು ಇಂಜಿನ್ ನಂ. ಡಬ್ಲ್ಯೂ24ಇ.ಓ.35915 ಎಂದು ದೃಢೀಕರಿಸಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ದಸ್ತಗಿರಿ ಹಾಗೂ ಪರಾರಿಯಾದ ಆರೋಪಿಗಳಿಗೆ ಈ ಪ್ರಾಧಿಕಾರದಿಂದ ದಿ: 26.9.2007 ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ನೀಡಲಾಗಿದ್ದು ಸದರಿ ಕಾರಣ ಕೇಳಿ ನೋಟಿಸಿನಲ್ಲಿ ಜಪ್ತಾದ ವಾಹನ ಸಂ. ಕೆ.ಎಲ್.-1-4169 ಲಾರಿಯಾಗಿದ್ದು, ಇದಕ್ಕೆ ನಕಲಿ ನಂಬರ್ ಅಳವಡಿಸಿ ಅಕ್ರಮ ಮದ್ಯಸಾರ ಸಾಗಾಣಿಕೆ ಬಳಸಿರುವುದು ಹಾಗೂ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಎ ರಂತೆ ವಾಹನವನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಈ ನೋಟೀಸು ತಲುಪಿದ 15 ದಿವಸದೊಳಗೆ ಈ ಪ್ರಾಧಿಕಾರಕ್ಕೆ ವಿವರಣೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

ಈ ಪ್ರಾಧಿಕಾರದಿಂದ ನೀಡಿರುವ ಕಾರಣ ಕೇಳುವ ನೋಟಿಸನ್ನು 1ನೇ ಆರೋಪಿಯಾದ ಶೈನಿ, ಬಿನ್: ವಿನೋದ್, ವಾಸ : ಚುರುಪಟ್ಟಿ ಹೌಸ್, ಮತ್ತಿಲಕಮ್ ಅಂಚೆ, ತ್ರಿಶೂರ್, ಕೇರಳ ರಾಜ್ಯದವರು ದಿ: 10.10.2007 ರಂದು ಪಡೆದಿದ್ದು, ಸ್ವೀಕೃತಿ ಪತ್ರ ಬಂದಿರುತ್ತದೆ. ಆದರೆ ಸದ್ರಿ ಕಾರಣ ಕೇಳಿ ನೋಟಿಸಿಗೆ ಯಾವುದೇ ಉತ್ತರ ಅಥವಾ ಪ್ರತಿಕ್ರಿಯೆ ಇದುವರೆಗೂ ನೀಡಿರುವುದಿಲ್ಲ.

ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರು ದಿ: 13.12.06 ರಂದು ಯಾವುದೇ ಅಧಿಕೃತ ರಹದಾರಿ ಪತ್ರ ಇಲ್ಲದೇ ಅಕ್ರಮ 770 ಲೀ ಮದ್ಯಸಾರವನ್ನು ಲಾರಿ ಸಂ ಕೆ.ಎಲ್.-1-4169ರ ನಕಲಿ ನಂಬರ್ ಪ್ಲೇಟನ್ನು ಅಳವಡಿಸಿ ಆರೋಪಿಗಳು ಸಾಗಾಣಿಕೆ ಮಾಡುತ್ತಿರುವುದು ಖಚಿತವಾಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಜಿನ್ ನಂಬರ್ ಮತ್ತು ಚಾಸೀಸ್ ನಂಬರ್ ಸಾರಿಗೆ ಅಧಿಕಾರಿಗಳು ನೀಡಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಶಪಡಿಸಿಕೊಂಡ ವಾಹನಕ್ಕೆ ಒಂದಕ್ಕೊಂದು ತಾಳೆಯಾಗಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷ್ಯಾಧಾರಗಳೊಂದಿಗೆ ಸಾಬೀತು ಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ 13.12.2006 ರಂದು ಲಾರಿ ಸಂ. ಕೆ.ಎಲ್.-1-4169 ರಲ್ಲಿ ನಕಲಿ ಸಂಖ್ಯೆ ಇರಿಸಿಕೊಂಡು ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿಗಳು 770.000 ಲೀ ಮದ್ಯಸಾರವನ್ನು ಹೊಂದಿ ಸಾಗಾಟ ಮಾಡುತ್ತಿದ್ದುದನ್ನು ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲರವರು ಪತ್ತೆಹಚ್ಚಿ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಲಾದ ವಾಹನವನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯಸಾರವಾಗಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ ಉಳ್ಳಾಲ ಇವರು ವಶಪಡಿಸಿಕೊಂಡ ಲಾರಿ ನಕಲಿ ಸಂ. ಕೆ.ಎಲ್.-1-4169 ನ್ನು ವಶಪಡಿಸಿಕೊಂಡು ಸುಮಾರು 1 ವರ್ಷ 8 ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ಒಂದನೇ ಆರೋಪಿಯಾದ ಶೈನಿರವರಿಗೆ ನೀಡಿದ ಕಾರಣಕೇಳಿ ನೋಟಿಸು ಸ್ವೀಕೃತಿಯಾಗಿದ್ದರೂ, ಈ ಪ್ರಾಧಿಕಾರದ ಮುಂದೆ ವಾಹನ ಬಿಡುಗಡೆಗಾಗಿ ಮತ್ತು ವಾಹನವು ಅಕ್ರಮ ಮದ್ಯಸಾರ ಸಾಗಾಟದಲ್ಲಿ ತೊಡಗಿಲ್ಲವೆಂದು ಸಾಬೀತುಪಡಿಸಲು ಯಾವುದೇ ಸಮಂಜಸವಾದ ಉತ್ತರ ಈ ಪ್ರಾಧಿಕಾರದ ಮುಂದೆ ಒಪ್ಪಿಸದಿರುವುದರಿಂದ ಮತ್ತು ವಾಹನ ಮಾಲೀಕರು ಸೂಕ್ತ ದಾಖಲಾತಿಗಳೊಂದಿಗೆ ವಾಹನದ ಮಾಲೀಕತ್ವವನ್ನು ಕೋರಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಸದರಿ ವಾಹನಕ್ಕೆ ಅಳವಡಿಸಲಾಗಿರುವ ನಕಲಿ ನಂಬರ್ ಪ್ಲೇಟು ಸಂ. ಕೆ.ಎಲ್.-1-4169 ಇದು ನೈಜವಾಗಿ ಒಂದು ಬಜಾಜ್ ತ್ರಿಚಕ್ರ ವಾಹನದ ನೋಂದಣಿ ಸಂಖ್ಯೆ ಎಂಬುದಾಗಿ ಪ್ರಾದೇಶಿಕ ಅಧಿಕಾರಿಗಳು ತಿರುವನಂತಪುರಂ ಇವರು ನೀಡಿರುವ ಬಿ ಎಕ್ಸ್ ಟ್ರಾಕ್ಟ್ ವರದಿ ಹಾಗೂ ತತ್ಸಂಬಂಧ ಬಾಬು ಜಾನ್ ಸಾಹೇಬ್, ಟಿ.ಸಿ. ನಂ. :7/527ಎ, ಪಡೀನ್‌ಚಾರೀಲ, ಪುತ್ತೇನ್ ವಿಡು, ತಿರುವನಂತಪುರಂ ಎಂಬುವ ಈ ಪ್ರಾಧಿಕಾರಕ್ಕೆ ಒಪ್ಪಿಸಿರುವ ಲಿಖಿತ ಪತ್ರ ದಿ: 10-10-2007 ರಂತೆ ಸದರಿ ರಿಜಿಸ್ಟ್ರಾರ್ ಸಂಖ್ಯೆಯ ವಾಹನ ಅವರದಾಗಿದ್ದು ಇದು ಬಜಾಜ್ ತ್ರಿಚಕ್ರ ಆಟೋ ಎಂಬುದಾಗಿ ತಿಳಿಸಿರುವ ಕಾರಣ ಜಪ್ತಿ

ಮಾಡಲಾಗಿರುವ ಲಾರಿಯನ್ನು ಆರೋಪಿಗಳು ಸದರಿ ವಾಹನಕ್ಕೆ ನಕಲಿ ನಂಬರ್ ಪ್ಲೇಟ್ ಅಳವಡಿಸಿ ಅಕ್ರಮ ಮದ್ಯಸಾರವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿಗಳು ಮದ್ಯಸಾರವನ್ನು ಮಾರಾಟ ಮಾಡಲೆಂಬ ಉದ್ದೇಶದಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ಹಾಗೂ ಆರೋಪಿಗಳನ್ನು ಪತ್ತೆ ಹಚ್ಚಲು ಕಷ್ಟಸಾಧ್ಯವಾಗಿರುವುದರಿಂದ ಹಾಗೂ ವಶಪಡಿಸಿಕೊಂಡ ಲಾರಿಯನ್ನು 1 ವರ್ಷ 8 ತಿಂಗಳು ಕಳೆದಿದ್ದರೂ ವಾಹನದ ಮಾಲೀಕತ್ವವನ್ನು ಕೋರಿ ಪ್ರಾಧಿಕಾರಕ್ಕೆ ಯಾರೂ ಅರ್ಜಿಯನ್ನು ಸಲ್ಲಿಸದೇ ಇರುವ ಕಾರಣ, ಸದರಿ ವಾಹನವನ್ನು ತೆರೆದಿಟ್ಟ ಬಯಲಿನಲ್ಲಿ ನಿಲ್ಲಿಸಿರುವುದರಿಂದ ಮಳೆ, ಬಿಸಿಲು, ಗಾಳಿಗೆ ಸಿಲುಕಿ ತುಕ್ಕು ಹಿಡಿದು ಹಾಳಾಗಿ ಹೋಗಿರುತ್ತದೆ. ಇದನ್ನು ಇನ್ನು ಹೆಚ್ಚು ಕಾಲ ಇರಿಸಿಕೊಂಡರೆ ಇನ್ನಷ್ಟು ಶಿಥಿಲಗೊಂಡು ಮೌಲ್ಯಹೀನವಾಗುವ ಸಾಧ್ಯತೆಯಿದ್ದು ಸರ್ಕಾರಕ್ಕೆ ಬರುವ ಆದಾಯ ಕೂಡಾ ಕಡಿಮೆಯಾಗುವ ಸಂಭವವಿರುವುದರಿಂದ ಅಕ್ರಮ ಅಬಕಾರಿ ಸೊತ್ತು ಸಾಗಾಣಿಕೆಗೆ ಬಳಸಿದ ಲಾರಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂಬ ಹಿನ್ನೆಲೆಯಲ್ಲಿ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ. ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣಾ ಉಳ್ಳಾಲ ಇವರ ಕ್ರೈಂ ನಂಬರ್ 364/2006, ದಿನಾಂಕ: 13-12-2006 ರಲ್ಲಿ ಜಪ್ತು ಪಡಿಸಿರುವ ಲಾರಿ ನಕಲಿ ಸಂ. ಕೆ.ಎಲ್.-01-4169 ನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ : 15-7-2008 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. ನಂ. 918

ಬಂದರು ಕಛೇರಿ, ಕಾರವಾರ

ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ದ 4ನೇ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ವಿವರಣೆಗಳ ಪ್ರಕಟಣೆ

ಕ್ರಮಾಂಕ : ಪಿಎಎಸ್/ಸಿಆರ್-13/2007-08, ದಿನಾಂಕ:29ನೇ ಮೇ, 2008

ವಿಷಯ :- ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕಾದ ಬಂದರು ಕಛೇರಿ, ಕಾರವಾರಕ್ಕೆ ಸಂಬಂಧಿಸಿದ ವಿವರಗಳ ಪ್ರಕಟಣೆ.

1. ರಚನೆ ಪ್ರಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು :

ಬಂದರು ಕಛೇರಿ, ಕಾರವಾರವು ಕಾರವಾರದ ಬೈತಖೋಲದಲ್ಲಿರುವ ಇಲಾಖಾ ಕಟ್ಟಡದಲ್ಲಿ ಇದೆ, ಕ್ಯಾ.ಸಿ.ಸ್ವಾಮಿ, ಇವರು ಬಂದರು ಅಧಿಕಾರಿ, ಕಾರವಾರ ಹುದ್ದೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ಇವರ ಅಧೀನದಲ್ಲಿ ಶ್ರೀ ಟಿ.ಆರ್. ನಾಯ್ಕ, ಬಂದರು ಸಂರಕ್ಷಣಾಧಿಕಾರಿ, ಶ್ರೀ ಸುರೇಶ .ಡಿ. ಶೆಟ್ಟಿ, ಬಂದರು ಸಂರಕ್ಷಣಾಧಿಕಾರಿ (ಸಂಚಾರಿ), ಶ್ರೀ ಬಿ.ಬಿ. ತುಮರಿಕೊಪ್ಪ ಬಂದರು ಸಂರಕ್ಷಣಾಧಿಕಾರಿ, ಶ್ರೀ ದೀಪಕ್ ಪರುಳೇಕರ, ಉ.ಬಂದರು ಸಂರಕ್ಷಣಾಧಿಕಾರಿ, ಶ್ರೀ ಗೌಸ ಅಲಿ, ಉಪ ಬಂದರು ಸಂರಕ್ಷಣಾಧಿಕಾರಿ, ಶ್ರೀ ಪಿ.ಡಿ. ತಾರಿಬಾಗಿಲ್ ಉಪ ಕಡವು ನಿರೀಕ್ಷಕ, ಶ್ರೀ ಎಸ್.ವಿ. ತಾಮಸೆ, ಸಹಾಯಕ ಬಂದರು ಸಂರಕ್ಷಣಾಧಿಕಾರಿ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದು, ಕಛೇರಿಯಲ್ಲಿ ಒಟ್ಟು 11 ಗ್ರೂಪ್ "ಸಿ" ಹುದ್ದೆಯ ನೌಕರರು ಹಾಗೂ 29 ಗ್ರೂಪ್ "ಡಿ" ನೌಕರರು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ, ಬಂದರು ಕಛೇರಿ, ಕಾರವಾರದ ಅಧೀನದಲ್ಲಿ ಶ್ರೀ ಮಹೇಶ ಬಿಲಿಯ, ಉಪ ಬಂದರು ಸಂರಕ್ಷಣಾಧಿಕಾರಿ, ಬೇಲೇಕೇರಿ ಹಾಗೂ ಶ್ರೀ ದೀಪಕ್ ಪರುಳೇಕರ ಉಪ ಬಂದರು ಸಂರಕ್ಷಣಾಧಿಕಾರಿ, ಸದಾಶಿವಗಡ (ಪ್ರಭಾರ) ಇವರು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.

ಕಛೇರಿಯ ಪ್ರಕಾರ್ಯಗಳು ಈ ಮುಂದಿನಂತಿದೆ.

ಕಛೇರಿಗೆ ಹಂಚಿಕೆಯಾಗುವ ಕಾರ್ಯಕಲಾಪಗಳು :-

ಈ ಕಛೇರಿಯ ನಿಯಂತ್ರಣದಲ್ಲಿ ಈ ಕೆಳಕಂಡ ಕಾರ್ಯಾಲಯಗಳು ಬರುತ್ತವೆ.

1. ಬಂದರು ಅಧಿಕಾರಿಯವರ ಕಛೇರಿ, ಕಾರವಾರ
2. ಬಂದರು ಕಛೇರಿ, ಬೇಲೇಕೇರಿ
3. ಬಂದರು ಕಛೇರಿ, ಸದಾಶಿವಗಡ

ಈ ಎಲ್ಲಾ ಕಛೇರಿಗಳ ಮೂಲಕ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿದ್ದು ಪ್ರಮುಖವಾಗಿ ಈ ಕೆಳಕಂಡ ವಿಷಯಗಳು ಈ ಕಛೇರಿಯ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ.

1. ಕಾರವಾರ, ಸದಾಶಿವಗಡ, ಬೇಲೇಕೇರಿ ಬಂದರುಗಳ ನಿರ್ವಹಣೆ.
2. ಕಾರವಾರ, ಬೇಲೇಕೇರಿ ಸದಾಶಿವಗಡ ಬಂದರುಗಳ ನೌಕಾಚಟುವಟಿಕೆಗಳು, ಸರಕು ಹೇರಿಳಿಸುವ ಚಟುವಟಿಕೆಗಳ ಸುವ್ಯವಸ್ಥಿತ ನಿರ್ವಹಣೆ.
3. ಕಾರವಾರ ಬಂದರಿಗೆ ಆಗಮಿಸುವ ಹಡಗುಗಳ ಬರ್ತಿಂಗ್/ಅನ್‌ಬರ್ತಿಂಗ್, ಪೈಲೆಟೇಜ್ ಸೇವೆಯನ್ನು ಒದಗಿಸುವುದು.
4. ನೌಕಾ ಚಟುವಟಿಕೆಗಳಿಂದ, ಸರಕು ನಿರ್ವಹಣೆಯಿಂದ, ಧಕ್ಕೆಯ ಬಳಕೆಯಿಂದ ಸರ್ಕಾರಕ್ಕೆ ಬರುವ ಶುಲ್ಕವನ್ನು ಆಕರಿಸುವುದು.
5. ಬಂದರು ಭೂಮಿಯ ನಿರ್ವಾಹಣೆ ಹಾಗೂ ನೌಕಾ ಚಟುವಟಿಕೆಗಳಿಗೆ ಪೂರಕವಾದ ಉದ್ದಿಮೆಗಳಿಗೆ ಬಂದರು ಭೂಮಿಯನ್ನು ಗುತ್ತಿಗೆ / ಬಾಡಿಗೆಯ ಮೇಲೆ ನೀಡುವುದು ಮತ್ತು ಬಾಡಿಗೆ ವಸೂಲಾತಿ
6. ಕಾರವಾರ ಬಂದರಿನಲ್ಲಿ ನೌಕಾಚಟುವಟಿಕೆಗಳಿಗೆ ಅವಶ್ಯ ಇರುವ ತೇಲು ನೌಕೆಗಳ ನಿರ್ವಹಣೆ.
7. ಮೀನುಗಾರಿಕೆ ನಾವೆಗಳ ನೋಂದಣಿ ಮತ್ತು ವಾರ್ಷಿಕ ಪರಿಶೀಲನೆ.
8. ಹಾಯಿ ಹಡುಗುಗಳ ನೋಂದಣಿ ಮತ್ತು ವಾರ್ಷಿಕ ಪರಿಶೀಲನೆ.
9. ನಾವೆಗಳಿಗೆ ದಾರಿದೀಪ/ದೀಪಸ್ತಂಭ, ಮಾರ್ಗದರ್ಶಿ ತೇಲು ಬುರುಡೆ ಇತ್ಯಾದಿಗಳನ್ನು ಒದಗಿಸುವುದು.
10. ಕರ್ನಾಟಕ ಹಾರ್ಬರ್ ಕ್ರಾಫ್ಟ್ ನಿಯಮಗಳ ಅಡಿಯಲ್ಲಿ ತೇಲು ನೌಕೆಗಳಿಗೆ ಪರವಾನಗಿ ತೇಲು ನೌಕೆಯ ಸಾರಂಗ, ಇವರುಗಳಿಗೆ ಅರ್ಹತಾ ಪ್ರಮಾಣ ಪತ್ರವನ್ನು ನೀಡುವುದು.
11. ಕೇಂದ್ರ ಸರ್ಕಾರದ ಮರ್ಕೆಂಟೈಲ್ ಮರ್‍ರೈನ್ ಇಲಾಖೆಯ ಪರವಾಗಿ ನೌಕಾ ಅಪಘಾತಗಳ ವರದಿ/ತನಿಖೆ ಇತ್ಯಾದಿ ಹಾಗೂ ಹಡಗು ಸಿಬ್ಬಂದಿಗಳಿಗೆ ಸೈನ್ ಆಫ್/ಸೈನ್ ಆನ್ ಸೌಲಭ್ಯಗಳನ್ನು ಒದಗಿಸುವುದು.
12. ಕಛೇರಿಯ ಎಲ್ಲಾ ಅಧಿಕಾರಿ/ನೌಕರರ ಸೇವಾ ವಿಷಯಗಳು.
13. ಕರ್ನಾಟಕ ಇನ್‌ಲ್ಯಾಂಡ್ ವೆಸಕ್ಕ್ ರೂಲ್ಸ್ 2006 ರಂತೆ I.V ಸರ್ವೆ ಕಾರ್ಯಗಳು.

ಬಂದರು ಕಛೇರಿ ಕಾರವಾರದ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳು ಮತ್ತು ಅವರು ನಿರ್ವಹಿಸುವ ವಿಷಯಗಳು ಈ ಕೆಳಕಂಡಂತಿದೆ.

ಅಧಿಕಾರಿಗಳ ಹೆಸರು ಮತ್ತು ಕೆಲಸದ ಹಂಚಿಕೆ :-

ಕ್ರ. ಸಂ.	ಅಧಿಕಾರಿಯ ಹೆಸರು ಮತ್ತು ಪದನಾಮ	ಅವರು ನಿರ್ವಹಿಸುವ ವಿಷಯ
1	2	3
1.	ಕ್ಯಾ. ಸಿ. ಸ್ವಾಮಿ, ಬಂದರು ಅಧಿಕಾರಿ, ಕಾರವಾರ	ಕಛೇರಿಯ ಎಲ್ಲಾ ವಿಷಯಗಳ ಪ್ರಭಾರ
2.	ಶ್ರೀ ಟಿ.ಆರ್. ನಾಯ್ಕ, ಬಂದರು ಸಂರಕ್ಷಣಾಧಿಕಾರಿ	ಬಂದರು ಭೂಮಿಯ ನಿರ್ವಹಣೆ, ಬಾಡಿಗೆ ವಸೂಲಾತಿ, ಇಲಾಖಾ ಕಟ್ಟಡಗಳ ಬಾಡಿಗೆ ವಸೂಲಾತಿ, ಬಂದರು ಸೇವೆ, ನೌಕಾ ಚಟುವಟಿಕೆಗಳ, ವಾಹನ ಶುಲ್ಕ ಸರಕು ಹೇರಿಳಿಸುವ ಸೇವೆಗಳ ಶುಲ್ಕ ವಸೂಲಾತಿ, ಗೋದಾಮು ಬಾಡಿಗೆ ವಸೂಲಾತಿ, ಮೀನುಗಾರಿಕೆ ನಾವೆ, ಹಾಯಿ ಹಡಗು, ಹಾರ್ಬರ್ ಕ್ರಾಫ್ಟ್ ನಿಯಮ
3.	ಶ್ರೀ ಪಿ.ಡಿ. ತಾರಿಬಾಗಿಲ್ ಕಡವು ಉಪ ನಿರೀಕ್ಷಕರ ಉಪ ಬಂದರು ಸಂರಕ್ಷಣಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಣೆ.	ಲೇಖನ ಸಾಮಗ್ರಿ ಹಾಗೂ ಸರಕು ವಿಭಾಗದ ಸಂಪೂರ್ಣ ನಿರ್ವಹಣೆ, ಸಮಾರಂಭಗಳು ಮಾಸಿಕ ದಿನಚರಿ ನಿರ್ವಹಣೆ ಹಾಗೂ ಇತರೇ ವಿಷಯಕ್ಕೆ ಸಂಬಂಧಿಸಿದ ಕಾರ್ಯ ನಿರ್ವಹಣೆ.
4.	ಶ್ರೀ ಗೌಸ ಅಲಿ, ಸಹಾಯಕ ಬಂದರು ಸಂರಕ್ಷಣಾಧಿಕಾರಿ	ವೇತನ ಬಿಲ್ಲು, ಪ್ರಯಾಣ ಭತ್ಯೆ ಬಿಲ್ಲು, ವೈದ್ಯಕೀಯ ಬಿಲ್ಲು, ಕೆ.ಜಿ.ಐ.ಡಿ. ಮತ್ತು ಜಿ.ಪಿ.ಎಫ್ ನಿರ್ವಹಣೆ, ಎಸಿ ಬಿಲ್ಲು ಮತ್ತು ಡಿಸಿ ಬಿಲ್ಲುಗಳು ಹಾಗೂ ಧೇಯಕ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಕರ್ತವ್ಯಗಳು ಹಾಗೂ ಲೆಕ್ಕಪತ್ರ ವಿಭಾಗಕ್ಕೆ ಸಂಬಂಧಿಸಿದ ನಿಯತಕಾಲಿಕೆಗಳ ನಿರ್ವಹಣೆ ಅಭಿಲೇಖಾಲಯ ರವಾನೆ ಮತ್ತು ಸ್ವೀಕೃತಿ ವಿಭಾಗದ ಕೆಲಸಗಳ ಮೇಲುಸ್ತುವಾರಿ. ಸಂಚಾರಿ ವಿಭಾಗಕ್ಕೆ ಸಂಬಂಧಿಸಿದ ಅವರಿಗೆ ನಿಯೋಜಿಸಿದ ಕರ್ತವ್ಯದ ವೇಳೆಯಲ್ಲಿ ಕಾರವಾರ ಬಂದರಿಗೆ ಆಗಮಿಸುವ ಹಡಗುಗಳ ಬರ್ತಿಂಗ್/ಅನ್‌ಬರ್ತಿಂಗ್‌ಗಳ ವೇಳೆಯಲ್ಲಿ ಮೂರಿಂಗ್ ಕರ್ತವ್ಯಗಳನ್ನು ನಿರ್ವಹಿಸುವುದು. ಕಾರವಾರ ಬಂದರಿನಲ್ಲಿ ನಡೆಯುವ ಸರಕು ಹೇರಿಳಿಸುವ ಚಟುವಟಿಕೆಗಳ ಮೇಲುಸ್ತುವಾರಿ, ಗೋದಾಮಿನಲ್ಲಿ

		ಸಂಗ್ರಹಿಸಿದ ಸರಕುಗಳ ವಿವರಗಳು ಹಾಗೂ ವಾಟರ್ ಬಾರ್ಜ್ ಮೂಲಕ ಪೂರೈಸಿದ ನೀರಿನ ವಿವರಗಳು ಸಂಚಾರಿ ವಿಭಾಗದ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ ಹಾಗೂ ಮುಖ್ಯದ್ವಾರದಲ್ಲಿ ನಿಯೋಜಿಸುವ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ ವಾರ್ಫ್ ಏರಿಯಾದಲ್ಲಿ ವಾರದ ಬಾಡಿಗೆ ಮೇಲೆ ಸರಕುಗಳನ್ನು ಸಂಗ್ರಹಿಸಿದಾಗ ಮೇಲುಸ್ತುವಾರಿ ಮತ್ತು ವರದಿ ನೀಡುವುದು ವಿದ್ಯುತ್ ಪೂರೈಕೆ ಮತ್ತು ವರದಿ ನೀಡುವುದು ISPS ಕೋಡ್ ನಡಿಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳು ಹಾಗೂ ಬಂದರು ಸಂರಕ್ಷಣಾಧಿಕಾರಿ (ಸಂಚಾರಿ) ಹಾಗೂ ಬಂದರು ಅಧಿಕಾರಿ, ಕಾರವಾರ ಇವರ ಮೌಖಿಕ ನಿರ್ದೇಶನದಂತೆ ಸಂಚಾರಿ ವಿಭಾಗದಲ್ಲಿನ ಕರ್ತವ್ಯಗಳ ನಿರ್ವಹಣೆ ಇತ್ಯಾದಿ.
5.	ಶ್ರೀ ಎಸ್.ವಿ. ತಾಮಸೆ ಉಪ ಬಂದರು ಸಂರಕ್ಷಣಾಧಿಕಾರಿ	ಮೀನುಗಾರಿಕಾ ನಾವೆಗಳ ನೋಂದಣಿ ಮತ್ತು ತಪಾಸಣೆ, ಹಾಯಿ ಹಡಗುಗಳ ನೋಂದಣಿ ಮತ್ತು ತಪಾಸಣೆ ಹಾಗೂ ಮೀನುಗಾರಿಕಾ ನಾವೆಗಳು ಹಾಗೂ ಹಾಯಿ ಹಡಗುಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕರ್ತವ್ಯ ನಿರ್ವಹಣೆ. ಸಂಚಾರಿ ವಿಭಾಗಕ್ಕೆ ಸಂಬಂಧಿಸಿದಂತೆ ಅವರಿಗೆ ನಿಯೋಜಿಸಿದ ಕರ್ತವ್ಯ ವೇಳೆಯಲ್ಲಿ ಕಾರವಾರ ಬಂದರಿಗೆ ಆಗಮಿಸುವ ಹಡಗುಗಳ ಬರ್ತಿಂಗ್/ಅನ್‌ಬರ್ತಿಂಗ್‌ಗಳ ವೇಳೆಯಲ್ಲಿ ಮೂರಿಂಗ್ ಕರ್ತವ್ಯಗಳನ್ನು ನಿರ್ವಹಿಸುವುದು. ಕಾರವಾರ ಬಂದರಿನಲ್ಲಿ ನಡೆಯುವ ಸರಕು ಹೇರಿಳಿಸುವ ಚಟುವಟಿಕೆಗಳ ಮೇಲುಸ್ತುವಾರಿ, ಗೋದಾಮಿನಲ್ಲಿ ಸಂಗ್ರಹಿಸಿದ ಸರಕುಗಳ ವಿವರಗಳು ಹಾಗೂ ವಾಟರ್ ಬಾರ್ಜ್ ಮೂಲಕ ಪೂರೈಸಿದ ನೀರಿನ ವಿವರಗಳು ಸಂಚಾರಿ ವಿಭಾಗದ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ ಹಾಗೂ ಮುಖ್ಯದ್ವಾರದಲ್ಲಿ ನಿಯೋಜಿಸುವ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ ವಾರ್ಫ್ ಅಡಿಯಲ್ಲಿ ತೇಲು ನಾವೆಗಳ ನೋಂದಣಿ/ಪರವಾನಿಗೆ ವಾರ್ಷಿಕ ಪರಿಶೀಲನೆ ಕಛೇರಿಯ ಸಿಬ್ಬಂದಿಗಳ ಸೇವಾ ವಿಷಯಗಳ ಲೆಕ್ಕಪತ್ರ ನಿರ್ವಹಣೆ ಹಾಗೂ ವೇತನ ಬಟವಾಡೆ, ನೌಕಾ ಅಪಘಾತ ವರದಿ / ತನಿಖೆ, ಲೇಖನ ಸಾಮಗ್ರಿ ಮತ್ತು ಸರಕು ವಿಭಾಗದ ನಿರ್ವಹಣೆ, ಆಮದು ಮತ್ತು ರಫ್ತು ಶುಲ್ಕಗಳ ಆಕರಣೆ / ಸರ್ವಿಸ್ ಟ್ಯಾಕ್ಸ್ ಶುಲ್ಕಗಳ ಆಕರ ಹಾಗೂ ಕಛೇರಿಯ ಎಲ್ಲಾ ಕೆಲಸಗಳ ಮೇಲುಸ್ತುವಾರಿ.
6.	ಶ್ರೀ ಸುರೇಶ ಡಿ. ಶೆಟ್ಟಿ ಬಂದರು ಸಂರಕ್ಷಣಾಧಿಕಾರಿ (ಸಂಚಾರಿ)	ಕಾರವಾರ ಬಂದರಿಗೆ ಆಗಮಿಸುವ ಹಡಗುಗಳ ಬರ್ತಿಂಗ್/ಆನ್‌ಬರ್ತಿಂಗ್‌ಗಳ ವೇಳೆಯಲ್ಲಿ ಮೂರಿಂಗ್ ಕರ್ತವ್ಯಗಳನ್ನು ನಿರ್ವಹಿಸುವುದು, ಕಾರವಾರ ಬಂದರಿನಲ್ಲಿ ನಡೆಯುವ ಸರಕು ಹೇರಿಳಿಸುವ ಚಟುವಟಿಕೆಗಳ ಮೇಲುಸ್ತುವಾರಿ, ಗೋದಾಮಿನಲ್ಲಿ ಸಂಗ್ರಹಿಸಿದ ಸರಕುಗಳ ವಿವರಗಳು ಹಾಗೂ ವಾಟರ್ ಬಾರ್ಜ್ ಮೂಲಕ ಪೂರೈಸಿದ ನೀರಿನ ವಿವರಗಳು ಹಾಗೂ ವಾರ್ಫ್ ಏರಿಯಾದಲ್ಲಿ ವಾರದ ಬಾಡಿಗೆ ಮೇಲೆ ಸರಕುಗಳನ್ನು ಸಂಗ್ರಹಿಸಿದಾಗ ಮೇಲುಸ್ತುವಾರಿ ಮತ್ತು ವರದಿ ನೀಡುವುದು ವಿದ್ಯುತ್ ಪೂರೈಕೆ ಮತ್ತು ವರದಿ ನೀಡುವುದು ISPS ಕೋಡ್ ನಡಿಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳು ಸಂಚಾರಿ ವಿಭಾಗದ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ, ಹಾಗೂ ಮುಖ್ಯದ್ವಾರದಲ್ಲಿ ನಿಯೋಜಿಸುವ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ ಬಂದರು ಚಟುವಟಿಕೆಗಳಿಗೆ ಸಂಬಂಧಿಸಿದ ಶುಲ್ಕಗಳ ಆಕರಣೆ ಮತ್ತು ಬಂದರು ಆಡಳಿತಕ್ಕೆ ಸಂಬಂಧಿಸಿದ ವಿಭಾಗದ ಕರ್ತವ್ಯಗಳು, ಹಾರ್ಬರ್ ಕ್ರಾಫ್ಟ್ ನಿಯಮಗಳ ಅಡಿಯಲ್ಲಿ ಪರವಾನಿಗೆ ಸಾರಂಗ ಪ್ರಮಾಣ ಪತ್ರ ನೀಡುವುದು ಹಾಗೂ ಸಂಚಾರಿ ವಿಭಾಗಕ್ಕೆ ಸಂಬಂಧಿಸಿದ ಕರ್ತವ್ಯಗಳ ಮೇಲುಸ್ತುವಾರಿ ಇತ್ಯಾದಿ ವಿಷಯಗಳು.

7.	ಶ್ರೀ ಬಿ. ಬಿತುಮರಿಕೊಪ್ಪ ಬಂದರು ಸಂರಕ್ಷಣಾಧಿಕಾರಿ	ಬಂದರು ಭೂಮಿಯ ನಿರ್ವಹಣೆ, ಇಲಾಖಾ ಕಟ್ಟಡಗಳ ಬಾಡಿಗೆ ವಸೂಲಾತಿ ನೌಕಾ ಉದ್ದಿಮೆದಾರರಿಗೆ ಬಂದರು ಚಟುವಟಿಕೆಗಳಿಗೆ ಪೂರಕವಾದ ಉದ್ದೇಶಗಳಿಗೆ ಬಂದರು ಭೂಮಿಯನ್ನು ಗುತ್ತಿಗೆ/ಬಾಡಿಗೆಯ ಮೇಲೆ ನೀಡುವುದು ಹಾಗೂ ಬಾಡಿಗೆ ವಸೂಲಾತಿ, ಪುನರ್‌ವಸತಿ/ಅತಿಕ್ರಮಣ ತೆರವಿಗೆ ಸಂಬಂಧಿಸಿದ ವಿಷಯ, ಇಲಾಖಾ ವಸತಿ ಗೃಹಗಳ ಮತ್ತು ಇಲಾಖಾ ಕಟ್ಟಡಗಳ ಬಾಡಿಗೆ ವಸೂಲಾತಿ ಹಾಗೂ ಬಂದರು ಭೂಮಿಗೆ ಮತ್ತು ಇಲಾಖಾ ಕಟ್ಟಡ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಕರ್ತವ್ಯ ನಿರ್ವಹಣೆ.
8.	ಶ್ರೀ ದೀಪಕ ಪರುಳೇಕರ ಉಪ ಬಂದರು ಸಂರಕ್ಷಣಾಧಿಕಾರಿ	ಸಿಬ್ಬಂದಿ ವಿಭಾಗದ ನಿರ್ವಹಣೆ, ಸೇವಾ ಪುಸ್ತಕಗಳ ನಿರ್ವಹಣೆ, ವಾರ್ಷಿಕ ಬಡತಿ, ರಜೆ ಮಂಜೂರಾತಿ ಸಂಬಂಧಿಸಿದ ವಿಷಯಗಳು ಇಲಾಖಾ ಗೋದಾಮಿನಲ್ಲಿ ಸಂಗ್ರಹಿಸಿದ ಸರಕುಗಳ ವಿವರಗಳು, ಹಡಗುಗಳಿಗೆ ನೀರನ್ನು ಸರಬರಾಜು ಮಾಡಿದ ಬಗ್ಗೆ ಶುಲ್ಕ ಆಕರಣೆ ಹಾಗೂ ವಿದ್ಯುತ್ ಪೂರೈಕೆ ಶುಲ್ಕ ಆಕರಣೆ, ಇಲಾಖಾ ತೇಲು ನಾವೆಗಳ ನಿರ್ವಹಣೆ ಹಾಗೂ ಸಿವಿಲ್/ಮೆಕ್ಯಾನಿಕಲ್ ಕಾಮಗಾರಿಗಳಿಗೆ ಸಂಬಂಧಿಸಿದ ವಿಷಯಗಳು ಮತ್ತು ನಿರುಪಯುಕ್ತ ವಸ್ತುಗಳ ವಿಲೇವಾರಿ ಮತ್ತು ಸಿಬ್ಬಂದಿ ಹಾಗೂ ಜಿಎನ್‌ಎಲ್ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಕರ್ತವ್ಯಗಳ ನಿರ್ವಹಣೆ, ಏರಿಯಾದಲ್ಲಿ ವಾರದ ಬಾಡಿಗೆ ಮೇಲೆ ಸರಕುಗಳನ್ನು ಸಂಗ್ರಹಿಸಿದ್ದಾಗ ಮೇಲುಸ್ತುವಾರಿ ಮತ್ತು ವರದಿ ನೀಡುವುದು ವಿದ್ಯುತ್ ಪೂರೈಕೆ ಮತ್ತು ವರದಿ ನೀಡುವುದು ISPS ಕೋಡ್‌ನಡಿಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳು ಹಾಗೂ ಬಂದರು ಸಂರಕ್ಷಣಾಧಿಕಾರಿ (ಸಂಚಾರಿ) ಹಾಗೂ ಬಂದರು ಅಧಿಕಾರಿ, ಕಾರವಾರ ಇವರ ಮೌಖಿಕ ನಿರ್ದೇಶನದಂತೆ ಸಂಚಾರಿ ವಿಭಾಗದಲ್ಲಿನ ಕರ್ತವ್ಯಗಳ ನಿರ್ವಹಣೆ ಇತ್ಯಾದಿ.
9.	ಶ್ರೀ ಸಾಯಿನಾಥ.ಜಿ.ಕೇರಕರ ಡ್ರೈವರ್ ಗ್ರೇಡ್ – II	ಸಂಚಾರಿ ವಿಭಾಗಕ್ಕೆ ಸಂಬಂಧಿಸಿದಂತೆ ಅವರಿಗೆ ನಿಯೋಜಿಸಿದ ಕರ್ತವ್ಯ ವೇಳೆಯಲ್ಲಿ ಕಾರವಾರ ಬಂದರಿಗೆ ಆಗಮಿಸುವ ಹಡಗುಗಳ ಬರ್ತಿಂಗ್/ಅನ್‌ಬರ್ತಿಂಗ್‌ಗಳ ವೇಳೆಯಲ್ಲಿ ಮೂರಿಂಗ್ ಕರ್ತವ್ಯಗಳನ್ನು ನಿರ್ವಹಿಸುವುದು. ಕಾರವಾರ ಬಂದರಿನಲ್ಲಿ ನಡೆಯಲು ಸರಕು ಹೇರಿಳಿಸುವ ಚಟುವಟಿಕೆಗಳ ಮೇಲುಸ್ತುವಾರಿ, ಗೋದಾಮಿನಲ್ಲಿ ಸಂಗ್ರಹಿಸಿದ ಸರಕುಗಳ ವಿವರಗಳು ಹಾಗೂ ವಾಟರ್ ಬಾರ್ಜ್ ಮೂಲಕ ಪೂರೈಸಿದ ನೀರಿನ ವಿವರಗಳು ಸಂಚಾರಿ ವಿಭಾಗದ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ ಹಾಗೂ ಮುಖ್ಯದ್ವಾರದಲ್ಲಿ ನಿಯೋಜಿಸುವ ಸಿಬ್ಬಂದಿಗಳ ಕರ್ತವ್ಯಗಳ ಮೇಲುಸ್ತುವಾರಿ ವಾರ್ಫ್ ಏರಿಯಾದಲ್ಲಿ ವಾರದ ಬಾಡಿಗೆ ಮೇಲೆ ಸರಕುಗಳನ್ನು ಸಂಗ್ರಹಿಸಿದ್ದಾಗ ಮೇಲುಸ್ತುವಾರಿ ಮತ್ತು ವರದಿ ನೀಡುವುದು ವಿದ್ಯುತ್ ಪೂರೈಕೆ ಮತ್ತು ವರದಿ ನೀಡುವುದು, ISPS ಕೋಡ್ ನಡಿಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳು ಹಾಗೂ ಬಂದರು ಸಂರಕ್ಷಣಾಧಿಕಾರಿ (ಸಂಚಾರಿ) ಹಾಗೂ ಬಂದರು ಅಧಿಕಾರಿ, ಕಾರವಾರ ಇವರ ಮೌಖಿಕ ನಿರ್ದೇಶನದಂತೆ ಸಂಚಾರಿ ವಿಭಾಗದಲ್ಲಿನ ಕರ್ತವ್ಯಗಳ ನಿರ್ವಹಣೆ ಇತ್ಯಾದಿ.

ಈ ಕಛೇರಿಯ ಅಧಿಕಾರಿಗಳು ಮತ್ತು ನೌಕರರು ಕಛೇರಿ ಕೈಪಿಡಿ ಕಾರ್ಯ ವಿಧಾನದಲ್ಲಿ ಹಾಗೂ ಇಲಾಖೆಗೆ ಸಂಬಂಧಿಸಿದ ಅಧಿನಿಯಮ / ನಿಯಮಗಳ ವಿಧಿಸಲಾದ ಕಾರ್ಯ ವಿಧಾನಕ್ಕೆ ಅನುಸಾರವಾಗಿ ಕೆಲಸ ನಿರ್ವಹಿಸುತ್ತಾರೆ.

3. ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ರ ಸೆಕ್ಷನ್ 5 ಪ್ರಕಾರ ಈ ಕಛೇರಿಗೆ ಸಂಬಂಧಿಸಿದ ಕೆಳಕಂಡ ಪ್ರಾಧಿಕಾರಿಗಳನ್ನು ಗೊತ್ತು ಪಡಿಸಲಾಗಿದೆ.

ಪ್ರಕರಣ 2 ಖಂಡ (ಸಿ)	ಬಂದರು ಅಧಿಕಾರಿಯವರ ಕಛೇರಿ ಬೈತಖೋಲ ಕಾರವಾರ–581 302	ಸಾರ್ವಜನಿಕ ಪ್ರಾಧಿಕಾರ
ಪ್ರಕರಣ 2 ಖಂಡ (ಬಿ) ಮಾಹಿತಿ ನೀಡುವ ಪ್ರಾಧಿಕಾರಿ	ಬಂದರು ಅಧಿಕಾರಿ, ಕಾರವಾರ	ಸಕ್ಷಮ ಪ್ರಾಧಿಕಾರ
ಪ್ರಕರಣ 7 ಅಪೀಲು ಪ್ರಾಧಿಕಾರ	ನಿರ್ದೇಶಕರು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೈತಖೋಲ್ ಕಾರವಾರ–581 302.	

ಈ ಅಧಿನಿಯಮದ ಪ್ರಕಾರ ಮಾಹಿತಿ ಪಡೆಯಲು ಇಚ್ಚಿಸುವವರು ಮೇಲ್ಕಂಡ ಪ್ರಾಧಿಕಾರಗಳಲ್ಲಿ ನಿಯಮಾನುಸಾರ ಮನವಿ ಸಲ್ಲಿಸಿ ಮಾಹಿತಿ ಪಡೆಯಲಾಗಿದೆ.

ಬಂದರು ಅಧಿಕಾರಿ,
ಕಾರವಾರ

Statement showing the salary details employees of the Port Office, Karwar for the month of April 2008

Sl. No.	Name of the Officials Sriyuths	Designation	Pay Scale	Gross Salary
1	2	3	4	5
1	Capt. C. Swamy	Port Officer	18150-26925	25870
2	T.R. Naik	Port Conservator	10000-18150	18581
3	S.D. Shetty	Port Conservator, (Traffic)	10000-18150	15655
4	B.B. Tumarkoppa	Port Conservator	10000-18150	15590
5	M.J. Biliye	Dy. Port Conservator	8000-14800	15135
6	D.D. Parulekar	Dy. Port Conservator	8000-14800	12524
7	Gouse Ali	Dy. Port Conservator	8000-14800	11027
8	Yogesh Shetty	Dy. Port Conservator	8000-14800	10445
9	P.D. Taribagil	Dy. Ferries Inspector	8000-14800	19823
10	S.V. Tamse	Asst. Port Conservator	6250-12000	9529
11	M.L. Harikantra	Serant Grade-III	6250-12000	14674
12	Reshma.L.Harikantra	S.D.A.	5800-10500	8128
13	V.R. Naik	Light Keeper and Signaller	5800-10500	9351
14	U. Ramachandra Naik	Light Keeper and Signaller	5200-8200	12166
15	Giridhar Savant	Laskar	5200-8200	9093
16	P.D. Binage	Laskar	5200-8200	9093
17	Ramachandra.M.Naik	Laskar	5200-8200	9093
18	B.D. Binage	Laskar	5200-8200	9093
19	M.L. Naik	Laskar	5200-8200	9093
20	Raju Kunder	Laskar	5200-8200	8944
21	G.D. Pednekar	Laskar	5200-8200	9093
22	K.V. Naik	Laskar	5200-8200	8944
23	M.U. Achari	Laskar	5200-8200	8449
24	S.D. Mehata	Laskar	5200-8200	8944
25	N.M. Goankar	Laskar	5200-8200	8944
26	N.A. Gouda	Seamen	5200-8200	7339
27	H.Y. Batti	Seamen	5200-8200	7822
28	R.R. Hulswar	Seamen	5200-8200	6879
29	S.J. Aversakar	Seamen	5200-8200	5191
30	R. Anand	Seamen	5200-8200	7209
31	Ganu N.Ager	Seamen	6250-12000	11633
32	A.J. Lopies	Seamen	6250-12000	12744
33	M.R. Harikantra	Seamen	5200-8200	7116
34	S.D. Lopies	Toll keeper	6250-12000	11633
35	Shilpa.M. Gouda	Peon	4800-7275	6749
36	Guru.S.Savant	Laskar	5200-8200	8312
37	R.M. Bandari	Laskar	5200-8200	8897
38	D.A. Naik	Laskar	5200-8200	9093
39	R.N. Tandel	Laskar	5200-8200	8897
40	R.B. Chipkar	Laskar	5200-8200	8947

ಬಂದರು ಅಧಿಕಾರಿ,
ಕಾರವಾರ

ಪಿ.ಆರ್. ನಂ. 618

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಆಗಸ್ಟ್ ೧೩, ೨೦೦೯ (ಶ್ರಾವಣ ೨೨, ಶಕ ವರ್ಷ ೧೯೩೧)	ಸಂಚಿಕೆ ೩೩

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಸಿಒ 83 ಸಿಎಸ್ಎಸ್ 2009, ಬೆಂಗಳೂರು, ದಿನಾಂಕ:9ನೇ ಜುಲೈ 2009

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಜಿಲ್ಲಾ ಸಹಕಾರ ಕೇಂದ್ರ ಸಗಟು ಮಾರಾಟ ಸ್ಟೋರ್ಸ್ ನಿ., ಮೈಸೂರು ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀಮತಿ ಪಿ. ನೀಲಮ್ಮ ಕೋಂ ಶಿವಣ್ಣ, ಕುಮಾರನಪುರ ಅಂಚೆ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ
2. ಶ್ರೀ ವೀರಭದ್ರಾಚಾರ್ ಬಿನ್ ಮಲ್ಲಸೋಮಚಾರ್ ಮುತ್ತೂರು ಗ್ರಾಮ(ಅಂ) ಪಿರಿಯಾಪಟ್ಟಣ ತಾಲ್ಲೂಕು
3. ಶ್ರೀ ದಾಸಯ್ಯ ಬಿನ್ ಮೊಂಡಯ್ಯ, ಸಿದ್ದನಹುಂಡಿ, ಟಿ, ನರಸೀಪುರ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಬ್ಬಾಚಾರಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. 435

ಅಧಿಸೂಚನೆ

ಸಂಖ್ಯೆ:ಸಿಒ 85 ಸಿಎಸ್ಎಸ್ 2008, ಬೆಂಗಳೂರು, ದಿನಾಂಕ:9ನೇ ಜುಲೈ 2009

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ, ಮಂಡ್ಯ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಜಿ.ಸಿ. ಮಹೇಂದ್ರ ಬಿನ್ ಚಿಕ್ಕಿಮೋಗಯ್ಯ, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು
2. ಶ್ರೀ ಎಂ. ಚಿಕ್ಕಣ್ಣ ಬಿನ್ ಮಾದಯ್ಯ, ಕೆನ್ನಾಳು ಗ್ರಾಮ, ಪಾಂಡವಪುರ ತಾಲ್ಲೂಕು
3. ಶ್ರೀಮತಿ ಕೆ.ಎನ್. ನೀನಾ ಪಟೇಲ್ ಕೋಂ ಡಾ. ಬಿ.ಎಸ್. ಸತೀಶಚಂದ್ರ, ನಂ. 1245, 5ನೇ ಕ್ರಾಸ್, ವಿವೇಕಾನಂದ ರಸ್ತೆ, ಅಶೋಕನಗರ, ಮಂಡ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 436

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಅಧಿಸೂಚನೆ

ಸಂಖ್ಯೆ:ಸಿಒ 14 ಸಿಎಸ್ಎಸ್ 2008, ಬೆಂಗಳೂರು, ದಿನಾಂಕ:10ನೇ ಜುಲೈ 2009

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಶಿವಮೊಗ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರುಗಳ ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಗಂಗಾಧರ್ ಮಂಡೇನಕೊಪ್ಪ, ಮತ್ತೂರು ಅಂಚೆ, ಶಿವಮೊಗ್ಗ ತಾಲ್ಲೂಕು
2. ಶ್ರೀಮತಿ ಜಯಮ್ಮ ಬಿನ್ ಭೀಮನಗೌಡ, ಜಿಗಳೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ
3. ಶ್ರೀ ಕೆ. ಶಿವಲಿಂಗ ಬಿನ್ ಕರಿಯಪ್ಪ, ಚಿಕ್ಕೂಲಿಕೆರೆ, ಚೆನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 437

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 61 ಎಲ್‌ಸಿಎಲ್ 2009, ಬೆಂಗಳೂರು, ದಿನಾಂಕ: 18ನೇ ಜುಲೈ 2009

ಕೇಂದ್ರ ಅಧಿನಿಯಮ 1952ರ ಸೆಕ್ಷನ್ 15ರಲ್ಲಿ (1952ರ ಅಧಿನಿಯಮ 53) ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು, 2009ರ ನಿಯಮ (7)(ಎ)(2)ರನ್ವಯ ಕರ್ನಾಟಕ ರಾಜ್ಯ ಸರ್ಕಾರದಿಂದ ನೇಮಕಾತಿ ಮಾಡುವ ನೋಟರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡ 3 ಸದಸ್ಯರನ್ನೊಳಗೊಂಡ ಸಂದರ್ಶನ ಮಂಡಳಿಯನ್ನು ರಚಿಸಿ ನೇಮಿಸಲಾಗಿದೆ.

1	ಅಪರ ಕಾರ್ಯದರ್ಶಿಗಳು (ಅಭಿಪ್ರಾಯ) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	ಅಧ್ಯಕ್ಷರು
2	ಜಂಟಿ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ	ಸದಸ್ಯರು
3	ಉಪ ಕಾರ್ಯದರ್ಶಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಕಾನೂನು ಕಾರ್ಯದರ್ಶಿಗಳು ನಿರ್ದೇಶಿಸುವ)	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಕುಂತಲಾ ಹೆಚ್.ಆರ್.

ಪಿ.ಆರ್. 438 ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ-2)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 553 ಪಿಎಂಎಸ್ 2008, ಬೆಂಗಳೂರು, ದಿನಾಂಕ: 16ನೇ ಜುಲೈ 2009

1872 ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ ಕಾಯಿದೆಯ ಕಲಂ 7ರ (ಕೇಂದ್ರ ಕಾಯ್ದೆ ಎಕ್ಸ್ ವಿ-1872) ಅನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀ ರೋಶನ್ ಡಿಸೋಜ, ನ್ಯಾಯವಾದಿಗಳು, ಸಮಾದಾನ್ ಹೌಸ್, ಪಾಂಡಿಕಟ್ಟ, ಕೈರಂಗಾಲ, ವಿಲೇಜ್, ಕುರ್ನಾಡ್ ಪೋಸ್ಟ್, ಬಂಟ್ವಾಳ, ಇವರಿಗೆ ಮೇಲಿನ ಕಾಯ್ದೆಯಡಿ ಕಾರ್ಯನಿರ್ವಹಿಸಲು ಕ್ರಿಶ್ಚಿಯನ್ ಜನಾಂಗದ ವಿವಾಹ ನೋಂದಣಾಧಿಕಾರಿಯನ್ನಾಗಿ ದಕ್ಷಿಣ ಕನ್ನಡ ಜಿಲ್ಲೆಯ ಆಡಳಿತ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಿ ಸದರಿ ಕಾಯ್ದೆಯಡಿಯಲ್ಲಿ ಸೂಚಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆಲಿಸ್ ಗೋನ್ಸಾಲ್ವಿಸ್

ಪಿ.ಆರ್. 439 ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ರಹದಾರಿ & ವಿದೇಶಿಯರು)

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್ಆರ್ 2008(B-53), ಬೆಂಗಳೂರು, ದಿನಾಂಕ: 20ನೇ ಜುಲೈ 2009

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(b)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕಾರ್ಕಳ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಪ್ರಸನ್ನ ಬಿನ್ ಬೋಜ, ಮಾಧವ ಕೃಪಾ, ಜೈನ ಮಠದ ಹತ್ತಿರ, ದಾನಶಾಲೆ, ಕಾರ್ಕಳ
2. ಶ್ರೀಮತಿ ಸದಾವತಿ ಹೆಗ್ಡೆ, ಕಾಬೆಟ್ಟು, ಕಾರ್ಕಳ
3. ಶ್ರೀ ಸುರೇಶ್ ಮಡಿವಾಳ, ಅಯೋಧ್ಯ, ಎಸ್.ಬಿ. ಕಾಲೇಜು ರಸ್ತೆ, ಕಾರ್ಕಳ
4. ಶ್ರೀ ಪ್ರಶಾಂತ್ ಶೆಟ್ಟಿ ಬಿನ್ ರಾಮಚಂದ್ರ ಶೆಟ್ಟಿ, ಶ್ರೀನಿವಾಸ, ಹವಲ್ದಾರ್ ಬೆಟ್ಟು ಕಡೆಮನೆ, ಕಾರ್ಕಳ
5. ಶ್ರೀ ನವೀನ್ ಸುವರ್ಣ ಬಿನ್ ವಿ.ಆರ್. ಸುವರ್ಣ, ಅಪರ್ಣಾ, 4ನೇ ಬ್ಲಾಕ್, ತಳ್ಳಿರು ರಸ್ತೆ, ಕಾರ್ಕಳ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಆರ್. ದವೇಂದ್ರ

ಪಿ.ಆರ್. 440 ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 94 ಎಲ್‌ಆರ್‌ಎಂ 2008, ಬೆಂಗಳೂರು, ದಿನಾಂಕ: 9ನೇ ಜುಲೈ 2009

ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು, ಇವರು ಮೈಸೂರು ತಾಲ್ಲೂಕಿನ ರಮ್ಮನಹಳ್ಳಿ ಗ್ರಾಮದ ಸ.ನಂ. 12/1 ಮತ್ತು ಇತರೆಗಳಲ್ಲಿ 90.25 ಎಕರೆ, ವರುಣ ದಂಡಿಕೆರೆ ಜಂತಗಳ್ಳಿ ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ 125.31 ಎಕರೆ ಹೀಗೆ ಒಟ್ಟು 216.16 ಎಕರೆ ಕೃಷಿ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ದಾನ ರೂಪದಲ್ಲಿ ಪಡೆಯಲು ನಮೂನೆ 15-ಎ ಮತ್ತು ನಮೂನೆ 15-ಎಎ, ಗಳಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ:ಎಲ್‌ಆರ್ ಎಫ್‌ಎಸ್‌ಪಿಎಲ್. 26/2008-09 ದಿನಾಂಕ:2.12.2008 ರಲ್ಲಿ ಪ್ರಸ್ತಾಪಿತ ಮೇಲ್ಕಂಡ 216.16 ಎಕರೆ ಜಮೀನನ್ನು ದಾನವಾಗಿ ಪಡೆಯಲು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109 ರಡಿ ಅನುಮೋದನೆ/ವಿನಾಯಿತಿ ನೀಡುವ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನು ಖರೀದಿಸಲು ಖಾತೆದಾರರಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಹಾಗೂ ಸದರಿ ಜಮೀನು ಕರ್ನಾಟಕ ಪರಿಶೀಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ, ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿರ್ಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38-ಬಿ ಮತ್ತು 38-ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು, ಇವರು ಮೈಸೂರು ತಾಲ್ಲೂಕಿನ ರಮ್ಮನಹಳ್ಳಿ ಗ್ರಾಮದ ಸ.ನಂ. 12/1 ಮತ್ತು ಇತರೆಗಳಲ್ಲಿ 90.25 ಎಕರೆ, ವರುಣ ದಂಡಿಕೆರೆ ಜಂತಗಳ್ಳಿ ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ 125.31 ಎಕರೆ ಹೀಗೆ ಒಟ್ಟು 216.16 ಎಕರೆ ಕೃಷಿ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಪಡೆಯಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1 ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.

2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ/ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.

4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ. 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಪಿ.ಆರ್. 441 ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಸುಧಾರಣೆ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 28 ಎಲ್ಎಜಿ 2009, ಬೆಂಗಳೂರು, ದಿನಾಂಕ: 20ನೇ ಜುಲೈ 2009

ಶ್ರೀ ಸಿ.ಬಿ. ದಾವಣಗೇರಿ, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರಲ್ಲಿನ ಷರತ್ತಿಗಳಿಗೊಳಪಟ್ಟು ದಿನಾಂಕ:15.5.2009 ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ದಾವಣಗೆರೆ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಇ. ಶಿವಾನಂದ

ಪಿ.ಆರ್. 442 ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅಧಿಸೂಚನೆ

ಸಂಖ್ಯೆ: ಲಾ 33 ಎಲ್ಎಜಿ 2009, ಬೆಂಗಳೂರು, ದಿನಾಂಕ: 20ನೇ ಜುಲೈ 2009

ಶ್ರೀ ಎಲ್. ನರಸಿಂಹಮೂರ್ತಿ, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರಲ್ಲಿನ ಷರತ್ತಿಗಳಿಗೊಳಪಟ್ಟು ದಿನಾಂಕ:15.5.2009 ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತುಮಕೂರು ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಇ. ಶಿವಾನಂದ

ಪಿ.ಆರ್. 443 ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅಧಿಸೂಚನೆ

ಸಂಖ್ಯೆ: ಲಾ 136 ಎಲ್ಸಿಇ 2009, ಬೆಂಗಳೂರು, ದಿನಾಂಕ: 20ನೇ ಜುಲೈ 2009

ಕರ್ನಾಟಕ ಕಾನೂನು ಅಧಿಕಾರಿಗಳ ಸೇವೆಗಳ (ನೇಮಕಾತಿ ಮತ್ತು ಷರತ್ತುಗಳು) ನಿಯಮಗಳು 1977ರ ನಿಯಮ 26(3)ರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೈಸೂರಿನ ಒಂದನೇ ಶೀಘ್ರಗತಿ ನ್ಯಾಯಾಲಯದ ವಿಶೇಷ ಸರ್ಕಾರಿ

ಅಭಿಯೋಜಕರಾದ ಶ್ರೀ ಎನ್.ಸಿ. ಸಂಜೀವನ್, ಇವರನ್ನು ದಿನಾಂಕ:15.5.2009 ರಿಂದ ಜಾರಿಗೆ ಬರುವಂತೆ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಇ. ಶಿವಾನಂದ

ಪಿ.ಆರ್. 444

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

COMMERCE & INDUSTRIES SECRETARIAT

NOTIFICATION

No. CI. 179:MMM.2007(P), Bangalore, Dated: 18th July 2009

In pursuance of Section 5 read with Section 8 of the Mines and Minerals (Development and Regulation) Act, 1957, and after obtaining prior approval Government of India, Ministry of Mines, New Delhi vide their letter No.5/164/2007-M.IV dated:14.8.2008, the Government of Karnataka hereby accords sanction for grant of Mining Lease for a period of 20 years (Twenty years only) in favour of Shri Ram Rao M. Poal for Iron ore, over an area of 70-00 acres (Seventy acres only) in R.M. Block, Ramgad Range, Sandur Taluk, Bellary District with the boundaries as mentioned below and as per the sketch furnished by the Director, Department of Mines and Geology, Bangalore subject to compliance of the provisions of the Mines and Minerals (Development and Regulation) Act, 1957 and Mineral Concession Rules, 1960 and other applicable Acts and Rules including Forest (Conservation) Act 1980, Environmental Protection Act, 1986, EIA Notification 2006 etc., as amended from time to time and Rules made there under.

BOUNDARIES

On the North by	Part of Revenue land	On the South by	Banappanakeri Short Cut
On the East by	Part of Revenue land	On the West by	Part of Revenue land and Sy.No.9

Sanction of this Mining lease is subject to the necessary clearances like Forest Clearance under Forest (Conservation)Act, 1980, Environmental Clearance under Environmental Protection Act, 1986, Consent for Establishment/Consent for Operation from the KSPCB. Sanction of this Mining lease is also subject to the terms and conditions appended hereto and subject to outcome of writ petition/appeal, if any, pending in respect of the area covered in this Notification.

The Mining lease should be executed only after submission of all the statutory documents/clearances, by the applicant.

By Order and in the name of the Governor of Karnataka

M. VASUDEVAMURTHY

Under Secretary to Government (Mines)

Commerce & Industries Department

TERMS AND CONDITIONS OF THE MINING LEASE SANCTIONED IN GOVERNMENT NOTIFICATION NO. CI.179 :MMM 2007(P) Dated 18.7.2009

a) Mining lease should be in respect of **Iron ore** only. If other minerals are found in association with **Iron ore**, they should be brought to the notice of Government and if the lessee desires to mine these minerals along with **Iron ore** he/she/it should do so only after the consent of Government is obtained in writing.

b) If beryl or any other substance prescribed U/S 3 of the Atomic Energy Act, XXIX of 1948 is found to occur in the property under the lease, the lessee shall make available such mineral to the Government of India.

c) The lease shall also be subject to the provisions of Rules in Chapter IV of the Minerals Concession Rules, 1960.

d) The lease shall also be subject to the Rules, issued U/S 18 of the Mines & Minerals (D&R) Act, 1957.

e) The lessee shall pay to the Director of Mines and Geology in Karnataka, Bangalore, necessary Security Deposit for due observance of the terms and conditions of the lease in accordance with Rule 32 of the lease issued to him.

f) The lessee shall be governed by all conditions that may be incorporated in the lease deed, to be executed.

g) The lessee shall abide by the rules contained in the Karnataka State Forest Manual, if the lease area covers any forestland.

h) Government shall have the right of purchasing the ore at current market rates.

i) The lease would be determined if the lessee fails to commence execution of the lease deed.

j) The area mentioned above is subject to verification after actual survey and demarcation.

k) The lease shall be for a period of Twenty Years.

l) The lessee/s shall pay dead rent, cesses and royalty as detailed below:-

DEAD RENT PAYABLE PER HECTARE PER ANNUM

Ist year of the lease	: Rs. 100/-
2nd year to 5th year of the lease	: Rs. 140/-
6th year to 10th year of the lease	: Rs. 280/-
11th year of the lease & onwards	: Rs.400/-

Surface Rent: Rs.2.50 per hectare per annum on the area used by the lessee/s for mining purposes.

Local & other Cesses: As prevalent in **Bellary District.**

Royalty: At the rate prescribed in Second Schedule to the Mines & Minerals (D&R) Act, 1957 and as amended from time to time.

m) The total area held by the applicant/s under mining lease including the present one, shall not exceed 10 Sq.Km.

n) Mining operations shall not be commenced/conducted unless a qualified manager and other supervisory staff are appointed as required under the Matalliferous Mines Regulations, 1961 and relevant notices are sent to the Director-General of Mines Safety, Dhanbad with a copy of the same to the concerned Director of Mines Safety.

o) The minerals should be value added and the Lessee should adhere to existing National Mineral Policy and Karnataka Mineral Policy, 2008.

M. VASUDEVAMURTHY
Under Secretary to Government (Mines)
Commerce & Industries Department

P.R. 445

SOCIAL WELFARE SECRETARIAT

NOTIFICATION

No. SWD 231 BCA 2007, Bangalore, Dated: 8th July 2009

In exercise of the Powers conferred by sub-section (7) of section 13 of the Karnataka Scheduled Castes, Scheduled Tribes and other Backward Classes (Reservation of Appointment etc.,) Act, 1990 (Karnataka Act 7 of 1991) the Government of Karnataka hereby makes the following rules further the amend the Karntaka Scheduled Castes, Scheduled Tribes and Other Backward Classes (Reservation of Appointment etc) Rules 1992 namely:

1. Title and Commencement: (1) These rules may be called the Karnataka Scheduled Castes, Scheduled Tribes and Other Backward Classes (Reservation of Appointment etc.,) (Amendment)Rules , 2009.

(2) They shall come into force on the date of the publication in the official Gazette.

2. Substitution of expression: In the Karnataka Scheduled Castes, Scheduled Tribes and Other Backward Classes (Reservation of Appointment etc.,) Rules 1992 for the words "Director of Social Welfare", where ever they occur the words "Commissioner/Director of Social Welafare" shall be substituted.

SIDDALINGAIAH

P.R. 446 Deputy Secretary to Government

Social Welfare Department

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 42 ಸಿಎಸ್‌ಎಸ್ 2008, ಬೆಂಗಳೂರು, ದಿನಾಂಕ: 24ನೇ ಜುಲೈ 2009

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು ಇದರ ಆಡಳಿತ ಸಮಿತಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಡಿ.ವಿ. ಸದಾನಂದಗೌಡ ಬಿನ್ ವೆಂಕಪ್ಪಗೌಡ, ನಂ. 15–22–1390/4, "ಕಮಲ" ಲೋವರ್ ಬೇಂದೂರು, 2ನೇ ಅಡ್ಡರಸ್ತೆ, ಕಂಕನಾಡಿ, ಮಂಗಳೂರು–575002 ದಕ್ಷಿಣ ಕನ್ನಡ ಜಿಲ್ಲೆ.

2. ಶ್ರೀ ಇ. ಅಶ್ವತ್ಥನಾರಾಯಣ, ನಂ. 103, ಮೀನಾ ನಿಲಯ, ಲಕ್ಷ್ಮೀದೇವಸ್ಥಾನ ರಸ್ತೆ, ಪುಟ್ಟೇನಹಳ್ಳಿ, ಬೆಂಗಳೂರು–560078.

3. ಶ್ರೀಮತಿ ಮಂಗಳಾದೇವಿ ಬಿರಾದಾರ್, ಮೂರ್ತಿನಗರ, ಮಡಿವಾಳೇಶ್ವರ ದೇವಸ್ಥಾನ ರಸ್ತೆ, ಮುದ್ದೇಬಿಹಾಳ, ಬಿಜಾಪುರ ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಬ್ಬಾಚಾರಿ

ಪಿ.ಆರ್. 447 ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಆಗಸ್ಟ್ ೧೩, ೨೦೦೯ (ಶ್ರಾವಣ ೨೨, ಶಕ ವರ್ಷ ೧೯೩೧)	ಸಂಚಿಕೆ ೩೩

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯನಿರ್ವಾಹಕ ಇಂಜನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು
ಟೆಂಡರ್ ಪ್ರಕಟಣೆ

ಸಂಖ್ಯೆ:ಲೋಇ:ಮಂವಿ:ಟಿ.ಎನ್‌ಡಿ(20):2009–10:ಎಇ–1, ಮಂಗಳೂರು, ದಿನಾಂಕ: 20ನೇ ಜುಲೈ 2009

ಈ ಕೆಳಕಂಡ ಕೆಲಸಕ್ಕೆ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿದ ಕಾರ್ಯನಿರ್ವಾಹಕ ಇಂಜನಿಯರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ದಿನಾಂಕ: 21.08.2009ರಂದು ಸಂಜೆ:4.00 ಗಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸುವರು.

ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ನಿಗದಿಪಡಿಸಿದ ಬೆಲೆಯೊಂದಿಗೆ (ಇದನ್ನು ಹಿಂತಿರುಗಿಸುವುದಿಲ್ಲ) ಮತ್ತು ನಿಗದಿಪಡಿಸಿದ ಇ.ಎಂ.ಡಿ.ಯೊಂದಿಗೆ ದಿನಾಂಕ: 17.08.2009ರ ವರೆಗೆ ಕೆಲಸದ ಎಲ್ಲಾ ದಿನಗಳಂದು ಕಛೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಗುತ್ತಿಗೆದಾರರು ರಿಜಿಸ್ಟ್ರೇಷನ್ ಸರ್ಟಿಫೈಡ್ ಪ್ರತಿ ಹಾಗೂ ಈ ತರಹದ ಕಾಮಗಾರಿಗಳನ್ನು ಕೈಗೊಂಡ ಬಗ್ಗೆ ಅನುಭವ ಪತ್ರವನ್ನು ಸಲ್ಲಿಸತಕ್ಕದ್ದು. ಬಿಡ್ ಡಾಕ್ಯುಮೆಂಟ್ Section 3 ರಲ್ಲಿ ಕೇಳಿರುವ Qualification Information ನ್ನು ನಿಗದಿತ ನಮೂನೆಯಲ್ಲಿ ಅರ್ಜಿದಾರರು ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಖಾಲಿ ಟೆಂಡರು ಫಾರಂಗಳನ್ನು ದಿನಾಂಕ: 18.08.2009 ರಿಂದ 20.08.2009 ರ ಸಂಜೆ:5.30ರ ತನಕ ನೀಡಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ.ಎಂ.ಡಿ ಠೇವಣಿ (ರೂ.ಗಳಲ್ಲಿ)	ಟೆಂಡರು ಅವಧಿ (ಮಳೆಗಾಲ ಹೊರತು ಪಡಿಸಿ)	ಟೆಂಡರು ಫಾರಂ ಬೆಲೆ ತೆರಿಗೆ ಸೇರಿ (ರೂ.ಗಳಲ್ಲಿ)
I	**ಲೆಕ್ಕಶೀರ್ಷಿಕೆ**					
1	ಸುಳ್ಯ ತಾಲ್ಲೂಕು ಸುಳ್ಯದಲ್ಲಿ ತಹಶೀಲ್ದಾರರ ಕಛೇರಿಯಲ್ಲಿ ಗವರ್ನ್‌ಮೆಂಟ್ ಬಿಸಿನೆಸ್ ಸೆಂಟರ್, ಮತ್ತು ಐ.ಟಿ.ಸರ್ವರ್ ರೂಮ್ ಕಟ್ಟಡ ನಿರ್ಮಾಣ ಕಾಮಗಾರಿ	6.57	ಮೂರನೇ ದರ್ಜೆ ಮತ್ತು ಮೇಲ್ಪಟ್ಟು	16,500.00	3 ತಿಂಗಳು	1650.00

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ.ಎಂ.ಡಿ ಠೇವಣಿ (ರೂ.ಗಳಲ್ಲಿ)	ಟೆಂಡರು ಅವಧಿ (ಮಳೆಗಾಲ ಹೊರತು ಪಡಿಸಿ)	ಟೆಂಡರು ಫಾರಂ ಬೆಲೆ ತೆರಿಗೆ ಸೇರಿ (ರೂ.ಗಳಲ್ಲಿ)
2	ಬೆಳ್ತಂಗಡಿ ತಾಲ್ಲೂಕು ಬೆಳ್ತಂಗಡಿಯಲ್ಲಿ ತಹಶೀಲ್ದಾರರ ಕಛೇರಿಯಲ್ಲಿ ಐ.ಟಿ.ಸರ್ವರ್ ರೂಮ್ ಕಟ್ಟಡ ನಿರ್ಮಾಣ ಕಾಮಗಾರಿ	3.24	ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು	8,100.00	3 ತಿಂಗಳು	1100.00
3	ಪುತ್ತೂರು ತಾಲ್ಲೂಕು ಪುತ್ತೂರಿನಲ್ಲಿ ತಹಶೀಲ್ದಾರರ ಕಛೇರಿಯಲ್ಲಿ ಐ.ಟಿ.ಸರ್ವರ್ ರೂಮ್ ಕಟ್ಟಡ ನಿರ್ಮಾಣ ಕಾಮಗಾರಿ	3.24	ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು	8,100.00	3 ತಿಂಗಳು	1100.00

ಸೂಚನೆಗಳು:–

1. ಉದ್ದೇಶಿಸಿರುವ ಕಾಮಗಾರಿಯ ಶೇ. 50ರಷ್ಟು ಮೊತ್ತದ ಇದೇ ತರಹದ ಕಾಮಗಾರಿಯನ್ನು ಕಳೆದ 5 ವರ್ಷಗಳ ಅವಧಿಯ ಒಂದು ಆರ್ಥಿಕ ವರ್ಷದಲ್ಲಿ ಪೂರೈಸಿರತಕ್ಕದ್ದು. ಈ ಕುರಿತು ಪ್ರಮಾಣಪತ್ರವನ್ನು ಸಕ್ಷಮ ಅಧಿಕಾರಿಯವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
2. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಯವರು ಹೊಂದಿರುತ್ತಾರೆ.
3. ಇ.ಎಂ.ಡಿ.ಯನ್ನು ರಾಷ್ಟ್ರೀಕೃತ ಯಾ ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಎಫ್.ಡಿ.ಆರ್ / ಕಾಲ್‌ಡೆಪೋಸಿಟ್, ಡಿ.ಡಿ ಅಥವಾ ಎನ್.ಎಸ್.ಸಿ. ರೂಪದಲ್ಲಿ (ಎನ್‌ಎಸ್‌ಸಿಯನ್ನು ಕೆಳಸಹಿದಾರರ ಹೆಸರಿಗೆ ಪ್ಲೆಡ್ಜ್ ಮಾಡಿ) ಸಲ್ಲಿಸಬೇಕು. ನಿಗದಿಪಡಿಸಿದ ಮುಂಗಡ ಠೇವಣಿಯೊಂದಿಗೆ ಸಲ್ಲಿಸದ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
4. ಗುತ್ತಿಗೆದಾರರು ಕೆಲಸವನ್ನು ನಿಗದಿತ ಸಮಯದಲ್ಲಿ ಮಾಡಿ ಮುಗಿಸತಕ್ಕದ್ದು, ತಪ್ಪಿದಲ್ಲಿ ನಿಯಮದಂತೆ ದಂಡವನ್ನು ವಿಧಿಸಲಾಗುವುದು.
5. ಕಾಮಗಾರಿಗೆ ಬೇಕಾದ ಸಿಮೆಂಟ್, ಉಕ್ಕು ಮತ್ತು ಇನ್ನಿತರ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು ಹಾಗೂ ಇದನ್ನು ಸಕ್ಷಮ ಅಧಿಕಾರಿಯವರಿಂದ ಪರೀಕ್ಷೆ ಪಡೆದು ಫಲಿತಾಂಶವು ಐ.ಎಸ್.ಐ. ಗುಣವನ್ನು ಖಚಿತಪಡಿಸಿ ಕೆಲಸಕ್ಕೆ ಉಪಯೋಗಿಸತಕ್ಕದ್ದು. ಈ ಅಂಶವನ್ನು ಗುತ್ತಿಗೆದಾರರು ಟೆಂಡರನ್ನು ಸಲ್ಲಿಸುವಾಗ ಗಮನಿಸುವುದು.
6. ಯಶಸ್ವಿ ಟೆಂಡರುದಾರರು ನಿರ್ವಹಿಸುವ ಕಾಮಗಾರಿಯ ಮೊತ್ತದ ಶೇ.1ರಷ್ಟನ್ನು ಲೇಬರ್ ಸೆಸ್‌ನ್ನಾಗಿ ಸರಕಾರಿ ಆದೇಶ ಸಂ. ಯಲ್‌ಡಿ 3:ಎಲ್‌ಇಡಿ 2006:ಬೆಂಗಳೂರು: ದಿನಾಂಕ: 18.1.2007ರಂತೆ ಕಡಿತಗೊಳಿಸಲಾಗುವುದು.
7. ಕೆಲಸದ ಕುರಿತಾದ ಯಾವುದೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ. ಹಾಗೂ ಇಲಾಖೆಯ ವೆಬ್‌ಸೈಟ್ "htpp://www.kpwd.gov.in" ನಲ್ಲಿ ಸಂಪರ್ಕಿಸಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಪಿ.ಆರ್. 601 ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಇ–ಟೆಂಡರ್ – ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ) (2ನೇ ಕರೆ)

ಸಂಖ್ಯೆ:ಲೋ.ಇ:ಮಂವಿ:ಟಿಎನ್‌ಡಿ(21ಇ):2009–10:ಎಇ1, ಮಂಗಳೂರು, ದಿನಾಂಕ: 23ನೇ ಜುಲೈ 2009

1 ಈ ಕೆಳಗೆ ತಿಳಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ–ಟೆಂಡರ್‌ನ್ನು ಕರ್ನಾಟಕ ಸರಕಾರದ ರಾಜ್ಯಪಾಲರ ಪರವಾಗಿ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ಅರ್ಹರಾದ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್‌ನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿರುತ್ತಾರೆ. ಟೆಂಡರುದಾರರು ಟೆಂಡರ್ ನಿಯಮಾವಳಿಯ ಕ್ಲಾಜ್ 3 ರಂತೆ ಕನಿಷ್ಟ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ.

2. ದಿನಾಂಕ: 25.7.2009 ರಿಂದ 24.8.2009ರ ವರೆಗೆ ಟೆಂಡರುದಾರರು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. (Download).

3. ಟೆಂಡರುಗಳು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿಯನ್ನು ಟೆಂಡರ್ ಜೊತೆಯಲ್ಲಿ ಲಗತ್ತಿಸಬೇಕು. ಇ.ಎಂ.ಡಿ.ಯನ್ನು ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬಹುದಾಗಿರುತ್ತದೆ ಮತ್ತು ಅದರ ಊರ್ಜಿತ ಅವಧಿಯು ಟೆಂಡರು ಊರ್ಜಿತ ಅವಧಿಗಿಂತ 45 ದಿನಗಳು ಹೆಚ್ಚಾಗಿ ಇರಬೇಕು.

4. ಟೆಂಡರುಗಳನ್ನು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ದಿನಾಂಕ: 24.8.2009ರ ಅಪರಾಹ್ನ 4.00 ಗಂಟೆ (16 :00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಟೆಂಡರನ್ನು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯಂತೆ ತೆರೆಯಲಾಗುವುದು.

5. ಹೆಚ್ಚಿನ ವಿವರಗಳನ್ನು ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಠೇವಣಿ (ಲಕ್ಷ ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ)
	ನಬಾರ್ಡ್ ಆರ್.ಐ.ಡಿ.ಎಫ್–14 (ರಸ್ತೆಗಳು)			
1	ಮಂಗಳೂರು ತಾಲ್ಲೂಕಿನ ಪಡುಪಣಂಬೂರು ಚೆಲಿಯಾರು ಗ್ರಾಮದ ಸುಣ್ಣದಗೂಡು – ಕೆರೆಕಾಡು ರಸ್ತೆ ಅಭಿವೃದ್ಧಿ	67.70	1.354	9 ತಿಂಗಳು
2	ಪುತ್ತೂರು ತಾಲ್ಲೂಕಿನ ಕುಡ್ಡುಪದವು – ಅಮ್ಮೈ ರಸ್ತೆ ಅಭಿವೃದ್ಧಿ	100.00	2.00	12 ತಿಂಗಳು
3	ಪುತ್ತೂರು ತಾಲ್ಲೂಕಿನ ಇವಮಾಡು – ಪಾಲೆಪಡ್ಡಿ ಅಮ್ಮೈ ರಸ್ತೆ ಅಭಿವೃದ್ಧಿ	69.00	1.38	9 ತಿಂಗಳು
4	ಸುಳ್ಯ ತಾಲ್ಲೂಕಿನ ನರಕೋಡು – ಕೊಲ್ಚಾರು – ಬಂಡ್ಯಡ್ಕ ರಸ್ತೆ ಅಭಿವೃದ್ಧಿ	95.00	1.90	9 ತಿಂಗಳು

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಮಂಗಳೂರು ವಿಭಾಗ, ಮಂಗಳೂರು.

ಪಿ.ಆರ್. 611

ನಿರ್ದೇಶಕರವರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು–560 001

ಟೆಂಡರು ಪ್ರಕಟಣೆ

ಸಂಖ್ಯೆ: ಬಿಟಿಇ/02/ಇಎಫ್‌ಎಸ್/2009–10, ದಿನಾಂಕ: 16ನೇ ಜುಲೈ 2009

ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆಯ ಪರೀಕ್ಷಾ ಮಂಡಳಿಗೆ ಸೆಮಿಸ್ಟರ್ ಡಿಪ್ಲೋಮಾ ಪರೀಕ್ಷೆಗಳನ್ನು ನಡೆಸಲು ಅಗತ್ಯವಾಗಿ ಬೇಕಾಗುವ 12 ಲಕ್ಷ ಮುಖ್ಯ ಉತ್ತರ ಪತ್ರಿಕೆ, 04 ಲಕ್ಷ ಹೆಚ್ಚುವರಿ ಮತ್ತು 07 ಲಕ್ಷ ಪ್ರಾಯೋಗಿಕ ಉತ್ತರ ಪತ್ರಿಕೆಗಳನ್ನು ಕಾಗದ ಒದಗಿಸಿಕೊಂಡು ಮುದ್ರಿಸಿ ಸರಬರಾಜು ಮಾಡಲು ಸಾಮರ್ಥ್ಯವಿರುವ ದೊಡ್ಡ ಪ್ರಮಾಣದ ಮುದ್ರಣ ವ್ಯವಸ್ಥೆ ಹೊಂದಿರುವ ಮುದ್ರಣಕಾರರಿಂದ ಕೆ.ಟಿ.ಟಿ.ಪಿ ಕಾಯ್ದೆಯನ್ವಯ ಮುಕ್ತ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಮುದ್ರಣಕಾರರು ರೂಪಾಯಿ 282.00ಗಳನ್ನು ನಿರ್ದೇಶನಾಲಯದ ನಗದು ವಿಭಾಗದಲ್ಲಿ ಪಾವತಿಸಿ ಪಡೆದ ರಶೀದಿ ಅಥವಾ ರಾಷ್ಟ್ರೀಕೃತ/ಷೆಡ್ಯೂಲ್ ಬ್ಯಾಂಕಿನಿಂದ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಹೆಸರಿಗೆ ಪಡೆದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಈ ನಿರ್ದೇಶನಾಲಯದ, ಪರೀಕ್ಷಾ ಮಂಡಳಿಯ 5ನೇ ಮಹಡಿಯ ಕೊಠಡಿ ಸಂಖ್ಯೆ:503ರಲ್ಲಿ ಕೊಟ್ಟು ಅರ್ಜಿ ಹಾಗೂ ನಿಯಮ ನಿಬಂಧನೆಗಳನ್ನು ಪಡೆಯಬಹುದು. ಟೆಂಡರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17.08.2009 ಅಪರಾಹ್ನ 3.00 ಗಂಟೆ ಆಗಿರುತ್ತದೆ. ಅದೇ ದಿನ ಸಂಜೆ 4.00 ಗಂಟೆಗೆ ನಿರ್ದೇಶಕರ ಕೊಠಡಿಯಲ್ಲಿ ತೆರೆಯಲಾಗುವುದು. ಟೆಂಡರುದಾರರು ಅರ್ಜಿಯ ಜೊತೆ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಹೆಸರಿಗೆ ಪಡೆದ ರೂ.50,000–00 ಮೊತ್ತದ ರಾಷ್ಟ್ರೀಕೃತ /ಷೆಡ್ಯೂಲ್ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸಬೇಕು. ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿ ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು–1, ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

ಪಿ.ಆರ್. 608

ನಿರ್ದೇಶಕರವರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು–560 001

ಟೆಂಡರು ಪ್ರಕಟಣೆ

ಸಂಖ್ಯೆ: ಬಿಟಿಇ/03/ಇಎಫ್‌ಎಸ್/2009–10, ದಿನಾಂಕ: 21ನೇ ಜುಲೈ 2009

ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆಯ ಪರೀಕ್ಷಾ ಮಂಡಳಿಗೆ ಸೆಮಿಸ್ಟರ್ ಡಿಪ್ಲೋಮಾ ಪರೀಕ್ಷೆಗಳನ್ನು ನಡೆಸಲು ಅಗತ್ಯವಾಗಿ ಬೇಕಾಗುವ ಡ್ರಾಯಿಂಗ್ ಹಾಳೆ, ಉತ್ತರ ಪತ್ರಿಕೆ ಕಳಿಸುವ, ಮತ್ತು 'ಡಿ'ಕೋಡಿಂಗ್ ಲಕೋಟೆ, ಮೇಣದ ಬತ್ತಿ, ಸ್ಟಾಪ್ಲರ್ ಪಿನ್ಸ್, ಕಾಟನ್ ಟ್ಯಾಗ್ಸ್, ರಿಸೋಗ್ರಾಫ್ ಪೇಪರ್, ತೆಳುಕಾಗದ, ಪೆನ್ಸಿಲ್ ಕಾರ್ಬನ್, ಪಿನ್ಸ್, ಇತ್ಯಾದಿ ಸಾಮಗ್ರಿಗಳನ್ನು ಸರಬರಾಜು ಮಾಡಲು ಸಾಮರ್ಥ್ಯವಿರುವ ಮುದ್ರಣಕಾರರಿಂದ/ವ್ಯಾಪಾರಸ್ಥರಿಂದ ಕೆ.ಟಿ.ಟಿ.ಪಿ ಕಾಯ್ದೆಯನ್ವಯ ಮುಕ್ತ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ವ್ಯಾಪಾರಸ್ಥರು ರೂಪಾಯಿ 282.00ಗಳನ್ನು ನಿರ್ದೇಶನಾಲಯದ ನಗದು ವಿಭಾಗದಲ್ಲಿ ಪಾವತಿಸಿ ಪಡೆದ ರಶೀದಿ ಅಥವಾ ರಾಷ್ಟ್ರೀಕೃತ/ಷೆಡ್ಯೂಲ್ ಬ್ಯಾಂಕಿನಿಂದ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಹೆಸರಿಗೆ ಪಡೆದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಈ ಇಲಾಖೆಯ, ಪರೀಕ್ಷಾ ಮಂಡಳಿಯ 5ನೇ ಮಹಡಿಯ ಕೊಠಡಿ ಸಂಖ್ಯೆ:503ರಲ್ಲಿ ಕೊಟ್ಟು ಅರ್ಜಿ ಹಾಗೂ ನಿಯಮ ನಿಬಂಧನೆಗಳನ್ನು ಪಡೆಯಬಹುದು. ಟೆಂಡರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22.08.2009 ಅಪರಾಹ್ನ 3.00 ಗಂಟೆ ಆಗಿರುತ್ತದೆ. ಅದೇ ದಿನ ಸಂಜೆ 4.00 ಗಂಟೆಗೆ ನಿರ್ದೇಶಕರ ಕೊಠಡಿಯಲ್ಲಿ ತೆರೆಯಲಾಗುವುದು. ಟೆಂಡರುದಾರರು ಅರ್ಜಿಯ ಜೊತೆ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಹೆಸರಿಗೆ ಪಡೆದ ರೂ.10,000–00 ಮೊತ್ತದ ರಾಷ್ಟ್ರೀಕೃತ /ಷೆಡ್ಯೂಲ್ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸಬೇಕು. ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿ ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು–1, ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ನಿರ್ದೇಶಕರು

ಪಿ.ಆರ್. 609 ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

ನಿರ್ದೇಶಕರವರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು–560 001

ಮರು ಟೆಂಡರು ಪ್ರಕಟಣೆ

ಸಂಖ್ಯೆ: ಬಿಟಿಇ/14/ಇಎಫ್‌ಎಸ್/2008, ದಿನಾಂಕ: 21ನೇ ಜುಲೈ 2009

ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರು ಡಿಪ್ಲೋಮಾ ವಿದ್ಯಾರ್ಥಿಗಳಿಗೆ 'ವೆಬ್ ಎನೇಬ್ಲ್‌ಡ್ ಐಡಿ ಕಾರ್ಡ್' ಮತ್ತು 'ಸೆಕ್ಯೂರ್‌ಡ್ ಡಿಪ್ಲೋಮಾ ಪ್ರಮಾಣ ಪತ್ರ'ಗಳನ್ನು ನೀಡುವ ಸಲುವಾಗಿ ಮುಕ್ತ ಟೆಂಡರನ್ನು ಕರೆಯಲಾಗಿದ್ದು, ಈ ಬಗ್ಗೆ 5 ವರ್ಷಗಳ ಅನುಭವವಿರುವ ಆಸಕ್ತ ಸರಬರಾಜುದಾರರು/ವ್ಯಾಪಾರಸ್ಥರು ಟೆಂಡರಿನಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ಟೆಂಡರು ಅರ್ಜಿಯ ಬೆಲೆ ರೂಪಾಯಿ 282.00ನ್ನು ನಗದಾಗಿ ಇಲಾಖೆಯ ನಗದು ವಿಭಾಗದಲ್ಲಿ ಪಾವತಿಸಿ ಪಡೆದ ರಶೀದಿ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ನಿಂದ ನಿರ್ದೇಶಕರ ಹೆಸರಿಗೆ ತೆಗೆದ ಡಿ.ಡಿಯನ್ನು ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿಯ ಕೊಠಡಿ ಸಂಖ್ಯೆ 503 ರಲ್ಲಿ ಕೊಟ್ಟು ಅರ್ಜಿ ಹಾಗೂ ಟೆಂಡರಿನ ನಿಯಮ ನಿಬಂಧನೆಗಳನ್ನು ಪಡೆಯಬಹುದು. ಟೆಂಡರು ಅರ್ಜಿ ಸಲ್ಲಿಸಲು ದಿನಾಂಕವನ್ನು 22.08.2009 ಅಪರಾಹ್ನ 2.00 ಗಂಟೆಯವರೆಗೆ ವಿಸ್ತರಿಸಲಾಗಿದೆ. ಟೆಂಡರಿನ ಜೊತೆಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ನಿರ್ದೇಶಕರ ಹೆಸರಿಗೆ ತೆಗೆದ ರೂ.01.00 ಲಕ್ಷ ಮೊತ್ತದ ಡಿ.ಡಿ.ಯನ್ನು ಲಗತ್ತಿಸಬೇಕು. ಹೆಚ್ಚಿನ ವಿವರಗಳಿಗೆ, ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿಯವರ ಕಛೇರಿಯನ್ನು ಸಂಪರ್ಕಿಸಬಹುದು.

ನಿರ್ದೇಶಕರು

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

Office of the Director, Department of Technical Education, Tantrika Bhavan, Palace Road, Bengaluru-560001

Re-Tender Notification

No.BTE/14/EFS/2008, Dated: 21st July 2009

Sealed re-tenders are invited for printing & supply of Secured Diploma Certificates and supply of web enabled ID Cards for Diploma Students in Karnataka State. The applications are available in this office. The cost of the tender application is Rs.250+12.5% tax payable at the cash counter of the department or any Nationalised banks Demand Draft. The tender application forms should be submitted with an EMD of Rs.01 lakh payable at any Nationalised Bank in Karnataka, drawn in favour of Director, Department of Technical Education, Palace Road, Bengaluru-560001. The filled and sealed tender application forms along with samples of the material used for above said items and EMD DD should sent to the Secretary, Board of Technical Examinations, Palace Road, Bengaluru-560001. The last date for submitting the filled tender applications is extended up to 22.08.2009 at 2.00 P.M.

DIRECTOR

P.R. 610 Department of Technical Education, Palace Road, Bengaluru-1

ಉಡುಪಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ

ಅಧಿಸೂಚನೆ ಸಂಖ್ಯೆ: ADMN-I/ 4055/2009, ದಿನಾಂಕ: 18ನೇ ಜುಲೈ 2009.

ವಿಷಯ: ಬೆರಳಚ್ಚುಗಾರ–ನಕಲುಗಾರ / ಆದೇಶಿಕ ಜಾರಿಕಾರ ಮತ್ತು ಜವಾನ ಹುದ್ದೆಗಳ ನೇಮಕಾತಿ ಬಗ್ಗೆ.

ಓದಲಾಗಿದೆ: (1) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II/205/2004, ದಿನಾಂಕ: 17.06.2009

(2) ಸರ್ಕಾರಿ ಆದೇಶ ಸಂಖ್ಯೆ LAW:32 LCE 2008 ದಿನಾಂಕ: 23.04.2008

(3) ಸರ್ಕಾರಿ ಅಧಿಸೂಚನೆ ಸಂಖ್ಯೆ: LAW 01 LAC–2008, ದಿನಾಂಕ:13–02–2008.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.08.2009 ಸಂಜೆ 5–00 ಘಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ:– ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲಾ ನ್ಯಾಯಾಲಯ, ಉಡುಪಿ ಜಿಲ್ಲೆ, ಉಡುಪಿ.

ಭಾಗ–1:

(I) ಬೆರಳಚ್ಚುಗಾರ–ನಕಲುಗಾರ: (TYPIST-COPYIST):

I. ಹುದ್ದೆಗಳ ಸಂಖ್ಯೆ : 1

II. ಹುದ್ದೆಯ ವರ್ಗೀಕರಣ: ಸಾಮಾನ್ಯ ಗ್ರಾಮೀಣ ಅಭ್ಯರ್ಥಿ

III. **ವೇತನ ಶ್ರೇಣಿ:–** 5800–100–6000–125–6500–150–7100–175–7800–200–8600–225–9500–250–10500– ಇತರ ಭತ್ಯೆಗಳೊಂದಿಗೆ.

IV. ಶೈಕ್ಷಣಿಕ ವಿದ್ಯಾರ್ಹತೆ:–

(1) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕಿರಿಯ ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

V. ಅರ್ಹತಾ ಪರೀಕ್ಷೆ:

(1) ಅಭ್ಯರ್ಥಿಗೆ 15 ನಿಮಿಷಗಳ ಅವಧಿಯಂತೆ ಎರಡೂ ಭಾಷೆಗಳಲ್ಲಿ ಬೆರಳಚ್ಚು ಮಾಡಲು ಉಕ್ತಲೇಖನ ನೀಡಲಾಗುವುದು.

(II) ಆದೇಶಿಕ ಜಾರಿಕಾರ (PROCESS-SERVER):

I. ಹುದ್ದೆಗಳ ಸಂಖ್ಯೆ : 1

II. ಹುದ್ದೆಯ ವರ್ಗೀಕರಣ ಸಾಮಾನ್ಯ ಮಹಿಳಾ ಅಭ್ಯರ್ಥಿ

III. ವೇತನ ಶ್ರೇಣಿ:– 5200–100–6000–125–6500–150–7100–175–7800–200–8200

IV. ಶೈಕ್ಷಣಿಕ ವಿದ್ಯಾರ್ಹತೆ:–

(1) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(2) ಡ್ರೈವಿಂಗ್ ಲೈಸೆನ್ಸನ್ನು ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

(III) ಜವಾನ (PEON):

I. ಹುದ್ದೆಗಳ ಸಂಖ್ಯೆ : 1

II. ಹುದ್ದೆಯ ವರ್ಗೀಕರಣ: ಸಾಮಾನ್ಯ ಗ್ರಾಮೀಣ ಅಭ್ಯರ್ಥಿ

III. ವೇತನ ಶ್ರೇಣಿ:– 4800–100–6000–125–6500–150–7100–175–7275.

IV. ಶೈಕ್ಷಣಿಕ ವಿದ್ಯಾರ್ಹತೆ:–

(1) ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು.

(2) ಕನ್ನಡ ಓದಲು ಬರೆಯಲು ತಿಳಿದಿರಬೇಕು.

ಭಾಗ–2:–

(1) ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗ್ತೀಕರಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

(2) ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ಅರ್ಜಿ ನಮೂನೆಗಳಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

(3) ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಫೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.

(4) ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾಗಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರ ಪ್ರಮಾಣ ಪತ್ರಗಳ ಪ್ರತಿಗಳನ್ನು ಸ್ವಯಂ ದೃಢೀಕರಿಸತಕ್ಕದ್ದು. ಅರ್ಜಿಯೊಂದಿಗೆ ಮೂಲ ಪ್ರತಿಗಳನ್ನು ಲಗ್ತೀಕರಿಸುವ ಅವಶ್ಯಕತೆ ಇರುವುದಿಲ್ಲ. ಲಗ್ತೀಕರಿಸಿದ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸುವ ದಿನಾಂಕದ ಒಳಗೆ ಪಡೆದಿರಬೇಕು.

(5) ಅಭ್ಯರ್ಥಿಗಳು ಅರ್ಜಿಯೊಂದಿಗೆ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ ಅಥವಾ ವಿದ್ಯಾಲಯದಿಂದ ಪಡೆದ ನಡತೆ ಪ್ರಮಾಣ ಪತ್ರದ ಸ್ವಯಂ ದೃಢೀಕೃತ ಪ್ರತಿಯನ್ನು ಲಗ್ತೀಕರಿಸತಕ್ಕದ್ದು.

(6) ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ಶೀಲದ ಬಗ್ಗೆ ತಮ್ಮ ಸಂಬಂಧಿಯಲ್ಲದ ಸಮಾಜದ ಇಬ್ಬರು ಗಣ್ಯ ವ್ಯಕ್ತಿಗಳಿಂದ (ಹಿಂದೆ ಕಲಿತ ಶಾಲಾ ಅಥವಾ ಕಾಲೇಜು ಮುಖ್ಯಸ್ಥರನ್ನು ಹೊರತುಪಡಿಸಿ) ಅರ್ಜಿ ಸಲ್ಲಿಸುವ ದಿನಾಂಕದ ಆರು ತಿಂಗಳ ಒಳಗೆ ಪಡೆದ ಎರಡು ಪ್ರಮಾಣ ಪತ್ರಗಳನ್ನು ಲಗ್ತೀಕರಿಸತಕ್ಕದ್ದು. (ಗಣ್ಯ ವ್ಯಕ್ತಿಗಳ ರುಜುವಿನಡಿಯಲ್ಲಿ ಹೆಸರು ಮತ್ತು ಮೊಹರು ಕಡ್ಡಾಯವಾಗಿ ಇರತಕ್ಕದ್ದು).

(7) ವಯೋಮಿತಿ:–

(ಅ) ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಟ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

(ಆ) **ಗರಿಷ್ಟ ವಯೋಮಿತಿ:–** ಸಾಮಾನ್ಯ ವರ್ಗ : 35 ವರ್ಷಗಳು.
2ಎ, 2ಬಿ , 3ಎ, 3ಬಿ : 38 ವರ್ಷಗಳು.
ಪರಿಶಿಷ್ಟಜಾತಿ : ಪರಿಶಿಷ್ಟಪಂಗಡ : ಪ್ರವರ್ಗ–1 : 40 ವರ್ಷಗಳು.

(ಇ) ಮಾಜಿ ಸೈನಿಕರಿಗೆ ಗರಿಷ್ಟ ವಯೋಮಿತಿ, ಅವನು ಸಶಸ್ತ್ರ ದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳು ಆಗುವುದೋ ಅಷ್ಟು ವರ್ಷಗಳ ಸಡಿಲಿಕೆ.

(ಈ) ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಹತ್ತು ವರ್ಷಗಳ ಸಡಿಲಿಕೆ.

(ಉ) ಹುಟ್ಟಿದ ದಿನಾಂಕವನ್ನು ತೋರಿಸುವ ಬಗ್ಗೆ ದೃಢೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

(8) ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಕೋರಿದಲ್ಲಿ ಹಾಜರುಪಡಿಸಬೇಕಾದ ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳು:–

(ಅ) ಸೈನಿಕ ಸೇವೆಯಿಂದ ಬಿಡುಗಡೆಯಾದ : ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ.

(ಆ) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ.

(ಇ) ಅಂಗವಿಕಲ ಅಭ್ಯರ್ಥಿಗಳು ನಿಗದಿ ಪಡಿಸಿದ ನಮೂನೆಯಲ್ಲಿ ಪಡೆದ ವೈದ್ಯಕೀಯ ಪ್ರಮಾಣ ಪತ್ರ.

(ಈ) ವಿಧವೆಯರು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.

(9) ಆಯ್ಕೆ ವಿಧಾನ:–

(ಅ) ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ) (ನೇಮಕಾತಿ) (ತಿದ್ದುಪಡಿ) ನಿಯಮ 2007 ರ ಪ್ರಕಾರ ನಡೆಸಲಾಗುವುದು.

(ಆ) ಸಾಮಾನ್ಯ ವರ್ಗಗಳ ಮಹಿಳಾ ಅಥವಾ ಗ್ರಾಮೀಣ ಮೀಸಲಾತಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದ ಪಕ್ಷದಲ್ಲಿ ಆ ಸ್ಥಾನಗಳಿಗೆ ಅದೇ ವರ್ಗದ ಅರ್ಹ ಇತರ ಅಭ್ಯರ್ಥಿಗಳಿಂದ ತುಂಬಿಕೊಳ್ಳಲಾಗುವುದು.

(10) ಅಭ್ಯರ್ಥಿಗಳಿಗೆ ಸೂಚನೆ:–

(ಅ) ಅಭ್ಯರ್ಥಿಗಳು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸಿರುವುದು ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

(ಆ) ಅಪೂರ್ಣವಾಗಿರುವ, ಸಹಿ ಮಾಡದ ಮತ್ತು ವಿದ್ಯಾರ್ಹತೆ, ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(ಇ) ಸರ್ಕಾರಿ ಮತ್ತು ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಮುಚಿತ ಮಾರ್ಗದ ಮುಖಾಂತರ ಸಲ್ಲಿಸಬೇಕು.

(ಈ) ಅಭ್ಯರ್ಥಿಗಳು ತಮ್ಮ ಅರ್ಜಿಯ ಜೊತೆ 5–00 ರೂ.ಗಳ ಸ್ಟಾಂಪು ಲಗತ್ತಿಸಿರುವ ಸ್ವವಿಳಾಸವಿರುವ ಲಕೋಟೆಯನ್ನು ಲಗತ್ತಿಸಿರಬೇಕು.

(ಉ) ಅರ್ಜಿದಾರರು ಯಾವ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆಂಬುದನ್ನು ದಪ್ಪ ಅಕ್ಷರಗಳಲ್ಲಿ ಲಕೋಟೆಯ ಮೇಲೆ ನಮೂದಿಸಿರಬೇಕು.

(ಊ) ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.

(ಋ) ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಗಳನ್ನು ನಡೆಸಲಾಗುವುದಿಲ್ಲ.

ಜಿಲ್ಲಾ ನ್ಯಾಯಾಧೀಶರು,
ಉಡುಪಿ.

ಅರ್ಜಿ ನಮೂನೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ ಜಿಲ್ಲೆ, ಉಡುಪಿ – ಇವರಿಗೆ.

ಭಾವಚಿತ್ರ

ಮಾನ್ಯರೇ,

ಉಡುಪಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಕಟಣೆ ಸಂಖ್ಯೆ ಎಡಿಎಂಎನ್–1/4055/2009 ದಿನಾಂಕ: 18.07.2009ರ ಪ್ರಕಾರ ಬೆರಳಚ್ಚುಗಾರ–ನಕಲುಗಾರ ಹುದ್ದೆಗೆ ನಾನು ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.

1.	ಅಭ್ಯರ್ಥಿಯ ಹೆಸರು	
2.	ತಂದೆಯ/ತಾಯಿಯ/ಗಂಡನ ಹೆಸರು	
3.	ಪೂರ್ಣ ವಿಳಾಸ	
4.	ವಯಸ್ಸು ಮತ್ತು ಜನ್ಮ ದಿನಾಂಕ	
5.	ಲಿಂಗ	ಪುರುಷ / ಮಹಿಳೆ
6.	ರಾಷ್ಟ್ರೀಯತೆ : ಮತ : ಜಾತಿ/ಉಪಜಾತಿ :	

7. ಶೈಕ್ಷಣಿಕ ವಿದ್ಯಾರ್ಹತೆಯ ವಿವರಗಳು:– (ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)

	ಉತ್ತೀರ್ಣ ಹೊಂದಿದ ಪರೀಕ್ಷೆಗಳು	ಉತ್ತೀರ್ಣ ಹೊಂದಿದ ವರ್ಷ ಮತ್ತು ನೋಂದಣಿ ಸಂಖ್ಯೆ.	ಗರಿಷ್ಠ ಅಂಕಗಳು	ಪಡೆದಿರುವ ಅಂಕಗಳು	ಶೇಕಡ ವಾರು ಅಂಕಗಳು
ಎ.	ಎಸ್.ಎಸ್.ಎಲ್.ಸಿ. / ತತ್ಸಮಾನ ಪರೀಕ್ಷೆ				
ಬಿ.	ಕಿರಿಯ ದರ್ಜೆಯ ಆಂಗ್ಲ ಬೆರಳಚ್ಚು ಪರೀಕ್ಷೆ				
ಸಿ.	ಕಿರಿಯ ದರ್ಜೆಯ ಕನ್ನಡ ಬೆರಳಚ್ಚು ಪರೀಕ್ಷೆ				
ಡಿ.	ಇತರೆ ವಿದ್ಯಾರ್ಹತೆಗಳು ಇದ್ದಲ್ಲಿ				

೮.	ಗ್ರಾಮೀಣ ಮೀಸಲಾತಿ ಮತ್ತು ವಯೋಮಿತಿ ಸಡಿಲಿಕೆ ಸೌಲಭ್ಯ ಪಡೆಯ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಲಗತ್ತಿಸಿರುವ ಬಗ್ಗೆ ವಿವರಗಳು.	
9.	ಸಲ್ಲಿಸಲು ಇಚ್ಛೆ ಪಡುವ ಇತರ ಯಾವುದಾದರು ವಿವರಗಳು	

ಸೂಚನೆ:– ಅಭ್ಯರ್ಥಿಯು ತನಗೆ ಅನ್ವಯವಾಗದ್ದನ್ನು ಹೊಡೆದು ಹಾಕತಕ್ಕದ್ದು.

ಘೋಷಣೆ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದ್ದು ಹಾಗೂ ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ಬಿಟ್ಟು ಬಿಡಲು ನಾನು ಬದ್ಧನಾಗಿರುತ್ತೇನೆ /ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡರೆ ಉಡುಪಿ ಜಿಲ್ಲಾ ಘಟಕದ ಯಾವುದೇ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧನಿದ್ದೇನೆ/ಸಿದ್ಧಳಿದ್ದೇನೆ.

ಸ್ಥಳ :

ದಿನಾಂಕ:

ಅಭ್ಯರ್ಥಿಯ ಸಹಿ.

ಅಭ್ಯರ್ಥಿಯು ಸರ್ಕಾರಿ ನೌಕರನಾಗಿದ್ದ ಪಕ್ಷದಲ್ಲಿ ನೇಮಕಾತಿ ಪ್ರಾಧಿಕಾರಗಳ ದೃಢೀಕರಣ ಪತ್ರ

ಶ್ರೀ/ ಶ್ರೀಮತಿ.. ಇವರು ನಮ್ಮ ಇಲಾಖೆಯಲ್ಲಿ ದಿನಾಂಕ: ರಿಂದ ರ ವರೆಗೆ ಸೇವೆ ಸಲ್ಲಿಸುತ್ತಿದ್ದು ಅಭ್ಯರ್ಥಿಯ ನಡತೆಯು ಉತ್ತಮವಾಗಿದ್ದು .... ಹುದ್ದೆಗೆ ಅರ್ಹರಿರುತ್ತಾರೆ ಮತ್ತು ....ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿದೆ.

ಸ್ಥಳ : ಸಹಿ :

ಪದನಾಮ :

ದಿನಾಂಕ : ಕಛೇರಿಯ ಮೊಹರು :

ಅರ್ಜಿ ನಮೂನೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ ಜಿಲ್ಲೆ , ಉಡುಪಿ – ಇವರಿಗೆ.

ಭಾವಚಿತ್ರ

ಮಾನ್ಯರೇ,

ಉಡುಪಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಕಟಣೆ ಸಂಖ್ಯೆ ಎಡಿಎಂಎನ್–1/4055/2009, ದಿನಾಂಕ:18.07.2009ರ ಪ್ರಕಾರ ಆದೇಶಿಕ ಜಾರಿಕಾರ /ಜವಾನ ಹುದ್ದೆಗೆ ನಾನು ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.

1.	ಅಭ್ಯರ್ಥಿಯ ಹೆಸರು	
2.	ತಂದೆಯ/ತಾಯಿಯ/ಗಂಡನ ಹೆಸರು	
3.	ಪೂರ್ಣ ವಿಳಾಸ	
4.	ವಯಸ್ಸು ಮತ್ತು ಜನ್ಮ ದಿನಾಂಕ	

5.	ಲಿಂಗ	ಪುರುಷ / ಮಹಿಳೆ			
6.	ರಾಷ್ಟ್ರೀಯತೆ : ಮತ : ಜಾತಿ/ಉಪಜಾತಿ :				
7.	ಶೈಕ್ಷಣಿಕ ವಿದ್ಯಾರ್ಹತೆಯ ವಿವರಗಳು:– (ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)				
	ಉತ್ತೀರ್ಣ ಹೊಂದಿದ ಪರೀಕ್ಷೆಗಳು	ಉತ್ತೀರ್ಣ ಹೊಂದಿದ ವರ್ಷ ಮತ್ತು ನೋಂದಣಿ ಸಂಖ್ಯೆ.	ಗರಿಷ್ಠ ಅಂಕಗಳು	ಪಡೆದಿರುವ ಅಂಕಗಳು	ಶೇಕಡ ವಾರು ಅಂಕಗಳು
ಎ.	ಏಳನೇ ತರಗತಿ ಪರೀಕ್ಷೆ (ಜವಾನ ಹುದ್ದೆಗೆ)				
ಬಿ.	ಎಸ್.ಎಸ್.ಎಲ್.ಸಿ./ತತ್ಸಮಾನ (ಆದೇಶಿಕ ಜಾರಿಕಾರ ಹುದ್ದೆಗೆ)				
ಸಿ.	ಇತರೆ ವಿದ್ಯಾರ್ಹತೆಗಳು ಇದ್ದಲ್ಲಿ				
8.	ಗ್ರಾಮೀಣ ಮೀಸಲಾತಿ ಮತ್ತು ವಯೋಮಿತಿ ಸಡಿಲಿಕೆ ಸೌಲಭ್ಯ ಪಡೆಯ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಲಗತ್ತಿಸಿರುವ ಬಗ್ಗೆ ವಿವರಗಳು.				
9.	ಅರ್ಜಿದಾರರು ವಾಹನ ಚಾಲನೆಯ ಲೈಸೆನ್ಸ್ ಹೊಂದಿರುವರೇ? (ಆದೇಶಿಕ ಜಾರಿಕಾರ ಹುದ್ದೆಗೆ ಮಾತ್ರ)				
10	ಸಲ್ಲಿಸಲು ಇಚ್ಛೆ ಪಡುವ ಇತರ ಯಾವುದಾದರು ವಿವರಗಳು				

ಸೂಚನೆ:– ಅಭ್ಯರ್ಥಿಯು ತನಗೆ ಅನ್ವಯವಾಗದ್ದನ್ನು ಹೊಡೆದು ಹಾಕುವುದು.

ಘೋಷಣೆ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದ್ದು ಹಾಗೂ ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ಬಿಟ್ಟು ಬಿಡಲು ನಾನು ಬದ್ಧನಾಗಿರುತ್ತೇನೆ /ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡರೆ ಉಡುಪಿ ಜಿಲ್ಲಾ ಘಟಕದ ಯಾವುದೇ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧನಿದ್ದೇನೆ/ಸಿದ್ಧಳಿದ್ದೇನೆ.

ಸ್ಥಳ :

ದಿನಾಂಕ: ಅಭ್ಯರ್ಥಿಯ ಸಹಿ.

ಅಭ್ಯರ್ಥಿಯು ಸರ್ಕಾರಿ ನೌಕರನಾಗಿದ್ದ ಪಕ್ಷದಲ್ಲಿ ನೇಮಕಾತಿ ಪ್ರಾಧಿಕಾರಗಳ ದೃಢೀಕರಣ ಪತ್ರ

ಶ್ರೀ/ ಶ್ರೀಮತಿ.. ಇವರು ನಮ್ಮ ಇಲಾಖೆಯಲ್ಲಿ ದಿನಾಂಕ: ರಿಂದ ರ ವರೆಗೆ ಸೇವೆ ಸಲ್ಲಿಸುತ್ತಿದ್ದು ಅಭ್ಯರ್ಥಿಯ ನಡತೆಯು ಉತ್ತಮವಾಗಿದ್ದು .... ಹುದ್ದೆಗೆ ಅರ್ಹರಿರುತ್ತಾರೆ ಮತ್ತು ....ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿದೆ.

ಸ್ಥಳ : ಸಹಿ :

ಪದನಾಮ :

ದಿನಾಂಕ : ಕಛೇರಿಯ ಮೊಹರು :

ಅಧಿಸೂಚನೆಯ ಸಂಕ್ಷಿಪ್ತರೂಪ

ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉಡುಪಿ

ಸಂಖ್ಯೆ: ADMN-I/4055/2009, ದಿನಾಂಕ: 18.07.2009

ಉಡುಪಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಘಟಕದಲ್ಲಿ, ಈ ಕೆಳಗೆ ನಮೂದಿಸಿರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಈ ಕೆಳಗೆ ತೋರಿಸಿದ ನಮೂನೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:20.08.2009.

ಹುದ್ದೆಗಳ ಹೆಸರು. ಸಂಖ್ಯೆ ಮತ್ತು ಮೀಸಲಾತಿಯ ವಿವರ: 1. ಬೆರಳಚ್ಚುಗಾರ–ನಕಲುಗಾರ–(1) ಸಾಮಾನ್ಯ ಗ್ರಾಮೀಣ 2. ಆದೇಶಿಕ ಜ್ಯಾರಿಕಾರ–(1) ಸಾಮಾನ್ಯ ಮಹಿಳೆ 3. ಜವಾನ – (1) ಸಾಮಾನ್ಯ ಗ್ರಾಮೀಣ

ಶೈಕ್ಷಣಿಕ ವಿದ್ಯಾರ್ಹತೆ:

1. ಬೆಳಚ್ಚು–ನಕಲುಗಾರ: 1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ. 2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕಿರಿಯ ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ. 2. ಪ್ರೊಸೆಸ್ ಸರ್ವರ್: 1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ. 2. ಡ್ರೈವಿಂಗ್ ಲೈಸೆನ್ಸ್‌ನ್ನು ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. 3. ಜವಾನರು: 1. ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು. 2. ಕನ್ನಡ ಓದಲು ಬರೆಯಲು ತಿಳಿದಿರಬೇಕು.

ವಯೋಮಿತಿ: ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಟ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು. ಗರಿಷ್ಟ ವಯೋಮಿತಿ:– ಸಾಮಾನ್ಯ ವರ್ಗ : 36 ವರ್ಷಗಳು, ಪ್ರವರ್ಗ–2ಎ, 2ಬಿ, 3ಎ, 3ಬಿ : 38 ವರ್ಷಗಳು, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ:ಪ್ರವರ್ಗ–1 : 40 ವರ್ಷಗಳು, ಮಾಜಿ ಸೈನಿಕರಿಗೆ ಗರಿಷ್ಟ ವಯೋಮಿತಿ, ಅವನು ಸಶಸ್ತ್ರ ದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳು ಆಗುವುದೋ ಅಷ್ಟು ವರ್ಷಗಳ ಸಡಿಲಿಕೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಹತ್ತು ವರ್ಷಗಳ ಸಡಿಲಿಕೆ,

ಅರ್ಹತಾ ಪರೀಕ್ಷೆ: ಬೆರಳಚ್ಚು–ನಕಲುಗಾರರಿಗೆ: 15 ನಿಮಿಷಗಳ ಅವಧಿಯಂತೆ ಎರಡೂ ಭಾಷೆಗಳಲ್ಲಿ ಬೆರಳಚ್ಚು ಮಾಡಲು ಉಕ್ತಲೇಖನ ನೀಡಲಾಗುವುದು. ಆಯ್ಕೆಯ ವಿಧಾನ: ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ) (ನೇಮಕಾತಿ) (ತಿದ್ದುಪಡಿ) ನಿಯಮ 2007ರ ಪ್ರಕಾರ ನಡೆಸಲಾಗುವುದು. ನಿಗದಿತ ಅರ್ಜಿ ನಮೂನೆಗಳನ್ನು ಜಿಲ್ಲಾ ನ್ಯಾಯಾಲಯದ ಕುಂದಾಪುರ ಹಾಗೂ ಕಾರ್ಕಳ ಹಿರಿಯ ಸಿವಿಲ್ ನ್ಯಾಯಾಲಯಗಳ ಹಾಗೂ ಎಲ್ಲಾ ಜಿಲ್ಲಾ ನ್ಯಾಯಾಲಯಗಳ ಸೂಚನಾ ಫಲಕಗಳಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನ್ಯಾಯಾಧೀಶರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ಅರ್ಜಿಗಳು ನಿಗದಿತ ನಮೂನೆಯಲ್ಲಿ ಇಲ್ಲದಿದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಪಿ.ಆರ್. 612 ಜಿಲ್ಲಾ ನ್ಯಾಯಾಧೀಶರು, ಉಡುಪಿ.

ಆಡಳಿತಾಧಿಕಾರಿಗಳ ಕಛೇರಿ

ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯ ಕೋಶ) ನಂ.8, 4ನೇ ಮಹಡಿ,

ಎಂ.ಎಫ್. ಬಿಲ್ಡಿಂಗ್–II, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು – 560 052

ಅಧಿಸೂಚನೆ ಸಂಖ್ಯೆ: ಎಸ್–1/ಎನ್.ಸಿ.ಇ–180/ಎಪಿಪಿಟಿ.ಡ್ರೈವರ್ಸ್/2008, ಬೆಂಗಳೂರು, ದಿನಾಂಕ: 22ನೇ ಜುಲೈ 2009

1. **ಚಾಲಕರ ಹುದ್ದೆಗಳಿಗಾಗಿ ನೇಮಕಾತಿ**

   ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 21.08.2009

   ಈ ಇಲಾಖೆಯಲ್ಲಿ ಖಾಲಿಯಿರುವ 36 ಚಾಲಕರ ಹುದ್ದೆಗಳಿಗಾಗಿ ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2. ಈ ಇಲಾಖೆಯ ಸರ್ಕಾರಿ ಅಧಿಸೂಚನೆ ಸಂಖ್ಯೆ. ಇಡಿ.23.ರಾಯುಸೇ.2001 ದಿನಾಂಕ:04.08.2003ರಲ್ಲಿ ಪ್ರಕಟಿತವಾದ ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿಳಿಸಿದ ಅರ್ಹತೆಯುಳ್ಳ ಅಭ್ಯರ್ಥಿಗಳನ್ನು ಕಾಲಕಾಲಕ್ಕೆ ಆದ ತಿದ್ದುಪಡಿಗಳನ್ನೊಳಗೊಂಡಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ. DPAR 19 SCR 2006 ದಿನಾಂಕ 14.08.2006 ರಲ್ಲಿ ಹೊರಡಿಸಿದ ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆ ಮುಖಾಂತರ ಮಾಡಲಾಗುವ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006 ರಲ್ಲಿ ವಾಹನ

ಚಾಲಕರ ನೇಮಕಾತಿ ಕುರಿತಂತೆ ವಿವರಿಸಿದ ರೀತಿಯಲ್ಲಿ ಮೆರಿಟ್ ಆಧರಿಸಿ ಆಯ್ಕೆ ಮಾಡಲಾಗುವುದು. ಆಯ್ಕೆ ಕುರಿತಂತೆ ಯಾವುದೇ ಪ್ರಭಾವ ಬೀರಲು ಯತ್ನಿಸುವವರ ಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುವುದು.

3. ವೇತನ ಶ್ರೇಣಿ: ರೂ.5800–100–6000–125–6500–150–7100–175–7800–200–8600–225–9500–250–10500 + ರೂ.90/– ವಿಶೇಷ ವೇತನ ಮತ್ತು ಕಾಲಕಾಲಕ್ಕೆ ಲಭ್ಯವಾಗುವ ಭತ್ಯೆಗಳು.

4. ಹುದ್ದೆಗಳ ವರ್ಗೀಕರಣ:

ವರ್ಗ	ಇತರೆ	ಮಹಿಳಾ	ಗ್ರಾಮೀಣ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನೆಗಳಿಂದ ನಿರಾಶ್ರಿಗೊಂಡವ	ಒಟ್ಟು
ಸಾಮಾನ್ಯ	04	06	05	01	01	01	18
ಪರಿಶಿಷ್ಟ ಜಾತಿ	02	02	02	–	–	–	06
ಪರಿಶಿಷ್ಟ ಪಂಗಡ	01						01
ಪ್ರವರ್ಗ–1	01						01
ಪ್ರವರ್ಗ–2 ಎ	03	02	02	–	–	–	07
ಪ್ರವರ್ಗ–2 ಬಿ	01	–	–	–	–	–	01
ಪ್ರವರ್ಗ–3 ಎ	01	–	–	–	–	–	01
ಪ್ರವರ್ಗ–3 ಬಿ	01	–	–	–	–	–	01
ಒಟ್ಟು	**14**	**10**	**09**	**01**	**01**	**01**	**36**

ಸೂಚನೆ: ಸಮತಳ ಮೀಸಲಾತಿಯಲ್ಲಿನ ವಿವಿಧ ಗುಂಪುಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಆ ಹುದ್ದೆಗಳನ್ನು ಅದೇ ಗುಂಪಿನ ಇತರೆ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಮೇಲಿನ ವರ್ಗೀಕರಣವನ್ನು ಸರ್ಕಾರಿ ಆದೇಶ ಸಂಖ್ಯೆ ಡಿ.ಪಿ.ಎ.ಆರ್.08.ಎಸ್.ಆರ್.ಎಸ್. 95 ದಿನಾಂಕ: 20.06.2003 ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಡಿ.ಪಿ.ಎ.ಆರ್. 97 ಎಸ್.ಆರ್.ಎಸ್. 2002 ದಿನಾಂಕ: 22.11.2002 ರಲ್ಲಿ ಸೂಚಿಸಿದ ವಿಧಾನದಲ್ಲಿ ಮಾಡಲಾಗಿದೆ.

5. ಪರೀಕ್ಷಾರ್ಥ ಅವಧಿ: ಆಯ್ಕೆಯಾದ ಅಭ್ಯರ್ಥಿಗಳು 02 ವರ್ಷಗಳು ಪರೀಕ್ಷಾರ್ಥ ಅವಧಿಯಲ್ಲಿರುತ್ತಾರೆ

6. ವಿದ್ಯಾರ್ಹತೆ : (i) 8ನೇ ತರಗತಿಯಲ್ಲಿ ಉತ್ತೀರ್ಣ
   (ii) ವಾಹನ ಚಾಲನೆಯಲ್ಲಿ ಸಕ್ಷಮ ಪ್ರಾಧಿಕಾರವು ನೀಡಿರುವ "ಲೈಸನ್ಸ್" (Motor Vehicle Licence) ಹೊಂದಿರಬೇಕು.

7. ವಯೋಮಿತಿ : ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆ ದಿನಾಂಕದಂದು 18 ವರ್ಷಗಳು ಪೂರೈಸಿರಬೇಕು /ದಾಟಿರಬೇಕು ಮತ್ತು
   (ಎ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ–1 ಅಭ್ಯರ್ಥಿಗಳಿಂದ 40 ವರ್ಷಗಳು ದಾಟಿರಬಾರದು.
   (ಬಿ) ಪ್ರವರ್ಗ–2 ಎ, ಪ್ರವರ್ಗ–2 ಬಿ, ಪ್ರವರ್ಗ–3 ಎ, ಪ್ರವರ್ಗ–3 ಬಿ ಈ ವರ್ಗಗಳಿಗೆ ಸಂಬಂಧಪಟ್ಟ ಅಭ್ಯರ್ಥಿಗಳು 38 ವರ್ಷಗಳು ದಾಟಿರಬಾರದು.
   (ಸಿ) ಉಳಿದ ಅಭ್ಯರ್ಥಿಗಳು 35 ವರ್ಷಗಳು ಮೀರಿರಬಾರದು.
   (ಡಿ) ಮಾಜಿ ಸೈನಿಕರಿಗೆ ವಯೋಮಿತಿಯಲ್ಲಿ ನಿಯಮಾನುಸಾರ ಸಡಿಲಿಕೆ ನೀಡಲಾಗುವುದು.

8. ಡ್ರೈವಿಂಗ್ ಪರೀಕ್ಷೆಗಾಗಿ ಕರೆಯಲಾಗುವ ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಪರೀಕ್ಷೆ ತೆಗೆದುಕೊಳ್ಳುವ/ಮಾಡಲಾಗುವ ಸ್ಥಳದಲ್ಲಿ ಹಾಜರಾಗತಕ್ಕದ್ದು.

9. ಅರ್ಜಿ ಶುಲ್ಕ ರೂ.5–00 ಗಳನ್ನು ನಿಗದಿಪಡಿಸಲಾಗಿದ್ದು, ಇದನ್ನು ಕ್ರಾಸ್ ಮಾಡಿದ Indian Postal Order (purchased not earlier than 15 days prior to the date of application payable to the appointing authority) ಮುಖಾಂತರ ಆಡಳಿತಾಧಿಕಾರಿಗಳು, ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ), ಬೆಂಗಳೂರು ಇವರ ಹೆಸರಿನಲ್ಲಿ ತೆಗೆದು ಅರ್ಜಿ ಜೊತೆಗೆ ಲಗತ್ತಿಸಿ ಸಲ್ಲಿಸತಕ್ಕದ್ದು.
   ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ–1ಕ್ಕೆ ಸಂಬಂಧ ಪಟ್ಟ ಅಭ್ಯರ್ಥಿಗಳು ಅರ್ಜಿಯ ಶುಲ್ಕ ನೀಡುವ ಅಗತ್ಯವಿರುವುದಿಲ್ಲ.

10. ನಿಗದಿತ ನಮೂನೆಯಲ್ಲಿ ಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ವಿದ್ಯಾರ್ಹತೆ ಹಾಗೂ ಇತರೆ ಪ್ರಮಾಣ ಪತ್ರಗಳ ಪ್ರಮಾಣಿತ ಪ್ರತಿಗಳೊಂದಿಗೆ 'ಆಡಳಿತಾಧಿಕಾರಿಗಳು', ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯ ಕೋಶ), ನಂ.8, 4ನೇ ಮಹಡಿ, ಎಂ.ಎಫ್. ಬಿಲ್ಡಿಂಗ್ಸ್–II, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–560052 ಇವರಿಗೆ ದಿನಾಂಕ: 21.08.2009

ರೊಳಗಾಗಿ ತಲುಪುವಂತೆ ಸಲ್ಲಿಸತಕ್ಕದ್ದು. ಅರ್ಜಿಯನ್ನೊಳಗೊಂಡ ಲಕೋಟೆಯ ಮೇಲೆ "ಚಾಲಕರ ಹುದ್ದೆಗಾಗಿ ಅರ್ಜಿ" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಕುರಿತು ಯಾವುದೇ ಪತ್ರ ವ್ಯವಹಾರ ನಡೆಸುವುದಿಲ್ಲ.

11. ನಿಗದಿತ ನಮೂನೆಯ ಅರ್ಜಿಯನ್ನು ಅಭ್ಯರ್ಥಿಗಳು ತಮ್ಮ ಸ್ವಹಸ್ತಾಕ್ಷರಗಳಿಂದ ಭರ್ತಿ ಮಾಡಿ ಈ ಕೆಳಗಿನ ದಸ್ತಾವೇಜುಗಳೊಂದಿಗೆ ಸಲ್ಲಿಸತಕ್ಕದ್ದು.
   (1) 8ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ನಕಲು.
   (2) ಮೋಟಾರು ವಾಹನ ಚಾಲನಾ ಪರವಾನಗಿ (Motor Vehicle Driving Licence) ಹೊಂದಿರುವ ಹಾಗೂ ವಿದ್ಯಾರ್ಹತೆ ಪ್ರಮಾಣ ಪತ್ರಗಳ ನಕಲು.
   (3) ಅಭ್ಯರ್ಥಿಗಳು ಸರ್ಕಾರಿ ಸೇವೆಯಲ್ಲಿದ್ದರೆ ತಮ್ಮ ಮೇಲಾಧಿಕಾರಿಗಳಿಂದ ಪ್ರಪತ್ರ–1 ರಲ್ಲಿ ಪ್ರಮಾಣಪತ್ರ ಸಲ್ಲಿಸುವುದು.
   (4) ಅಭ್ಯರ್ಥಿಗಳು ತಾವು ಓದಿದ ಕೊನೆಯ ಶಾಲೆಯಿಂದ ಹಾಗೂ ಸಮಾಜದ 02 ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳನ್ನು ಕ್ರಮವಾಗಿ ಪ್ರಪತ್ರ–2 ಮತ್ತು ಪ್ರಪತ್ರ–3 ರಲ್ಲಿ ಸಲ್ಲಿಸುವುದು.
   (5) ರೂ.5/–ಗಳ ಕ್ರಾಸ್ ಮಾಡಿದ 'Indian Postal Order'
   (6) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಮತ್ತಿತರ ಹಿಂದುಳಿದ ವರ್ಗಗಳ ಮೀಸಲಾತಿ ಬಯಸುವ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರ ನೀಡಿದ ದಾಖಲೆಯೊಂದಿಗೆ ಅರ್ಜಿ ಸಲ್ಲಿಸುವುದು.
   (7) ಜನ್ಮ ದಿನಾಂಕ ತೋರಿಸುವ ಪ್ರಮಾಣ ಪತ್ರ

12. ಮೆರಿಟ್ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಪೋಲೀಸ್ ಡ್ರೈವಿಂಗ್ ಮತ್ತು ನಿರ್ವಹಣಾ ಶಾಲೆ, ಯಲಹಂಕ, ಬೆಂಗಳೂರು ಇವರು ನಡೆಸಲಾಗುವ ಡ್ರೈವಿಂಗ್ ಪರೀಕ್ಷೆಗೆ ಒಳಪಡಿಸಿ ಅವರು ನೀಡಲಾಗುವ ಪ್ರಮಾಣ ಪತ್ರ / ಅರ್ಹತಾ ಪತ್ರವನ್ನು ಆಧರಿಸಿ ನೇಮಕಾತಿ ಮಾಡಲಾಗುವುದು.

ಡ್ರೈವಿಂಗ್ ಪರೀಕ್ಷೆಗೆ – ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹಿತಿಯನ್ನು ನೀಡಲಾಗುವುದು.

ಈ ಕುರಿತು ಡ್ರೈವಿಂಗ್ ಪರೀಕ್ಷೆಗೆ ನಿಗದಿಪಡಿಸಿದ ಪ್ರಾಧಿಕಾರದಿಂದ / ಸಂಸ್ಥೆಯಿಂದ ಪ್ರಮಾಣ ಪತ್ರ ಬಾರದೇ ಇದ್ದಲ್ಲಿ ಸದರಿ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.

ಆಡಳಿತಾಧಿಕಾರಿಗಳು
ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ)

ಅರ್ಜಿ ನಮೂನೆ

ಕರ್ನಾಟಕ ಸರ್ಕಾರ ಎನ್.ಸಿ.ಸಿ. ನಿರ್ದೇಶನಾಲಯ, ಗ್ರೂಪ್ 'ಸಿ' ಚಾಲಕರ ಹುದ್ದೆಗಳ ನೇಮಕಾತಿಗೆ ಅರ್ಜಿ ನಮೂನೆ

ಅಭ್ಯರ್ಥಿಯ ಪರಿಚಯ

1. ಅಭ್ಯರ್ಥಿಯ ಪೂರ್ಣ ಹೆಸರು :
2. ತಂದೆ / ಗಂಡನ ಹೆಸರು :
3. ಜನ್ಮ ದಿನಾಂಕ :
   (ಪ್ರಮಾಣ ಪತ್ರ ಲಗತ್ತಿಸಿ)
4. ಅಂಚೆ ವಿಳಾಸ :
5. ಲಿಂಗ :
   (ಗಂಡು / ಹೆಣ್ಣು)
6. ಮೀಸಲಾತಿ ಪ್ರವರ್ಗ
   (ಪ್ರಮಾಣಪತ್ರ ಲಗತ್ತಿಸಿ)
   (ಸರ್ಕಾರದಿಂದ ನಿಗದಿಪಡಿಸಿದ ನಮೂನೆಯಲ್ಲಿಯೇ ಸಲ್ಲಿಸತಕ್ಕದ್ದು)
7. ವಿದ್ಯಾರ್ಹತೆ :
   (8ನೇ ತರಗತಿ ಪಾಸು ಮಾಡಿರುವ ಅಂಕಪಟ್ಟಿಯಿರುವ ಪ್ರಮಾಣಪತ್ರವನ್ನು ಲಗತ್ತಿಸಿ)
   (ವಾಹನಗಳ ಚಾಲನಾ ಅನುಮತಿಯ ಪ್ರಮಾಣಪತ್ರವನ್ನು ಲಗತ್ತಿಸಿ)
8. ಅಭ್ಯರ್ಥಿಯು ಈ ಕೆಳಕಂಡ ಯಾವುದಾದರೂ ಅಂಶಗಳನ್ನು ಪೂರೈಸಿರುವ ಪ್ರಮಾಣಪತ್ರಗಳನ್ನು ಲಗತ್ತಿಸಿ.

1) ಮಹಿಳಾ ಅಭ್ಯರ್ಥಿಯೆ?

2) ಮಾಜಿ ಸೈನಿಕರೇ?

3) ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿಯೇ?

4) ಗ್ರಾಮೀಣ ಅಭ್ಯರ್ಥಿಯೇ?

5) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಯೇ?

ಅರ್ಜಿ ಶುಲ್ಕ ರೂ.5/– ಇಂಡಿಯನ್ ಪೋಸ್ಟಲ್ ಆರ್ಡರ್ purchased not earlier than 15 days prior to the date of application, payable to the Apppointing Authority (ಎಸ್.ಸಿ., ಎಸ್.ಟಿ. ಹಾಗೂ ಪ್ರವರ್ಗ–1 ರ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ಇಲ್ಲ).

ಇಂಡಿಯನ್ ಪೋಸ್ಟಲ್ ಆರ್ಡರ್‌ನ್ನು ಆಡಳಿತಾಧಿಕಾರಿಯವರು, ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ) ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ದಯಾನಂದ ಶೆಟ್ಟಿ
ಆಡಳಿತಾಧಿಕಾರಿ
ಎನ್‌ಸಿಸಿ ನಿರ್ದೇಶನಾಲಯ (ರಾಜ್ಯಕೋಶ), ಬೆಂಗಳೂರು

ಪ್ರಪತ್ರ–1

(ಸರ್ಕಾರಿ ಸೇವೆಯಲ್ಲಿರುವ ನೌಕರರ ಉಪಯೋಗಕ್ಕಾಗಿ ಮಾತ್ರ)

ಮೇಲಾಧಿಕಾರಿಯ ಪ್ರಮಾಣ ಪತ್ರ

ಶ್ರೀ / ಶ್ರೀಮತಿ------------------------------------ ಇವರು ರಾಜ್ಯ ಸರ್ಕಾರದ----------- ಇಲಾಖೆಯಲ್ಲಿ------------------ಹುದ್ದೆಯಲ್ಲಿ ದಿನಾಂಕ---------------ರಿಂದ ----------------ರವರೆಗೆ ನೇಮಕಾತಿ ನಿಯಮಗಳ ಮೇರೆಗೆ ಕ್ರಮಬದ್ಧವಾಗಿ / ಸ್ಥಳೀಯ ಅಭ್ಯರ್ಥಿಯಾಗಿ ನೇಮಕಗೊಂಡಿದ್ದರು ಎಂದು ಪ್ರಮಾಣೀಕರಿಸುತ್ತೇವೆ. ನನಗೆ ತಿಳಿದ ಮಟ್ಟಿಗೆ ಅವರು ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ, ನಿರ್ವಹಿಸುತ್ತಿದ್ದರು. ಅವರ ನಡತೆ ಚೆನ್ನಾಗಿದೆ, ಅವರು ಅಪೇಕ್ಷಿಸಿದ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಅನುಮತಿ ನೀಡಲಾಗಿದೆ.

ಸ್ಥಳ:
ದಿನಾಂಕ: ಸಹಿ/

ಪ್ರಪತ್ರ–2

(ಶಾಲಾ ನಡತೆಯ ಪ್ರಮಾಣಪತ್ರ)

ಶ್ರೀ / ಶ್ರೀಮತಿ ------------------------------------- ರವರ ಮಗ / ಮಗಳು ಆದ ಶ್ರೀ / ಶ್ರೀಮತಿ---------------------------- ಇವರು ನಮ್ಮ ಶಾಲೆಯಲ್ಲಿ----------------- ವರ್ಷದಿಂದ ವರ್ಷದವರೆಗೆ---------------ತರಗತಿಯಲ್ಲಿ ಅಭ್ಯಾಸ ಮಾಡಿರುತ್ತಾರೆ. ಈ ಅಭ್ಯಾಸದ ಅವಧಿಯಲ್ಲಿ ಇವರು ಒಳ್ಳೆಯ ನಡತೆಯುಳ್ಳವರಾಗಿದ್ದರು.

ಸ್ಥಳ: ಮುಖ್ಯೋಪಾಧ್ಯಾಯರ ಸಹಿ/ಪ್ರಾಂಶುಪಾಲರ ಸಹಿ
ದಿನಾಂಕ: (ಮೊಹರು) (ಮೊಹರು)

ಪ್ರಪತ್ರ–3

ಸ್ಥಳೀಯ ಗಣ್ಯವ್ಯಕ್ತಿಗಳ ಪ್ರಮಾಣಪತ್ರ

ನಡತೆ ಪ್ರಮಾಣ ಪತ್ರ

ಶ್ರೀ / ಶ್ರೀಮತಿ -- ರವರ ಮಗ / ಮಗಳು ಆದ ಶ್ರೀ / ಶ್ರೀಮತಿ ----------------------------------- ಇವರು ನನಗೆ------------------- ವರ್ಷ------------------------- ತಿಂಗಳುಗಳಿಂದ ಪರಿಚಯವಿದೆ ಎಂದು ಪ್ರಮಾಣೀಕರಿಸುತ್ತೇನೆ ಮತ್ತು ನನಗೆ ತಿಳಿದಿರುವಂತೆ ಇವರು ಒಳ್ಳೆಯ ನಡತೆಯುಳ್ಳವರಾಗಿದ್ದಾರೆ ಮತ್ತು ಸರ್ಕಾರಿ ಉದ್ಯೋಗಕ್ಕೆ ಅನರ್ಹರಾಗುವಂತಹ ಯಾವ ಪೂರ್ವೋತ್ತರಗಳೂ ಇರುವುದಿಲ್ಲ.

ಶ್ರೀ / ಶ್ರೀಮತಿ------------------------------------- ಇವರು ನನಗೆ ಸಂಬಂಧಿಕರಲ್ಲ.

ಸ್ಥಳ: ಸಹಿ/–
ದಿನಾಂಕ: ಪೂರ್ಣ ವಿಳಾಸ

ಪಿ.ಆರ್. 604

ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

ನೇಮಕಾತಿ ಪ್ರಕಟಣೆ

ಅಧಿಸೂಚನೆ ಸಂಖ್ಯೆ: ಎಡಿಎಂ.21/2009, ದಿನಾಂಕ: 23ನೇ ಜುಲೈ 2009

ವಿಷಯ: ಶೀಘ್ರಲಿಪಿಗಾರರು, ಪ್ರೋಸಸ್ ಸರ್ವರ್ ಮತ್ತು ಜವಾನರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ.

ಉಲ್ಲೇಖ: 1. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಪತ್ರದ ಸಂಖ್ಯೆ:ಎಲ್‌ಸಿಎ–II 205/2004. ದಿನಾಂಕ:02.05.2008ರ ಅನ್ವಯ ಉಳಿದಿರುವ ಒಂದು ಶೀಘ್ರಲಿಪಿಗಾರರ (ಬ್ಯಾಕ್‌ಲಾಗ್) ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು.

2. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಪತ್ರದ ಸಂಖ್ಯೆ:ಎಲ್‌ಸಿಎ–II 205/2004. ದಿನಾಂಕ:17.06.2009ರ ಅನ್ವಯ 2 ಪ್ರೊಸಸ್ ಸರ್ವರ್ ಮತ್ತು 1 ಜವಾನರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿರುತ್ತಾರೆ.

ಮೇಲ್ಕಂಡ ಅಧಿಸೂಚನೆಯನ್ವಯ ರಾಮನಗರ ಜಿಲ್ಲಾ ನ್ಯಾಯಾಲಯ ಘಟಕದ ಅಧೀನ ನ್ಯಾಯಾಲಯಗಳಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರು, ಪ್ರೊಸಸ್ ಸರ್ವರ್ ಮತ್ತು ಜವಾನರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನಿಗದಿ ಪಡಿಸಿದ ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರಹದಿಂದ ಎಲ್ಲಾ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿ ಮಾಡಿ ದಿನಾಂಕ: 31.08.2009 ರಂದು ಸಂಜೆ 4.00 ಗಂಟೆಯ ಒಳಗೆ ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ಸಲ್ಲಿಸಲು ನಿಗದಿ ಮಾಡಿದ ಕೊನೆಯ ದಿನಾಂಕ: 31.8.2009 ರ ಸೋಮವಾರ ಸಂಜೆ 4.00 ಗಂಟೆಯವರೆಗೆ

ಖಾಲಿ ಇರುವ ಹುದ್ದೆಗಳ ವರ್ಗೀಕರಣ:

I. ಶೀಘ್ರಲಿಪಿಗಾರರ ಹುದ್ದೆ

1. ಹುದ್ದೆಗಳ ಸಂಖ್ಯೆ : 1
2. ವೇತನ ಶ್ರೇಣಿ – 7250–175–7800–200–8600–225–9500–250–10500–300–12300–350–13350 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು
3. **ಹುದ್ದೆಗಳ ವರ್ಗೀಕರಣ :**

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಒಟ್ಟು
ಪರಿಶಿಷ್ಟ ಪಂಗಡ (ಬ್ಯಾಕ್‌ಲಾಗ್)	1	–	–	1
ಒಟ್ಟು	**1**	**–**	**–**	**1**

4. ಶೈಕ್ಷಣಿಕ ವಿದ್ಯಾರ್ಹತೆ:

ಎ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಬಿ) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಹಿರಿಯ ದರ್ಜೆಯ (Senior Grade) ಕನ್ನಡ ಮತ್ತು ಆಂಗ್ಲ ಬಾಷೆಗಳ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

ಸಿ) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಹಿರಿಯ (Senior Grade) ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

II. ಪ್ರೊಸಸ್ ಸರ್ವರ್ ಹುದ್ದೆ

1. **ಹುದ್ದೆಗಳ ಸಂಖ್ಯೆ : 2**
2. ವೇತನ ಶ್ರೇಣಿ – 5200–100–6000–125–6500–150–7100–175–7800–200–8200 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು
3. **ಹುದ್ದೆಗಳ ವರ್ಗೀಕರಣ:**

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಒಟ್ಟು
ಸಾಮಾನ್ಯ ಅಭ್ಯರ್ಥಿ	1	–	–	1
ಪರಿಶಿಷ್ಟ ಜಾತಿ	–	1	–	1
ಒಟ್ಟು	**1**	**1**	**–**	**2**

4. ಶೈಕ್ಷಣಿಕ ವಿದ್ಯಾರ್ಹತೆ:

ಎ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಬಿ) ಡ್ರೈವಿಂಗ್ ಲೈಸೆನ್ಸ್ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.

III. ಜವಾನರು:

1. ಹುದ್ದೆಗಳ ಸಂಖ್ಯೆ : 1
2. ವೇತನ ಶ್ರೇಣಿ – 4800–100–6000–125–6500–150–7100–175–7275 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು
3. **ಹುದ್ದೆಗಳ ವರ್ಗೀಕರಣ :**

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಒಟ್ಟು
ಸಾಮಾನ್ಯ ಅಭ್ಯರ್ಥಿ	–	–	1	1
ಒಟ್ಟು	–	–	**1**	**1**

4. ಶೈಕ್ಷಣಿಕ ವಿದ್ಯಾರ್ಹತೆ:

ಎ) 7ನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು.

ಬಿ) ಅಭ್ಯರ್ಥಿಗೆ ಕನ್ನಡದಲ್ಲಿ ಓದಲು ಹಾಗೂ ಬರೆಯಲು ತಿಳಿದಿರಬೇಕು.

ವಯೋಮಿತಿ:

ಕನಿಷ್ಠ ವಯೋಮಿತಿ : 18 ವರ್ಷ

ಗರಿಷ್ಠ ವಯೋಮಿತಿ : ಸಾಮಾನ್ಯ ವರ್ಗ – 35 ವರ್ಷ

2ಎ, 2ಬಿ, 3ಎ, 3ಬಿ – 38 ವರ್ಷ

ಪ.ಜಾ, ಪ.ಪಂ, ಪ್ರವರ್ಗ 1 – 40 ವರ್ಷ

ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

ಆಯ್ಕೆ ವಿಧಾನ :

ಕರ್ನಾಟಕ ಅಧೀನ ನ್ಯಾಯಾಲಯಗಳು (ಮಿನಿಸ್ಟೀರಿಯಲ್ ಮತ್ತು ಇತರೆ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು 2007ರ ಅನ್ವಯ ನೇರ ನೇಮಕಾತಿಯ ಮೂಲಕ ಆಯ್ಕೆ ಮಾಡಲಾಗುವುದು.

I. ಶೀಘ್ರಲಿಪಿಗಾರರ ಹುದ್ದೆಗೆ ಈ ಕೆಳಕಂಡ ಅರ್ಹತಾ ಪರೀಕ್ಷೆಯನ್ನು ನಡೆಸಲಾಗುವುದು.

ಅ) ಒಂದು ನಿಮಿಷಕ್ಕೆ 120 ಶಬ್ದಗಳಂತೆ 5 ನಿಮಿಷಗಳ ಅವಧಿಯ ಉಕ್ತಲೇಖನ ಮತ್ತು ಅದನ್ನು ಲಿಪ್ಯಂತರ ಮಾಡಲು 45 ನಿಮಿಷಗಳ ಅವಧಿ. (ಗರಿಷ್ಠ 100 ಅಂಕಗಳ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಪಡೆಯಬೇಕಾಗಿರುತ್ತದೆ)

ಆ) ಶೀಘ್ರಲಿಪಿಗಾರರ ಹುದ್ದೆಗೆ ಅವರು ಪಡೆದಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಗಳು ಮತ್ತು ಅರ್ಹತಾ ಪರೀಕ್ಷೆಯ ಗರಿಷ್ಠ ಅಂಕಗಳ ಆಧಾರದ ಮೇಲೆ ಒಂದು ಹುದ್ದೆಗೆ ಐದು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

II. ಪ್ರೋಸಸ್ ಸರ್ವರ್ ಹುದ್ದೆಗೆ :

ಅ) ಪ್ರೋಸಸ್ ಸರ್ವರ್ ಹುದ್ದೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಗರಿಷ್ಠ ಅಂಕಗಳ ಅರ್ಹತೆಯ ಆಧಾರದ ಮೇಲೆ ಒಂದು ಹುದ್ದೆಗೆ 25 ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು.

ಆ) ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗೆ ಕನ್ನಡದಲ್ಲಿ ಓದುವ ಹಾಗೂ ಬರೆಯುವ ಬಗ್ಗೆ ಪ್ರವೀಣತೆ ಮತ್ತು ಸಾಮಾನ್ಯಜ್ಞಾನದ ತಿಳುವಳಿಕೆಯ ಬಗ್ಗೆ ಪರೀಕ್ಷಿಸಲಾಗುವುದು.

III. ಜವಾನರ ಹುದ್ದೆಗೆ :

ಅ) ಜವಾನರ ಹುದ್ದೆಗೆ 7ನೇ ತರಗತಿಯಲ್ಲಿ ಪಡೆದ ಗರಿಷ್ಠ ಅಂಕಗಳ ಅರ್ಹತೆಯ ಆಧಾರದ ಮೇಲೆ ಒಂದು ಹುದ್ದೆಗೆ 10 ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು.

ಪ್ರಮುಖವಾದ ಸೂಚನೆಗಳು:

ಅಭ್ಯರ್ಥಿಗಳು ಕೆಳಕಂಡ ಪ್ರಮಾಣ ಪತ್ರಗಳ ಒಂದೊಂದು ಛಾಯಾ ಪ್ರತಿ (ಫೋಟೋ ಕಾಪಿ/ಜೆರಾಕ್ಸ್) ಗಳನ್ನು ಸ್ವಯಂ–ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು. ಅರ್ಜಿಯೊಂದಿಗೆ ಮೂಲ ಪ್ರತಿ (ಒರಿಜಿನಲ್) ಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ.

1. ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳು.
ವಿವಿಧ ಪ್ರವರ್ಗಗಳ ಅಡಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು ಜಾತಿ ಪ್ರಮಾಣ ಪತ್ರವನ್ನು ಈ ಕೆಳಕಂಡ ನಮೂನೆಗಳಲ್ಲಿ ಹೊಂದಿರಬೇಕು.

5.3.1 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ **"ನಮೂನೆ–ಡಿ"** ರಲ್ಲಿ.

5.3.2 ಪ್ರವರ್ಗ–I ರ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ "ನಮೂನೆ–ಇ" ರಲ್ಲಿ.

5.3.3 ಪ್ರವರ್ಗ–II(ಎ), II(ಬಿ), III(ಎ) ಮತ್ತು III(ಬಿ) ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ **"ನಮೂನೆ–ಎಫ್"** ರಲ್ಲಿ.

ಸೂಚನೆ: "ನಮೂನೆ–ಎಫ್" ಪ್ರಮಾಣ ಪತ್ರವು ಅಧಿಸೂಚನೆಯ ದಿನಾಂಕಕ್ಕೆ ಒಂದು ವರ್ಷಕ್ಕಿಂತ ಹೆಚ್ಚು ಹಳೆಯ ಸಮಯದ್ದಾಗಿರಬಾರದು ಎಂಬುದನ್ನು ಅಭ್ಯರ್ಥಿಯು ಗಮನದಲ್ಲಿಡತಕ್ಕದ್ದು. ಅವಧಿ ಮೀರಿದ ಪ್ರಮಾಣ ಪತ್ರವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

5.3.4 ಯೋಜನಾ ನಿರಾಶ್ರಿತ ಮೀಸಲಾತಿ ವರ್ಗೀಕರಣದಲ್ಲಿ ಮೀಸಲಾತಿ ಕೋರಿರುವ ಅಭ್ಯರ್ಥಿಗಳು
ಸಂಬಂಧಪಟ್ಟ ತಹಶೀಲ್ದಾರ್‌ರಿಂದ ನಮೂನೆ–3 ರಲ್ಲಿ ನೀಡಿರುವ ಪ್ರಮಾಣ ಪತ್ರವನ್ನು ಹಾಜರು ಪಡಿಸಬೇಕು.

6.0 ಗಮನಿಸಬೇಕಾದ ಅಂಶಗಳು :

6.1 ಕೊನೆಯ ದಿನಾಂಕ ಅಂದರೆ 20–08–2009ರ ನಂತರ ಬಂದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಹಾಗೂ ಅರ್ಜಿಗಳು ಮೇಲೆ ತಿಳಿಸಿರುವ ವಿಳಾಸಕ್ಕೆ ತಲುಪಲು ವಿಳಂಬವಾದರೆ ಇಲಾಖೆಯು ಜವಾಬ್ದಾರಿಯಲ್ಲ.

6.2 ನಿಗದಿತ ನಮೂನೆಯಲ್ಲಿಲ್ಲದ ಅಥವಾ ಅಪೂರ್ಣ ಮಾಹಿತಿ ನೀಡಿದ ಅರ್ಜಿಗಳನ್ನು ಅನರ್ಹ ಅರ್ಜಿಗಳೆಂದು ಪರಿಗಣಿಸಿ ತಿರಸ್ಕರಿಸಲಾಗುವುದು. ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ತುಂಬದೇ ಸದರಿ ಅರ್ಜಿಯು ತಿರಸ್ಕೃತವಾದ ಪಕ್ಷದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ವಂಚಿತರಾದ ಪಕ್ಷದಲ್ಲಿ ತತ್ಸಂಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

6.3 ಯಾವುದೇ ಅಭ್ಯರ್ಥಿಯು ತನ್ನ ಆಯ್ಕೆಗೆ ಸಂಬಂಧಿಸಿದಂತೆ ಬಾಹ್ಯ ಒತ್ತಡ ತರಲು ಪ್ರಯತ್ನಿಸಿದ್ದಲ್ಲಿ ಅಂತಹ ಅಭ್ಯರ್ಥಿಯನ್ನು ಅನರ್ಹಗೊಳಿಸಲಾಗುವುದು.

6.4 ಅಭ್ಯರ್ಥಿಯು ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿ ಭರ್ತಿ ಮಾಡಿ ಬೇರೆ ಬೇರೆ ಅರ್ಜಿಗಳಲ್ಲಿ ವಿಭಿನ್ನವಾದ ವಿವರಗಳನ್ನು ನಮೂದಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

6.5 ಕರ್ನಾಟಕ ರಾಜ್ಯದ ಯಾವುದೇ ಸರ್ಕಾರಿ ಇಲಾಖೆ, ಕೇಂದ್ರ ಸರ್ಕಾರಿ ಇಲಾಖೆ ಅಥವಾ ಅರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

6.6 ಕಾನೂನು ಬಾಹಿರನೆಂದು ಸಂಸ್ಥೆ ಅಥವಾ ಸಂಘ ಘೋಷಿಸಲಾದ ಸದಸ್ಯರಾಗಿದ್ದರೆ ಅಥವಾ ಇನ್ನಾವುದೇ ರೀತಿಯಲ್ಲಿ ಅಂತಹ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರೆ ಅಂತಹ ವ್ಯಕ್ತಿ ನೇಮಕಾತಿಗೆ ಅರ್ಹರಾಗುವುದಿಲ್ಲ.

6.7 ಅಭ್ಯರ್ಥಿಯು ಸಮಾಜ ಘಾತುಕ ಕೃತ್ಯಗಳಲ್ಲಿ ತೊಡಗಿ ಅಪರಾಧಿಯಾಗಿದ್ದರೆ, ಅಂತಹ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

6.8 ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿ/ಪತಿಯರನ್ನು ಹೊಂದಿದ ಪುರುಷ/ಮಹಿಳೆ ಅಭ್ಯರ್ಥಿಗಳು ಸರ್ಕಾರದ ಪೂರ್ವಾನುಮತಿ ಇಲ್ಲದೆ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

6.9 ಅಭ್ಯರ್ಥಿಯು ನೇಮಕಾತಿ ಸಂದರ್ಶನಕ್ಕೆ ಬೇರೊಬ್ಬ ವ್ಯಕ್ತಿಯನ್ನು ತಮ್ಮ ಪರವಾಗಿ ಕಳುಹಿಸಿದ್ದಲ್ಲಿ ಅಥವಾ ತಪ್ಪು ಮಾಹಿತಿಗಳನ್ನು ನಮೂದಿಸಿದ್ದಲ್ಲಿ ಅಥವಾ ಕೃತ್ರಿಮ ಅಥವಾ ತಿದ್ದಿದ ದಾಖಲಾತಿಗಳನ್ನು, ಅಥವಾ ಅಸತ್ಯ ವಿವರಗಳನ್ನು ನೀಡಿದಲ್ಲಿ ಅಥವಾ ಸತ್ಯ ವಿಷಯಗಳನ್ನು ಮರೆ ಮಾಚಿದ ಅಥವಾ ಅನುಚಿತ ಮಾರ್ಗಗಳನ್ನು ಉಪಯೋಗಿಸಿದಲ್ಲಿ ಅಥವಾ

ಪ್ರಯತ್ನಿಸಿದಲ್ಲಿ ಅನರ್ಹರೆಂದು ಪರಿಗಣಿಸಲಾಗುವುದು ಮತ್ತು ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ಉಪ ನಿಯಮ 20 ರಂತೆ ಅಪರಾಧಿ ವ್ಯವಹರಣೆಗೆ ಒಳಪಡುವರು.

6.10 ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ–ಎಸ್‌ಪಿಎಸ್–04–ಪಿಇಟಿ–2005 ದಿನಾಂಕ 31–03–2006 ರಂತೆ ಅಂಶದಾಯಿ ನಿವೃತ್ತಿ ಯೋಜನೆ (Contributory pension scheme) ಗೆ ಆಯ್ಕೆಯಾದ ಅಭ್ಯರ್ಥಿಗಳು ಬದ್ಧರಾಗಿರುತ್ತಾರೆ.

6.11 ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಜೆರಾಕ್ಸ್ ಪ್ರತಿಯನ್ನು ತಮ್ಮೊಂದಿಗೆ ತಪ್ಪದೆ ಇಟ್ಟುಕೊಳ್ಳಲು ಸೂಚಿಸಿದೆ.

6.12 ಪ್ರಕಟಿಸಲಾಗಿರುವ ಹುದ್ದೆಗಳ ಸಂಖ್ಯೆಯಲ್ಲಿ ಕಡಿತ ಅಥವಾ ಹೆಚ್ಚುವರಿ ಆದಲ್ಲಿ ಅದನ್ನು ಇಲಾಖಾ ವೆಬ್‌ಸೈಟ್ (www.karanatakaforest.gov.in) ನಲ್ಲಿ ಪ್ರಕಟಿಸಲಾಗುವುದು.

6.13 ಯಾವುದೇ ತಿಳುವಳಿಕೆ ದೊರೆಯದ ಅಭ್ಯರ್ಥಿಗಳು ನೇಮಕಾತಿಗೆ ಆಯ್ಕೆಯಾಗಿರುವುದಿಲ್ಲವೆಂದು ತಿಳಿಯುವುದು

6.14 ಆಯ್ಕೆಗೊಂಡು ನೇಮಕಾತಿ ಹೊಂದುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಎಲ್ಲಾ ಸೇವಾ ನಿಯಮಗಳಿಗೆ ಒಳಪಡುತ್ತಾರೆ.

ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವೃತ್ತ, ಶಿವಮೊಗ್ಗ.

ಆನೆ ಕವಾಡಿ ಹುದ್ದೆಗೆ ಅರ್ಜಿ

APPLICATION FORM FOR THE POST OF ELEPHANT KAVADI

ಪ್ರಕಟಣೆ ಸಂಖ್ಯೆ: ಎ೧ ಸಿಬ್ಬಂದಿ/ಆನೆಕವಾಡಿ/ಸಿಆರ್ 37/2009–10 ದಿನಾಂಕ: 31–7–2009

ಕನ್ನಡ ಅಥವಾ ಆಂಗ್ಲ ಭಾಷೆಯ ಸ್ಪಷ್ಟ ಅಕ್ಷರಗಳಲ್ಲಿ ಭರ್ತಿ ಮಾಡಿ
Fill Legibly in English (Capitals) or Kannada letters only

ಯಾವುದೇ ಅರ್ಜಿ ಶುಲ್ಕ ಇರುವುದಿಲ್ಲ. There is no Application Fee.
ಯಾವುದೇ ಪ್ರಮಾಣ ಪತ್ರ ಲಗತ್ತಿಸುವಂತಿಲ್ಲ. No original document to be enclosed.

ಸೂಚನೆ: ಅರ್ಜಿಯೊಂದಿಗೆ ಸ್ವವಿಳಾಸವಿರುವ ಒಂದು ಲಕೋಟೆ

ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ
Affix Recent Passport Size Photograph

1. ಅಭ್ಯರ್ಥಿಯ ಹೆಸರು
Name of the Candidate

2. ಲಿಂಗ / Sex — ಪುರುಷ Male ☐ ಮಹಿಳೆ Female ☐

3. ಜನ್ಮ ದಿನಾಂಕ/Date of Birth — ದಿನ / Day ☐☐ ತಿಂಗಳು / Month ☐☐ ವರ್ಷ / Year ☐☐☐☐

4. ಪತ್ರ ವ್ಯವಹಾರಕ್ಕಾಗಿ ಪೂರ್ಣ ವಿಳಾಸ
Address for Correspondence

ಪಿನ್ ಕೋಡ್ / PIN CODE ☐☐☐☐☐☐

5. ವರ್ಗೀಕರಣ (ಅ) / Classification (A)

ಸೂಕ್ತ ಅಂಕಣವನ್ನು (√) ಟಿಕ್ ಮಾಡಿ

☐ ಸಾಮಾನ್ಯ ವರ್ಗ General Merit
☐ ಪ್ರವರ್ಗ– I Category – I
☐ ಪ್ರವರ್ಗ–II(ಎ) Category–II(a)
☐ ಪ್ರವರ್ಗ–II(ಬಿ) Category–II(b)
☐ ಪ್ರವರ್ಗ–III(ಎ) Category–III(a)
☐ ಪ್ರವರ್ಗ–III(ಬಿ) Category–III(b)
☐ ಪರಿಶಿಷ್ಟ ಜಾತಿ SC
☐ ಪರಿಶಿಷ್ಟ ಪಂಗಡ ST

6. ವರ್ಗೀಕರಣ (ಆ) / Classification (B)
ಸೂಕ್ತ ಅಂಕಣವನ್ನು (√)ಟಿಕ್ ಮಾಡಿ

☐ ಮಾಜಿ ಸೈನಿಕರು Ex-Serviceman ☐ ಯೋಜನೆ ನಿರಾಶ್ರಿತರೆ Project Displaced

7. ಅರಣ್ಯದಲ್ಲಿ ವಾಸಿಸುವ ಪರಿಶಿಷ್ಟ ಪಂಗಡದವರಾಗಿದ್ದರೆ, ಜಾತಿಯ ಹೆಸರನ್ನು ನಮೂದಿಸಿ.
Do you belong to any of the forest dwelling Scheduled tribes, if so, mention the caste.

8. ಆನೆ ನಿರ್ವಹಣೆಯಲ್ಲಿ ಹೊಂದಿರುವ ಅನುಭವ (ವರ್ಷಗಳಲ್ಲಿ)
No. of Years of Experience in handling Elephants ☐☐ ವರ್ಷಗಳು/ತಿಂಗಳುಗಳು

ಮೇಲಿನ ಮಾಹಿತಿಗಳು ಸತ್ಯವಾಗಿವೆ ಎಂದು ಪ್ರಮಾಣ ಮಾಡುತ್ತೇನೆ.

Place / ಸ್ಥಳ:

Date / ದಿನಾಂಕ:

ಅಭ್ಯರ್ಥಿಯ ಸಹಿ
Signature of the Candidate

ಅರಣ್ಯ ಇಲಾಖೆ

ಪತ್ರಿಕಾ ಪ್ರಕಟಣೆ

ಅರಣ್ಯ ಇಲಾಖೆಯ ಶಿವಮೊಗ್ಗ ಅರಣ್ಯ ವೃತ್ತದಲ್ಲಿ ಹನ್ನೆರಡು (12) ಆನೆ ಕವಾಡಿಗಳ ಹುದ್ದೆಗಳಿಗೆ ನೇರನೇಮಕಾತಿಗಾಗಿ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) ನಿಯಮಗಳು 2003 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್‌ಇಇ 258 ಎಫ್‌ಇಜಿ 2008 ದಿನಾಂಕ:9–3–2009 ರಲ್ಲಿ ಹೊರಡಿಸಿರುವ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಪ್ರತ್ಯೇಕವಾಗಿ ದಿನಾಂಕ: 31–07–2009 ರಂದು ಅಧಿಸೂಚನೆಯನ್ನು ಈ ಕಛೇರಿಯಿಂದ ಹೊರಡಿಸಲಾಗಿದೆ.

ಹುದ್ದೆಗಳ ವಿವರ ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದೆ.

ವಿಭಾಗ	ಹುದ್ದೆ	ಕೆಲಸ ನಿರ್ವಹಿಸಬೇಕಾದ ಸ್ಥಳ
ವನ್ಯಜೀವಿ ವಿಭಾಗ, ಶಿವಮೊಗ್ಗ	12 ಆನೆ ಕವಾಡಿ ಹುದ್ದೆಗಳು	ಸಕ್ರೆಬೈಲು ಆನೆ ಕ್ಯಾಂಪ್ ಗಾಜನೂರು

ವಿದ್ಯಾರ್ಹತೆ: ಕನ್ನಡ ಭಾಷೆ ಮಾತನಾಡಲು ಮತ್ತು ತಿಳಿದುಕೊಳ್ಳಲು ಶಕ್ತರಾಗಿರಬೇಕು.

ಅನುಭವ: ಆನೆ ನಿರ್ವಹಣೆಯಲ್ಲಿ ಅನುಭವ ಹೊಂದಿರುವುದು ಕಡ್ಡಾಯವಾಗಿರುತ್ತದೆ.

ಅರ್ಹತೆ: ಕರ್ನಾಟಕ ರಾಜ್ಯದ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸಿಸುವವರಾಗಿತಕ್ಕದ್ದು.

ಅರ್ಜಿನಮೂನೆ: ಅರ್ಜಿಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ. ಅರ್ಜಿ ಶುಲ್ಕ ಇರುವುದಿಲ್ಲ.

1. **ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20–08–2009.**
2. **ಅರ್ಜಿಗಳ ಪರಿಶೀಲನೆಯ ಕೊನೆಯ ದಿನಾಂಕ : 24–08–2009.**
3. **ಅಭ್ಯರ್ಥಿಗಳ ಸಂದರ್ಶನ ದಿನಾಂಕ : 01–09–2009.**
4. **ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ದಿನಾಂಕ : 03–09–2009.**
5. **ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ದಿನಾಂಕ : 07–09–2009**

ಅರ್ಜಿಗಳನ್ನು ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವೃತ್ತ, ಹೊಳೆಹೊನ್ನೂರು ರಸ್ತೆ, ಶಿವಮೊಗ್ಗ–577203 ಇಲ್ಲಿಗೆ ಸಲ್ಲಿಸಬೇಕು.

ಪಿ.ಆರ್. 643

ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವೃತ್ತ, ಶಿವಮೊಗ್ಗ.

ಅರಣ್ಯ ಇಲಾಖೆ

ಅಧಿಸೂಚನೆ

ಸಂಖ್ಯೆ:ಸಿಬ್ಬಂದಿ/ ವಿವ–14/ಆಕ/2008–09 ದಿನಾಂಕ: 1ನೇ ಆಗಸ್ಟ್ 2009

ಆನೆ ಕವಾಡಿ ಹುದ್ದೆಗೆ ನೇರ ನೇಮಕಾತಿ.

ಅರಣ್ಯ ಇಲಾಖೆಯಲ್ಲಿ 54 ಆನೆ ಕವಾಡಿ (48 ನೇರ ನೇಮಕಾತಿ & 6 ಬ್ಯಾಕ್ ಲಾಗ್) ಹುದ್ದೆಗಳಿಗೆ ಕರ್ನಾಟಕ ಅರಣ್ಯ ಸೇವೆಗಳು (ನೇಮಕಾತಿ) ನಿಯಮಗಳು, 2003ರಂತೆ ಹಾಗೂ ಸರ್ಕಾರದ ಅಧಿಸೂಚನೆ FEE 258 FEG 2008

ದಿನಾಂಕ:09-03-2009ರಲ್ಲಿ ಹೊರಡಿಸಿರುವ (ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2008) ಪ್ರಕಾರ ಸರ್ಕಾರ ಆದೇಶ ಸಂ:ಅಪಜೀ/274/ಅಅಸೇ/209 ದಿನಾಂಕ:27.7.09 & ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರ ಪತ್ರ ಸಂಖ್ಯೆ:ಬಿ3/ಸಿಬ್ಬಂದಿ/ವಿವ-170/00-01 ದಿ:29.7.2009ರ ನಿರ್ದೇಶನಗಳಂತೆ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಕೊಡಗು ವೃತ್ತದ ಮಡಿಕೇರಿ ವಿಭಾಗದಲ್ಲಿ ಖಾಲಿ ಇರುವ 18 ಆನೆ ಕವಾಡಿ ಹುದ್ದೆಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ವೃತ್ತ, ಅರಣ್ಯಭವನ, ಮಡಿಕೇರಿ. ಇಲ್ಲಿಗೆ **ದಿನಾಂಕ:20.8.2009ರಂದು ಅಪರಾಹ್ನ 4.00ಘಂಟೆ** ಅಥವಾ ಅದಕ್ಕೂ ಮುಂಚಿತವಾಗಿ ಅಂಚೆ ಮೂಲಕ ಅಥವಾ ಖುದ್ದಾಗಿ ತಲುಪಿಸುವುದು.

ವಿಶೇಷ ಸೂಚನೆ : ಅಂಚೆ ಮೂಲಕ ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಹಾಗೂ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಸಾಧಾರಣ ಅಂಚೆ ಮುಖಾಂತರ ಮಾತ್ರ ಮೇಲ್ಕಂಡ ಕಚೇರಿ ವಿಳಾಸಕ್ಕೆ ಕಳುಹಿಸಬಹುದು **ಯಾವುದೇ ಕಾರಣಕ್ಕೂ ಕೊರಿಯರ್ ನೊಂದಾಯಿತ ಅಂಚೆ, ಇತ್ಯಾದಿ ವಿಧಾನಗಳ ಮುಖಾಂತರ ಕಳುಹಿಸಿದ ಅರ್ಜಿಗಳನ್ನು ಸ್ವೀಕರಿಸುವ ವ್ಯವಸ್ಥೆ ಇರುವುದಿಲ್ಲ.** ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೇ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

1.0 ಹುದ್ದೆಗಳ ವಿವರ:

ಹುದ್ದೆಯ ಹೆಸರು : ಆನೆ ಕವಾಡಿ

ವೇತನ ಶ್ರೇಣಿ:ರೂ.4800-100-6000-125-6500-150-7100-175-7275

ಕ್ರ.ಸಂ	ಅರಣ್ಯ ವಿಭಾಗಗಳು	ಹುದ್ದೆಗಳ ಸಂಖ್ಯೆ
1	ಮಡಿಕೇರಿ ವಿಭಾಗ	18
	ಒಟ್ಟು	**18 ಸಂಖ್ಯೆ**

2.0 ಮಡಿಕೇರಿ ವಿಭಾಗದಲ್ಲಿನ 18 ಹುದ್ದೆಗಳ ಮೀಸಲಾತಿ ವರ್ಗೀಕರಣ :

ಪ್ರವರ್ಗ ನೇರ ಮೀಸಲಾತಿ (Vertical Reservation)	ಸಮತಳ ಮೀಸಲಾತಿ (Horizontal Reservation)							ಒಟ್ಟು	ಷರಾ
	ಇತರೆ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ *	ಮಾಜಿ ಸೈನಿಕ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	3	3	3	-	-	-	-	**9**	
ಪರಿಶಿಷ್ಟ ಜಾತಿ	1	1	-	-	-	-	-	**2**	
ಪರಿಶಿಷ್ಟ ಪಂಗಡ	1	-	-	-	-	-	-	**1**	
ಪ್ರವರ್ಗ-I	1	-	-	-	-	-	-	**1**	
ಪ್ರವರ್ಗ-II (ಎ)	1	1	-	-	-	-	-	**2**	
ಪ್ರವರ್ಗ-II (ಬಿ)	1	-	-	-	-	-	-	**1**	
ಪ್ರವರ್ಗ-III (ಎ)	1	-	-	-	-	-	-	**1**	
ಪ್ರವರ್ಗ-III (ಬಿ)	1	-	-	-	-	-	-	**1**	
ಒಟ್ಟು	**10**	**5**	**3**					**18**	

(3) ಸರ್ಕಾರದ ಅಧಿಸೂಚನೆ ಸಂಖ್ಯೆ-ಡಿಪಿಎಆರ್-52/ಎಸ್ ಆರ್ ಆರ್/99 ದಿನಾಂಕ 08-11-2002 ರ ಆದೇಶದಲ್ಲಿ ಅಂಗವಿಕಲ ಅಭ್ಯರ್ಥಿಯ ಮೀಸಲಾತಿ ಕುರಿತಂತೆ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಆನೆ ಕಾವಡಿ ಹುದ್ದೆಯ ನೇಮಕಾತಿಯಲ್ಲಿ ಅಂಗವಿಕಲರಿಗೆ ಮೀಸಲಾತಿ ಅವಕಾಶ ಕಲ್ಪಿಸದೇ ಇರುವುದರಿಂದ ಅಂಗವಿಕಲ ಮೀಸಲಾತಿ ಬಿಂದುವನ್ನು ಇತರೆ ಸಮತಳ ಮೀಸಲಾತಿ ಅಡಿಯಲ್ಲಿ ಸೇರಿಸಲಾಗಿದೆ.

(4) ಮೇಲ್ಕಂಡಂತೆ ಪಂಚಿಕೆ ಮಾಡಿರುವ ಹುದ್ದೆಗಳು ಹೆಚ್ಚು ಕಡಿಮೆಯಾಗುವ ಸಾಧ್ಯತೆಗೆ ಒಳಪಟ್ಟಿರುತ್ತದೆ.

3.0 ಅರ್ಹತೆ ಮತ್ತು ನಿಬಂಧನೆ

3.1 **ಪೌರತ್ವ** : ಈ ಕೆಳಗೆ ಕಾಣಿಸಿದ ವ್ಯಕ್ತಿಗಳು ಮಾತ್ರ ನೇಮಕಾತಿ ಕೋರಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಅ) ಭಾರತದ ಪೌರ

ಆ) ಭಾರತದಲ್ಲಿ ಖಾಯಂ ಆಗಿ ನೆಲೆಸುವ ಉದ್ದೇಶದಿಂದ 1962ರ ಜನವರಿ 1 ನೇ ದಿನಾಂಕಕ್ಕೆ ಮೊದಲು ಭಾರತಕ್ಕೆ ಬಂದಿರುವ ಟಿಬೆಟಿಯನ್ ನಿರಾಶಿತರು.

ಇ) ಭಾರತದಲ್ಲಿ ಖಾಯಂ ಆಗಿ ನೆಲೆಸುವ ಉದ್ದೇಶದಿಂದ ಪಾಕಿಸ್ತಾನ, ಮ್ಯಾನ್ಮಾರ್ (ಹಿಂದಿನ ಬರ್ಮಾ) ಶ್ರೀಲಂಕಾ, ಪೂರ್ವ ಆಫ್ರಿಕದ ರಾಷ್ಟ್ರಗಳಾದ, ಕಿನ್ಯಾ, ಉಗಾಂಡಾ, ತಾಂಜಾನಿಯಾ ಸಂಯುಕ್ತ ಗಣರಾಜ್ಯ (ಹಿಂದಿನ ಟಾಂಗನಿಕಾ, ಜಂಜೀಬಾರ), ಝಾಂಬಿಯಾ, ಮಲಾವಿ, ಜೈರ್ ಇಥಿಯೋಪಿಯಾ ಅಥವಾ ವಿಯೆಟ್ನಾಂಗಳಿಂದ ವಲಸೆ ಬಂದ ಭಾರತೀಯ ಮೂಲದ ವ್ಯಕ್ತಿ.

('ಅ' ಯಿಂದ 'ಇ' ವರೆಗೆ ಕಾಣಿಸಿರುವ ಅಭ್ಯರ್ಥಿಯು ವಲಸೆ ಬಂದ ಬಗ್ಗೆ ಅವರು ವಾಸಿಸುವ ಜಿಲ್ಲಾ ಸರಹದ್ದಿನ ಜಿಲ್ಲಾಧಿಕಾರಿ ಅಥವಾ ಜಿಲ್ಲಾ ನ್ಯಾಯಾಧೀಶರಿಂದ ಪ್ರಮಾಣ ಪತ್ರ ಪಡೆದು ಒಪ್ಪಿಸಬೇಕು. ಇಲ್ಲದ ಪಕ್ಷದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ)

ಈ) ಕರ್ನಾಟಕ ರಾಜ್ಯದ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸಿಸುವವರಾಗಿರತಕ್ಕದ್ದು.

3.2 ವಿದ್ಯಾರ್ಹತೆ

ಕನ್ನಡ ಭಾಷೆ ಮಾತನಾಡಲು ಮತ್ತು ತಿಳಿದುಕೊಳ್ಳಲು ಶಕ್ತರಾಗಿರಬೇಕು.

3.3 ಅನುಭವ

ಆನೆಯ ಉಸ್ತುವಾರಿ ಮತ್ತು ಪೋಷಣೆಯ ಅನುಭವ ಹೊಂದಿರುವುದು ಕಡ್ಡಾಯವಾಗಿರುತ್ತದೆ.

3.4 ವಯೋಮಿತಿ

ಅಧಿಸೂಚನೆಯ ದಿನಾಂಕಕ್ಕೆ ಅಭ್ಯರ್ಥಿಯು **ಕನಿಷ್ಠ 18 ವರ್ಷ** ವಯಸ್ಸನ್ನು ಪೂರೈಸಿರತಕ್ಕದ್ದು.

ಅಧಿಸೂಚನೆಯ ದಿನಾಂಕಕ್ಕೆ ಗರಿಷ್ಠ ವಯೋಮಿತಿ ವಿವರಗಳು ಕೆಳಗಿನಂತಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ1	ಗರಿಷ್ಟ ವಯೋಮಿತಿ 40 ವರ್ಷಗಳು
ಪ್ರವರ್ಗ IIA, IIB, III A, III B	ಗರಿಷ್ಟ ವಯೋಮಿತಿ 38 ವರ್ಷಗಳು
ಇತರೆ	ಗರಿಷ್ಟ ವಯೋಮಿತಿ 35 ವರ್ಷಗಳು

3.5 ವೈದ್ಯಕೀಯ ಅರ್ಹತೆ

ಅಭ್ಯರ್ಥಿಗಳನ್ನು ಸರ್ಕಾರಿ ವೈದ್ಯಾಧಿಕಾರಿಗಳಿಂದ ವೈದ್ಯಕೀಯ ತಪಾಸಣೆ ನಡೆಸಿಕೊಂಡು ಅವರಿಂದ ವೈದ್ಯಕೀಯ ಧೃಡಪತ್ರ ಪಡೆದು ಸಂದರ್ಶನದ ವೇಳೆ ಸಲ್ಲಿಸತಕ್ಕದ್ದು.

4.0 ಅರ್ಜಿ ನಮೂನೆ

ಈ ಅಧಿಸೂಚನೆಯೊಂದಿಗೆ ಪ್ರಕಟಿಸಿರುವ ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ಅರ್ಜಿಯನ್ನು ಬೆರಳಚ್ಚು/ ಕಂಪ್ಯೂಟರ್ ಪ್ರಿಂಟ್ ಮಾಡಿಸಿ, ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸುವುದು.

4.1 ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳು: (ದೃಢೀಕೃತ ಪ್ರತಿಗಳನ್ನು ಮಾತ್ರ ಸಲ್ಲಿಸುವುದು)

- ಸ್ವವಿಳಾಸವಿರುವ 10 x 22 ಸೆ.ಮಿ ಅಳತೆಯ ಒಂದು ಲಕೋಟೆ (ಅಂಚೆ ಚೀಟಿ ಅಂಟಿಸುವ ಅಗತ್ಯವಿಲ್ಲ)

  <u>ಸೂಚನೆ:</u>– ಮೂಲ ದಾಖಲಾತಿಗಳು/ ಮೂಲ ಪ್ರಮಾಣ ಪತ್ರ ಇತ್ಯಾದಿಗಳನ್ನು ಅರ್ಜಿಯ ಜೊತೆ ಸಲ್ಲಿಸುವ ಅಗತ್ಯವಿಲ್ಲ.
- ಆನೆ ಉಸ್ತುವಾರಿ ಮತ್ತು ಪೋಷಣೆಯ ಅನುಭವ ಹೊಂದಿರುವ ಬಗ್ಗೆ ವಲಯ ಅರಣ್ಯಾಧಿಕಾರಿ ಅಥವಾ ಅವರಿಗಿಂತ ಮೇಲ್ಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದ ದೃಡೀಕೃತ ಪ್ರತಿ.
- ಕರ್ನಾಟಕ ರಾಜ್ಯ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸ ಮಾಡುವವರೆಂಬ ಬಗ್ಗೆ ಸಂಬಂಧಿಸಿದ ತಹಸೀಲ್ದಾರರಿಂದ ಪಡೆದ ದೃಢೀಕರಣ ಪತ್ರ.
- ಸರ್ಕಾರಿ ವೈದ್ಯಾಧಿಕಾರಿಗಳು ನೀಡಿರುವ ವೈದ್ಯಕೀಯ ದೃಢೀಕೃತ ಪತ್ರ (ದೈಹಿಕ ಅರ್ಹತೆ ಪ್ರಮಾಣ ಪತ್ರ)
- ಬಹುಪತಿತ್ವ/ ಬಹುಪತ್ನಿತ್ವ ಹೊಂದಿಲ್ಲದಿರುವ ಬಗ್ಗೆ ತಹಸೀಲ್ದಾರರಿಂದ ಪಡೆದ ದೃಢೀಕರಣ ಪತ್ರ
- ಜನ್ಮ ದಿನಾಂಕದ ದೃಢೀಕರಣ ಪತ್ರ
- ಜಾತಿ ಪ್ರಮಾಣ ಪತ್ರ

4.2 ಅರ್ಜಿಗಳನ್ನು ಸಲ್ಲಿಸಬೇಕಾದ ವಿಳಾಸ : ಅರಣ್ಯ ಸಂರಕ್ಷಣಾಧಿಕಾರಿ
ಕೊಡಗು ವೃತ್ತ , ಮಡಿಕೇರಿ
ಅರಣ್ಯ ಭವನ, ಮಡಿಕೇರಿ–571201.

4.3 ಸ್ವೀಕೃತ ಅರ್ಜಿಗಳ ಪರಾಮರ್ಶೆ/ ನೇಮಕಾತಿ ವಿಧಾನ :
ಅರ್ಜಿ ಸ್ವೀಕರಿಸಿದ ನಂತರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯ ಮುಂದೆ ಹಾಜರಾಗಲು ತಿಳಿಸಲಾಗುವುದು. ಅಭ್ಯರ್ಥಿಗಳಿಂದ ಆನೆ ಉಸ್ತುವಾರಿ ಮತ್ತು ಪೋಷಣೆಯ ಸಾಮರ್ಥ್ಯ ಮತ್ತು ಕನ್ನಡ ಭಾಷೆಯನ್ನು ಮಾತನಾಡುವ ಮತ್ತು ತಿಳಿದುಕೊಳ್ಳುವ ಸಾಮರ್ಥ್ಯಕ್ಕನುಗುಣವಾಗಿ ಆಯ್ಕೆ ಸಮಿತಿಯು (ಗರಿಷ್ಠ 100 ಅಂಕಗಳಿಗೆ) ಅಂಕಗಳನ್ನು ನೀಡಿ ಹಾಗೂ ಮೀಸಲಾತಿ ನಿಯಮಗಳನನ್ನುಸರಿಸಿ ಆಯ್ಕೆ ಪಟ್ಟಿಯನ್ನು ಸಿದ್ಧಗೊಳಿಸಲಾಗುವುದು.

4.4 ಅಭ್ಯರ್ಥಿಗಳು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.

5.0 ಆಯ್ಕೆಯಾದ ಅಭ್ಯರ್ಥಿಗಳು 24 ತಿಂಗಳುಗಳು ಖಾಯಂ ಪೂರ್ವ/ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸತಕ್ಕದ್ದು.
ಆಯ್ಕೆಯಾದ ಅಭ್ಯರ್ಥಿಯು ಪ್ರಪ್ರಥಮವಾಗಿ ಅವರನ್ನು ನೇಮಕ ಮಾಡುವ ಸ್ಥಳದಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸತಕ್ಕದ್ದು.

6.0 ಮೂಲ ದಾಖಲಾತಿಗಳ ಪರಿಶೀಲನೆ

6.1 ಮೀಸಲಾತಿ ವರ್ಗೀಕರಣ ಹಾಗೂ ಇತರೆ ಮೂಲ ಪ್ರಮಾಣ ಪತ್ರಗಳನ್ನು ಸಂದರ್ಶನಕ್ಕೆ ಹಾಜರಾಗುವಾಗ ಸಂಬಂಧಿಸಿದ ಆಯ್ಕೆ ಸಮಿತಿಯ ಎದುರು ಹಾಜರುಪಡಿಸಬೇಕು.
ಅರ್ಹ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನಾ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳಿಗೆ ಪೂರಕವಾಗಿ ವಯಸ್ಸು (ಜನ್ಮ ದಿನಾಂಕ ತಿಳಿಯಲು ಪ್ರಮಾಣ ಪತ್ರಗಳನ್ನು) ಮೀಸಲಾತಿ ವರ್ಗೀಕರಣ, ಇತ್ಯಾದಿ ದಾಖಲಾತಿ/ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ನಿಗದಿಪಡಿಸಲಾಗುವ ದಿನಾಂಕ ಮತ್ತು ಅಧಿಕಾರಿಗಳ ಎದುರು ತಪ್ಪದೇ ಹಾಜರುಪಡಿಸಬೇಕು ಹಾಗೂ ಇಂತಹ ದಾಖಲೆಗಳನ್ನು ಹಾಜರು ಪಡಿಸಲು ಕಾಲ ವಿಸ್ತರಣೆ ನೀಡಲಾಗುವುದಿಲ್ಲ.

6.2 ವಿವಿಧ ಪ್ರವರ್ಗಗಳ ಅಡಿಯಲ್ಲಿ ಮೀಸಲಾತಿ ಕೋರಿದ ಅಭ್ಯರ್ಥಿಗಳು, ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರುಪಡಿಸದೇ ಇದ್ದ ಪಕ್ಷದಲ್ಲಿ ಅವರು ಕೋರಿರುವ ಮೀಸಲಾತಿಯನ್ನು ರದ್ದುಪಡಿಸಿ ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಅವರನ್ನು ಪರಿಗಣಿಸಲಾಗುವುದು.

6.3 ವಿವಿಧ ಪ್ರವರ್ಗಗಳಡಿ ಮೀಸಲಾತಿ ಕೋರಿದ ಅಭ್ಯರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳ ವಿವರ:
ವಿವಿಧ ಪ್ರವರ್ಗಗಳಡಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು ಜಾತಿ ಪ್ರಮಾಣ ಪತ್ರವನ್ನು ಈ ಕೆಳಕಂಡ ನಮೂನೆಗಳಲ್ಲಿ ಹೊಂದಿರಬೇಕು.

6.3.1 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ "ನಮೂನೆ ಡಿ" ರಲ್ಲಿ.

6.3.2 ಪ್ರವರ್ಗ– I ರ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ "ನಮೂನೆ–ಇ" ರಲ್ಲಿ.

6.3.3 ಪ್ರವರ್ಗ– II (ಎ) II (ಬಿ), III (ಎ) ಮತ್ತು III (ಬಿ) ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ ನಮೂನೆ " ಎಫ್" ರಲ್ಲಿ.

ಸೂಚನೆ: "ನಮೂನೆ– ಎಫ್" ಪ್ರಮಾಣ ಪತ್ರವು ಅಧಿಸೂಚನೆಯ ದಿನಾಂಕಕ್ಕೆ **ಒಂದು ವರ್ಷಕ್ಕಿಂತ ಹೆಚ್ಚು ಹಳೆಯ ಸಮಯದ್ದಾಗಿರಬಾರದು** ಎಂಬುದನ್ನು ಅಭ್ಯರ್ಥಿಯು ಗಮನದಲ್ಲಿಡತಕ್ಕದ್ದು. ಅವಧಿ ಮೀರಿದ ಪ್ರಮಾಣ ಪತ್ರವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

6.3.4 ಯೋಜನಾ ನಿರಾಶ್ರಿತ ಮೀಸಲಾತಿ ವರ್ಗೀಕರಣದಲ್ಲಿ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರಿಂದ ನಮೂನೆ–3 ರಲ್ಲಿ ನೀಡಿರುವ ಪ್ರಮಾಣ ಪತ್ರವನ್ನು ಹಾಜರು ಪಡಿಸಬೇಕು.

7.0 ಗಮನಿಸಬೇಕಾದ ಅಂಶಗಳು

7.1 ಅಂಚೆ ಮೂಲಕ ಅಥವಾ ಇನ್ನಿತರೆ ಯಾವುದೇ ವ್ಯವಸ್ಥೆ ಮೂಲಕ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಹಾಗೂ ಅರ್ಜಿಗಳು ಮೇಲೆ ತಿಳಿಸಿರುವ ವಿಳಾಸಕ್ಕೆ ತಲುಪಲು ವಿಳಂಬವಾದರೆ ಇಲಾಖೆಯು ಜವಬ್ದಾರಿಯಲ್ಲ.

7.2 ನಿಗದಿತ ನಮೂನೆಯಲ್ಲಿಲ್ಲದೆ ಅಥವಾ ಅಪೂರ್ಣ ಮಾಹಿತಿ ನೀಡಿದ ಅರ್ಜಿಗಳನ್ನು ಅನರ್ಹ ಅರ್ಜಿಗಳೆಂದು ಪರಿಗಣಿಸಿ ತಿರಸ್ಕರಿಸಲಾಗುವುದು. ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ತುಂಬದೇ ಸದರಿ ಅರ್ಜಿಯು ತಿರಸ್ಕೃತವಾದ ಪಕ್ಷದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ವಂಚಿತರಾದ ಪಕ್ಷದಲ್ಲಿ ತತ್ಸಂಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

7.3 ಯಾವುದೇ ಅಭ್ಯರ್ಥಿಯು ಅರ್ಜಿ ಹಾಕುವ ಸಮಯದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಇಲಾಖೆಯಲ್ಲಿ ಅಥವಾ ಸಂಸ್ಥೆಗಳಲ್ಲಿ ಅಥವಾ ಪ್ರಾಧಿಕಾರದಲ್ಲಿ ಖಾಯಂ ಅಥವಾ ತಾತ್ಕಾಲಿಕ ನೌಕರಿಯಲ್ಲಿದ್ದಲ್ಲಿ ಅರ್ಜಿಯನ್ನು ಸಂಬಂಧಿಸಿದ ಇಲಾಖೆ/ ಸಂಸ್ಥೆ/ಪ್ರಾಧಿಕಾರದ ಮುಖಾಂತರ ಸಲ್ಲಿಸಬೇಕು.

7.4 ಯಾವುದೇ ಅಭ್ಯರ್ಥಿಯು ತನ್ನ ಆಯ್ಕೆಗೆ ಸಂಬಂಧಿಸಿದಂತೆ ಬಾಹ್ಯ ಒತ್ತಡ ತರಲು ಪ್ರಯತ್ನಿಸಿದ್ದಲ್ಲಿ ಅಂತಹ ಅಭ್ಯರ್ಥಿಯನ್ನು ಅನರ್ಹಗೊಳಿಸಲಾಗುವುದು.

7.5 ಅಭ್ಯರ್ಥಿಯು ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿ ಭರ್ತಿ ಮಾಡಿ ಬೇರೆ ಬೇರೆ ಅರ್ಜಿಯಲ್ಲಿ ವಿಭಿನ್ನವಾದ ವಿವರಗಳನ್ನು ನಮೂದಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

7.6 ಕರ್ನಾಟಕ ರಾಜ್ಯದ ಯಾವುದೇ ಸರ್ಕಾರಿ ಇಲಾಖೆ, ಕೇಂದ್ರ ಸರ್ಕಾರಿ ಇಲಾಖೆ ಅಥವಾ ಅರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

7.7 ಕಾನೂನು ಬಾಹಿರವಾದ ಸಂಸ್ಥೆ ಅಥವಾ ಸಂಘ ಎಂದು, ಘೋಷಿಸಲಾದ ಸಂಘ ಸದಸ್ಯರಾಗಿದ್ದರೆ ಅಥವಾ ಇನ್ನಾವುದೇ ರೀತಿಯಲ್ಲಿ ಅಂತಹ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರೆ ಅಂತಹ ವ್ಯಕ್ತಿ ನೇಮಕಾತಿಗೆ ಅರ್ಹರಾಗುವುದಿಲ್ಲ.

7.8 ಅಭ್ಯರ್ಥಿಯು ಸಮಾಜ ಘಾತುಕ ಕೃತ್ಯಗಳಲ್ಲಿ ತೊಡಗಿ ಅಪರಾಧಿಯಾಗಿದ್ದರೆ, ಅಂತಹ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

7.9 ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿ/ ಪತಿಯರನ್ನು ಹೊಂದಿದ ಪುರುಷ/ ಮಹಿಳೆ ಅಭ್ಯರ್ಥಿಗಳು ಸರ್ಕಾರದ ಪೂರ್ವಾನುಮತಿ ಇಲ್ಲದೆ ನೇಮಕಾತಿಗೆ ಅರ್ಹರಾಗುವುದಿಲ್ಲ.

7.10 ಅಭ್ಯರ್ಥಿಯು ನೇಮಕಾತಿ ಸಂದರ್ಶನಕ್ಕೆ ಬೇರೊಬ್ಬ ವ್ಯಕ್ತಿಯನ್ನು ತಮ್ಮ ಪರವಾಗಿ ಕಳುಹಿಸಿದ್ದಲ್ಲಿ ಅಥವಾ ತಪ್ಪು ಮಾಹಿತಿಗಳನ್ನು ನಮೂದಿಸಿದ್ದಲ್ಲಿ ಕೃತ್ರಿಮ ಅಥವಾ ತಿದ್ದಿದ ದಾಖಲಾತಿಗಳನ್ನು ಅಥವಾ ಅನುಚಿತ ಮಾರ್ಗಗಳನ್ನು ಉಪಯೋಗಿಸಿದ್ದಲ್ಲಿ ಅಥವಾ ಪ್ರಯತ್ನಿಸಿದಲ್ಲಿ ಅನರ್ಹರೆಂದು ಪರಿಗಣಿಸಲಾಗುವುದು ಮತ್ತು ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಉಪ ನಿಯಮ 20 ರಂತೆ ಅಪರಾಧಿ ವ್ಯವಹರಣೆಗೆ ಒಳಪಡುವರು.

7.11 ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ–ಎಸ್‌ಪಿಎಸ್–04–ಪಿಇಟಿ–2005 ದಿನಾಂಕ 31.3.2006 ರಂತೆ ಅಂಶದಾಯಿ ನಿವೃತ್ತಿ ಯೋಜನೆ (Contributory Pension Scheme) ಗೆ ಆಯ್ಕೆಯಾದ ಅಭ್ಯರ್ಥಿಗಳು ಬದ್ಧರಾಗಿರುತ್ತಾರೆ.

7.12 ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಜೆರಾಕ್ಸ್ ಪ್ರತಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳಲು ಸೂಚಿಸಿದೆ.

7.13 ಪ್ರಕಟಿಸಲಾಗಿರುವ ಹುದ್ದೆಗಳ ಸಂಖ್ಯೆಯಲ್ಲಿ ಕಡಿತ ಅಥವಾ ಹೆಚ್ಚುವರಿ ಆದಲ್ಲಿ ಅದನ್ನು ಇಲಾಖಾ ವೆಬ್‌ಸೈಟ್ (www.karanataforest.gov.in) ನಲ್ಲಿ ಪ್ರಕಟಿಸಲಾಗುವುದು.

7.14 ಯಾವುದೇ ತಿಳುವಳಿಕೆ ದೊರೆಯದ ಅಭ್ಯರ್ಥಿಗಳು ನೇಮಕಾತಿಗೆ ಆಯ್ಕೆಯಾಗಿರುವುದಿಲ್ಲವೆಂದು ತಿಳಿಯುವುದು.

7.15 ಆಯ್ಕೆಗೊಂಡು ನೇಮಕಾತಿ ಹೊಂದುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಎಲ್ಲಾ ಸೇವಾ ನಿಯಮಗಳಿಗೆ ಒಳಪಡುತ್ತಾರೆ.

7.16 ಸಾಮಾನ್ಯ ಪ್ರವರ್ಗ ಮತ್ತು ಇತರ ಪ್ರವರ್ಗಗಳಿಗೆ ಮೀಸಲಾದ ಅರ್ಹ ಅಭ್ಯರ್ಥಿಗಳು ಯಾರು ಸಹ, ನೇಮಕಾತಿ ಕೋರಿ ಅರ್ಜಿ ಸಲ್ಲಿಸದಿದ್ದ ಪಕ್ಷದಲ್ಲಿ, ಈ ಪ್ರವರ್ಗಗಳಿಗೆ ಮೀಸಲಾದ ಹುದ್ದೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ ಆದ್ಯತೆಯ ಮೇರೆಗೆ ನೇಮಕಾತಿ ಮಾಡಿಕೊಳ್ಳಲಾಗುವುದು.

ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ.

ಆನೆ ಕವಾಡಿ ಹುದ್ದೆಗೆ ಅರ್ಜಿ

APPLICATION FORM FOR THE POST OF ELEPHANT KAVADI

(ಪ್ರಕಟಣೆ ಸಂಖ್ಯೆ: ಸಿಬ್ಬಂದಿ/ಸಿಆರ್–14/ಆಕಾ/08–09 ದಿನಾಂಕ: 1–8–2009)

ಕನ್ನಡ ಅಥವಾ ಆಂಗ್ಲ ಭಾಷೆಯ ಸ್ಪಷ್ಟ ಅಕ್ಷರಗಳಲ್ಲಿ ಭರ್ತಿ ಮಾಡಿ
Fill Legibly in English (Capitals) or Kannada letters only

ಯಾವುದೇ ಅರ್ಜಿ ಶುಲ್ಕ ಇರುವುದಿಲ್ಲ. There is no Application Fee.
ಯಾವುದೇ ಮೂಲ ಪ್ರಮಾಣ ಪತ್ರ ಲಗತ್ತಿಸುವಂತಿಲ್ಲ. No original document to be enclosed.

ಸೂಚನೆ: ಅರ್ಜಿಯೊಂದಿಗೆ ಸ್ವವಿಳಾಸವಿರುವ ಒಂದು ಲಕೋಟೆ

ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ
Affix Recent Passport Size Photograph

1. ಅಭ್ಯರ್ಥಿಯ ಹೆಸರು
Name of the Candidate

2. ಲಿಂಗ / Sex — ಪುರುಷ Male ☐ ಮಹಿಳೆ Female ☐

3. ಜನ್ಮ ದಿನಾಂಕ/Date of Birth — ದಿನ / Day ☐☐ ತಿಂಗಳು / Month ☐☐ ವರ್ಷ / Year ☐☐☐☐

4. ಪತ್ರ ವ್ಯವಹಾರಕ್ಕಾಗಿ ಪೂರ್ಣ ವಿಳಾಸ
Address for Correspondence

ಪಿನ್ ಕೋಡ್ / PIN CODE ☐☐☐☐☐☐

5. ವರ್ಗೀಕರಣ (ಅ) / Classification (A)
ಸೂಕ್ತ ಅಂಕಣವನ್ನು (√) ಟಿಕ್ ಮಾಡಿ

☐ ಸಾಮಾನ್ಯ ವರ್ಗ General Merit
☐ ಪ್ರವರ್ಗ– I Category – I
☐ ಪ್ರವರ್ಗ–II(ಎ) Category–II(a)
☐ ಪ್ರವರ್ಗ–III (ಬಿ) General Merit –III(b)
☐ ಪ್ರವರ್ಗ–III(ಎ) Category–III(a)
☐ ಪ್ರವರ್ಗ–III(ಬಿ) Category–III(b)
☐ ಪರಿಶಿಷ್ಟ ಜಾತಿ SC
☐ ಪರಿಶಿಷ್ಟ ಪಂಗಡ ST

6. ವರ್ಗೀಕರಣ (ಆ) / Classification (B)
ಸೂಕ್ತ ಅಂಕಣವನ್ನು (√)ಟಿಕ್ ಮಾಡಿ
☐ ಯೋಜನೆ ನಿರಾಶ್ರಿತರೆ Project Displaced

7. ಅರಣ್ಯದಲ್ಲಿ ವಾಸಿಸುವ ಪರಿಶಿಷ್ಟ ಪಂಗಡದವರಾಗಿದ್ದರೆ, ಜಾತಿಯ ಹೆಸರನ್ನು ನಮೂದಿಸಿ.
Do you belong to any of the forest dwelling Scheduled tribes, if so, mention the caste.

8. ಆನೆ ನಿರ್ವಹಣೆಯಲ್ಲಿ ಹೊಂದಿರುವ ಅನುಭವ (ವರ್ಷಗಳಲ್ಲಿ)
No. of Years of Experience in handling Elephants ☐☐ ವರ್ಷಗಳು/ತಿಂಗಳುಗಳು

ಮೇಲಿನ ಮಾಹಿತಿಗಳು ಸತ್ಯವಾಗಿವೆ ಎಂದು ಪ್ರಮಾಣ ಮಾಡುತ್ತೇನೆ.

Place / ಸ್ಥಳ:

Date / ದಿನಾಂಕ:

ಅಭ್ಯರ್ಥಿಯ ಸಹಿ
Signature of the Candidate

P.R. 632

ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಡಗು ವೃತ್ತ, ಮಡಿಕೇರಿ

ತಿದ್ದುಪಡಿ ಆದೇಶ

ಸಂಖ್ಯೆ:ಸಿಬ್ಬಂದಿ/ವಿವ–14/ಆಕ/2008–09, ದಿನಾಂಕ: 4ನೇ ಆಗಸ್ಟ್ 2009

ವಿಷಯ: ಆನೆ ಕವಾಡಿ ನೇರ ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಿದ ಬಗ್ಗೆ.

ಉಲ್ಲೇಖ: ಈ ಕಛೇರಿ ಅಧಿಸೂಚನೆ ಪತ್ರ ಸಂಖ್ಯೆ:ಸಿಬ್ಬಂದಿ/ವಿವ–14/ ಆಕ/2008–09 ದಿನಾಂಕ:1.8.2009.

ಈ ಕಛೇರಿ ಅಧಿಸೂಚನೆ ಸಂಖ್ಯೆ:ಸಿಬ್ಬಂದಿ/ವಿವ–14/ಆಕಾ/2008–09, ದಿನಾಂಕ:1.8.2009ರಲ್ಲಿ ಹೊರಡಿಸಿರುವುದರಲ್ಲಿ ಈ ಕೆಳಗಿನ ತಿದ್ದುಪಡಿಗಳನ್ನು ಮಾಡಲಾಗಿದೆ.

1. ಪ್ರಕಟಣೆಯಲ್ಲಿ ಪ್ರಾರಂಭದಲ್ಲಿ "ಸರ್ಕಾರದ ಅಧಿಸೂಚನೆ ಎಫ್‌ಇಇ–258/ಎಫ್‌ಇಜಿ/2008, ದಿನಾಂಕ:03.10.2008ರಲ್ಲಿ ಹೊರಡಿಸಿರುವ ಕರಡು ನಿಯಮಗಳ (ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2008)" ಎಂಬುದರ ಬದಲಾಗಿ

   "ಅರಣ್ಯ ಇಲಾಖೆಯಲ್ಲಿ 54 ಆನೆ ಕವಾಡಿ (48 ನೇರ ನೇಮಕಾತಿ & 6 ಬ್ಯಾಕ್ ಲಾಗ್) ಹುದ್ದೆಗಳಿಗೆ ಕರ್ನಾಟಕ ಅರಣ್ಯ ಸೇವೆಗಳು (ನೇಮಕಾತಿ) ನಿಯಮಗಳು, 2003ರಂತೆ ಹಾಗೂ ಸರ್ಕಾರದ ಅಧಿಸೂಚನೆ FEE 258 FEG 2008 ದಿನಾಂಕ:09–03–2009ರಲ್ಲಿ ಹೊರಡಿಸಿರುವ (ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2008) ಪ್ರಕಾರ ಸರ್ಕಾರ ಆದೇಶ ಸಂ:ಅಪಜೀ/274/ಅಅಸೇ/209 ದಿನಾಂಕ:27.7.09 & ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರ ಪತ್ರ ಸಂಖ್ಯೆ:ಬಿ3/ಸಿಬ್ಬಂದಿ/ವಿವ–170/00–01 ದಿ:29.7.2009ರ ನಿರ್ದೇಶನಗಳಂತೆ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಕೊಡಗು ವೃತ್ತದ ಮಡಿಕೇರಿ ವಿಭಾಗದಲ್ಲಿ ಖಾಲಿ ಇರುವ 18 ಆನೆ ಕವಾಡಿ ಹುದ್ದೆಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ" ಎಂದು ಓದಿಕೊಳ್ಳುವುದು.

2. ಮೇಲೆ ಹೇಳಿದ ಅಧಿಸೂಚನೆಯ ಅಂಶ 2.0 ರಲ್ಲಿ ಮಡಿಕೇರಿ ವಿಭಾಗದಲ್ಲಿನ 18 ಹುದ್ದೆಗಳ ಮೀಸಲಾತಿ ವರ್ಗೀಕರಣವನ್ನು ಅಲ್ಲಿ ಹೇಳಿರುವ ಬದಲಾಗಿ ರೋಸ್ಟರ್ ನಿಯಮಾವಳಿಗಳಂತೆ ಈ ಕೆಳಗಿನಂತೆ ಓದಿಕೊಳ್ಳುವುದು.

ಪ್ರವರ್ಗ ನೇರ ಮೀಸಲಾತಿ (Vertical Reservation)	ಸಮತಳ ಮೀಸಲಾತಿ (Horizontal Reservation)							ಒಟ್ಟು	ಷರಾ
	ಇತರೆ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ *	ಮಾಜಿ ಸೈನಿಕ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತ ಗೊಂಡ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	3	3	3	–	–	–	–	9	
ಪರಿಶಿಷ್ಟ ಜಾತಿ	1	1	–	–	–	–	–	2	
ಪರಿಶಿಷ್ಟ ಪಂಗಡ	1	–	–	–	–	–	–	1	
ಪ್ರವರ್ಗ–I	1	–	–	–	–	–	–	1	
ಪ್ರವರ್ಗ–II (ಎ)	1	1	–	–	–	–	–	2	
ಪ್ರವರ್ಗ–II (ಬಿ)	1	–	–	–	–	–	–	1	
ಪ್ರವರ್ಗ–III (ಎ)	1	–	–	–	–	–	–	1	
ಪ್ರವರ್ಗ–III (ಬಿ)	1	–	–	–	–	–	–	1	
ಒಟ್ಟು	**10**	**5**	**3**					**18**	

1) ಸರ್ಕಾರದ ಅಧಿಸೂಚನೆ ಸಂಖ್ಯೆ–ಡಿಪಿಎಆರ್–52/ಎಸ್ ಆರ್ ಆರ್/99 ದಿನಾಂಕ 08–11–2002 ರ ಆದೇಶದಲ್ಲಿ ಅಂಗವಿಕಲ ಅಭ್ಯರ್ಥಿಯ ಮೀಸಲಾತಿ ಕುರಿತಂತೆ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಆನೆ ಕವಾಡಿ ಹುದ್ದೆಯ ನೇಮಕಾತಿಯಲ್ಲಿ ಅಂಗವಿಕಲರಿಗೆ ಮೀಸಲಾತಿ ಅವಕಾಶ ಕಲ್ಪಿಸದೇ ಇರುವುದರಿಂದ ಅಂಗವಿಕಲ ಮೀಸಲಾತಿ ಬಿಂದುವನ್ನು ಇತರೆ ಸಮತಳ ಮೀಸಲಾತಿ ಅಡಿಯಲ್ಲಿ ಸೇರಿಸಲಾಗಿದೆ.

2) ಮೇಲ್ಕಂಡಂತೆ ಪಂಜಿಕೆ ಮಾಡಿರುವ ಹುದ್ದೆಗಳು ಹೆಚ್ಚು ಕಡಿಮೆಯಾಗುವ ಸಾಧ್ಯತೆಗೆ ಒಳಪಟ್ಟಿರುತ್ತದೆ.

3. ಮೇಲೆ ಹೇಳಿದ ಅಧಿಸೂಚನೆಯ ಅಂಶ 3.4ರಲ್ಲಿ ವಯೋಮಿತಿಯನ್ನು ಅಲ್ಲಿ ಹೇಳಿರುವುದರ ಬದಲಾಗಿ ಈ ಕೆಳಗಿನಂತೆ ಓದಿಕೊಳ್ಳುವುದು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ1	ಗರಿಷ್ಟ ವಯೋಮಿತಿ 40 ವರ್ಷಗಳು
ಪ್ರವರ್ಗ IIA, IIB, III A, III B	ಗರಿಷ್ಟ ವಯೋಮಿತಿ 38 ವರ್ಷಗಳು
ಇತರೆ	ಗರಿಷ್ಟ ವಯೋಮಿತಿ 35 ವರ್ಷಗಳು

ಪಿ.ಆರ್. 650 ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ವಿಭಾಗ, ದಾವಣಗೆರೆ.

ಮರು ಟೆಂಡರ್ ಪ್ರಕಟಣೆ

ಸಂ: ಬಿ1/ ಆ.ಪ್ರಾ/ ಸಂ.–ಉಪಹಾರ–ಗೃಹ–ಸಿ.ಆರ್: 17/ 09–10, ದಿನಾಂಕ: 25ನೇ ಜುಲೈ 2009.

ವಿಷಯ: 2009–11ರ ಅವಧಿಗೆ ಆನಗೋಡು ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯದಲ್ಲಿ ಉಪಹಾರ ಗೃಹ ನಡೆಸುವ ಬಗ್ಗೆ.

ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿರುವ ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ಆನಗೋಡು ಇಲ್ಲಿ 2009–11ನೇ ಸಾಲಿಗೆ ಸಸ್ಯಹಾರಿ ಉಪಹಾರ ಗೃಹ ನಡೆಸಲು ಪ್ರಸಕ್ತ ಸಾಲಿನಲ್ಲಿ ಈ ವಿಭಾಗದಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಹಾಗೂ ನುರಿತ ಹೋಟೆಲ್ ಉದ್ಯಮಿಗಳಿಂದ ಮರು ಟೆಂಡರ್‌ಗಳನ್ನು ದಿನಾಂಕ: 20–08–2009ರಂದು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಸದರಿ ದಿನದಂದು ಅಪರಾಹ್ನ 4.30 ಗಂಟೆಯವರೆಗೆ ಸ್ವೀಕರಿಸಿ ಅದೇ ದಿವಸ ಸಾಯಂಕಾಲ 5–00 ಗಂಟೆಗೆ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು. ಟೆಂಡರ್ ನಮೂನೆ ಜೊತೆ ಇ.ಎಂ.ಡಿ. ರೂ. 2000/–ಗಳಿಗೆ ಬ್ಯಾಂಕ್ ಡಿ.ಡಿ. ಅಥವಾ ಪೇ ಆರ್ಡರ್ ಲಗತ್ತಿಸಬೇಕು. ತಪ್ಪಿತಸ್ಥ ಮತ್ತು ಕಪ್ಪು ಪಟ್ಟಿಯಲ್ಲಿರುವ ಗುತ್ತಿಗೆದಾರರು ಭಾಗವಹಿಸುವಂತಿಲ್ಲ.

ಷರತ್ತುಗಳು

1) ಗುತ್ತಿಗೆಯ ಅವಧಿಯ ಎರಡು ವರ್ಷಗಳು, ಅಂದರೆ ದಿನಾಂಕ: 01–09–2009 ರಿಂದ 30–06–2011.

2) ನಿಗದಿತ ಟೆಂಡರ್ ಫಾರಂಗಳನ್ನು ದಿನಾಂಕ: 20–08–2009ರಂದು ಮಧ್ಯಾಹ್ನ 1.30 ಘಂಟೆಯವರೆಗೆ ನೀಡಲಾಗುತ್ತದೆ. ಪ್ರತಿ ಟೆಂಡರ್ ಫಾರಂ ಬೆಲೆ ರೂ. 200/– ಮತ್ತು ಪ್ರಚಲಿತ ಚಾಲ್ತಿಯಲ್ಲಿರುವ ತೆರಿಗೆ ಸೇರಿ ಈ ಮೊಬಲಗನ್ನು ವಿಭಾಗ ಕಛೇರಿಯಲ್ಲಿ ಡಿ. ಡಿ. ಅಥವಾ ನಗದು ಮೂಲಕ ಪಾವತಿಸಿ ರಸೀದಿ ಪಡೆಯತಕ್ಕದ್ದು. ಮೊಹರಾದ ಟೆಂಡರ್‌ನ್ನು ದಿನಾಂಕ: 20–08–2009ರಂದು ಅಪರಾಹ್ನ 4.30 ಘಂಟೆಯವರೆಗೆ ಸ್ವೀಕರಿಸಿ ಅದೇ ದಿನ ಅಪರಾಹ್ನ 5.00 ಗಂಟೆಗೆ ತೆರೆಯಲಾಗುವುದು.

3) ಪ್ರತಿ ಟೆಂಡರ್‌ನ ಜೊತೆ ಇ.ಎಂ.ಡಿ.ಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ದಾವಣಗೆರೆ. ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ರೂ. 2000/–ರ ಡಿಮಾಂಡ್ ಡ್ರಾಫ್ಟ್‌ನ್ನು ಲಗತ್ತಿಸತಕ್ಕದ್ದು. ಟೆಂಡರ್‌ದಾರರೇ ಸ್ವತಃ ಟೆಂಡರ್ ಫಾರಂಗೆ ಸಹಿ ಹಾಕಬೇಕು. ಅವರ ಪರವಾಗಿ ದರ ನಮೂದಿಸಿ ಸಹಿ ಮಾಡಿ ಟೆಂಡರ್ ಫಾರಂ ಸಲ್ಲಿಸಲು ಬೇರೆ ಯಾರನ್ನಾದರೂ ಅಧಿಕೃತವಾಗಿ ನೇಮಿಸಿದಲ್ಲಿ ಅಂತಹವರಿಗೆ ಟೆಂಡರ್ ಫಾರಂನ್ನು ನೀಡಲಾಗುವುದು.

4) ಯಾವುದೇ ಕಾರಣದಿಂದ ಮೇಲ್ಕಂಡ ದಿನಾಂಕದಂದು ಟೆಂಡರ್ ಜರುಗದಿದ್ದಲ್ಲಿ ಮರು ಟೆಂಡರ್‌ನ್ನು ಮೇಲಿನ ಷರತ್ತುಗಳಿಗೊಳಪಟ್ಟಂತೆ ದಿನಾಂಕ: 20–09–2009ರಂದು ಅಪರಾಹ್ನ 4.30 ಗಂಟೆಗೆ ನಡೆಸಲಾಗುವುದು.

5) ಟೆಂಡರ್ ದರವನ್ನು ಅನುಮೋದಿಸಿದ ಬಗ್ಗೆ ಮಾಹಿತಿಯನ್ನು ಯಶಸ್ವಿ ಟೆಂಡರ್‌ದಾರರಿಗೆ ಅಂಚೆ ಮೂಲಕ ತಿಳಿಸಲಾಗುವುದು. ಈ ಮಾಹಿತಿ ತಿಳಿದ ಒಂದು ವಾರದೊಳಗಾಗಿ ಯಶಸ್ವಿ ಟೆಂಡರ್‌ದಾರರು ಈ ಕಛೇರಿಗೆ ಹಾಜರಾಗಿ ರೂ. 50.00 ಛಾಪಾ ಕಾಗದದಲ್ಲಿ ಕರಾರು ಪತ್ರವನ್ನು ಬರೆದು ಕೊಡತಕ್ಕದ್ದು.

6) ಯಶಸ್ವಿ ಟೆಂಡರ್‌ದಾರರು 30000/– ರೂ.ಗಳನ್ನು ಭದ್ರತಾ ಠೇವಣಿಯಾಗಿ ಇಡತಕ್ಕದ್ದು. ಸದರಿ ಮೊಬಲಗನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ದಾವಣಗೆರೆ. ಇವರ ಹೆಸರಿಗೆ ಪಡೆದ ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿಸತಕ್ಕದ್ದು.

7) ಉಪಹಾರ ಗೃಹ ನಡೆಸಲು ಅಗತ್ಯವಾದ ಪೀಠೋಪಕರಣಗಳು, ನೀರಿನ ಸರಬರಾಜು ವ್ಯವಸ್ಥೆ, ಆಹಾರ ಸಾಮಗ್ರಿ ಸರಬರಾಜು ಇತ್ಯಾದಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು. ಇದಕ್ಕೆ ಇಲಾಖೆ ಯಾವ ರೀತಿಯ ಸಹಾಯ/

ಸಹಕಾರವನ್ನು ಒದಗಿಸುವುದಿಲ್ಲ. ಕಟ್ಟಡಕ್ಕೆ ಅಳವಡಿಸಿದ ವಿದ್ಯುತ್ ಸಂಪರ್ಕದ ಬಾಬ್ತು ಬಳಕೆ ಬಿಲ್ಲುಗಳನ್ನು ಗುತ್ತಿಗೆದಾರರೇ ಪಾವತಿಸತಕ್ಕದ್ದು.

8) ಟೆಂಡರ್‌ನಲ್ಲಿ ನಿಗಧಿಯಾದ ಬಾಡಿಗೆ ಮೊತ್ತವನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವಲಯ ಅರಣ್ಯಾಧಿಕಾರಿಗಳು, ದಾವಣಗೆರೆ ವಲಯ, ದಾವಣಗೆರೆ. ರವರಲ್ಲಿ ಜಮಾ ಮಾಡತಕ್ಕದ್ದು.

9) ಗುತ್ತಿಗೆದಾರರು ಉಪಹಾರ ಗೃಹ ನಡೆಸಲು ನೇಮಿಸಿಕೊಳ್ಳುವ ಕಾರ್ಮಿಕರಿಗೆ ಪಾವತಿಸಬೇಕಾದ ಸಂಬಳ ಹಾಗೂ ಯಾವುದೇ ಪರಿಹಾರ ಇತ್ಯಾದಿಗಳನ್ನು ಕಾಯಿದೆ ಪ್ರಕಾರ ಪಾವತಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿದೆ. ಈ ಬಗ್ಗೆ ಇಲಾಖೆ ಯಾವುದೇ ಜವಾಬ್ದಾರಿಯನ್ನು ವಹಿಸುವುದಿಲ್ಲ. ಗುತ್ತಿಗೆದಾರರು ಬಾಲ ಕಾರ್ಮಿಕರನ್ನು ಕೆಲಸಕ್ಕಾಗಿ ನೇಮಿಸಿಕೊಳ್ಳತಕ್ಕದ್ದಲ್ಲ.

10) ಗುತ್ತಿಗೆದಾರರು ಈ ಗುತ್ತಿಗೆಯನ್ನು ಯಾವ ಕಾರಣಕ್ಕೂ ಉಪ ಗುತ್ತಿಗೆ ನೀಡುವಂತಿಲ್ಲ ಅಥವಾ ಹಸ್ತಾಂತರಿಸುವಂತಿಲ್ಲ. ಗುತ್ತಿಗೆದಾರರ ಬೇಡಿಕೆಯಂತೆ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬೇಕಾದರೆ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ. ಅಥವಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು. ರವರ ಅನುಮತಿಯನ್ನು ಪಡೆದು ಗುತ್ತಿಗೆ ದರದ ಶೇಕಡಾ 10ರಷ್ಟು ದರವನ್ನು ಸರ್ಕಾರಕ್ಕೆ ಜಮಾ ಮಾಡಿ ನಂತರ ವರ್ಗಾಯಿಸತಕ್ಕದ್ದು, ಈ ರೀತಿ ಉಪ ಗುತ್ತಿಗೆ ಪಡೆದವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ದಾವಣಗೆರೆ. ಇವರಲ್ಲಿ ಪ್ರತ್ಯೇಕ ಕರಾರು ಪತ್ರವನ್ನು ಬರೆದುಕೊಡತಕ್ಕದ್ದು.

11) ಗುತ್ತಿಗೆ ಅವಧಿಯಲ್ಲಿ ಉಪಹಾರ ಗೃಹಕ್ಕೆ ಸಂಬಂಧಿಸಿದಂತೆ, ಗ್ರಾಹಕರು ಮತ್ತು ಗುತ್ತಿಗೆದಾರರ ನಡುವೆ ಏನೇ ತಂಟೆ ತಕರಾರುಗಳು ಉಂಟಾದಲ್ಲಿ ಅವುಗಳನ್ನು ನಿಭಾಯಿಸುವ ಜವಾಬ್ದಾರಿ ಗುತ್ತಿಗೆದಾರರದ್ದೇ ಆಗಿರುತ್ತದೆ. ಆದರೆ, ಅಂತಹ ತಕರಾರುಗಳಿಂದ ಇಲಾಖೆಯ ಹಿತಕ್ಕೆ ಧಕ್ಕೆ ಉಂಟು ಮಾಡುವಂತಹ ಪರಿಸ್ಥಿತಿಯು ಉಂಟಾದಲ್ಲಿ ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರ ಈ ಕೆಳ ಸಹಿದಾರರಿಗೆ ಇರುತ್ತದೆ.

12) ಗುತ್ತಿಗೆ ಅವಧಿಯಲ್ಲಿ ಉಪಹಾರ ಗೃಹದ ಇಲಾಖಾ ಕಟ್ಟಡ ಮತ್ತು ಅದಕ್ಕೆ ಅಳವಡಿಸಿರುವ ವಿದ್ಯುತ್ ಸಂಪರ್ಕ ಮೊದಲಾದ ಸರ್ಕಾರಿ ವಸ್ತುಗಳಿಗೆ ಯಾವ ರೀತಿಯಲ್ಲೂ ಹಾನಿ ಉಂಟಾಗದಂತೆ ಜಾಗರೂಕತೆಯಿಂದ ರಕ್ಷಿಸತಕ್ಕದ್ದು. ಗುತ್ತಿಗೆದಾರರಿಂದ ಅಥವಾ ಅವರು ನೇಮಿಸಿಕೊಳ್ಳುವ ಕೆಲಸಗಾರರಿಂದ ಯಾವುದೇ ಸರ್ಕಾರಿ ವಸ್ತು/ ಆಸ್ತಿಗೆ ಧಕ್ಕೆ ಉಂಟಾದಲ್ಲಿ ಅಥವಾ ನಷ್ಟ ಸಂಭವಿಸಿದಲ್ಲಿ ಅದನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಿಂದ ಸರಿಪಡಿಸತಕ್ಕದ್ದು. ಈ ದುರಸ್ತಿಯನ್ನು ಇಲಾಖಾ ಮೂಲಕ ಮಾಡಿಸಿದಲ್ಲಿ ಈ ಬಾಬ್ತು ತಗಲುವ ವೆಚ್ಚವನ್ನು ಗುತ್ತಿಗೆದಾರರು ಪಾವತಿಸಬೇಕಾಗುತ್ತದೆ. ಈ ಮೊಬಲಗನ್ನು ಭದ್ರತಾ ಠೇವಣಿಯಿಂದ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಹಾಗೂ ಹೆಚ್ಚುವರಿ ಮೊತ್ತವನ್ನು ಕರ್ನಾಟಕ ಅರಣ್ಯ ಕಾಯಿದೆ–1963ರ, ಸೆಕ್ಷನ್–109ರ ಮೇರೆಗೆ ಕಂದಾಯ ಬಾಕಿ ಎಂದು ವಸೂಲು ಮಾಡಲಾಗುವುದು.

13) ಗುತ್ತಿಗೆದಾರರು ಅಥವಾ ಅವರು ನೇಮಿಸಿಕೊಳ್ಳುವ ಕೆಲಸಗಾರರು ಆನಗೋಡು ಪ್ರಾಣಿ ಸಂಗ್ರಹಾಲಯಕ್ಕೆ ಭೇಟಿ ಕೊಡುವ ಸಾರ್ವಜನಿಕರು ಅಥವಾ ಇಲಾಖಾ ಸಿಬ್ಬಂದಿಯವರೊಂದಿಗೆ ಸದಾ ಸೌಜನ್ಯದಿಂದ ವರ್ತಿಸತಕ್ಕದ್ದು ಮತ್ತು ಅನುಚಿತ ವರ್ತನೆಯಿಂದ ನಡೆದುಕೊಳ್ಳತಕ್ಕದ್ದಲ್ಲ.

14) ಉಪಹಾರ ಗೃಹವನ್ನು ಪ್ರತಿದಿನ ಬೆಳಗ್ಗೆ 8.00 ರಿಂದ ಸಂಜೆ 6.00 ಗಂಟೆವರೆಗೆ ನಡೆಸತಕ್ಕದ್ದು ವಿಶೇಷ ಸಂದರ್ಭಗಳಲ್ಲಿ ನಡೆಸಲು ಸಂಬಂಧಪಟ್ಟವರ ಅನುಮತಿ ಪಡೆಯಬಹುದು. ವಾರದಲ್ಲಿ ಒಂದು ದಿನ ಕಡ್ಡಾಯವಾಗಿ ರಜೆ.

15) ಗುತ್ತಿಗೆದಾರರು ಉಪಹಾರ ಗೃಹದ ಸುತ್ತ ಮುತ್ತಲಿನ ಜಾಗವನ್ನು ಸ್ವಚ್ಛವಾಗಿ ಇಟ್ಟುಕೊಳ್ಳತಕ್ಕದ್ದು. ತಿಂಡಿ–ತಿನಿಸು ಮಾಡುವ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು. ಉಪಯೋಗಿಸುವ ಪಾತ್ರೆ ಪಡಗಗಳನ್ನು ಯಾವಾಗಲೂ ಉಪಯೋಗಿಸುವ ಮುನ್ನ ಸರಿಯಾಗಿ ತೊಳೆಯತಕ್ಕದ್ದು.

16) ಗುತ್ತಿಗೆದಾರರು ಯಾವುದೇ ಸಂದರ್ಭದಲ್ಲಿ ಪಾಲಿಥೀನ್ ಚೀಲಗಳನ್ನು/ ಹಾಳೆಗಳನ್ನು ತಿಂಡಿ–ತಿನಿಸು ಒದಗಿಸಲು ಅಥವಾ ಪ್ಯಾಕ್ ಮಾಡಲು ಉಪಯೋಗಿಸಬಾರದು.

17) ಗುತ್ತಿಗೆದಾರರು ಕೇವಲ ಸಸ್ಯಹಾರಿ ತಿಂಡಿ ತಿನಿಸುಗಳನ್ನು ತಯಾರಿಸಿ ಒದಗಿಸಬೇಕು. ಯಾವುದೇ ಕಾರಣಕ್ಕೂ ಮಾಂಸಾಹಾರಿ ತಿನಿಸುಗಳನ್ನು ತಯಾರಿಸಬಾರದು ಅಥವಾ ಹೊರಗಡೆಯಿಂದ ತಂದು ಗ್ರಾಹಕರಿಗೆ ಒದಗಿಸಬಾರದು. ಅಲ್ಲದೇ ಯಾವುದೇ ನಿಷೇಧಿತ ಪದಾರ್ಥಗಳನ್ನು ಅಂದರೆ ಧೂಮಪಾನ (ಬೀಡಿ, ಸಿಗರೇಟು, ಚುಟ್ಟಾ) ಗಾಂಜಾ, ಅಫೀಮು, ಮದ್ಯ ಮುಂತಾದ ಮಾದಕ ಪದಾರ್ಥಗಳನ್ನು ಗುತ್ತಿಗೆದಾರರು ವ್ಯಾಪಾರ ಮಾಡುವಂತಿಲ್ಲ ಹಾಗೂ ಅವುಗಳನ್ನು ಉಪಹಾರ ಗೃಹದಲ್ಲಿ ದಾಸ್ತಾನು ಮಾಡುವಂತಿಲ್ಲ.

18) ಅರಣ್ಯ ಸಿಬ್ಬಂದಿಯ ಅರಣ್ಯ ರಕ್ಷಣಾ ಕಾರ್ಯದಲ್ಲಿ ಅಗತ್ಯವಿದ್ದಾಗಲೆಲ್ಲಾ ಪೂರ್ಣ ಸಹಕಾರವನ್ನು ನೀಡತಕ್ಕದ್ದು. ವನ್ಯ ಪ್ರಾಣಿಗಳಿಗಾಗಲೀ ಮರಗಿಡಗಳಿಗಾಗಲೀ ಯಾವುದೇ ರೀತಿಯ ಹಾನಿಯಾಗದಂತೆ ಎಚ್ಚರ ವಹಿಸತಕ್ಕದ್ದು. ಯಾವುದೇ ಮರಗಳನ್ನು ಕಡಿಯತಕ್ಕದ್ದಲ್ಲ ಹಾಗೂ ಅರಣ್ಯಕ್ಕೆ ಬೆಂಕಿ ಕೊಡುವುದನ್ನು ನಿಷೇಧಿಸಲಾಗಿದೆ. ಅರಣ್ಯ ಅಧಿನಿಯಮ 1963, ಅರಣ್ಯ ನಿಯಮಾವಳಿ 1969 ಅರಣ್ಯ ಸಂರಕ್ಷಣಾ ಕಾಯಿದೆ 1980. ವನ್ಯಜೀವಿ ಸಂರಕ್ಷಣಾ ಕಾಯಿದೆ 1972 ಹಾಗೂ ಕಾಲಕಾಲಕ್ಕೆ ಅರಣ್ಯ ಇಲಾಖೆಯಿಂದ ಹಾಗೂ ಸರ್ಕಾರದಿಂದ ಹೊರಡಿಸುವ ಆದೇಶಗಳನ್ನು ಗುತ್ತಿಗೆದಾರರು ಸದಾ ಪಾಲಿಸತಕ್ಕದ್ದು.

19) ಉಪಹಾರ ಗೃಹಕ್ಕೆ ಭೇಟಿ ನೀಡುವ ವೀಕ್ಷಕರಿಗೆ ಗುತ್ತಿಗೆದಾರರು ಶುದ್ಧವಾದ ನೀರನ್ನು ಒದಗಿಸಬೇಕು.

20) ಗುತ್ತಿಗೆ ಅವಧಿ ಮುಗಿದೊಡನೆ ಉಪಹಾರ ಗೃಹ ಕಟ್ಟಡವನ್ನು ಅದು ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಯವರಿಗೆ ಮರಳಿ ವಹಿಸಿಕೊಡತಕ್ಕದ್ದು. ಆ ಸಮಯದಲ್ಲಿ ಕಟ್ಟಡಕ್ಕೆ ಅಥವಾ ಅಲ್ಲಿಯ ಯಾವುದೇ ಸರಕಾರಿ ಆಸ್ತಿಗೆ ನಷ್ಟ ಸಂಭವಿಸಿದಲ್ಲಿ ಅದನ್ನು ಗುತ್ತಿಗೆದಾರರು ತಾವೇ ಭರಿಸಬೇಕು. ತಪ್ಪಿದ್ದಲ್ಲಿ ಷರತ್ತು ಸಂಖ್ಯೆ 11ರಲ್ಲಿ ನಮೂದಿಸುವಂತೆ ಕ್ರಮ ಕೈಗೊಳ್ಳಲಾಗುವುದು.

21) ಗುತ್ತಿಗೆ ಅವಧಿ ಮುಗಿದ ನಂತರ ವಲಯ ಅರಣ್ಯಾಧಿಕಾರಿಯವರಿಂದ ಸಮಾಪನಾ ವರದಿಯನ್ನು ಪಡೆದು ಭದ್ರತಾ ಠೇವಣಿಯನ್ನು ವಾಪಸ್ ಪಡೆಯಬಹುದಾಗಿದೆ.

22) ಮೇಲ್ಕಂಡ ಗುತ್ತಿಗೆಯ ಬಗ್ಗೆ ಈ ಕೆಳ ಸಹಿದಾರರು ಅಥವಾ ಅವರ ಮೇಲಾಧಿಕಾರಿಗಳು ವಿಧಿಸಬಹುದಾದ ಯಾವುದೇ ಹೆಚ್ಚುವರಿ ಷರತ್ತುಗಳಿಗೂ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

23) ಗುತ್ತಿಗೆ ಬಗ್ಗೆ ಏನಾದರೂ ವಿವಾದ ಉಂಟಾದಲ್ಲಿ ನ್ಯಾಯಾಲಯದ ವ್ಯಾಪ್ತಿ ದಾವಣಗೆರೆ ನಗರಕ್ಕೆ ಸೀಮಿತವಾಗಿದೆ.

24) ಉಪಹಾರ ಗೃಹದಲ್ಲಿ ತಿಂಡಿ ತಿನಿಸುಗಳ ತಂಪು ಪಾನೀಯಗಳ ಮಾರಾಟ ದರದ ವಿವರವಿರುವ ಫಲಕವನ್ನು (ಬೋರ್ಡ್) ಸಾರ್ವಜನಿಕ/ ಪ್ರವಾಸಿಗರ ನೋಟಕ್ಕೆ ಅನುಕೂಲಕರವಾದ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

25) ಗುತ್ತಿಗೆದಾರರ ಹಾಗೂ ಅವರ ಕೆಲಸಗಾರರು ಆನಗೋಡು ಪ್ರಾಣಿ ಸಂಗ್ರಹಾಲಯ ವೇಳಾ ಪಟ್ಟಿಗೆ ಬದ್ಧರಾಗಿರಬೇಕು ಮತ್ತು ಗುರುತಿನ ಚೀಟಿಯನ್ನು ವಲಯ ಅರಣ್ಯಾಧಿಕಾರಿ, ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ ಇವರಿಂದ ಪಡೆದಿರತಕ್ಕದ್ದು.

26) ಗುತ್ತಿಗೆದಾರರು ಕೆಲಸಗಾರರನ್ನು ಮೇಲಿಂದ ಮೇಲೆ ಬದಲಾವಣೆ ಮಾಡತಕ್ಕದ್ದಲ್ಲ ಹಾಗೂ ಅಪರಿಚಿತರನ್ನು ನೇಮಿಸಿಕೊಳ್ಳತಕ್ಕದ್ದಲ್ಲ ಮತ್ತು ಆನಗೋಡು ಪ್ರಾಣಿ ಸಂಗ್ರಹಾಲಯದ ನಿಯಮಗಳನ್ನು ಅವರುಗಳಿಗೆ ಮನದಟ್ಟು ಮಾಡಿಕೊಡತಕ್ಕದ್ದು. ಅವರ ಚಟುವಟಿಕೆಗಳು ಉಪಹಾರ ಗೃಹಕ್ಕೆ ಸೀಮಿತವಾಗಿರಬೇಕು. ಕೆಲಸಗಾರರಿಗೆ ಗುತ್ತಿಗೆದಾರರು ಸಮವಸ್ತ್ರವನ್ನು ಒದಗಿಸಬೇಕು ಮತ್ತು ಉಪಹಾರ ಗೃಹ ನಡೆಯುವ ಸಂದರ್ಭದಲ್ಲಿ ಅವುಗಳನ್ನು ಧರಿಸತಕ್ಕದ್ದು.

27) ಸಲಹೆ ಮತ್ತು ದೂರು ಪೆಟ್ಟಿಗೆಯನ್ನು ಗುತ್ತಿಗೆದಾರರು ಉಪಹಾರ ಗೃಹದಲ್ಲಿ ಇಡಬೇಕು.

28) ಹೆಚ್ಚಿನ ವಿವರಗಳಿಗೆ ಈ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಪಿ.ಆರ್. 644 ದಾವಣಗೆರೆ ವಿಭಾಗ, ದಾವಣಗೆರೆ.

[ನಮೂನೆ-1]

[9ನೇ ನಿಯಮ ನೋಡಿ]

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ-1, ಗಾಂಧಿನಗರ, ಬೆಂಗಳೂರು-560 009

ಅಧಿಸೂಚನೆ

ಹುಬ್ಬಳ್ಳಿಯ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತರು (ಜಾರಿ) ಈ ಕಛೇರಿಯಲ್ಲಿ ಕರವಸೂಲಿಗಾರರಾಗಿ ಕಾರ್ಯ ನಿರ್ವಹಿಸುತ್ತಿರುವ **ಶ್ರೀಮತಿ ನೀಲವ್ವ ಗಂಗವ್ವ ನಾಡಗೌಡ್ರ** ಅವರಿಗೆ ಅವರ ಹೆಸರನ್ನು **ಶ್ರೀಮತಿ ನೀಲವ್ವ ನಿಂಗಪ್ಪ ಹೆಬಸೂರ** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಪ್ರದೀಪ್ ಸಿಂಗ್ ಖರೋಲ
ಪಿ.ಡಿ. 119 ವಾಣಿಜ್ಯ ತೆರಿಗೆ ಆಯುಕ್ತರು, (ಕರ್ನಾಟಕ) ಬೆಂಗಳೂರು

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಆಗಸ್ಟ್ ೧೩, ೨೦೦೯ (ಶ್ರಾವಣ ೨೨, ಶಕ ವರ್ಷ ೧೯೩೧)	ಸಂಚಿಕೆ ೩೩

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ರದ್ದಿಯಾತಿ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಲ್‌ಎಕ್ಯೂಎಸ್‌ಆರ್: 21/09–10

ಭೂ ಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894)ರಂತೆ ವಿಧಿ 4(1)ರ ಅಧಿಸೂಚನೆ ಸಂಖ್ಯೆ:ಎಲ್‌ಎಕ್ಯೂ: ಎಸ್‌ಆರ್/53/2007–08, ದಿನಾಂಕ: 22.11.2007 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯ ದಿನಾಂಕ: 20.12.2007ರ ಕರ್ನಾಟಕ ರಾಜ್ಯ ಪತ್ರದ ಪುಟ ಸಂ. 1187 ರಿಂದ 1193 ರವರೆಗೆ ಭಾಗ–6ರಲ್ಲಿ ನಂದಿಹಳ್ಳಿ, ಪಾರಸನಹಳ್ಳಿ, ಕೆಂಚನಹಳ್ಳಿ, ಪುರ, ಅರೇಮಾರನಹಳ್ಳಿ ಗ್ರಾಮಗಳ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂ ಸ್ವಾಧೀನಪಡಿಸಲು ಪ್ರಕಟಣೆ ಹೊರಡಿಸಿರುತ್ತದೆ. ಆದರೆ ಈ ಗ್ರಾಮದ ಬಾಬ್ತು ಜಂಟಿ ಮೋಜಣಿ ಕಾರ್ಯ ಪೂರೈಸಿದಾಗ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರುಗಳ ಬಾಬ್ತು ಕಲಂ 4(1) ರಂತೆ ಪ್ರಕಟಿಸಲಾದ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣ ಭೂಸ್ವಾಧೀನಕ್ಕೆ ಒಳಪಡುವುದೆಂದು ಕಂಡು ಬಂದಿರುವುದರಿಂದ ಕಲಂ 4(1) ರಲ್ಲಿ ಹೆಚ್ಚುವರಿಯಾಗಿ ಪ್ರಕಟವಾಗಿದ್ದ ವಿಸ್ತೀರ್ಣವನ್ನು ರದ್ದುಪಡಿಸಲು ರದ್ದಿಯಾತಿ ಅಧಿಸೂಚನೆ ಹೊರಡಿಸಿರುವುದಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು | ಹೋಬಳಿ: ನಿಟ್ಟೂರು

ತಾಲ್ಲೂಕು: ಗುಬ್ಬಿ | ಗ್ರಾಮ: ಪುರ

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂಸ್ವಾಧೀನಕ್ಕೊಳಪಡದ ಕಡಿಮೆಯಾದ ವಿಸ್ತೀರ್ಣ
		ಗ್ರಾಮ: ಪುರ		
1	47	ಸಿದ್ದಯ್ಯ, ಸಿದ್ದಲಿಂಗಪ್ಪ, ಸಿದ್ದಲಿಂಗಪ್ಪ, ಜಯಮ್ಮ, ಸಿದ್ದರಾಮಕ್ಕ, ನಂಜೇಗೌಡ, ಮಾಯಣ್ಣಗೌಡ, ಪಿ.ಸಿ. ನಟರಾಜು	73/1	0–39
2	48	ಶಾಂತಪ್ಪ, ಮಾಯಣ್ಣಗೌಡ, ಹೊನ್ನಲಿಂಗೇಗೌಡ	73/5	0–31
3	49	ಪಿ.ಎಸ್.ಬಸಪ್ಪ, ಪಿ.ಸಿ.ನಟರಾಜು	73/6	0–11

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ, ತುಮಕೂರು

ಪಿ.ಆರ್. 273

ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ರದ್ದಿಯಾತಿ ಅಧಿಸೂಚನೆ

ಪ್ರಕರಣದ ಸಂಖ್ಯೆ: ಎಲ್‌ಎಕ್ಯೂಎಸ್‌ಆರ್:22/09–10, ದಿನಾಂಕ: 15ನೇ ಜೂನ್ 2009

ಭೂ ಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894)ರಂತೆ ವಿಧಿ 4(1)ರ ಅಧಿಸೂಚನೆ ಸಂಖ್ಯೆ:ಎಲ್‌ಎಕ್ಯೂ: ಎಸ್‌ಆರ್/55/2007–08, ದಿನಾಂಕ: 22.11.2007 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯ ದಿನಾಂಕ: 27.12.2007ರ ಕರ್ನಾಟಕ ರಾಜ್ಯ ಪತ್ರದ ಪುಟ ಸಂ. 1250 ರಿಂದ 1260 ರವರೆಗೆ ಭಾಗ–6ರಲ್ಲಿ ತಿಪ್ಪೂರು, ಕೊಮ್ಮನಹಳ್ಳಿ, ಪೆದ್ದನಹಳ್ಳಿ ಗ್ರಾಮಗಳ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂ ಸ್ವಾಧೀನಪಡಿಸಲು ಪ್ರಕಟಣೆ ಹೊರಡಿಸಿರುತ್ತದೆ. ಆದರೆ ಈ ಗ್ರಾಮದ ಬಾಬ್ತು ಜಂಟಿ ಮೋಜಣಿ ಕಾರ್ಯ ಪೂರೈಸಿದಾಗ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರುಗಳ ಬಾಬ್ತು ಕಲಂ 4(1) ರಂತೆ ಪ್ರಕಟಿಸಲಾದ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣ ಭೂಸ್ವಾಧೀನಕ್ಕೆ ಒಳಪಡುವುದೆಂದು ಕಂಡು ಬಂದಿರುವುದರಿಂದ ಕಲಂ 4(1) ರಲ್ಲಿ ಹೆಚ್ಚುವರಿಯಾಗಿ ಪ್ರಕಟವಾಗಿದ್ದ ವಿಸ್ತೀರ್ಣವನ್ನು ರದ್ದುಪಡಿಸಲು ರದ್ದಿಯಾತಿ ಅಧಿಸೂಚನೆ ಹೊರಡಿಸಿರುವುದಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು
ತಾಲ್ಲೂಕು: ಗುಬ್ಬಿ
ಹೋಬಳಿ: ಕಸಬ/ಕಡಬಾ
ಗ್ರಾಮ: ತಿಪ್ಪೂರು, ಕೊಮ್ಮನಹಳ್ಳಿ, ಪೆದ್ದನಹಳ್ಳಿ

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂಸ್ವಾಧೀನಕ್ಕೊಳಪಡದ ಕಡಿಮೆಯಾದ ವಿಸ್ತೀರ್ಣ
		1. ಗ್ರಾಮ: ತಿಪ್ಪೂರು		
1	2	ನಂಜಪ್ಪ, ರಂಗಸ್ವಾಮಿ, ಚಿಕ್ಕರಂಗಯ್ಯ, ತೋಪಯ್ಯ, ರಂಗಸ್ವಾಮಯ್ಯ, ರಂಗಸ್ವಾಮಯ್ಯ, ಬಸವಯ್ಯ, ಗಂಗಣ್ಣ, ಕೃಷ್ಣಮೂರ್ತಿ, ಗಿರಿರಾಜು, ಸಿದ್ದಲಿಂಗಯ್ಯ, ಬಸವರಾಜು, ಬಸವರಾಜು, ರಂಗೇಗೌಡ, ರಂಗಸ್ವಾಮಿ, ಬಸವರಾಜು, ರೇಣುಕಮ್ಮ, ಸಿದ್ದಲಿಂಗಯ್ಯ, ರಂಗಸ್ವಾಮಿ	171	0–02
2	5	ಕೆ. ವಸಂತಮ್ಮ	162/6	0–0 1/2
		ಒಟ್ಟು		**0–02 1/2**
		2. ಗ್ರಾಮ: ಕೊಮ್ಮನಹಳ್ಳಿ		
3	6	ಹನುಮ	93	0–02
4	7	ಸಣ್ಣಸಿದ್ದಯ್ಯ, ಸಿದ್ದಯ್ಯ	92	0–01
5	8	ಯಲ್ಲಯ್ಯ	45/1	0–04 1/2
6	9	ರಂಗಯ್ಯ, ಚಂದ್ರಯ್ಯ, ಪಿ.ಸಿ. ಬಸವರಾಜಯ್ಯ, ತಿಮ್ಮಯ್ಯ	45/3	0–02
7	10	ಪಿ.ಸಿ.ಭೀಮಯ್ಯ, ಜಯಮ್ಮ, ತಿಮ್ಮಕ್ಕ	48/1	0–02
8	11	ಮಂಜಮ್ಮ	48/2	0–01 1/2
9	12	ನಂಜುಂಡಪ್ಪ, ಆರ್.ಎನ್. ಸಿದ್ದಲಿಂಗಪ್ಪ	48/3	0–02 1/4
10	13	ದಾಸಪ್ಪ, ಜಯಮ್ಮ, ಮಂಜಮ್ಮ, ಭಾಸ್ಕರನಾಯ್ಕ, ಜಿ.ಆರ್. ಶಿವಪ್ಪನಾಯಕ, ಜಯಮ್ಮ, ಮಂಜಮ್ಮ, ಮಂಜಮ್ಮ	49	0–02
11	14	ಅರಸಯ್ಯ	61/1ಎ	0–01
12	15	ರಂಗಯ್ಯ, ಚಿಕ್ಕರಂಗಯ್ಯ, ಚಂದ್ರಯ್ಯ	61/2	0–02
13	16	ಕರಿಯಪ್ಪ	61/3	0–01
14	17	ಚಿಕ್ಕೆಲ್ಲಯ್ಯ	61/4ಬಿ	0–0 1/2
15	18	ಯಲ್ಲಯ್ಯ	61/4ಎ	0–0 1/4
16	19	ಲಕ್ಷ್ಮಮ್ಮ, ಪಾತಯ್ಯ	72/1	0–0 1/2
17	20	ವೆಂಕಟೇಶ	72/2ಎ	0–0 1/4
18	21	ಪಾತಯ್ಯ	72/2ಬಿ	0–0 1/4
19	22	ಯಲ್ಲಪ್ಪ, ವೀರಭದ್ರಯ್ಯ, ವಿಜಯಕುಮಾರ್	72/3	0–01 1/4
20	23	ಚಿಕ್ಕಮ್ಮ	71/2ಬಿ	0–01

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂ ಸ್ವಾಧೀನಕ್ಕೊಳ ಪಡದ ಕಡಿಮೆಯಾದ ವಿಸ್ತೀರ್ಣ
21	24	ಶಿವಮ್ಮ	71/3	0–01
22	25	ಲಕ್ಷ್ಮಯ್ಯ	50/5	0–01
23	26	ಲಕ್ಕಮ್ಮ	50/9	0–01
24	27	ಜಿ.ಎಸ್. ನಾಗರಾಜಶೆಟ್ಟಿ, ಜಿ.ಎಸ್. ಅಶ್ವಥನಾರಾಯಣಶೆಟ್ಟಿ	60/1	0–0 1/2
25	28	ಚಿಕ್ಕಮ್ಮ	70/6	0–0 1/2
26	29	ಜಯಮ್ಮ	70/2ಬಿ	0–0 1/4
27	30	ರಾಮಯ್ಯ	70/2ಎ	0–0 1/4
28	31	ರಾಮಯ್ಯ	70/3	0–0 1/2
29	32	ಚಂದ್ರಪ್ಪ	70/4	0–01 1/4
30	33	ಚಂದ್ರಪ್ಪ	69/3	0–0 3/4
31	34	ರಾಮಯ್ಯ, ನರಸಿಂಹಯ್ಯ, ರಂಗಮ್ಮ, ದಾಸಪ್ಪ, ಉಗ್ರಯ್ಯ	74	0–01
32	35	ಹುಚ್ಚಪ್ಪ, ಕರಿರಂಗಯ್ಯ, ದೊಡ್ಡರಂಗಯ್ಯ	69/5	0–02 3/4
33	36	ಹೊಸೂರಮ್ಮ	69/9	0–01 1/2
34	37	ರಂಗಯ್ಯ, ಪಾರ್ವತಮ್ಮ, ಲಕ್ಷ್ಮಮ್ಮ, ಕರಿರಂಗಯ್ಯ	79	0–01 3/4
35	38	ಲಕ್ಷ್ಮೀದೇವಮ್ಮ	81/1	0–02
		ಒಟ್ಟು		**0–01 1/4**
		3. ಗ್ರಾಮ: ಪೆದ್ದನಹಳ್ಳಿ		
36	39	ರಂಗಸ್ವಾಮಿ	38	0–01
37	40	ಪಿ.ಎಲ್.ಕುಮಾರಸ್ವಾಮಿ	39/3	0–0 1/2
38	41	ಪಿ.ಎಲ್. ಮಲ್ಲಿಕಾರ್ಜುನಯ್ಯ	39/2	0–0 1/2
39	42	ರಂಗಮ್ಮ, ರಾಮಣ್ಣ	46/1	0–0 1/2
40	43	ಪಿ.ಎಲ್. ಶಿವಕುಮಾರಸ್ವಾಮಿ	46/2ಬಿ	0–0 1/2
41	44	ಪಿ.ಎಲ್. ಶಿವಕುಮಾರ್, ಪಿ.ಎಲ್.ಶಿವಕುಮಾರ್	46/2ಎ	0–0 1/2
42	45	ಪಿ.ಸಿ.ಬಸವರಾಜಯ್ಯ, ನಂಜಮ್ಮ	50/10	0–05 1/2
43	46	ದ್ಯಾಮಣ್ಣ	66/1	0–0 1/2
44	47	ಸಿ. ರಂಗಯ್ಯ	66/4	0–0 1/2
45	48	ಕರೇರಂಗಯ್ಯ, ಬಕ್ಕಪ್ಪ, ಗೂಳೂರಯ್ಯ	66/5	0–0 1/2
46	49	ಸಿದ್ದರಾಮಪ್ರಭು	66/6	0–0 1/2
47	50	ಪಿ.ಬಿ. ಗಂಗತಾಯಿ	66/7	0–0 1/2
48	51	ಲಕ್ಕಮ್ಮ	66/8	0–0 1/2
49	52	ಪುಟ್ಟಮಾದಪ್ಪ	66/9	0–01
50	53	ತಿಮ್ಮಯ್ಯ, ಮರಿಯಪ್ಪ,ಚಿಕ್ಕರಂಗಯ್ಯ, ಹುಚ್ಚಪ್ಪ	66/10	0–01
51	54	ಪಿ.ಬಿ.ಬಸಪ್ಪ, ಸಿ.ಬೋರೇಗೌಡ, ಪಿ.ಸಿ.ಬಸವರಾಜಯ್ಯ, ನಿಂಗಣ್ಣ, ಪಿ.ಸಿ.ಬಸವರಾಜು, ಪಿ.ಸಿ.ಬಸಪ್ಪ, ಪಿ.ಸಿ.ಬಸವರಾಜಯ್ಯ, ನಿಂಗಣ್ಣ, ಪಿ.ಸಿ.ಬಸವರಾಜು	64/5	0–01 1/2
52	55	ಶಿವಮ್ಮ	62/2	0–0 1/2
53	56	ಸಣ್ಣರಂಗಯ್ಯ, ದಾಸಪ್ಪ, ಪಿ.ಟಿ. ರಂಗಶಾಮಯ್ಯ	60	0–03
54	57	ವೆಂಕಟಯ್ಯ, ಮರಿಯಪ್ಪ, ರಂಗಯ್ಯ, ಪುಟ್ಟರಂಗಯ್ಯ	58/2	0–01 1/2
55	58	ಮರಿಯಪ್ಪ, ಚಿಕ್ಕರಂಗಯ್ಯ, ಪಿ.ಟಿ.ರಂಗಸ್ವಾಮಿ, ಪಿ.ಟಿ. ಹುಚ್ಚಯ್ಯ, ಮೂಡ್ಲಯ್ಯ	59/3	0–01 1/2
56	59	ರಂಗಸ್ವಾಮಿ	63/2	0–01 1/2
57	60	ಚಿಕ್ಕರಂಗಯ್ಯ	63/1	0–01 1/2
58	61	ಹುಚ್ಚಪ್ಪ	33	0–07

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂ ಸ್ವಾಧೀನಕ್ಕೊಳ ಪಡದ ಕಡಿಮೆಯಾದ ವಿಸ್ತೀರ್ಣ
59	62	ಲಕ್ಷ್ಮಯ್ಯ, ಕುಂಬಳರಂಗಯ್ಯ, ಸಣ್ಣರಂಗಯ್ಯ	32/1	0–04
60	63	ಪಿ.ಬಿ. ಮರಿಬಸವೇಗೌಡ	32/2ಬಿ	0–03
61	64	ಸಣ್ಣರಂಗಯ್ಯ	32/3	0–01
62	65	ಚಿಕ್ಕತಿಮ್ಮಯ್ಯ	32/4	0–03
		ಒಟ್ಟು		**1–03**
		ಮೂರು ಗ್ರಾಮಗಳ ಒಟ್ಟು ಜಮ್ಲಾ		**2–06 3/4**

ಪಿ.ಆರ್. 274 ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು

ವಿಶೇಷ ಭೂಸ್ವಾಧೀನಾಧಿಕಾರಿಗಳವರ ಕಾರ್ಯಾಲಯ, ಹೇಮಾವತಿ ನಾಲಾ ವಲಯ, ತುಮಕೂರು

4(1) ತಿದ್ದುಪಡಿ ಅಧಿಸೂಚನೆ

ಪ್ರಕರಣದ ಸಂಖ್ಯೆ: ಎಲ್‌ಎಕ್ಯೂಎಸ್‌ಆರ್:23/09–10, ದಿನಾಂಕ: 15ನೇ ಜೂನ್ 2009

ಭೂಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894) ರಂತೆ ಕಲಂ 4(1)ನೇ ಪ್ರಕರಣದ ಮೇರೆಗೆ ಎಲ್‌ಎಕ್ಯೂ ಎಸ್‌ಆರ್:33/07–08 ದಿನಾಂಕ: 10.10.2007 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯು ದಿನಾಂಕ: 1.11.2007 ರಂದು ಕರ್ನಾಟಕ ರಾಜ್ಯ ಪತ್ರದ ಪುಟ 978 ರಿಂದ 984 ವರೆಗೆ ಭಾಗ–6 ರಲ್ಲಿ ಸೋಮಲಾಪುರ ಗ್ರಾಮದ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನಪಡಿಸಿರುವುದಾಗಿ ಪ್ರಕಟಗೊಂಡಿರುತ್ತೆ. ಸದರಿ ಅಧಿಸೂಚನೆಯಲ್ಲಿ ಈ ಕೆಳಕಂಡ ತಪಶೀಲಿನಲ್ಲಿ ನಮೂದಿಸಿರುವಂತೆ ತಿದ್ದುಪಡಿ ಮಾಡಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು **ಹೋಬಳಿ:** ನಿಟ್ಟೂರು

ತಾಲ್ಲೂಕು: ಗುಬ್ಬಿ **ಗ್ರಾಮ:** ಸೋಮಲಾಪುರ

4(1) ರಂತೆ ಪ್ರಕಟವಾಗಿರುವುದು					4(1) ಗೆ ತಿದ್ದುಪಡಿಯಾಗಿರುವುದು		
ಕ್ರ. ಸಂ.	4(1) ಕ್ರ.ಸಂ.	ಸ.ನಂ.	ತರಹೆ	ವಿಸ್ತೀರ್ಣ	ಸ.ನಂ.	ತರಹೆ	ವಿಸ್ತೀರ್ಣ
1	1	28/2	ಖುಷ್ಕಿ	0–02	28/2	ತರಿ	0–02
2	2	29/1	ಖುಷ್ಕಿ	0–01 1/4	29/1	ಭಾಗಾಯ್ತು	0–0 1/2
3	3	30/1	ಖುಷ್ಕಿ	0–01	30/1	ಭಾಗಾಯ್ತು	0–01
4	4	31/1	ಖುಷ್ಕಿ	0–01	31/1	ಭಾಗಾಯ್ತು	0–01
5	5	31/2	ಖುಷ್ಕಿ	0–01	31/2	ಭಾಗಾಯ್ತು	0–01

ಪಿ.ಆರ್. 275 ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ

ನಂ: ಎಲ್.ಆರ್.ಎಫ್ (ಎಸ್)(109) ಸಿ.ಆರ್:5/09–10, ಬೆಂಗಳೂರು, ದಿನಾಂಕ: 23ನೇ ಜೂನ್ 2009

ವಿಷಯ: ಶ್ರೀ ಸಿ. ಚೆಲುವಮೂರ್ತಿ, ನೆಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ನೆಟ್ಟಿಗೆರೆ ಗ್ರಾಮದ ಸ.ನಂ. 2 ರಲ್ಲಿ 0–04 ಗುಂಟೆ ಜಮೀನನ್ನು ಹೊಂದಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಅನುಮತಿ ಕೋರಿರುವ ಬಗ್ಗೆ.

ಉಲ್ಲೇಖ: ವಿಶೇಷ ಜಿಲ್ಲಾಧಿಕಾರಿಗಳು, ಅನಧಿಕೃತ ಕಟ್ಟಡ ನಿರ್ಮಾಣ ತಡೆ ಪತ್ರ ಸಂಖ್ಯೆ: ವಿಜಿಜಾದ (ಬೆಂ.ದ.ತಾ) ಸಿ.ಆರ್/80/07–08, ದಿನಾಂಕ: 13.5.2009.

ಶ್ರೀ ಸಿ.ಚೆಲುವಮೂರ್ತಿ, ನೆಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ನೆಟ್ಟಿಗೆರೆ ಗ್ರಾಮದ ಸ.ನಂ. 2 ರಲ್ಲಿ 0–04 ಗುಂಟೆ ಜಮೀನನ್ನು ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಹೊಂದಲು ಮಾಡಿರುವ ಬೇಡಿಕೆ ಹಾಗೂ ವಿಶೇಷ ಜಿಲ್ಲಾಧಿಕಾರಿಗಳು, ಅನಧಿಕೃತ ಕಟ್ಟಡ ನಿರ್ಮಾಣ ತಡೆ ರವರ ಪತ್ರದ ನಂ: ವಿಜಿಜಾವ(ಬೆಂ.ದ.ತಾ)ಸಿ.ಆರ್/80/07–08, ದಿನಾಂಕ: 13.05.2009 ರಲ್ಲ ಪ್ರಸ್ತಾಪಿತ ನೆಟ್ಟಿಗೆರೆ ಗ್ರಾಮದ ಸ.ನಂ. 2 ರಲ್ಲಿ 0–04 ಗುಂಟೆ ಜಮೀನನ್ನು ಹೊಂದಲು ಅವರಿಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 (IV) ರಡಿ ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಅರ್ಜಿದಾರರು ಪ್ರಸ್ತಾವಿತ ಜಮೀನು ಸರ್ಕಾರಿ ಹರಾಜಿನಿಂದ ಪಡೆದಿರುತ್ತಾರೆ. ಪ್ರಸ್ತಾವಿತ ಜಮೀನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಕಾಯ್ದೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ಈ ಪ್ರಸ್ತಾವನೆ ಕರ್ನಾಟಕ ತಿದ್ದುಪಡಿ ಕಾಯ್ದೆ 1995 ರ ಪ್ರಕಾರ ಕಲಂ 109 (IV) ಮತ್ತು ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಕಾಯಿದೆ 1961 ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯ್ತಿ ನೀಡಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಪಳ್ಳಿ ಹೋಬಳಿ, ನೆಟ್ಟಿಗೆರೆ ಗ್ರಾಮದ ಸ.ನಂ. 2 ರಲ್ಲಿ 0–04 ಗುಂಟೆ ಜಮೀನನ್ನು ಶ್ರೀ ಸಿ.ಚೆಲುವಮೂರ್ತಿ, ನೆಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಉದ್ದೇಶಕ್ಕಾಗಿ ಹೊಂದಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 (IV) ರಡಿ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಕಂಇ 47 ಶಾಸನ 2001 ಬೆಂಗಳೂರು, ದಿನಾಂಕ: 23.04.2003 ಹಾಗೂ ಸರ್ಕಾರದ ಪತ್ರ ಆರ್.ಡಿ.6 ಎಲ್.ಆರ್.ಎಂ.2008, ದಿನಾಂಕ: 31.5.2008 ರ ನಿರ್ದೇಶನದಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

ಷರತ್ತುಗಳು

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಹೊಂದಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಈ ಬಗ್ಗೆ ತಹಸೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ಸದರಿ ಜಮೀನು ಸಿ.ಡಿ.ಪಿ ಪ್ರಕಾರ ಕೃಷಿ ವಲಯದಲ್ಲಿ ಬರುತ್ತಿದ್ದು, ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದು. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆಯದೆ ಹಾಗೂ ಅನ್ಯಕ್ರಾಂತ ಪಡಿಸದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಭೂ ಕಂದಾಯ ಕಾಯಿದೆ 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಬೇಕು. ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಷರತ್ತಿಗೆ ಒಳಪಡಿಸಿದೆ.
4. ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಂದ ಸಿ.ಡಿ.ಪಿ, ಒ.ಡಿ.ಪಿ ಮತ್ತು ಹಸಿರು ವಲಯ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.
5. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣ ಮುಕ್ತವಾಗಿಸಿ ಸರ್ಕಾರದಲ್ಲಿ ನಿಹಿತ ಮಾಡಲಾಗುವುದು.
6. ಈ ಅನುಮತಿ ಭೂ ಸುಧಾರಣೆ ಕಾಯಿದೆ 1961 ರ ಕಲಂ 109 ರನ್ವಯ ಮಾತ್ರ ಮಾಡಿರುತ್ತದೆ. ಬೇರೆ ಕಾನೂನುಗಳಿಗೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

ವಿಶೇಷ ಜಿಲ್ಲಾಧಿಕಾರಿಗಳು (ಕಂ),
ಪಿ.ಆರ್. 283 ಬೆಂಗಳೂರು ಜಿಲ್ಲೆ, ಬೆಂಗಳೂರು.

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ

ಕಲಂ 4(1)ರ ಅಧಿಸೂಚನೆಗೆ ತಿದ್ದುಪಡಿ

ಪ್ರಕರಣ ಸಂಖ್ಯೆ/ತುಂಮೇಯೋ/ಭೂಸ್ವಾ3/08–09, ದಿನಾಂಕ: 8ನೇ ಜುಲೈ 2009

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು ಹತ್ತೂರು ಗ್ರಾಮದ ಸ.ನಂ.23/2ರಲ್ಲಿ 0–22 ಗುಂಟೆ ಜಮೀನನ್ನು ತುಂಗಾ ಮೇಲ್ದಂಡೆ ಯೋಜನೆಯ ಎಸ್ಕೇಪ್ ಕಾಲುವೆಯ ನಿರ್ಮಾಣದ ಬಗ್ಗೆ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯು ಜಿಲ್ಲಾಧಿಕಾರಿಗಳು, ದಾವಣಗೆರೆ ಇವರ ಆದೇಶ ಸಂಖ್ಯೆ/ಎಲ್ಎಕ್ಯೂ/ಸಿಆರ್/49/08–09, ದಿನಾಂಕ:6.1.09ರ ರೀತ್ಯಾ ಅನುಮೋದಿಸಲ್ಪಟ್ಟಿದ್ದು, ನಂತರ ದಿನಾಂಕ:12.02.09ರ ಕರ್ನಾಟಕ ರಾಜ್ಯ ಪತ್ರದ ಭಾಗ 6ರಲ್ಲಿನ ಪುಟ ಸಂಖ್ಯೆ 216ರಲ್ಲಿ ಮುದ್ರಣವಾಗಿದ್ದು, ಸದರಿ ಮುದ್ರಿತ ಪ್ರಕರಣದಲ್ಲಿ ಕೆಳಕಂಡಂತೆ ಕೈಬಿಟ್ಟಿರುವುದನ್ನು ಈ ಮೂಲಕ ಸೇರ್ಪಡೆ ಮಾಡಿದ್ದು, ಅದರಂತೆ ಓದಿಕೊಳ್ಳುವುದು.

ಗ್ರಾಮ: ಹತ್ತೂರು ಹೋಬಳಿ: ಕಸಬಾ ತಾಲ್ಲೂಕು: ಹೊನ್ನಾಳಿ ಜಿಲ್ಲೆ: ದಾವಣಗೆರೆ

ಕ್ರ. ಸಂ.	ರಾಜ್ಯಪತ್ರದಲ್ಲಿ ಮುದ್ರಣವಾಗಿರುವುದು	ಕ್ರ. ಸಂ.	ಸೇರ್ಪಡೆಯ ಪ್ರಕಾರ ಓದಿಕೊಳ್ಳುವುದು
1	ಪರಮೇಶ್ವರಪ್ಪ ಬಿನ್ ಮಹದೇವಪ್ಪ	1.	ಪರಮೇಶ್ವರಪ್ಪ ಬಿನ್ ಮಹಾದೇವಪ್ಪ
		2.	ಷಣ್ಮುಖಪ್ಪ ಬಿನ್ ತಿಮ್ಮಪ್ಪ ಹುಚ್ಚಕ್ಕಳಾರ್

ಪಿ.ಆರ್. 301 ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

1894 ಭೂಸ್ವಾಧೀನ ಕಾಯಿದೆ ಕಲಂ.4(1) ರ ಅನ್ವಯ (ಕಲಂ.17(4)ರಡಿ ಓದಲಾದಂತೆ) (ರೈಲ್ವೆ ಮಾರ್ಗದ ಅಗಲೀಕರಣಕ್ಕಾಗಿ) ಅಧಿಸೂಚನೆ

ಸಂಖ್ಯೆ:ಕಂ/ಎಲ್‌ಎಕ್ಯೂ/ಸಿಆರ್/25/2009–10, ದಿನಾಂಕ: 17ನೇ ಜುಲೈ 2009

ಈ ಮುಂದಿನ ಅನುಸೂಚಿಯಲ್ಲಿ ಸೂಚಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಕೊಟ್ಟೂರು–ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣದ ಸಲುವಾಗಿ ನೈರುತ್ಯ ರೈಲ್ವೆ ಇಲಾಖೆಯವರಿಗೆ ಬೇಕಾಗಿದೆ ಎಂದು ದಾವಣಗೆರೆ ಜಿಲ್ಲಾಧಿಕಾರಿಗಳಿಗೆ ಕಂಡುಬಂದಿರುತ್ತದೆ.

1991 ನೇ ಸಾಲಿನ ಕರ್ನಾಟಕ ಸರ್ಕಾರದ ಅಧಿನಿಯಮದ 33 ನೇ ತಿದ್ದುಪಡಿಯಾದ ಮತ್ತು 1984 ನೇ ಭೂಸ್ವಾಧೀನ ಕಾಯ್ದೆ (ತಿದ್ದುಪಡಿ) ಗಳಲ್ಲಿ ತಿದ್ದುಪಡಿಯಾದ 1894 ನೇ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಪ್ರಕಾರ ಸದರಿ ಜಮೀನುಗಳು ಮೇಲ್ಕಂಡ ಉದ್ದೇಶಕ್ಕಾಗಿ ಬೇಕೆಂದು ಪ್ರಕಟಿಸಿದೆ ಹಾಗೂ ಸದರಿ ಕಾಯ್ದೆಯ 4(2)ನೆಯ ಪ್ರಕಟಣೆಯಿಂದ ವಿಹಿತವಾದ ಅಧಿಕಾರವನ್ನು ಉಪಯೋಗಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೊಟ್ಟೂರು–ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ, ಹರಿಹರ ಇವರಿಗೆ ಮತ್ತು ಇವರ ಸಿಬ್ಬಂದಿ ವರ್ಗದವರಿಗೆ ಈ ಮೂಲಕ ಅಧಿಕಾರ ವಹಿಸಿಕೊಡಲಾಗಿದೆ.

ಭೂಸ್ವಾಧೀನ ಕಾಯ್ದೆಯ ಪ್ರಕರಣದ 17 ನೇ ಉಪ ಪ್ರಕರಣ (4)ರಲ್ಲಿ ವಿಧಿವತ್ತಾಗಿರುವ ಅಧಿಕಾರದ ಪ್ರಕಾರ ಕರ್ನಾಟಕ ಸರ್ಕಾರದಿಂದ ತುರ್ತು ಶಾಸನ ರೀತ್ಯಾ 5(ಎ)ರ ಕಟ್ಟುಪಾಡು ಅನ್ವಯಿಸುವುದಿಲ್ಲವೆಂದು ಸರ್ಕಾರದಿಂದ ಆದೇಶ ಸಂ. ಕಂಇ/28/ಭೂಸ್ವಾಚ/2002 ದಿನಾಂಕ: 20–12–2002 ರ ಪ್ರಕಾರ ಅನುಮತಿ ನೀಡಲಾಗಿದೆ.

ಭೂಸ್ವಾಧೀನ ಕಾಯ್ದೆಗನುಗುಣವಾಗಿ ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಯಾವೊಬ್ಬ ಮೋಜಣಿದಾರ ಅಥವಾ ಈ ಕೆಲಸಕ್ಕೆ ನೇಮಿಸಲ್ಪಟ್ಟಿರುವ ಅಧಿಕಾರಿಗಳಿಗೆ ಅಡಚಣೆಯುಂಟು ಮಾಡುವುದಾಗಲಿ ಅಥವಾ ಅತಿಕ್ರಮಿಸುವುದಾಗಲಿ ಮಾಡಬಾರದೆಂದು ಈ ಮೂಲಕ ಎಚ್ಚರಿಕೆ ಕೊಡಲಾಗಿದೆ ಸದರಿ ಜಮೀನಿನ ವಿಲೇವಾರಿ, ಗುತ್ತಿಗೆ, ಅಡಮಾನ, ಹಸ್ತಾಂತರ, ವಿನಿಮಯ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚ, ಅಭಿವೃದ್ಧಿಗಳನ್ನು ಈ ಅಧಿಸೂಚನೆ ಪ್ರಕಟವಾದ ನಂತರ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ, ಇವರ ಮಂಜೂರಾತಿ ಪಡೆಯದೇ ಮಾಡಿದ ಪಕ್ಷದಲ್ಲಿ, ಅಂತಿಮವಾಗಿ ಅಧಿಕೃತ ಸಂಗ್ರಹಣೆ ಮಾಡಲಾಗುವ ಸದರಿ ಜಮೀನಿನ ಅಂತಹ ಭಾಗಗಳಿಗೆ ಪರಿಹಾರವನ್ನು ನಿರ್ಧರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮದ 24ನೇ ಪ್ರಕರಣದ 7ನೇ ಖಂಡದ ಮೇರೆಗೆ ಉಪೇಕ್ಷಿಸಲಾಗುವುದು.

ಅನುಸೂಚಿ

ಜಿಲ್ಲೆ: ದಾವಣಗೆರೆ **ತಾಲ್ಲೂಕು:** ಹರಿಹರ **ಹೋಬಳಿ:** ಕಸಬಾ **ಗ್ರಾಮ:** 1) ದೊಗ್ಗಳ್ಳಿ, 2) ಹೊಟ್ಟಿಗಾನಹಳ್ಳಿ

ಕ್ರ. ಸಂ.	ಖಾತೇದಾರರ ಹೆಸರು (ಆರ್.ಟಿ.ಸಿ. ಪ್ರಕಾರ)	ಅನುಭವ ದಾರರ ಹೆಸರು.	ಸರ್ವೆ ನಂಬರು	ತರಹೆ	ಸರಹದ್ದುಗಳು (ಸರ್ವೆ ನಂಬರು)				ಯಾವ ದಿಕ್ಕಿಗೆ ಭೂಸ್ವಾಧೀನವಾಗಿದೆ.	ಭೂಸ್ವಾಧೀನದ ವಿಸ್ತೀರ್ಣ ಎ–ಗುಂ.	ಒಟ್ಟು ವಿಸ್ತೀರ್ಣ ಎ–ಗುಂ.	ಆಕಾರ. ರೂ–ಪೈ.
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ				
ದೊಗ್ಗಳ್ಳಿ ಗ್ರಾಮದ ಜಮೀನುಗಳು – ಪ್ರಕರಣ ಸಂಖ್ಯೆ ಕಂ/ವಿಭೂಸ್ವಾ/ಕೊಹರೈಲ್ವೆ/ಸಿಆರ್/05/05–06 (ಭಾಗ–3)												
1	ಸಣ್ಣ ವೀರಪ್ಪ ಬಿನ್ ಬಾಗಲೂರು ರೇಣುಕಪ್ಪ (51/1ಪಿ–ಪಿ4 1–01)	ಸ್ವಂತ	51/1 ಪೈಕಿ	ಖುಷ್ಕಿ	ಈಗಾಗಲೇ ಭೂಸ್ವಾಧೀನವಾದ ಪ್ರದೇಶ	ಈಗಾಗಲೇ ಭೂಸ್ವಾಧೀನವಾದ ಪ್ರದೇಶ	ಈಗಾಗಲೇ ಭೂಸ್ವಾಧೀನವಾದ ಪ್ರದೇಶ	ಈಗಾಗಲೇ ಭೂಸ್ವಾಧೀನವಾದ ಪ್ರದೇಶ	ಪಶ್ಚಿಮಕ್ಕೆ	0–06½	0–06½	0–24

ಕ್ರ. ಸಂ.	ಖಾತೇದಾರರ ಹೆಸರು (ಆರ್.ಟಿ.ಸಿ. ಪ್ರಕಾರ)	ಅನುಭವ ದಾರರ ಹೆಸರು.	ಸರ್ವೆ ನಂಬರು	ತರಹೆ	ಸರಹದ್ದುಗಳು (ಸರ್ವೆ ನಂಬರು)				ಯಾವ ದಿಕ್ಕಿಗೆ ಭೂಸ್ವಾಧೀನ ವಾಗಿದೆ.	ಭೂಸ್ವಾಧೀನದ ವಿಸ್ತೀರ್ಣ ಎ-ಗುಂ.	ಒಟ್ಟು ವಿಸ್ತೀರ್ಣ ಎ-ಗುಂ.	ಆಕಾರ. ರೂ-ಪೈ.
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ				
2	ಸಣ್ಣ ವೀರಪ್ಪ ಬಿನ್ ಬಾಗಲೂರು ರೇಣುಕಪ್ಪ (51/2ಪಿ-ಪಿ4 1-01)	ಸ್ವಂತ	51/2 ಪೈಕಿ	ಖುಷ್ಕಿ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಪಶ್ಚಿಮಕ್ಕೆ	0-10	0-10	0-37
3	ಜಿ.ಎಸ್.ಪತ್ರೇಪ್ಪ ಬಿನ್ ಸಣ್ಣ ನಿಂಗಪ್ಪ (52/1 2-37 ಪೈಕಿ 1-02)	ಸ್ವಂತ	52/1 ಪೈಕಿ	ಖುಷ್ಕಿ	ಇದೇ ಸ.ನಂ.ನ ಉಳಿದ ಜಮೀನು	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಸ.ನಂ.53	ಸ.ನಂ.52/2 ರಲ್ಲಿ ಭೂಧೀನ ಪಡಿಸಿ ಪ್ರದೇಶ	ಉತ್ತರಕ್ಕೆ	0-04	0-04	0-10
4	1)ಸಿದ್ದಪ್ಪ. ಕಲ್ಲಪ್ಪ ಬಿನ್ ಲಿಂಗಪ್ಪ ಕರಿಯಪ್ಪ. (53/ಪಿ-ಪಿ1 3-38) 2)ಶಾಂತವೀರಪ್ಪ ಬಿನ್ ಸಿದ್ದಪ್ಪ (53/ಪಿ-ಪಿ2 2-00)	ವೀರಪ್ಪ ಬಿನ್ ಕಲ್ಲಪ್ಪ	53 ಪೈಕಿ	ಖುಷ್ಕಿ	ನಿಂಗಪ್ಪನ ಜಮೀನು	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಸ.ನಂ.56	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಉತ್ತರಕ್ಕೆ	0-20 0-01 0-19	0-20	0-31
	1)ಸಿದ್ದಪ್ಪ, ಕಲ್ಲಪ್ಪ ಬಿನ್ ಲಿಂಗಪ್ಪ ಕರಿಯಪ್ಪ. (53/ಪಿ-ಪಿ1 3-38) 2)ಶಾಂತವೀರಪ್ಪ ಬಿನ್ ಸಿದ್ದಪ್ಪ (53/ಪಿ-ಪಿ2 1-13)	ಪುಟ್ಟಪ್ಪ ಬಿನ್ ಸಿದ್ದಪ್ಪ	53 ಪೈಕಿ	ಖುಷ್ಕಿ	ಪುಟ್ಟಪ್ಪನವರ ಉಳಿಕೆ ಜಮೀನು	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಪುಟ್ಟಪ್ಪನವ ರ ಉಳಿಕೆ ಜಮೀನು	ರಿ.ಸ.ನಂ.52	ಉತ್ತರಕ್ಕೆ	0-04	0-04	0-06
5	1)ಜಮನ್ ಸಾಬ್ (55/ಪಿ-ಪಿ2 1-00) 2)ಇಮಾಂ ಸಾಬ್ ಬಿನ್ ಬುಡೇನ್‌ಸಾಬ್, ಮಜೀದ್‌ಸಾಬ್ ಬಿನ್ ಬುಡೇನ್‌ಸಾಬ್, ಮಹಮದ್‌ಸಾಬ್ ಬಿನ್ ಬುಡೇನ್‌ಸಾಬ್ (55/ಪಿ-ಪಿ3 0-12)	1)ಜಮನ್ ಸಾಬ್ ಬಿನ್ ಇಮಾಂ ಸಾಬ್ 2)ಮಹಮ್ಮದ್ ಸಾಬ್ ಬಿನ್ ಬುಡೇನ್ ಸಾಬ್	55 ಪೈಕಿ	ಖುಷ್ಕಿ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಇದೇ ಜಮೀನಿನ ಉಳಿಕೆ ಜಮೀನು	ರಿ.ಸ.ನಂ.58	ರಿ.ಸ.ನಂ.54	ದಕ್ಷಿಣಕ್ಕೆ	0-15	0-15	0-38
6	ಹನುಮಂತಪ್ಪ ಬಿನ್ ದೊಡ್ಡಸೋಮಲಿಂಗಪ್ಪ ಸೂಮದಿಳ (60/1 3-05$^{1}/_{2}$)	ಸ್ವಂತ	60/1 ಪೈಕಿ	ಖುಷ್ಕಿ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಇದೇ ಜಮೀನಿನ ಉಳಿಕೆ ಜಮೀನು	ರಿ.ಸ.ನಂ.61	ರಿ.ಸ.ನಂ. 60/4	ಉತ್ತರಕ್ಕೆ	0-09	0-09	0-30

ಕ್ರ ಸಂ.	ಖಾತೇದಾರರ ಹೆಸರು (ಆರ್.ಟಿ.ಸಿ. ಪ್ರಕಾರ)	ಅನುಭವ ದಾರರ ಹೆಸರು.	ಸರ್ವೆ ನಂಬರು	ತರಹೆ	ಸರಹದ್ದುಗಳು (ಸರ್ವೆ ನಂಬರು)				ಯಾವ ದಿಕ್ಕಿಗೆ ಭೂಸ್ವಾಧೀನವಾಗಿದೆ.	ಭೂಸ್ವಾಧೀನದ ವಿಸ್ತೀರ್ಣ ಎ–ಗುಂ.	ಒಟ್ಟು ವಿಸ್ತೀರ್ಣ ಎ–ಗುಂ.	ಆಕಾರ. ರೂ–ಪೈ.
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ				
7	1)ನಿಂಗಪ್ಪ ಬಿನ್ ಮಲ್ಲಪ್ಪ (60/4ಪಿ–ಪಿ1 1—12) 2)ಎಂ.ಕೆ.ಸುರೇಶ ಬಿನ್ ಕೊಟ್ರಪ್ಪ (60/4ಪಿ–ಪಿ2 1–19)	ಸ್ವಂತ	60/4 ಪೈಕಿ	ಖುಷ್ಕಿ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ರೈಲ್ವೆ ರಸ್ತೆ	ರಿ.ಸ.ನಂ. 60/1	ರಿ.ಸ.ನಂ.57	ಪಶ್ಚಿಮಕ್ಕೆ	0–18	0–18	0–51
8	ಶೇಖರಪ್ಪ ಬಿನ್ ಸಣ್ಣನಿಂಗಪ್ಪ (61/ಪಿ3 2–10$^1/_2$)	ಸ್ವಂತ	61 ಪೈಕಿ	ಖುಷ್ಕಿ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಇದೇ ಜಮೀನಿನ ಉಳಿಕೆ ಜಮೀನು	ರಿ.ಸ.ನಂ.64	ಪತ್ರೆಪ್ಪನವರ ಜಮೀನು	ಪಶ್ಚಿಮಕ್ಕೆ	0–13	0–03	0–11
	ಸರ್ವಮಂಗಳಮ್ಮ ಕೋಂ ಸಣ್ಣನಿಂಗಪ್ಪ (61/ಪಿ–ಪಿ2 2-02$^1/_2$)	ಜಿ.ಎಸ್. ಪತ್ರೆಪ್ಪ ಬಿನ್ ಸಣ್ಣ ನಿಂಗಪ್ಪ		ಖುಷ್ಕಿ	ಇದೇ ಸ.ನಂಬರಿನ ಉಳಿಕೆ ಜಮೀನು	ಇದೇ ಸ.ನಂಬರಿನ ಉಳಿಕೆ ಜಮೀನು	ಶೇಖರಪ್ಪ ನವರ ಜಮೀನು	ರಿ.ಸ.ನಂ. 60	ಪಶ್ಚಿಮಕ್ಕೆ	0–05	0–05	0–19
9	ಎಂ.ಎಸ್. ಶಿವಕುಮಾರ ಬಿನ್ ಸಂಗಪ್ಪ (72/1 7–19$^1/_2$)	ಸ್ವಂತ	72/1	ಖುಷ್ಕಿ	ಈಗಾಗಲೇ ಭೂಸ್ವಾಧೀನ ವಾದ ಪ್ರದೇಶ	ಇದೇ ಜಮೀನಿನ ಉಳಿಕೆ ಜಮೀನು	ರಿ.ಸ.ನಂ.73	ರಿ.ಸ.ನಂ. 72/2	ಪಶ್ಚಿಮಕ್ಕೆ	0–03$^1/_2$	0–03$^1/_2$	0–13
	(1)ದೊಗ್ಗಳ್ಳಿ ಗ್ರಾಮದ ಒಟ್ಟು ಜಮೀನಿನ ವಿಸ್ತೀರ್ಣ									**2–18**	**2–18**	**2–70**
	ಹೊಟ್ಟಿಗಾನಹಳ್ಳಿ ಗ್ರಾಮದ ಜಮೀನುಗಳು. – ಪ್ರಕರಣ ಸಂಖ್ಯೆ ಕಂ/ವಿಭೂಸ್ವಾ/ಕೊಹರೈಲ್ವೆ/ಸಿಆರ್/17/05–06 (ಭಾಗ–3)											
1	ಟಿ.ನಾಗಪ್ಪ ಬಿನ್ ಬಸಪ್ಪ	ಸ್ವಂತ	8	ಖುಷ್ಕಿ	ಇದೇ ಸ.ನಂಬರಿನ ಉಳಿಕೆ ಜಮೀನು	ಈಗಾಗಲೇ ಸ್ವಾಧೀನ ವಾದ ಪ್ರದೇಶ	ರಿ.ಸ.ನಂ.6	ಇದೇ ಸ.ನಂಬರಿನ ಉಳಿಕೆ ಜಮೀನು	--	0–01	0–01	0–03
	(2)ಹೊಟ್ಟಿಗಾನಹಳ್ಳಿ ಗ್ರಾಮದ ಒಟ್ಟು ವಿಸ್ತೀರ್ಣ									**0–01**	**0–01**	**0–03**

ಘೋಷ್ವಾರೆ		
1	ದೊಗ್ಗಳ್ಳಿ ಗ್ರಾಮದ ವಿಸ್ತೀರ್ಣ	2–18 ಎ–ಗುಂ.
2	ಹೊಟ್ಟಿಗಾನಹಳ್ಳಿ ಗ್ರಾಮದ ವಿಸ್ತೀರ್ಣ	0–01 ಎ–ಗುಂ.
	ಒಟ್ಟು ವಿಸ್ತೀರ್ಣ	**2–19 ಎ–ಗುಂ.**

ಪಿ.ಆರ್. 25

ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ.